ಹುಬ್ಬಳ್ಳಿ
ಭಾನುವಾರ, 21 ಜೂನ್ 2026
ಸಂಪುಟ 16, ಸಂಚಿಕೆ 88, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಇಂದು ವಿಶ್ವ ಯೋಗ ದಿನ

ಕಿರುಸುದ್ದಿ



ಧಾರವಾಡ: ಇಲ್ಲಿನ ಮುಗದ ಗ್ರಾಮದಲ್ಲಿ ಭೋವಿ ಜನಾಂಗಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಲು ತಹಶೀಲ್ದಾರ್ ನಿರಾಕರಿಸಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಅಖಿಲ ಕರ್ನಾಟಕ ಭೋವಿ ಸಮಾಜ ವಿವಿಧೋದ್ದೇಶ ಕಲ್ಯಾಣ ಸಂಘದಿಂದ ಪ್ರತಿಭಟಿಸಿದರು.

ಸೌಕರ್ಯ ಒದಗಿಸಲು ಆಗ್ರಹ



ಧಾರವಾಡ: ನಗರದ ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ಮೂಲಭೂತ ಸೌಕರ್ಯ ಒದಗಿಸಲು ಸಂಯುಕ್ತ ಜನತಾ ದಳ (ಜೆಡಿಯು) ಜಿಲ್ಲಾಧ್ಯಕ್ಷ ಶಿವಶೈಲ ಕುಮತ ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಧಾರವಾಡ ಜಿಲ್ಲೆಯ ರೋಗಿಗಳ ಹಿತಕ್ಕೆ ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ಅಭಿನಂದನಾರ್ಹ. ಆದರೆ ಕೇಂದ್ರಕ್ಕೆ ಸೌಕರ್ಯದ ಕೊರತೆ ಇದೆ. ಈ ಕೇಂದ್ರದ ರೋಗಿಗಳಿಗೆ ಅನ್ಯ ಆಸ್ಪತ್ರೆಗೆ ಕಳಿಸುವುದು ಕಂಡು ಬರುತ್ತಿದೆ. ಸರ್ಕಾರ ಹಾಗೂ ಜಿಲ್ಲಾಡಳಿತ ಎಚ್ಚೆತ್ತು ಡಯಾಲಿಸಿಸ್ ಕೇಂದ್ರಕ್ಕೆ ನೀರು, ಸಿಬ್ಬಂದಿ ಹಾಗೂ ವಿದ್ಯುತ್ ಇತ್ಯಾದಿ ಮೂಲ ಸೌಕರ್ಯ ಒದಗಿಸದಿದ್ದರೆ ಹೋರಾಟ ಮಾಡುವುದಾಗಿ ಎಚ್ಚರಿಸಿದ್ದಾರೆ.

ಐಶ್ವರ್ಯಗೆ 'ವಿದ್ಯಾರಶ್ಮಿ' ಪ್ರಶಸ್ತಿ



ಧಾರವಾಡ: ಮಕ್ಕಳನ್ನು ಅಂಕಗಳಿಗೆ ಸೀಮಿತಗೊಳಿಸದೇ ಹೃದಯ ಸಂಸ್ಕಾರ ಹೊಂದಿದ ಸತ್ಪ್ರಜೆಗಳನ್ನಾಗಿ ರೂಪಿಸುವುದು ಇಂದಿನ ಅಗತ್ಯವಾಗಿದೆ ಎಂದು ರಾಯಚೂರು ಆಕಾಶವಾಣಿ ವಿಶ್ರಾಂತ ಅಧಿಕಾರಿ ಡಾ.ಬಿ.ಎಂ.ಶರಭೇಂದ್ರಸ್ವಾಮಿ ಹೇಳಿದರು.

ರಶ್ಮಿ ಮಂಜುನಾಥ ನಾಯಕ ದತ್ತಿ ಅಂಗವಾಗಿ ಕವಿಸಂ ದೇಶಪಾಂಡೆ ಭವನದಲ್ಲಿ ನಡೆದ ಉಪನ್ಯಾಸ, 'ವಿದ್ಯಾರಶ್ಮಿ' ಪ್ರಶಸ್ತಿ ಪ್ರದಾನ ಮತ್ತು ವಿದ್ಯಾರ್ಥಿಗಳಿಗೆ ಉಚಿತ ನೋಟ ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಮಕ್ಕಳ ಭವಿಷ್ಯ ಕುರಿತು ಉಪನ್ಯಾಸ ನೀಡಿದರು.

ಪಾಲಕರಿಗೆ ಯಾಂತ್ರಿಕ ಯುಗದಲ್ಲಿ ಮಕ್ಕಳಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಕಲಿಸಲು ಸಾಧ್ಯ ಆಗುತ್ತಿಲ್ಲ. ನ್ಯಾನೋ ಕುಟುಂಬಗಳ ಸಂಖ್ಯೆಯೇ ಹೆಚ್ಚಾಗಿ ಭಾವನಾತ್ಮಕ ಸಂಬಂಧಗಳು ಕ್ಷೀಣಿಸುತ್ತಿವೆ. ಮನೆಯಿಂದಲೇ ಒಳ್ಳೆಯ ಸಂಸ್ಕಾರ ನೀಡುವಂತೆ ಹೇಳಿದರು.

ಶಾಲೆ ಹಾಗೂ ಸಮಾಜವೂ ಮಕ್ಕಳಿಗೆ ಸನ್ನಡತೆ, ಸದ್ವಿಚಾರ, ಸದ್ಗುಣ ಬೆಳೆಸುವಲ್ಲಿ ಬದ್ಧತೆ ತೋರಬೇಕು. ಶಿಕ್ಷಣವೆಂದರೆ ಕೇವಲ ಬುದ್ಧಿ ವಿಕಾಸ ಮಾತ್ರವಲ್ಲ, ಮನೋವಿಕಾಸ. ಇಂದು ಶಾಲೆ, ಕಾಲೇಜುಗಳಲ್ಲಿ ನೀತಿ ಶಿಕ್ಷಣಕ್ಕೂ ಆದ್ಯತೆ ನೀಡುವಂತೆ ತಿಳಿಸಿದರು.

ದತ್ತಿದಾನಿ ಕೆ.ಎಚ್.ನಾಯಕ ಮಾತನಾಡಿ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ವಿದ್ಯಾರ್ಥಿಗಳಲ್ಲಿ ಸಂಸ್ಕೃತಿ, ಸಂಸ್ಕಾರದ ಕೊರತೆ ಇದೆ. 'ವಿದ್ಯಾರಶ್ಮಿ' ಪ್ರಶಸ್ತಿ ಜೊತೆ 'ರಂಗರಶ್ಮಿ' ಪ್ರಶಸ್ತಿಯನ್ನೂ ಮಗಳ ಸ್ಮರಣಾರ್ಥ ನೀಡಲಾಗುತ್ತಿದೆ ಎಂದರು.

ಇದೇ ವೇಳೆ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ತೇಗೂರಿನ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಐಶ್ವರ್ಯ ಮಂಜುನಾಥ ರಾಯ್ಕರ ಅವರಿಗೆ ವಿದ್ಯಾರಶ್ಮಿ ಹಾಗೂ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ವಿತರಿಸಲಾಯಿತು.

ಕವಿಸಂ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ, ಶಿವಾನಂದ ಭಾವಿಕಟ್ಟಿ, ಶಂಕರ ಕುಂಬಿ, ವೀರಣ್ಣ ಒಡ್ಡೀನ, ಡಾ.ಜಿನದತ್ತ ಹಡಗಲಿ, ಡಾ.ಧನವಂತ ಹಾಜವಗೋಳ, ಗುರು ಹಿರೇಮಠ, ಡಾ. ಬಾಳಣ್ಣ ಶೀಗಿಹಳ್ಳಿ, ಡಾ.ಶಶಿಧರ ನರೇಂದ್ರ ಅನೇಕರು ಇದ್ದರು.

ಅವಧಿ ವಿಸ್ತರಣೆ

ಅಣ್ಣಿಗೇರಿ: ಪ್ರಧಾನ ಮಂತ್ರಿ ಆವಾಸ್ ಯೋಜನೆ 2.0 ನಗರ ಯೋಜನೆ ಅಡಿ ಕಚ್ಚಾ ಮನೆ ಹೊಂದಿರುವ ವಸತಿ ರಹಿತ ಮತ್ತು ನಿವೇಶನ ರಹಿತ ಕುಟುಂಬಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ ಜೂ.30, 2026ರ ವರೆಗೆ ವಿಸ್ತರಿಸಲಾಗಿದೆ ಎಂದು ಪುರಸಭೆ ಮುಖ್ಯ ಅಧಿಕಾರಿ ವೈ.ಜಿ. ಗದ್ದಿಗೌಡರ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ವಸತಿ ಶಾಖೆಯಿಂದ ಪಡೆದುಕೊಂಡು ಅರ್ಹ ಫಲಾನುಭವಿಗಳು ಅರ್ಜಿಯನ್ನು ಆನ್‌ಲೈನ್ ಸೇವಾ ಕೇಂದ್ರದಲ್ಲಿ ಅಥವಾ ತಾವೇ ಖುದ್ದಾಗಿ https://pmaymis.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಹಾಗೂ ದಾಖಲೆ ಸಲ್ಲಿಸಬೇಕು ಎಂದಿದ್ದಾರೆ.



ಕಲಘಟಗಿ: ತಾಲೂಕಿನ ಕಾಮಧೇನು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ವಿಶಿಷ್ಟಚೇತನ ಮಕ್ಕಳಿಗೆ ಸಂವಹನ ಕಾರ್ಯಕ್ರಮ ಜರುಗಿತು. ವಿಶಿಷ್ಟಚೇತನ ಮಕ್ಕಳಲ್ಲಿ 5ನೇ ತರಗತಿಯ ಸಿದ್ಧಾರ್ಥ ಪೂಜಾರ, 6ನೇ ತರಗತಿಯ ವಿಶಾಲ ಮೊಗನ್ನವರ್ ವಿದ್ಯಾರ್ಥಿಗಳಿಗೆ ಸಂವಹನ ಕಾರ್ಯಕ್ರಮ ನಡೆಸಲಾಯಿತು. ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಗ್ರಾಮದ ಹಿರಿಯರು ಹಾಗೂ ಪಾಲಕರು ಮತ್ತು ಪೋಷಕರು ಇದ್ದರು. ಮಕ್ಕಳಿಗೆ ಹೂಗುಚ್ಛವನ್ನು ಕೊಟ್ಟು ಸಿಹಿ ಹಂಚಲಾಯಿತು.

ಭೂಸ್ವಾಧೀನ ವಿಸರ್ಜನೆ ಕೈಬಿಡಲು ಆಗ್ರಹಿಸಿ ಪ್ರತಿಭಟನೆ

ಹುಬ್ಬಳ್ಳಿ: ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಅತ್ಯಂತ ಫಲವತ್ತಾದ ಕೃಷಿ ಭೂಮಿಯನ್ನು ಬಲವಂತವಾಗಿ ವಶಪಡಿಸಿಕೊಳ್ಳುತ್ತಿರುವ ಹಾಗೂ ಮುಂದಿನ ತಿಂಗಳು ಬೃಹತ್ ಪ್ರಮಾಣದಲ್ಲಿ ಭೂಸ್ವಾಧೀನ ವಿಸ್ತರಿಸಲು ಸರ್ಕಾರ ಹೊರಟಿದ್ದು, ಈ ರೈತ ವಿರೋಧಿ ನೀತಿಯನ್ನು ತಕ್ಷಣವೇ ಕೈಬಿಡಬೇಕು ಎಂದು ಆಗ್ರಹಿಸಿ ಜೆಡಿಎಸ್‌ನಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು. ಇಲ್ಲಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಬಿ.ಗಂಗಾಧರಮಠ ಅವರ ನೇತೃತ್ವದಲ್ಲಿ ಮಿನಿವಿಧಾನಸೌಧದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದರು. ಬಿಡದಿ ಮತ್ತು ಹಾರೋಹಳ್ಳಿ ಹೋಬಳಿ ವ್ಯಾಪ್ತಿಯ ರೈತರ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಳ್ಳಲು ಕಾಂಗ್ರೆಸ್ ಮುಂದಾಗಿರುವುದು ರೈತವಿರೋಧಿ ಹಾಗೂ ದಬ್ಬಾಳಿಕೆಯ ನೀತಿಯಾಗಿದೆ. ಇದರ ಹಿಂದೆ ಬೃಹತ್ ರಿಯಲ್ ಎಸ್ಟೇಟ್ ದಂಧೆ ಅಡಗಿದೆ. ಭೂಮಿಯನ್ನು ವಶಪಡಿಸಿಕೊಳ್ಳಲು ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ತಕ್ಷಣವೇ ರದ್ದುಗೊಳಿಸಬೇಕು. ಮುಂದಿನ ತಿಂಗಳು ಜಾರಿಗೆ ತರಲು ಉದ್ದೇಶಿಸಿರುವ 7500 ಕ್ಕೂ ಹೆಚ್ಚು ಎಕರೆ ಭೂಸ್ವಾಧೀನದ ಪ್ರಕ್ರಿಯೆಯನ್ನು ಆರಂಭದಲ್ಲೇ ಕೈಬಿಡಬೇಕು. ಪ್ರತಿ ತಿಂಗಳು 6 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಹೈನುಗಾರಿಕೆ, ರೇಷ್ಮೆ, ಕೃಷಿ, ರೇಷ್ಮೆ ಹುಳು ಸಾಕಾಣಿಕೆ ಮತ್ತು ತೋಟಗಾರಿಕೆಯನ್ನು ನೆಚ್ಚಿಕೊಂಡಿರುವ ಬಡ ರೈತ ಕುಟುಂಬಗಳ ಜೀವನೋಪಾಯವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲು ಅನುಮತಿ ನೀಡಬೇಕು. ಸಾರ್ವಜನಿಕ ಆಸ್ತಿಗಳಾದ ಸಿಎ ನಿವೇಶನಗಳನ್ನು ಬ್ಯಾಂಕುಗಳಲ್ಲಿ ಅಡವಿಟ್ಟು ಸಾಲ ಪಡೆಯುತ್ತಿರುವ ಆರ್ಥಿಕ ದುರ್ನೀತಿ ತಕ್ಷಣ ನಿಲ್ಲಿಸಬೇಕು ಎಂದು ಮನವಿ ಮಾಡಿದರು.



ಹುಬ್ಬಳ್ಳಿ: ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಅತ್ಯಂತ ಫಲವತ್ತಾದ ಕೃಷಿಭೂಮಿಯನ್ನು ಬಲವಂತವಾಗಿ ವಶಪಡಿಸಿಕೊಳ್ಳುತ್ತಿರುವ ಹಾಗೂ ಮುಂದಿನ ತಿಂಗಳು ಬೃಹತ್ ಪ್ರಮಾಣದಲ್ಲಿ ಭೂಸ್ವಾಧೀನ ವಿಸ್ತರಿಸಲು ಸರ್ಕಾರ ಹೊರಟಿದ್ದು, ಈ ರೈತ ವಿರೋಧಿ ನೀತಿಯನ್ನು ತಕ್ಷಣವೇ ಕೈಬಿಡಬೇಕು ಎಂದು ಆಗ್ರಹಿಸಿ ಜೆಡಿಎಸ್‌ನಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು. ಧಾರವಾಡ ಜಿಲ್ಲಾ ಗ್ರಾಮೀಣ ಜನತಾದಳ ಮಹಾ ಪ್ರಧಾನ ಕಾರ್ಯದರ್ಶಿ ನವೀನಕುಮಾರ ಮಡಿವಾಳರ, ಇಸ್ಮಾಯಿಲ್ ಬನ್ನಿಗೋಳ, ರಾಜಶೇಖರ ಮತ್ತಿಹಳ್ಳಿ, ಗಿರೀಶ ಚನ್ನಪ್ಪರೆಡ್ಡಿ, ನಿರ್ಮಲಾ ಹನಸಿ, ನಾಗವ್ವ ಅಸುಂಡಿ, ಮೃತ್ಯುಂಜಯ ಬಿ., ದಾವಲಸಾಬ ಗದಗ, ದಾದಾಪೀರ ರಾಟಿಮನಿ, ಚನ್ನಪ್ಪ ನೇಗಿನಹಾಳ ಇದ್ದರು.

ಮರಾಠಾ ಮಂಡಳದ ಚುನಾವಣೆ | ಯಾರಿಗೆ ಒಲಿಯಲಿದೆ ಜಯ?

ಮೋರೆ v/s ಕದಂ ಫೈಟ್

ಮಹಾಂತೇಶ ಕಣವಿ

ಧಾರವಾಡ: ಧಾರವಾಡದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದಾದ ಮರಾಠಾ ವಿದ್ಯಾಪ್ರಸಾರಕ ಮಂಡಳದ 2026–29ರ ಅವಧಿಯ ತ್ರೈವಾರ್ಷಿಕ ಚುನಾವಣೆ ಇದೀಗ ಇಡೀ ಧಾರವಡ ಜಿಲ್ಲೆಯ ಗಮನ ಸೆಳೆದಿದೆ.

ಈ ಬಾರಿಯ ಚುನಾವಣಾ ಕಣದಲ್ಲಿ ಮೋಹನ ಮೋರೆ ಹಾಗೂ ಮಂಜುನಾಥ ಕದಂ ನೇತೃತ್ವದ ಎರಡು ಬಣಗಳ ನಡುವೆ ಪೈಪೋಟಿ ಏರ್ಪಟ್ಟಿದೆ. ಸಂಸ್ಥೆಯ ಅಭಿವೃದ್ಧಿ, ಪಾರದರ್ಶಕತೆ ಜೊತೆ ಭವಿಷ್ಯದ ದೃಷ್ಟಿಕೋನಗಳನ್ನು ಮುಂದಿಟ್ಟು ಉಭಯ ನಾಯಕರು ಮತದಾರರ ಮನೆ ಬಾಗಿಲಿಗೆ ಲಗ್ಗೆ ಇಟ್ಟಿದ್ದಾರೆ.

ಕಣದಲ್ಲಿ ಇರುವ ಎಷ್ಟು ಜನ?: ಅಧ್ಯಕ್ಷ, ಉಪಾಧ್ಯಕ್ಷ ಹಾಗೂ 13 ನಿರ್ದೇಶಕ ಸ್ಥಾನ ಸೇರಿ ಒಟ್ಟು 15 ಸ್ಥಾನಗಳಿವೆ. ಎರಡು ಬಣಗಳಿಂದ ತಲಾ 15 ರಂತೆ ಒಟ್ಟು 30 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಒಂದೊಂದು ಮತವೂ ನಿರ್ಣಾಯಕ. ಎರಡೂ ಬಣಗಳು ಭರ್ಜರಿ ತಂತ್ರ–ಪ್ರತಿತಂತ್ರಗಳನ್ನು ಹೆಣೆಯುತ್ತಿವೆ.

ದಿಗಂತ ವಿಶೇಷ

ನಿಗೂಢತೆಯ ಪರದೆ: ಸದ್ಯದ ಮಟ್ಟಿಗಂತೂ ಧಾರವಾಡದ ಗಲ್ಲಿ ಗಲ್ಲಿಗಳಲ್ಲಿ, ಕಟ್ಟೆಗಳ ಮೇಲೆ ಈ ಚುನಾವಣೆಯದ್ದೇ ಚರ್ಚೆ. ಮೋಹನ ಮೋರೆ ಬಣದ ಅನುಭವ ಕೈಹಿಡಿಯುತ್ತಾ? ಅಥವಾ ಮಂಜುನಾಥ ಕದಂ ಬಣದ ಹೊಸ ಉತ್ಸಾಹಕ್ಕೆ ಮತದಾರರು ಮಣೆ ಹಾಕುತ್ತಾರಾ? ಎಂಬುದು ಸದ್ಯಕ್ಕೆ ಯಕ್ಷಪ್ರಶ್ನೆ.

ಉಭಯ ಬಣಗಳಲ್ಲೂ ಪ್ರಭಾವಿ ಮತ್ತು ಜನಪ್ರಿಯ ಮುಖಗಳಿರುವುದರಿಂದ ಮತದಾರ ಪ್ರಭು ಯಾರಿಗೆ ಜೈ ಎನ್ನುತ್ತಾನೆ ಎಂದು ಊಹಿಸುವುದು ಅಸಾಧ್ಯ. ತೆರೆಯ ಮರೆಯ ರಾಜಕೀಯ ದಾಳಗಳು, ಕೊನೆ ಘಳಿಗೆಯ ತಂತ್ರಗಳು ಯಾರ ಕೈ ಹಿಡಿಯಲಿವೆ ಎಂಬ ನಿಗೂಢತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅಂತಿಮವಾಗಿ ಜುಲೈ 5 ರಂದು ಅದೃಷ್ಟದ ವಿಜಯಲಕ್ಷ್ಮೀ ಯಾರ ಕೊರಳಿಗೆ ಮಾಲೆ ಹಾಕಲಿದ್ದಾಳೆ? ಮರಾಠಾ ವಿದ್ಯಾಪ್ರಸಾರಕ ಮಂಡಳದ ನೂತನ ಸಾರಥಿ ಯಾರಾಗಲಿದ್ದಾರೆ ಎಂಬುದನ್ನು ಕೌತುಕದಿಂದ ಕಾದು ನೋಡಬೇಕಿದೆ.

ಜುಲೈ 5ರಂದು ಮಹಾ ಸಂಗ್ರಾಮ

ಜುಲೈ 5ರಂದು ಮರಾಠಾ ವಿದ್ಯಾಪ್ರಸಾರಕ ಮಂಡಳದ 2026–29ರ ಅವಧಿಯ ತ್ರೈವಾರ್ಷಿಕ ಚುನಾವಣೆಯ ಈ ಮಹಾ ಜಿದ್ದಾಜಿದ್ದಿಗೆ ಅಧಿಕೃತ ತೆರೆ ಬೀಳಲಿದೆ. ಅಂದು ಬೆಳಗ್ಗೆ 8.30ರಿಂದ ಸಂಜೆ 4.30ರವರೆಗೆ ಮತದಾನ ಪ್ರಕ್ರಿಯೆ ಜರುಗಲಿದ್ದು, ಸಂಸ್ಥೆಯ ಭಾಗ್ಯವಿಧಾತರಾದ ಮತದಾರರು ಯಾರ ಕೈಗೆ ಅಧಿಕಾರ ನೀಡಬೇಕೆಂಬುದನ್ನು ಬ್ಯಾಲೆಟ್ ಬಾಕ್ಸ್‌ನಲ್ಲಿ ಭದ್ರಪಡಿಸಲಿದ್ದಾರೆ.



ದಿನವಿಡೀ ಫುಲ್ ಟೆನ್ಶನ್

ಜುಲೈ 5 ರಂದೇ ಮತದಾನ ಮುಗಿದ ಕೆಲವೇ ಗಂಟೆಗಳಲ್ಲಿ ಮತ ಎಣಿಕೆಯೂ ಆರಂಭವಾಗಲಿದ್ದು, ಅಂದೇ ಸಂಜೆಯೊಳಗೆ ಫಲಿತಾಂಶ ಹೊರಬೀಳಲಿದೆ. ಅಂದರೆ, ದಿನವಿಡೀ ಬಿಗಿ ಹಿಡಿದ ಉಸಿರು ಸಂಜೆಯ ವೇಳೆಗೆ ಸಮಾಧಾನಗೊಳ್ಳಲಿದೆ.

- ಕೇವಲ ಒಂದು ಸಂಸ್ಥೆಯ ಆಡಳಿತ ಮಂಡಳಿಯ ಆಯ್ಕೆ ಎನ್ನುವುದಕ್ಕಿಂತಲೂ ಈ ಬಾರಿಯ ಕಣ ರಾಜಕೀಯ ರಣಾಂಗಣ ನೆನಪಿಸುವಷ್ಟು ರಂಗೇರಿದೆ
- ಈ ಗದ್ದುಗೆ ಹಿಡಿಯಲು ಎರಡು ಪ್ರಬಲ ಬಣ ಪ್ರತಿಷ್ಠೆಯ ಪಣಕ್ಕಿಟ್ಟ ಹೋರಾಟ ಶುರುವಾಗಿದೆ

ಸದಸ್ಯರ ಅವಶ್ಯಕತೆಗೆ ತಕ್ಕಂತೆ ಯೋಜನೆ ಜಾರಿ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ಕಾರ್ಯಚಟುವಟಿಕೆಗಳು ಹುಬ್ಬಳ್ಳಿಗೆ ಸೀಮಿತವಾಗಬಾರದೆಂಬ ಉದ್ದೇಶದಿಂದ ಧಾರವಾಡದಲ್ಲಿ ಬಂಟರ ಭವನ ನಿರ್ಮಿಸಲಾಗುವುದು ಎಂದು ಸಂಘದ ನೂತನ ಅಧ್ಯಕ್ಷ ರಾಜೇಂದ್ರ ವಿ.ಶೆಟ್ಟಿ ಹೇಳಿದರು.

ಇಲ್ಲಿಯ ಆರ್.ಎನ್.ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಹು-ಧಾ ಬಂಟರ ಸಂಘ ವತಿಯಿಂದ ನಡೆದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಬಂಟರ ಬಾಂಧವ್ಯ ಸಮಾರಂಭದಲ್ಲಿ ಮಾತನಾಡಿದರು.

ಸಮಾಜ ಮತ್ತು ಸಂಘದ ಸರ್ವ ಸದಸ್ಯರ ಅವಶ್ಯಕತೆಗೆ ತಕ್ಕಂತೆ ಹಿರಿಯ ಮಾರ್ಗದರ್ಶನದಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಕೆಲಸವನ್ನು ಮಾಡಲಾಗುವುದು. ಈಗಾಗಲೇ ಮಾತೃಭೂಮಿ ಚಾರಿಟೇಬಲ್ ಟ್ರಸ್ಟ್ ಮೂಲಕ ಸಂಘ ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಿದೆ. ಅವುಗಳ ಯಶಸ್ವಿಗೆ ನೂತನ ಸಂಘ ಅವಿರತವಾಗಿ ಶ್ರಮಿಸಲಿದೆ. ಈ ನಿಟ್ಟಿನಲ್ಲಿ ಸಮಾಜದ ಬಂಧುಗಳ ಸಹಕಾರ ಅವಶ್ಯಕ ಎಂದರು. ಮುಂದಿನ ದಿನಗಳಲ್ಲಿ ಕಲ್ಯಾಣ ಮಂಟಪದ ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಸಮಾಜದ ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಒಗಟ್ಟಿನಿಂದ ಕೆಲಸ ಮಾಡೋಣ ಎಂದರು.

ಮಾಜಿ ಅಧ್ಯಕ್ಷ ಸತೀಶ್ಚಂದ್ರ ಶೆಟ್ಟಿ ಮಾತನಾಡಿ, ಈಗಾಗಲೇ ಸಂಘದ ಮಾತೃಭೂಮಿ ಚಾರಿಟೇಬಲ್ ಟ್ರಸ್ಟ್‌ನಿಂದ ಇಟ್ಟಿಗಟ್ಟಿ ಬಳಿ 4 ಎಕರೆ ಜಮೀನು ಖರೀದಿಸಿ ಆರ್.ಎನ್.ಎಸ್. ವಿದ್ಯಾನಿಕೇತನ ಸಂಸ್ಥೆ ನಡೆಸಲಾಗುತ್ತಿದೆ. ಆ ಮೂಲಕ ಸಮಾಜದ ಜತೆಗೆ ಇತರೆ ಸಮಾಜದ ವಿದ್ಯಾರ್ಥಿಗಳಿಗೆ ಜ್ಞಾನದಾಸೋಹ ನಡೆಯುತ್ತಿದೆ. ಸದ್ಯ 1,600ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ ಎಂದರು.

ಮಾಜಿ ಅಧ್ಯಕ್ಷ ಸುಗ್ಗಿ ಸುಧಾಕರ ಶೆಟ್ಟಿ ಮಾತನಾಡಿ, ಸಮಾಜದ ಕೆಳಮಟ್ಟದ ಜನರನ್ನು ಸಂಘ ಮೇಲಕ್ಕೆತ್ತುವ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಅಂತವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಸಂಘದಲ್ಲಿ ಮಹಿಳೆಯರಿಗೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ನಿಕಟಪೂರ್ವ ಅಧ್ಯಕ್ಷ ವಿಜಯಾನಂದ ಶೆಟ್ಟಿ ಅವರು ನೂತನ ಅಧ್ಯಕ್ಷ ರಾಜೇಂದ್ರ ವಿ.ಶೆಟ್ಟಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಉಪಾಧ್ಯಕ್ಷರುಗಳಾಗಿ ಸುಧೀರ ಜೆ.ಶೆಟ್ಟಿ, ಶ್ರೀನಿವಾಸ ಶೆಟ್ಟಿ, ಕಾರ್ಯದರ್ಶಿಯಾಗಿ ರತ್ನಾಕರ ಎಂ.ಶೆಟ್ಟಿ, ಖಜಾಂಚಿಯಾಗಿ ದಿನೇಶ ಕೆ.ಶೆಟ್ಟಿ, ಸಹ ಕಾರ್ಯದರ್ಶಿಯಾಗಿ ಜ್ಯೋತಿ ಆರ್.ಟಿ.ಶೆಟ್ಟಿ ಅಧಿಕಾರ ಸ್ವೀಕರಿಸಿದರು. ಇದಕ್ಕೂ ಪೂರ್ವ ಜ್ಯೂನಿಯರ್ ರಾಜಕುಮಾರ, ಅಂಬರೀಷ, ವಿಷ್ಣುವರ್ಧನ, ಕುಮಾರ ಸಾನು ಅವರು ತಮ್ಮ ನಟನೆ ಹಾಗೂ ಹಾಡುಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.



ಸೂರಶೆಟ್ಟಿಕೊಪ್ಪದಲ್ಲಿ ಮಳೆಗಾಗಿ ಕಪ್ಪೆಗಳ ಮದುವೆ



ಕಲಘಟಗಿ: ಮಳೆಗಾಗಿ ರೈತರು ಕಾಯುತ್ತಿರುವ ಈ ಸಂದರ್ಭದಲ್ಲಿ ಕಲಘಟಗಿ ತಾಲೂಕಿನ ಸೂರಶೆಟ್ಟಿಕೊಪ್ಪದಲ್ಲಿ ಮದುವೆ ಸಂಭ್ರಮ ಕಂಡು ಬಂದಿತು. ಮಳೆರಾಯನ ಆಗಮನಕ್ಕಾಗಿ ಕಪ್ಪೆಗಳ ಮದುವೆ ಸಮಾರಂಭ ಜರುಗಿತು.

ಹೆಚ್ಚಾಗಿ ಸಂಪ್ರದಾಯ, ಸಂಸ್ಕೃತಿ, ಹಬ್ಬ ಹರಿದಿನಗಳು ಉದ್ಭವಿಸುವುದೇ ಗ್ರಾಮೀಣ ಪ್ರದೇಶದಲ್ಲಿ, ಮುಂಗಾರು ಕೆಲವು ದಿನ ಚೆನ್ನಾಗಿ ಬಂದ ಕಾರಣ ರೈತರು ಜಮೀನುಗಳಲ್ಲಿ ಬಹಳ ಸಂತೋಷದಿಂದ ಬೀಜ ಬಿತ್ತನೆ ಮಾಡಿದರು. ನಂತರ ಮಳೆರಾಯನ ಅವಕೃಪೆಯ ಪರಿಣಾಮ ಈಗ ರೈತರು ಮೋಡಗಳ ದಾರಿಕಾಯುವಂತಾಯಿತು. ದಾರಿ ಕಾಯ್ದು ಸಾಕಾಗಿ ಶನಿವಾರ ದೈವದ ಮೊರೆ ಹೋದರು.

ಗ್ರಾಮೀಣ ಭಾಗದಲ್ಲಿನ ಪದ್ಧತಿಯಂತೆ ಅರಿಶಿಣಶಾಸ್ತ್ರ, ಹಂದರಶಾಸ್ತ್ರ, ಬಳೆಶಾಸ್ತ್ರ ಮಾಡಿದರು. ಕಪ್ಪೆಗಳಿಗೆ ಗ್ರಾಮಸ್ಥರು ಗಂಡಿನಮನೆ ಹಾಗೂ ಹೆಣ್ಣಿನ ಮನೆಯವರಾಗಿ, ಕರಡಿ ಮಜಲು, ಡೊಳ್ಳು, ಭಜನೆ ಸೇರಿದಂತೆ ವಿವಿಧ ವಾದ್ಯಮೇಳಗಳೊಂದಿಗೆ ಗ್ರಾಮದಲ್ಲಿ ಕಪ್ಪೆಗಳನ್ನು ಮೆರವಣಿಗೆ ಮಾಡಿದರು. ನಂತರ ಗ್ರಾಮದ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನಕ್ಕೆ ಬಂದು ಕಪ್ಪೆಗಳಿಗೇ ಸುರಗಿಕಾರ್ಯ, ಬಂದು ಕಂಕಣಧಾರಣೆ, ಮಾಂಗಲ್ಯಧಾರಣೆ ಮಾಡಿ ಮಳೆಗಾಗಿ ದೇವರಲ್ಲಿ ಬೇಡಿಕೊಂಡರು. ಮಕ್ಕಳು, ಮುತ್ತೈದೆಯರು, ಗಂಡು ಹೆಣ್ಣು ಕಪ್ಪೆಗಳಿಗೆ ಅರಿಶಿಣ ಕುಂಕುಮ ಹಚ್ಚಿ ಆರತಿ ಬೆಳಗಿದರು.

> ಸೂರಶೆಟ್ಟಿಕೊಪ್ಪ ಗ್ರಾಮದಲ್ಲಿ ಹಬ್ಬದ ಸಂಭ್ರಮವೇ ಮೈತುಂಬಿದೆ. ಬ್ರಹ್ಮಲಿಂಗೇಶ್ವರನ ದೈವದ ಸಮಸ್ತ ಹಿರಿಯರ ತೀರ್ಮಾನದಂತೆ ಕಪ್ಪೆಗಳ ಮದುವೆಯ ವಿವಾಹ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಮದುವೆಯ ನಂತರ ಗ್ರಾಮದ ಸಕಲ ಜನರಿಗೆ ಊಟದ ವ್ಯವಸ್ಥೆ ಮಾಡಲಾಯಿತು.
> ■ ವಿ.ಎಸ್. ಬೆಣ್ಣಿ, ದೇವಸ್ಥಾನ ಸಮಿತಿ ಅಧ್ಯಕ್ಷ



ಮೃತ ವಿದ್ಯಾರ್ಥಿ ಕುಟುಂಬಕ್ಕೆ ಶಂಕರ ಪಾಟೀಲ ಮುನೇನಕೊಪ್ಪ ಸಾಂತ್ವನ



ನವಲಗುಂದ: ಪಟ್ಟಣದ ಖಾಸಗಿ ಶಾಲೆಯ ಕಟ್ಟಡದ ಮೇಲಿಂದ ಬಿದ್ದು ಅಕಾಲಿಕ ಮರಣ ಹೊಂದಿದ ವಿದ್ಯಾರ್ಥಿ ಆಕಾಶ ನೀಲಣ್ಣನವರ ನಿವಾಸಕ್ಕೆ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರು ಭೇಟಿ ನೀಡಿದರು.

ಶಾನವಾಡ ಗ್ರಾಮದಲ್ಲಿರುವ ಮೃತನ ಮನೆಗೆ ಭೇಟಿ ನೀಡಿದ ಮುನೇನಕೊಪ್ಪ ಅವರು, ಕಣ್ಣೀರು ಹಾಕುತ್ತಿದ್ದ ತಂದೆ ವಸಂತ ಹಾಗೂ ಅವರ ಪತ್ನಿ ದುಃಖವನ್ನು ಕಂಡು, ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡು ಶೂನ್ಯದಲ್ಲಿ ಬದುಕು ಹುಡುಕುತ್ತಿರುವ ಆ ದಂಪತಿಗೆ ಸಾಂತ್ವನ ಹೇಳಿದರು. ಹೆತ್ತವರ ಕೈಹಿಡಿದು ಧೈರ್ಯದಿಂದ ಇರಿ, ನಾವಿದ್ದೇವೆ ಎಂದು ಧೈರ್ಯ ತುಂಬಿದರು. ಬಡ ರೈತನ ಮನೆಯ ಕನಸಿನ ಗೋಪುರವೇ ಕುಸಿದು ಬಿದ್ದಿದೆ. ಇದ್ದ ಒಬ್ಬನೇ ಮಗ ಹೀಗೆ ದುರ್ಮರಣಕ್ಕೀಡಾಗಿದ್ದು, ಈ ನೊಂದ ಕುಟುಂಬಕ್ಕೆ ಸರ್ಕಾರ ತಕ್ಷಣವೇ ಸೂಕ್ತ ಪರಿಹಾರ ನೀಡಿ ಆಸರೆಯಾಗಬೇಕು ಎಂದು ಭಾವುಕರಾಗಿ ಒತ್ತಾಯಿಸಿದರು. ಸ್ಥಳದಲ್ಲೇ ನವಲಗುಂದ ಠಾಣೆಯ ಇನ್ಸ್‌ಪೆಕ್ಟರ್ ಕಪ್ಪತ್ತನವರ ಹಾಗೂ ಪ್ರಭಾರಿ ಡಿಡಿಪಿಐ ಬೊಮ್ಮಕ್ಕನವರ ಅವರಿಗೆ ಮೊಬೈಲ್ ಮೂಲಕ ಸಂಪರ್ಕಿಸಿ, ಒಂದು ಹಸನ್ಮುಖಿ ಜೀವ ಅನ್ಯಾಯವಾಗಿ ಬಲಿಯಾಗಿದೆ. ಈ ಘಟನೆಯ ಹಿಂದೆ ಯಾರದೇ ನಿರ್ಲಕ್ಷ್ಯವಿದ್ದರೂ ಬಿಡಬೇಡಿ. ತಕ್ಷಣವೇ ಘಟನೆಯ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಗಂಗಣ್ಣ ಮನಮಿ, ನಿಂಗಪ್ಪ ಹಳ್ಳದ, ಬಸಲಿಂಗಪ್ಪ ತೊರಗಲ್ಲ, ಪ್ರಕಾಶಗೌಡ ಪಾಟೀಲ, ಪ್ರಕಾಶಗೌಡ ಮೂಲಿಮನಿ, ಮಹಾಂತೇಶ ನೀಲಣ್ಣವರ, ಮೃತ್ಯುಂಜಯ ಹಿರೇಮಠ, ರಾಜಶೇಖರ ಕಂಪ್ಲಿ, ಗಂಗಾಧರ್ ದುಂದೂರ, ಮಲ್ಲಿಕಾರ್ಜುನ ಅಂಗಡಿ, ರವಿ ಗೊಬ್ಬರಗುಂಪಿ, ಫಕೀರಪ್ಪ ಗಂಗಣ್ಣವರ, ಮೌನಯ್ಯ ಹಿರೇಮಠ, ಮಲ್ಲಪ್ಪ ಹಟ್ಟಿ ಸೇರಿದಂತೆ ಗ್ರಾಮದ ಹಿರಿಯರು, ಯುವಕರು, ಮುಖಂಡರು ಉಪಸ್ಥಿತರಿದ್ದರು.

ಅಂಗನವಾಡಿ ಕೇಂದ್ರಗಳ ಖಾಲಿ ಹುದ್ದೆಗಳು ಶೀಘ್ರ ನೇಮಕವಾಗಲಿ: ಡಿಸಿ ಸ್ನೇಹಲ್



ಧಾರವಾಡ: ಜಿಲ್ಲೆಯಲ್ಲಿ 1,622 ಅಂಗನವಾಡಿ ಕೇಂದ್ರ ಕಾರ್ಯನಿರ್ವಹಿಸುತ್ತಿವೆ. ಕೆಲವು ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಶೀಘ್ರವೇ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯ 1,622 ಅಂಗನವಾಡಿ ಕೇಂದ್ರಗಳಲ್ಲಿ 1,571 ಅಂಗನವಾಡಿ ಕಾರ್ಯಕರ್ತೆಯರಿದ್ದು, 51 ಹುದ್ದೆಗಳು ಖಾಲಿಯಿವೆ. 1,251 ಅಂಗನವಾಡಿ ಸಹಾಯಕಿಯರು ಸೇವೆ ಸಲ್ಲಿಸುತ್ತಿದ್ದು, 371 ಹುದ್ದೆಗಳ ಭರ್ತಿಗೆ ಸೂಚಿಸಿದರು. ಅಗಸ್ಟ್ ತಿಂಗಳೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕು. 170 ಅಂಗನವಾಡಿ ಕಟ್ಟಡಗಳು ಹೊಸದಾಗಿ ಮಂಜೂರಾಗಿವೆ. ಈ ಪೈಕಿ 111 ಕಟ್ಟಡ ಪೂರ್ಣಗೊಂಡಿದ್ದು, 27 ಕಟ್ಟಡಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. 32 ಕಟ್ಟಡ ಕಾಮಗಾರಿ ನಡೆಯಬೇಕು ಎಂದರು. ಹುಬ್ಬಳ್ಳಿಯ ರಾಜ್ಯ ಮಹಿಳಾ ನಿಲಯದ ಖಾಲಿ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳಬೇಕು. ಧಾರವಾಡದಲ್ಲಿ ಕಾರ್ಯನಿರ್ವಹಿಸುತ್ತಿರುವ ದರ್ಶನ ಸಾಂತ್ವನ ಕೇಂದ್ರವು ಉಪ್ಪಿನ ಬೇಟಗೇರಿಯಲ್ಲಿ ಕಾರ್ಯನಿರ್ವಹಿಸಲು ಮುಂದಾಗಬೇಕು. ಕೇಂದ್ರದ ಮೂಲ ಉದ್ದೇಶಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಣೆ ಮಾಡಲು ಆದೇಶಿಸಿದರು. ಕಾನೂನು ಸೇವೆಗಳ ಪ್ರಾಧಿಕಾರದ ಜಿಲ್ಲಾ ಸದಸ್ಯ ಕಾರ್ಯದರ್ಶಿ ಅಲ್ಲಪ್ಪ ಬಡಿಗೇರ, ಪೋಕ್ಸೊ ದೂರುಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಮಹಿಳೆಯರ ಮೇಲೆ ದೌರ್ಜನ್ಯ ತಡೆಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದರು.

ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಮಹಾನಗರ ಪಾಲಿಕೆ ಆಡಳಿತ ವಿಭಾಗದ ಉಪಾಯುಕ್ತೆ ಅನುರಾಧಾ ವಸ್ತ್ರದ, ಡಿಎಚ್‌ಒ ಡಾ. ಪರಶುರಾಮ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕ ವೀರನಗೌಡ ಪಾಟೀಲ, ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ.ಕಮಲಾ ಬೈಲೂರು, ಡಿಡಿಪಿಐ ಉಮೇಶ ಬಮ್ಮಕ್ಕನವರ, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಕಾಶೀನಾಥ ಭದ್ರಣ್ಣವರ ಇದ್ದರು.

ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಸಹಕರಿಸಿ



ಕುಂದಗೋಳ: ಪೋಲಿಯೋ ಮುಕ್ತ ಭಾರತದ ಕನಸನ್ನು ಸಾಕಾರಗೊಳಿಸಲು ಸಾರ್ವಜನಿಕರು ಸಹಕರಿಸಬೇಕು ಹಾಗೂ ಜೂನ್ 28ರಂದು ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ (ಟಿಎಚ್‌ಒ) ಮಂಜುನಾಥ ಸೊಪ್ಪಿನಮಠ ಹೇಳಿದರು.

ಅವರು ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿ, ಐದು ವರ್ಷ ವಯೋಮಿತಿಯೊಳಗಿನ ಪ್ರತಿಯೊಂದು ಮಗುವಿಗೂ ಪಲ್ಸ್ ಪೋಲಿಯೋ ಲಸಿಕೆ ನೀಡುವ ಮೂಲಕ ಪೋಷಕರು ಜಾಗೃತಿವಹಿಸಬೇಕು. ಪೋಲಿಯೋ ನಿರ್ಮೂಲನೆಗೆ ಎಲ್ಲರ ಸಹಭಾಗಿತ್ವ ಅಗತ್ಯವಾಗಿದೆ ಎಂದರು.

ಜೂನ್ 28ರಂದು ನಡೆಯುವ ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸಲು ವಿವಿಧ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು. ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಕ್ರಮವಹಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ತಹಶೀಲ್ದಾರ್ ರಾಜು ಮಾವರಕರ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೀರೇಶ ಅಂಗಡಿ, ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಲಿಕೆಗೆ ಸ್ಮಾರ್ಟ್ ಬೋರ್ಡ್ ಪೂರಕ


ಧಾರವಾಡ: ಅವಸರ್ ಫೌಂಡೇಶನ್ ಟ್ರಸ್ಟ್ ಆರ್ಥಿಕ ಸಹಾಯದಲ್ಲಿ ನೀಡಲಾದ ಸ್ಮಾರ್ಟ್ ಬೋರ್ಡ್ ಸೌಲಭ್ಯ ವಿದ್ಯಾರ್ಥಿಗಳ ಕಲಿಕೆಗೆ ಪೂರಕ. ವಿದ್ಯಾರ್ಥಿಗಳು ಸದ್ಬಳಸಿಕೊಳ್ಳುವಂತೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎ.ಎಂ.ಖಾನ್ ಹೇಳಿದರು.

ಕವಿವಿ ಉನ್ನತ ಭಾರತ ಅಭಿಯಾನ ಕೋಶ, ಕೆಯು ಪಬ್ಲಿಕ್ ಶಾಲೆ, ಅವಸರ್ ಫೌಂಡೇಶನ್ ಟ್ರಸ್ಟ್ ಸಹಯೋಗದಲ್ಲಿ ನಡೆದ ನವೀಕೃತ ವರ್ಗ ಕೋಣೆಗಳು, ಸ್ಮಾರ್ಟ್‌ಬೋರ್ಡ್ ಹಸ್ತಾಂತರ, ಶಿಷ್ಯವೇತನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅವಸರ್ ಫೌಂಡೇಶನ್ ಕರ್ನಾಟಕ ವಿವಿಗೆ ಉದಾರವಾಗಿ ಹಣಕಾಸಿನ ನೆರವು ನೀಡಿದ್ದು, ಅವರ ಸೇವೆ ಸ್ಮರಣೀಯ ಎಂದರು.

ಅವಸರ್ ಫೌಂಡೇಶನ್ ಸಂಸ್ಥಾಪಕ ಆನಂದ ಚತುರ್ವೇದಿ ಮಾತನಾಡಿ, 14 ವರ್ಷಗಳಿಂದ ಶಾಲೆಯ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಬಂದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಕೃತಜ್ಞತೆಯ ಮನೋಭಾವ ಕಳೆದು ಹೋಗಿದೆ ಎಂದರು. ಫೌಂಡೇಶನ್ ದತ್ತು ಗ್ರಾಮಗಳ 13 ಜನ ವಿದ್ಯಾರ್ಥಿನಿಯರಿಗೆ ತಲಾ ಹತ್ತು ಸಾವಿರ ಶಿಷ್ಯವೇತನ ಚೆಕ್ ವಿತರಿಸಲಾಯಿತು. ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಹಾಗೂ ಸಿಂಡಿಕೇಟ್ ಸದಸ್ಯ ಶ್ಯಾಮ ಮಲ್ಲನಗೌಡರ ಅಧ್ಯಕ್ಷತೆ ವಹಿಸಿದ್ದರು. ಪ್ರೊ.. ತ್ರಿವೇಣಿ ಎಸ್., ಡಾ. ಚೇತನ್ ಜೆ.ಡಿ., ಪ್ರೊ. ಜೆ.ಎಂ.ಚೆಂದುನವರ, ಪ್ರೊ. ಸಂಗೀತಾ ಮಾನೆ, ಪ್ರೊ. ಎನ್.ರಾಮಾಂಜನೇಯಲು, ಗಿರೀಶ ಜೋಶಿ ಇದ್ದರು. ಅನಸೂಯಾ ನಾಯಕ ಸ್ವಾಗತಿಸಿದರು. ಎಂ.ಎಸ್.ಹಿರೇಮಠ ವಂದಿಸಿದರು.



ವಿದ್ಯಾರ್ಥಿಗಳಿಗೆ ಆಳವಾದ ಜ್ಞಾನ ಅಗತ್ಯ



ಧಾರವಾಡ: ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಜೀವ-ರಾಸಾಯನಶಾಸ್ತ್ರ ವಿಭಾಗ ಮತ್ತು ಕರ್ನಾಟಕ ವೈದ್ಯಕೀಯ ಜೀವರಸಾಯನ ಶಾಸ್ತ್ರಜ್ಞರ ಸಂಘದಿಂದ 9ನೇ ರಾಜ್ಯಮಟ್ಟದ ರಸಪ್ರಶ್ನೆ ಕಾರ್ಯಕ್ರಮ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಜರುಗಿತು. ಎಂಬಿಬಿಎಸ್ ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ರಾಜ್ಯದ ಸುಮಾರು 25 ವೈದ್ಯಕೀಯ ಕಾಲೇಜುಗಳಿಂದ 74 ತಂಡ ಪಾಲ್ಗೊಂಡಿದ್ದವು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸ್ಪರ್ಧೆಗೆ ಚಾಲನೆ ನೀಡಿದ ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ ಮಾತನಾಡಿ, ವಿದ್ಯಾರ್ಥಿಗಳು ವೈದ್ಯಕೀಯ ವಿಭಾಗದಲ್ಲಿ ಆಳವಾದ ಜ್ಞಾನ ಸಂಪಾದನೆ ಮಾಡಿದಾಗ ಮಾತ್ರ ಈ ಕ್ಷೇತ್ರದಲ್ಲಿ ಭದ್ರ ನೆಲೆಯೂರಲು ಸಾಧ್ಯವಿದೆ ಎಂದರು.

ಜೀವರಾಸಾಯನ ಶಾಸ್ತ್ರ ಶಿಕ್ಷಣವು ಬದುಕಿನ ಅಂಗವಾಗಿದೆ. ಹೀಗಾಗಿ ರಸಪ್ರಶ್ನೆ ಸ್ಪರ್ಧೆಗಳು ವೈದ್ಯ ವಿದ್ಯಾರ್ಥಿಗಳ ಜ್ಞಾನ ವೃದ್ಧಿಗೆ ಸಹಕಾರಿ. ಸ್ನೇಹ, ನೆಟ್‌ವರ್ಕ್ ಮತ್ತು ಸಹಯೋಗ ಬೆಳೆಸುವಲ್ಲಿ ಉತ್ತಮ ವೇದಿಕೆಯಾಗಿದೆ ಎಂದರು.

ಎಸ್‌ಡಿಎಂ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ನಿರಂಜನಕುಮಾರ್ ಮಾತನಾಡಿ, ಜೀವರಾಸಾಯನಶಾಸ್ತ್ರದ ಅಧ್ಯಯನವು ಉತ್ತಮ ಹಾರ್ಮೋನ್‌ಗಳನ್ನು ವೃದ್ಧಿಸುವುದಿಲ್ಲದೇ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವುದಾಗಿ ಹೇಳಿದರು.

ಎಸ್‌ಡಿಎಂ ವಿವಿಯ ಕಾರ್ಯನಿರ್ವಾಹಕ ನಿರ್ದೇಶಕಿ ಪದ್ಮಲತಾ ನಿರಂಜನ್, ಡಾ. ಆಲಿಯಾ ನುಶ್ರತ್, ಜೀವಂಧರಕುಮಾರ್, ಸಾಕೇತ್ ಶೆಟ್ಟಿ, ವಿ.ಜಿ.ಪ್ರಭು, ಡಾ. ಕಿರಣ ಹೆಗ್ಡೆ, ಡಾ.ವಿದ್ಯಾ ಪಾಟೀಲ, ಡಾ.ಶ್ರೀರಂಗ ಕುಲಕರ್ಣಿ ಸೇರಿ ಅನೇಕರು ಇದ್ದರು.

ಅಭಿವೃದ್ಧಿಗೆ ಜೆಎಸ್ಸೆಸ್ ಸಂಸ್ಥೆ ಕೊಡುಗೆ

ಧಾರವಾಡ: ಜನತಾ ಶಿಕ್ಷಣ ಸಂಸ್ಥೆಯ ಆರ್ಥಿಕ ಹಾಗೂ ಜನಸಂಖ್ಯಾ ಸಂಶೋಧನಾ ಕೇಂದ್ರ, ಸಂಶೋಧನಾ ಕಾರ್ಯಗಳ ಜೊತೆ ರಾಜ್ಯ-ರಾಷ್ಟ್ರೀಯ ಅಭಿವೃದ್ಧಿಗೆ ನೀತಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ನಗರದ ಜನತಾ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಆರ್ಥಿಕ ಸಂಶೋಧನಾ ಸಂಸ್ಥೆಯ ಹಾಗೂ ಜನಸಂಖ್ಯಾ ಸಂಶೋಧನಾ ಕೇಂದ್ರ ಮೇಲ್ದರ್ಜೆಗೇರಿಸಿ ಮಾತನಾಡಿದ ಅವರು, ಸಂಸ್ಥೆಯ ಕಾರ್ಯಗಳು ಸರ್ವರ ಗಮನ ಸೆಳೆಯುತ್ತಿವೆ. ಈ ಕೇಂದ್ರ ಜನಾಂಗೀಯ, ತಾಯಿ ಆರೋಗ್ಯ ಸೇವೆ, ಕ್ಯಾನ್ಸರ್ ಹಾಗೂ ಕ್ಷಯರೋಗ ತಪಾಸಣೆ, ಅಂಗವೈಕಲ್ಯ ಹೊಂದಿದ ವ್ಯಕ್ತಿಗಳ ಸ್ವರೂಪ ಮತ್ತು ವ್ಯಾಪ್ತಿಯ ಕುರಿತು ಸರ್ಕಾರಕ್ಕೆ ಹೊಸ ನೀತಿ ರೂಪಿಸುವಲ್ಲಿ ಸಹಕರಿಸಿದೆ. ಗುಡ್ಡಗಾಡು, ಜನಾಂಗೀತ ಪ್ರದೇಶಗಳಲ್ಲಿ ಡಿಜಿಟಲ್ ಆರೋಗ್ಯ ಸೇವೆ, ರೋಗಿಗಳಲ್ಲಿ ಜೆನೆರಿಕ್ ಔಷಧಿಗಳ ಗುಣಮಟ್ಟ, ಅಭ್ಯಾಸಗಳ ಮೌಲ್ಯಮಾಪನ ಮುಂತಾದ ವಿಷಯಗಳ ಪ್ರೊಜೆಕ್ಟ್ ತಯಾರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾಗಿ ತಿಳಿಸಿದರು.

ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ತಂತ್ರಜ್ಞಾನ ಯುಗದಲ್ಲಿ ಇಂಥ ಕಾರ್ಯ ಮಾಡಲು ತಾಂತ್ರಿಕತೆ ಅವಶ್ಯವಿದೆ. ಸೆಮಿನಾರ್ ಹಾಲ್ ಗುಣಮಟ್ಟದ ಉಪಕರಣಗಳು, ಸಂಶೋಧನಾ ಕಾರ್ಯಗಳಿಗೆ ಅನಕೂಲವಾಗಲಿದೆ ಎಂದರು. ಎಂ.ಸಿ.ಎ ನಿರ್ದೇಶಕ ಡಾ.ಸೂರಜ್ ಜೈನ್, ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ, ನಿರ್ದೇಶಕಿ ಡಾ.ಜ್ಯೋತಿ ಹಳ್ಳದ, ಡಾ. ಶ್ರೀ ಪ್ರಸಾದ ಇತರರಿದ್ದರು.



ಹುಬ್ಬಳ್ಳಿ ಭಾನುವಾರ, 21 ಜೂನ್ 2026 ಸಂಪುಟ 16, ಸಂಚಿಕೆ 88, ಪುಟಗಳು 14 ■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413 ▸hosadigantha.com ▸Hosadigantha Digital ₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ವಿಶ್ವವ್ಯಾಪಿ ಯೋಗ ಸಂಭ್ರಮ

12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಬೆಳಗ್ಗೆ 5ಕ್ಕೆ ಆರಂಭ

6 ಲಕ್ಷಕ್ಕೂ ಹೆಚ್ಚು ಸಂಘ-ಸಂಸ್ಥೆಗಳ ನೋಂದಣಿ

210 ಕ್ಕೂ ಅಧಿಕ ಭಾರತೀಯ ರಾಯಭಾರ ಕಚೇರಿಗಳ ಸಹಭಾಗಿತ್ವ

100 ಪಾರಂಪರಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಈ ಬಾರಿಯ ಯೋಗ ದಿನದ ಧ್ಯೇಯವಾಕ್ಯ

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಸಪ್ತಮಿ, ನಕ್ಷತ್ರ: ಪೂರ್ವೆ

ದಿನದ ಮಾತು

ಮಾಡುವ ಪ್ರಯತ್ನಗಳು ನಂಬಿಕೆಯಿಂದ ಕೂಡಿದ್ದರೆ ಸೂಕ್ತವಾದ ಪ್ರತಿಫಲವು ದಕ್ಕುವುದರಲ್ಲಿ ಸಂಶಯವಿಲ್ಲ.

▲ನಾಣ್ನುಡಿ

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷರಾಗಿ ಇಂದು ಬಿ.ಕೆ.ಹರಿಪ್ರಸಾದ್ ಪದಗ್ರಹಣ

◆**ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಅವರು ಜೂ.21ರಂದು ಪದಗ್ರಹಣ ಮಾಡಲಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭಕ್ಕೆ ಭರ್ಜರಿ ಸಿದ್ಧತೆ ಕೈಗೊಳ್ಳಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ.

◆ಪುಟ ೪

ಜನರ ಕುಂದುಕೊರತೆ ಆಲಿಸುವ ಸಲುವಾಗಿ ಇಲಾಖೆ
ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟ ಸಭೆ ನಿರ್ಧಾರ

ಪ್ರಜಾಸೇವೆಗೆ ಇಲಾಖೆ

◆**ಬೆಂಗಳೂರು:** ರಾಜ್ಯದಲ್ಲಿ ಸಾರ್ವಜನಿಕರ ಕುಂದು ಕೊರತೆಗಳು, ಹೋರಾಟಗಳ ಅಹವಾಲುಗಳನ್ನು ಆಲಿಸಲು ಹೊಸದಾಗಿ ಪ್ರಜಾಸೇವೆ ಇಲಾಖೆಯೊಂದನ್ನು ಆರಂಭಿಸಲಿದ್ದು, ಪ್ರತ್ಯೇಕ ಸಚಿವರಿಗೆ ಇದರ ಜವಾಬ್ದಾರಿ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ವಿಧಾನಸೌಧದಲ್ಲಿಶನಿವಾರನಡೆದ ಸಚಿವ ಸಂಪುಟ ಸಭೆಯ ನಂತರ ಅವರು ಸಭೆಯ ನಿರ್ಣಯಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ನಮ್ಮನ್ನು ಭೇಟಿಯಾದಾಗ, ಸಚಿವರನ್ನು ಭೇಟಿ ಯಾದಾಗ ಜನರು ತಮ್ಮ ಅಹವಾಲುಗಳನ್ನು ಸಲ್ಲಿಸುತ್ತಾರೆ. ಜನರ ಕಷ್ಟ ಭಾವನೆಗಳನ್ನು ಅರಿತು, ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರ್ಕಾರದ ಗುರಿ. ಹೀಗಾಗಿ ಈ ಇಲಾಖೆಗೆ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಲಾಗುವುದು. ಅವರು ಎಲ್ಲಾ ಸಮಸ್ಯೆಗಳನ್ನು ಪರಿಶೀಲನೆ ಮಾಡಿ ಮಾಹಿತಿ ನೀಡುವ ಕೆಲಸ ಮಾಡಲಾಗುವುದು. ಈ ಮೂಲಕ ಜನರಿಗೆ ನ್ಯಾಯ ಒದಗಿಸಲು ಸರ್ಕಾರ ಮುಂದಾಗಿದೆ. ನನಗೆ ಹಾಗೂ ಇತರೇ ಸಚಿವರಿಗೆ ನೀಡಿದ ಮನವಿಗಳನ್ನು ಈ ಇಲಾಖೆ ಅಡಿಯಲ್ಲಿ ತರಲು ಆಲೋಚಿಸಲಾಗಿದೆ ಎಂದರು.



“ಸುಪ್ರೀಂ ಕೋರ್ಟ್‌ನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದಿಲ್ಲಿಯ ಕಾನೂನು ವಿಭಾಗವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಥಾನೀಯ ಆಯುಕ್ತರ ಕಚೇರಿ ಕಾರ್ಯವೈಖರಿ ನನಗೆ ಸಮಾಧಾನ ತಂದಿಲ್ಲ. ಆದ್ದರಿಂದ ಅದನ್ನು ಹೊಸದಾಗಿ ಸಮೀಕರಿಸಲಾಗುತ್ತಿದೆ.

■ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

- ಪ್ರತ್ಯೇಕ ಸಚಿವರಿಗೆ ಈ ಸಚಿವಾಲಯದ ಜವಾಬ್ದಾರಿ
- ಹಿರಿಯ ಐಎಎಸ್ ಅಧಿಕಾರಿಯೊಬ್ಬರ ನೇಮಕ
- ಸಿಎಂಗೆ, ಸಚಿವರಿಗೆ ಜನ ಸಲ್ಲಿಸುವ ಮನವಿಗಳ ಇತ್ಯರ್ಥ
- ಸಮಸ್ಯೆ ಹೇಳಿಬಂದ ಜನರಿಗೆ ಪರಿಹಾರ ನೀಡುವ ಹೊಣೆ

ರಾಜ್ಯಕ್ಕೆ ಕೇಂದ್ರದ ಯೋಜನೆ ತರಲು ಅಧಿಕಾರಿಗಳ ತಂಡ


ಕೇಂದ್ರದ ಯೋಜನೆಗಳನ್ನು ರಾಜ್ಯಕ್ಕೆ ತರುವುದು ಹೇಗೆ? ಯಾವ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕು. ಯಾವ ಯೋಜನೆಗಳು ಇತರೇ ರಾಜ್ಯಗಳಲ್ಲಿದೆ. ತಮಿಳುನಾಡು, ಆಂಧ್ರ ಪ್ರದೇಶ, ಗುಜರಾತ್ ಸೇರಿದಂತೆ ಇತರೇ ರಾಜ್ಯಗಳು ಯಾವ ಯೋಜನೆಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಯಲು ಹೊಸ ಅಧಿಕಾರಿಗಳ ತಂಡ ರಚಿಸಿ ನೇಮಕ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ➡ಪುಟ ೪

224 ಕ್ಷೇತ್ರಗಳಲ್ಲೂ ಕಡ್ಡಾಯ ಸಭೆ

ರಾಜ್ಯದಲ್ಲಿ 224 ವಿಧಾನಸಭಾ ಕ್ಷೇತ್ರಗಳಿವೆ. ಉಸ್ತುವಾರಿ ಸಚಿವರ ನೇಮಕವಾದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿಯ ಜಿಲ್ಲೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ವಾರಕ್ಕೊಮ್ಮೆ ಸ್ಥಳೀಯ ಶಾಸಕರೊಂದಿಗೆ ಪ್ರಜಾಸೇವೆ ಇಲಾಖೆ ಮೂಲಕ ಜನಸ್ಪಂದನ ಸಭೆ ಅಥವಾ ಜನಸಂಪರ್ಕ ಸಭೆ ನಡೆಸಬೇಕು. ಆನಂತರ ಅದನ್ನು ಪರಿಶೀಲಿಸುವ ಕೆಲಸ ಮಾಡಲಾಗುವುದು. ➡ಪುಟ ೪

ವಿದ್ಯುತ್ ಸಂಪರ್ಕಕ್ಕೆ 15 ದಿನ ಕಾಲಾವಕಾಶ

ರಾಜ್ಯದಲ್ಲಿ ನಿಯಮ ಉಲ್ಲಂಘಿಸಿದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿ ಅವಕಾಶ ನೀಡಲಾಗುತ್ತದೆ. 2026ರ ಮೇ 31 ರೊಳಗೆ ಪೂರ್ಣಗೊಂಡಿರುವ ಎಲ್ಲಾ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ವಿನಾಯಿತಿ ನೀಡಲಾಗಿದೆ. ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಿದ ದಿನದಿಂದ 15 ದಿನಗಳ ಕಾಲಾವಕಾಶ ನೀಡಲಾಗುವುದು. ಕಟ್ಟಡ ಮಾಲೀಕರು ಕಟ್ಟಡದ ಜೊತೆಗಿನ ಫೋಟೋ ಹಾಗೂ ಜಿಪಿಎಸ್ ದಾಖಲೆ ಕಡ್ಡಾಯವಾಗಿ ಸಲ್ಲಿಕೆ ಮಾಡಬೇಕು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ➡ಪುಟ ೪




ವಿಶ್ವದ 2,500 ಸ್ಥಳಗಳಲ್ಲಿ ಯೋಗ ದಿನದ ಸಂಭ್ರಮ | ಐತಿಹಾಸಿಕ ರೆಡ್ ರೋಡ್‌ನಲ್ಲಿ ಮೋದಿ ನೇತೃತ್ವದಲ್ಲಿ ಯೋಗ

ಕೋಲ್ಕತ್ತದಲ್ಲಿ ಇಂದು ಯೋಗ ದಿನಾಚರಣೆ

◆**ಹೊಸದಿಲ್ಲಿ:** ಹನ್ನೆರಡನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ರಾಷ್ಟ್ರೀಯ ಕಾರ್ಯಕ್ರಮ ಭಾನುವಾರ ಕೋಲ್ಕತ್ತದ ಐತಿಹಾಸಿಕ ರೆಡ್ ರೋಡ್‌ನಲ್ಲಿ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಸಾಮೂಹಿಕ ಯೋಗಾಭ್ಯಾಸಕ್ಕೆ ನೇತೃತ್ವ ನೀಡಲಿದ್ದಾರೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯವಾಕ್ಯದಡಿ ಆಯುಷ್ ಸಚಿವಾಲಯವು ಈ ಬಾರಿಯ ಯೋಗ ದಿನಾಚರಣೆಯನ್ನು ಆಯೋಜಿಸಿದೆ. ಬೆಳಗ್ಗೆ 5 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ರೆಡ್ ರೋಡ್‌ನಲ್ಲಿ ಸಾವಿರಾರು ಯೋಗಾಸಕ್ತರು ಭಾಗವಹಿಸಲಿದ್ದಾರೆ. ದೇಶ-ವಿದೇಶಗಳಿಂದ ಲಕ್ಷಾಂತರ ಜನರು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.



6 ಲಕ್ಷ ಸಂಸ್ಥೆಗಳ ನೋಂದಣಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಆಯುಷ್ ಸಚಿವಾಲಯ ಆರಂಭಿಸಿರುವ ಯೋಗ ಸಂಗಮ ಜಾಲತಾಣದಲ್ಲಿ ಆರು ಲಕ್ಷಕ್ಕೂ ಅಧಿಕ ಸಂಘ-ಸಂಸ್ಥೆಗಳು ನೋಂದಣಿ ಮಾಡಿಕೊಂಡಿವೆ. ನೋಂದಣಿ ಸಂಖ್ಯೆ ಇನ್ನೂ ಏರಿಕೆಯಾಗುತ್ತಿದ್ದು, ಯೋಗವನ್ನು ಜನಾಂದೋಲನವಾಗಿ ರೂಪಿಸುವಲ್ಲಿ ಸಾರ್ವಜನಿಕರು ಮತ್ತು ಸಂಸ್ಥೆಗಳು ತೋರಿಸಿರುವ ಉತ್ಸಾಹಕ್ಕೆ ಇದು ಸಾಕ್ಷಿಯಾಗಿದೆ ಎಂದು ಸಚಿವಾಲಯ ತಿಳಿಸಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ ಸಮನ್ವಯದಲ್ಲಿ ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ಸುಮಾರು 2,500 ಸ್ಥಳಗಳಲ್ಲಿ ಯೋಗ ದಿನಾಚರಣೆ ಹಮ್ಮಿಕೊಂಡಿವೆ. ಆನ್‌ಲೈನ್ ಮೂಲಕ ಭಾಗವಹಿಸುವವರು ಪ್ರಧಾನಿ ಮೋದಿ ಅವರೊಂದಿಗೆ ಸಾಮಾನ್ಯ ಯೋಗ ಶಿಷ್ಟಾಚಾರದಂತೆ ಯೋಗಾಭ್ಯಾಸ ನಡೆಸಿ, ತಮ್ಮ ಯೋಗದ ಕ್ಷಣಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವಂತೆ ಆಯುಷ್ ಸಚಿವಾಲಯ ಮನವಿ ಮಾಡಿದೆ.

ಹಂಪಿಯಲ್ಲೂ ವಿಶೇಷ ಯೋಗೋತ್ಸವ

ಕೇಂದ್ರ ಸಂಸ್ಕೃತಿ ಸಚಿವಾಲಯ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ದೇಶದ 100 ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಕರ್ನಾಟಕದ ವಿಶ್ವವಿಖ್ಯಾತ ಹಂಪಿ ಸೇರಿದಂತೆ ದಿಲ್ಲಿಯ ಕೆಂಪುಕೋಟೆ, ಹರಿದ್ವಾರ, ಕೋನಾರ್ಕ್, ಮಹಾಬಲಿಪುರಂ, ಮುಂಬೈ, ನಳಂದಾ, ಅಹಮದಾಬಾದ್, ಸಾರನಾಥ್, ಲೇಹ್, ಹೈದರಾಬಾದ್ ಮತ್ತು ಸಿಲ್ಚಾರ್‌ನಲ್ಲಿ ಪ್ರಮುಖ ಕಾರ್ಯಕ್ರಮಗಳು ನಡೆಯಲಿವೆ.

ಇಂದು ನೀಟ್(ಯುಜಿ)

◆**ಹೊಸದಿಲ್ಲಿ:** ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ ಮೊದಲ ಪರೀಕ್ಷೆ ರದ್ದಾಗಿದ್ದರಿಂದ ಬಿಗಿ ಭದ್ರತೆಯಲ್ಲಿ ಭಾನುವಾರ ನೀಟ್(ಯುಜಿ) ಮರು ಪರೀಕ್ಷೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸಿದ್ಧವಾಗಿದೆ. ಈ ಬಾರಿ ಪ್ರಶ್ನೆ ಪತ್ರಿಕೆಗಳನ್ನು ಸಾಗಿಸಲು ಸೇನೆಯ ಹೆಲಿಕಾಪ್ಟರ್‌ಗಳು, ವಿಮಾನಗಳನ್ನು ಬಳಸಿರುವುದು ವಿಶೇಷ.

- ಯಾವುದೇ ದೋಷವಾಗದಂತೆ ಎನ್‌ಟಿಎ ಎಚ್ಚರಿಕೆ
- ಸೇನಾ ವಿಮಾನಗಳಲ್ಲಿ ಪ್ರಶ್ನೆಪತ್ರಿಕೆಗಳ ಸಾಗಾಟ



ಭಾರತ ಮತ್ತು ವಿದೇಶಗಳಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ 22 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರ ಹಾಗೂ ಮಾನ್ಯ ಫೋಟೋ ಐಡಿ ಕಾರ್ಡ್ ಅನ್ನು ಕಡ್ಡಾಯವಾಗಿ ತರಬೇಕು. ಪರೀಕ್ಷೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15 ಗಂಟೆಯವರೆಗೆ ಪೆನ್ ಆಂಡ್ ಪೇಪರ್‌ನಲ್ಲಿ ನಡೆಯಲಿದ್ದು, ಬೆ.11 ಗಂಟೆಗೇ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಆಗಮಿಸಬೇಕು. ಮಧ್ಯಾಹ್ನ 1.30ಕ್ಕೆ ಗೇಟ್‌ಗಳನ್ನು ಮುಚ್ಚಲಾಗುತ್ತದೆ. ಅಭ್ಯರ್ಥಿಗಳಿಗೆ ಕಡ್ಡಾಯ ಬಯೋಮೆಟ್ರಿಕ್ ಪರಿಶೀಲನೆ, ದಾಖಲೆಗಳ ತಪಾಸಣೆ ಇರಲಿದೆ. ➡ಪುಟ ೪

ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

◆**ರಾಮನಗರ:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಭಾನುವಾರ ಬೃಹತ್ ಪಾದಯಾತ್ರೆ ನಡೆಯಲಿದೆ.



- ನಿಖಿಲ್ ಕುಮಾರಸ್ವಾಮಿ ನೇತೃತ್ವ
- ಇಂದು 8 ಗ್ರಾಮಗಳಲ್ಲಿ ಪಾದಯಾತ್ರೆ

ಅಂಚಿಪುರ ಗ್ರಾಮದಿಂದ ಹೊಸೂರು ವರೆಗೆ 8 ಗ್ರಾಮಗಳ ಮೂಲಕ ಈ ಪಾದ ಯಾತ್ರೆ ಸಾಗಲಿದ್ದು, ಸಾವಿರಾರು ರೈತರು ಭಾಗವಹಿಸಲಿದ್ದಾರೆ. ಭಾನುವಾರ ಬೆಳಗ್ಗೆ ಒಂಬತ್ತು ಗಂಟೆಗೆ ಆರಂಭವಾಗುವ ಪಾದ ಯಾತ್ರೆಯು ಅಂಚಿಪುರ ಕಾಲೊನಿ, ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡು ತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಹಾಗೂ ಹೊಸೂರುವರೆಗೂ ಸಾಗಲಿದ್ದು, ಹೊಸೂರಿನಲ್ಲಿ ಬಹಿರಂಗ ಸಭೆಯೊಂದಿಗೆ ಸಮಾರೋಪಗೊಳ್ಳಲಿದೆ. ನಮ್ಮ ಭೂಮಿ ನಮ್ಮ ಹಕ್ಕು, ರೈತರ ಬದುಕು ಮತ್ತು ಕೃಷಿ ಚಟುವಟಿಕೆಗಳನ್ನು ಉಳಿಸಲು ಈ ಹೋರಾಟ ನಡೆಸುತ್ತಿದ್ದೇವೆ. ➡ಪುಟ ೪


ಕರ್ನಾಟಕ ಭವನ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ

• ಬೆಂಗಳೂರು: ಯುಪಿಎಸ್‌ಸಿ ಸೇರಿದಂತೆ ಇತರೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಒಂದೇ ಸೂರಿನಡಿ ಎಲ್ಲಾ ಅನುಕೂಲ ದೊರೆಯಬೇಕು ಎನ್ನುವ ಕಾರಣಕ್ಕೆ ಪಿಡಬ್ಲ್ಯುಡಿ ವತಿಯಿಂದ ಹೊಸದಿಲ್ಲಿಯಲ್ಲಿ ಕರ್ನಾಟಕ ಭವನ-4 ಅನ್ನು ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.



ವಿಧಾನಸೌಧದಲ್ಲಿ ಶನಿವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಅವರು ಸಭೆಯ ನಿರ್ಣಯಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಪಿಡಬ್ಲ್ಯುಡಿ ವತಿಯಿಂದ ಹೊಸದಿಲ್ಲಿಯಲ್ಲಿ ಕರ್ನಾಟಕ ಭವನ-4 ಅನು ಮಾಡಲು 80.30 ಕೋಟಿ ರೂ.ಗೆ ಅನುಮೋದನೆ ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಶೇ. 50, ಇತರೇ ಸಮುದಾಯದ ವಿದ್ಯಾರ್ಥಿಗಳಿಗೆ ಶೇ. 50 ರಷ್ಟು ಮೀಸಲು ಇಡಲಾಗಿದೆ ಎಂದು ವಿವರಿಸಿದರು. ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ ಒಟ್ಟು 235.60 ಕೋಟಿ ರೂ. ವೆಚ್ಚದಲ್ಲಿ 620 ನೂತನ ಬಸ್‌ಗಳ ಖರೀದಿಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ನೂತನ ಬಸ್ಸುಗಳ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳು ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 220 ಬಸ್ಸುಗಳನ್ನು ಒದಗಿಸಲಾಗುತ್ತದೆ. ಹೊಸ ಬಸ್ಸುಗಳು ಬಿಎಸ್-4 ಪೂರ್ಣ ನಿರ್ಮಿತ ಮೊಫುಸಿಲ್ ಬಸ್ಸುಗಳಾಗಿವೆ. ಅಲ್ಲದೇ ಎಲ್ಲಾ ಸಾರಿಗೆ ನಿಗಮಗಳ ಅಡಿಯಲ್ಲಿ 11 ಕಡೆ ಎಲೆಕ್ಟ್ರಿಕ್ ಬಸ್‌ಗಳ ಡಿಪೋಗಳನ್ನು ತೆರೆಯಲು 112.72 ಕೋಟಿ ರೂ. ವೆಚ್ಚ ಮಾಡಲಾಗುವುದು. 30 ಕೋಟಿ ರೂ. ವೆಚ್ಚದಲ್ಲಿ ಸಂಡೂರು ತಾಲೂಕು ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು ಎಂದು ವಿವರಿಸಿದರು.

ರಾಮ ಬಾಣ



ಜಾಗತಿಕ ಉಗ್ರ ನಿಗಾ ಸಂಸ್ಥೆಗೆ ಭಾರತೀಯ ಉಪಾಧ್ಯಕ್ಷ!

• ಹೊಸದಿಲ್ಲಿ: ಕೇಂದ್ರ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ವಿವೇಕ್ ಅಗರವಾಲ್ ಅವರು ಜಾಗತಿಕ ಉಗ್ರ ನಿಗಾ ಸಂಸ್ಥೆ ಎಫ್‌ಎಟಿಎಫ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಹಣಕಾಸು ಕ್ರಮ ಕಾರ್ಯಪಡೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಮೊದಲ ಭಾರತೀಯರಾಗಿದ್ದಾರೆ. 2026ರ ಜುಲೈನಿಂದ 2027ರ ಜೂನ್‌ವರೆಗೆ ವಿವೇಕ್ ಉಗ್ರ ನಿಗಾ ಸಂಸ್ಥೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ.

ವಿವೇಕ್ ಅಗರವಾಲ್ ಅವರು 1994ರ ಮಧ್ಯಪ್ರದೇಶ ಕೇಡರ್‌ನ ಭಾರತೀಯ ಆಡಳಿತ ಸೇವೆ(ಐಎಎಸ್) ಅಧಿಕಾರಿ ಆಗಿದ್ದಾರೆ. ಜಾಗತಿಕ ಉಗ್ರ ನಿಗಾ ಸಂಸ್ಥೆಗೆ ಭಾರತೀಯರೊಬ್ಬರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ಸಾರಿದ ಭಾರತಕ್ಕೆ ಇದೊಂದು ದೊಡ್ಡ ಗೆಲುವು. ಜಾಗತಿಕ ಭಯೋತ್ಪಾದನೆ ಹಾಗೂ ಅದರ ಹಣಕಾಸಿನ ಸಂಪರ್ಕಜಾಲಗಳ ವಿರುದ್ಧದ ಹೋರಾಟದಲ್ಲಿ ಭಾರತದ ಪಾತ್ರದ ಮಹತ್ವವನ್ನು ತೋರಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ವಿವೇಕ್ ಅಗರವಾಲ್ ಯಾರು? ಕೇಂದ್ರ ಸರ್ಕಾರ, ಪಂಜಾಬ್ ಮತ್ತು ಮಧ್ಯಪ್ರದೇಶ ಸರ್ಕಾರದ ಹಲವು ಪ್ರಮುಖ ಹುದ್ದೆಗಳನ್ನು ವಿವೇಕ್ ಅಲಂಕರಿಸಿದ್ದಾರೆ. 2025ರಲ್ಲಿ ಮಧ್ಯಪ್ರದೇಶ ಕೇಡರ್‌ನ ಮುಖ್ಯ ಕಾರ್ಯದರ್ಶಿಯಾಗಿ ಬಡ್ತಿ ಪಡೆದಿದ್ದರು. ಕಂದಾಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ವಿವೇಕ್, ಹಣಕಾಸು ಗುಪ್ತಚರ ಘಟಕ-ಭಾರತ(ಎಫ್‌ಐಯು-ಐಎನ್‌ಡಿ) ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಹಣಕಾಸು ನಿರ್ವಹಣೆ, ಸಾರ್ವಜನಿಕ ಆಡಳಿತ ಮತ್ತು ನೀತಿಗಳ ಅನುಷ್ಠಾನದಲ್ಲಿ ತಜ್ಞರಾಗಿ ಅಗರವಾಲ್ ಹೆಸರುವಾಸಿ ಆಗಿದ್ದರು. ಕಂದಾಯ ಆಡಳಿತ, ಕೃಷಿ ಸುಧಾರಣೆಗಳು, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ಗುಪ್ತಚರ ವಿಭಾಗಗಳಲ್ಲೂ ವಿವೇಕ್ ಕೊಡುಗೆ ನೀಡಿದ್ದರು.

ದಿನ ಭವಿಷ್ಯ

ಮೇಷ ಮನೆಯಲ್ಲಿ ಕೆಟ್ಟಿರುವ ಸಂಬಂಧ ಸುಧಾರಣೆಗೆ ಗಮನ ಕೊಡಿ. ಬಿಗುಮಾನ ಬಿಟ್ಟು ವ್ಯವಹರಿಸಿ. ಬಂಧು ಭೇಟಿಯಿಂದ ಸಮಾಧಾನ.

ವೃಷಭ ನಿಮ್ಮ ಗುರಿ ಈಡೇರಬೇಕಾದರೆ ವಸ್ತುಸ್ಥಿತಿ ಅರಿಯಿರಿ. ಕೆಲ ವಿಷಯಗಳಲ್ಲಿ ಭ್ರಮೆ ಬಿಡಿ. ಮನೆಯವರ ಬೆಂಬಲ ಪಡೆಯಿರಿ.

ಮಿಥುನ ಮಾಡುವ ಕೆಲಸದಲ್ಲಿ ಸಫಲತೆ. ಆದರೆ ಸುಲಭದಲ್ಲಿ ಆಗದು. ಅಡ್ಡಿ, ವಿಳಂಬ ಸಾಧ್ಯತೆ. ಕೌಟುಂಬಿಕ ಮನಸ್ತಾಪ ನೆಮ್ಮದಿ ಕೆಡಿಸುವುದು.

ಕಟಕ ಭಿನ್ನಾಭಿಪ್ರಾಯ ನಿವಾರಣೆ. ಅನಿರೀಕ್ಷಿತ ವಿದ್ಯಮಾನ ಸಂಭವಿಸಿದರೆ ಅಂಜಬೇಡಿ. ವಿಶ್ವಾಸದಿಂದ ಎದುರಿಸಿ. ನೆರೆಮನೆಯವರ ಕಿರಿಕಿರಿ.

ಸಿಂಹ ವೃತ್ತಿಯಲ್ಲಿ ಯಶಸ್ಸು. ಮನೆಯಲ್ಲಿ ಸೌಹಾರ್ದ. ಬಂಧುಗಳ ಭೇಟಿ. ಧನವ್ಯಯ ಹೆಚ್ಚಾದರೂ ಬೇಸರ ಮೂಡದು.

ಕನ್ಯಾ ಮಾನಸಿಕ ಅಶಾಂತಿ. ಕೆಲಸದಲ್ಲಿ ನಿರಾಸಕ್ತಿ. ವ್ಯವಹಾರದಲ್ಲಿ ತೊಡಕು. ಎಲ್ಲರ ಜತೆ ಹೊಂದಾಣಿಕೆ ಬೆಳೆಸಿ. ಭಿನ್ನವಾಗಿ ವರ್ತಿಸಲು ಹೋಗದಿರಿ.

ತುಲಾ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ. ವೃತ್ತಿ ಸಮಸ್ಯೆಯೊಂದು ಪರಿಹಾರ ಕಾಣಲಿದೆ. ಕುಟುಂಬಸ್ಥರ ಹಿತ ಕಾಯುವಲ್ಲಿ ಸಫಲ.

ವೃಶ್ಚಿಕ ವೃತ್ತಿ ಒತ್ತಡ ಕಡಿಮೆ ಮಾಡಿಕೊಳ್ಳಿ. ಇಲ್ಲವಾದರೆ ಆರೋಗ್ಯದ ಮೇಲೆ ಪರಿಣಾಮ. ಮೆಚ್ಚಿನ ಹವ್ಯಾಸದಲ್ಲಿ ಚಿಂತೆ ಮರೆಯಲೆತ್ನಿಸಿ.

ಧನು ಮನೆಯಲ್ಲಿ ಶಾಂತಿ, ಸೌಹಾರ್ದ. ಹಣದ ವ್ಯವಹಾರ ಸಫಲ. ಆರೋಗ್ಯದ ಚಿಂತೆ ಪರಿಹಾರ. ಮಕ್ಕಳ ಸಾಧನೆಯ ಖುಷಿ.

ಮಕರ ಆದಾಯ ಹೆಚ್ಚಳದ ಸಂಕೇತ ತೋರಲಿದೆ. ಎಲ್ಲರಿಂದ ಉತ್ತಮ ಸಹಕಾರ ಪಡೆಯುವಿರಿ. ಆರೋಗ್ಯದ ಸಮಸ್ಯೆ ಕಡೆಗಣಿಸಬೇಡಿ.

ಕುಂಭ ವೃತ್ತಿಯಲ್ಲಿ ಯಾವುದೇ ಕೆಲಸ ಬಾಕಿ ಉಳಿಸಬೇಡಿ. ವಿಳಂಬ ದೊಡ್ಡ ಹಾನಿ ತಂದೀತು. ಅನಾರೋಗ್ಯಕರ ಆಹಾರ ಸೇವಿಸಬೇಡಿ.

ಮೀನ ಇತರರ ಜತೆ ವಿನಯದಿಂದ ವರ್ತಿಸಿ. ಇಲ್ಲವಾದರೆ ನಿಷ್ಠುರ ಕಟ್ಟಿಕೊಳ್ಳುವಿರಿ. ಆರ್ಥಿಕ ವ್ಯವಹಾರ ತುಸು ಚಿಂತೆಗೆ ಕಾರಣವಾದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,8,2,5

ಇಂದು ನೀಟ್(ಯುಜಿ)

ಪುಟ ೩➡ ಅಭ್ಯರ್ಥಿಗಳು ಪೋಸ್ಟ್‌ಕಾರ್ಡ್ ಅಳತೆಯ ಭಾವಚಿತ್ರವಿರುವ ಹೊಸ ಪ್ರವೇಶ ಪತ್ರದ (ಅಡ್ಮಿಟ್ ಕಾರ್ಡ್) ಪ್ರಿಂಟ್ ಮಾಡಿದ ಕಲರ್ ಪ್ರತಿಯನ್ನು ತರಬೇಕು. ಮೂಲ ಸರ್ಕಾರಿ ಗುರುತಿನ ಚೀಟಿ, ಹೆಚ್ಚುವರಿ ಭಾವಚಿತ್ರಗಳು ಮತ್ತು ಪಾರದರ್ಶಕ ನೀರಿನ ಬಾಟಲಿ ತರಬೇಕು. ಹಗುರ ಉಡುಪುಗಳು ಮತ್ತು ಚಪ್ಪಲಿಗಳನ್ನು ಧರಿಸಬೇಕು. ಅಭ್ಯರ್ಥಿಗಳು ಪೂರ್ಣ ತೋಳಿನ ಬಟ್ಟೆ, ಶೂಗಳು ಅಥವಾ ಆಭರಣಗಳನ್ನು ಧರಿಸುವಂತಿಲ್ಲ. ಎಲೆಕ್ಟ್ರಾನಿಕ್ಸ್ ವಸ್ತುಗಳು, ಮೊಬೈಲ್ ಫೋನ್‌ಗಳು, ಸ್ಮಾರ್ಟ್‌ವಾಚ್‌ಗಳು, ಕ್ಯಾಲ್ಕುಲೇಟರ್‌ಗಳು, ವ್ಯಾಲೆಟ್‌ಗಳು ಮತ್ತು ಆಹಾರದ ಪ್ಯಾಕೆಟ್‌ಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಕೇಂದ್ರ ಸೂಪರಿಂಟೆಂಡೆಂಟ್‌ಗಳು ಮತ್ತು ಇನ್ವಿಜಿಲೇಟರ್‌ಗಳನ್ನು ನೇಮಿಸಲಾಗಿದೆ. ಮರು ಪರೀಕ್ಷೆ ಸುಗಮ ಮತ್ತು ನ್ಯಾಯಯುತವಾಗಿ ನಡೆಯುವುದನ್ನ ಖಚಿತಪಡಿಸಿಕೊಳ್ಳಲು ಪೊಲೀಸ್ ಮತ್ತು ಜಿಲ್ಲಾಡಳಿತ ಅಧಿಕಾರಿಗಳು ಸೇರಿದಂತೆ 2 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

ಜನೌಷಧಿ ಕೇಂದ್ರದಲ್ಲಿ ಇತರೆ ವಸ್ತು ಮಾರಾಟ: ಪರಿಶೀಲನೆ

• ಬೆಂಗಳೂರು: ಜನೌಷಧಿ ಕೇಂದ್ರಗಳಲ್ಲಿ ಔಷಧಿಗಳ ಹೊರತಾಗಿ ಇತರೆ ವಸ್ತುಗಳ ಮಾರಾಟ ನಡೆಯುತ್ತಿರುವ ಕುರಿತು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ, ಅವುಗಳ ಕಾರ್ಯವೈಖರಿ ಹಾಗೂ ಸಮಸ್ಯೆಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲು ಆರೋಗ್ಯ ಇಲಾಖೆ ಅಧಿಕಾರಿಗಳ ತಂಡ ಮುಂದಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜನೌಷಧಿ ಕೇಂದ್ರಗಳಲ್ಲಿ ಮಾರಾಟವಾಗುತ್ತಿರುವ ಔಷಧಿಗಳ ಗುಣಮಟ್ಟ, ಅವುಗಳಿಗೆ ಸರ್ಕಾರದ ದೃಢೀಕರಣ ಸೇರಿದಂತೆ ವಿವಿಧ ಅಂಶಗಳನ್ನು ಪರಿ ಶೀಲಿಸಲಾಗುವುದು ಎಂದರು. ಇದು ಯಾವುದೇ ರೀತಿಯ ದಾಳಿ ಅಲ್ಲ. ಕೇಂದ್ರಗಳ ಕಾರ್ಯನಿರ್ವಹಣೆ ಮತ್ತು ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಅಧಿಕಾರಿಗಳು ಭೇಟಿ ನೀಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು. ಮತ್ತೊಂದೆಡೆ ಸಮಯಕ್ಕೆ ಸರಿಯಾಗಿ ಔಷಧಿ ಸಂಗ್ರಹ ದೊರೆಯುತ್ತಿಲ್ಲ ಎಂಬ ಸಮಸ್ಯೆಯನ್ನು ಕೇಂದ್ರಗಳ ಮಾಲೀಕರು ತಮ್ಮ ಗಮನಕ್ಕೆ ತಂದಿದ್ದಾರೆ ಎಂದು ಸಚಿವರು ತಿಳಿಸಿದರು.

ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಅಲ್ಲ: ಕೇಂದ್ರ ಸಚಿವ ಎಚ್ಚರಿಕೆ

ಮೈತ್ರಿ ಬಿಕ್ಕಟ್ಟು ಸೃಷ್ಟಿಗೆ ಯತ್ನ

• ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಲ್ಲಿ ಬಿರುಕು ಉಂಟಾಗುವುದಿಲ್ಲ. ಈ ಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯೂ ಅಲ್ಲ ಹಾಗೂ ನಮ್ಮ ನಡುವೆ ಬಿಕ್ಕಟ್ಟು ಸೃಷ್ಟಿಸಲು ಕಾಂಗ್ರೆಸ್ ವಿಫಲ ಪ್ರಯತ್ನ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು, ನಾನು ನಮ್ಮ ಅಭ್ಯರ್ಥಿಯನ್ನು ನಿಲ್ಲಿಸುವುದಕ್ಕೆ ಮೊದಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬೀನ್, ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾದ ಆರ್. ಅಶೋಕ್ ಅವರೊಂದಿಗೆ ಚರ್ಚೆ ನಡೆಸಿ ಅವರೆಲ್ಲರ ಸಹಮತದಿಂದ ಅಭ್ಯರ್ಥಿಯನ್ನು ಹಾಕಲಾಯಿತು. ಹೀಗಾಗಿ ನಮ್ಮ ಮೈತ್ರಿಯಲ್ಲಿ ಬಿರುಕು ಬರುವ ಪ್ರಶ್ನೆ ಇಲ್ಲ ಎಂದರು.

ಅನುದಾನಕ್ಕಾಗಿ ಶಾಸಕರು ಆಸೆ ಪಟ್ಟಿದ್ದಾರೆ: ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೊಟ್ಟರೆ ನಿಮಗೆ (ಕಿಸೆಗೆ) 50 ಕೋಟಿ ರೂ. ಕೊಡುತ್ತೇವೆ, ಅದರ ಜೊತೆಗೆ 100 ಕೋಟಿ ರೂ. ಅನುದಾನ ಕೊಡುತ್ತೇವೆ ಎಂದು ಆಮಿಷ ಒಡ್ಡಿದ್ದಾರೆ. ಆ ಆಮಿಷಗಳು ಚುನಾವಣೆಯಲ್ಲಿ ಕೆಲಸ ಮಾಡಿವೆ ಎಂದು ಆರೋಪಿಸಿದರು. ನಮಗೆ ಇದ್ದಿದ್ದು ಕೇವಲ 18 ಸೀಟು. ಅದರಲ್ಲಿ ಒಬ್ಬರು ಈಗಾಗಲೇ ಕಾಲು ಹೊರಗೆ ಇಟ್ಟಿದ್ದಾರೆ.

ಹೀಗಾಗಿ ನಮ್ಮಲ್ಲಿ ಉಳಿದಿದ್ದು 17 ಶಾಸಕರು ಮಾತ್ರ ಹಾಗೂ ಬಿಜೆಪಿಯ ಹೆಚ್ಚುವರಿ 6 ಮತಗಳು ಬರಬಹುದು ಎನ್ನುವುದು ನಮಗಷ್ಟೇ ಅಲ್ಲ, ಎಲ್ಲರ ನಿರೀಕ್ಷೆಯೂ ಆಗಿತ್ತು. ಹೀಗೆಯೇ ಎಲ್ಲಾ ಸೇರಿ ಒಟ್ಟಾರೆ ನಮ್ಮ ಅಭ್ಯರ್ಥಿಗೆ 24 ಮತಗಳು ಬರಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿದ್ದೆವು. ಆದರೆ, ಕೆಲ ಶಾಸಕರು ಪಕ್ಷದ ಜೊತೆ ಗಟ್ಟಿಯಾಗಿ ನಿಲ್ಲಲಿಲ್ಲ, ಅನುದಾನಕ್ಕಾಗಿ ಚಂಚಲರಾಗಿದ್ದಾರೆ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಕ್ಷ ಬಿಡುವವರು ಬಿಡಲಿ

ಜೆಡಿಎಸ್ ಶಾಸಕರ ಸಭೆಯಲ್ಲಿ ಕೆಲವು ವಿಷಯಗಳನ್ನು ನಾನು ಮುಕ್ತವಾಗಿ ಮಾತನಾಡಿದ್ದೇನೆ. ಅವರ ಭವಿಷ್ಯಕ್ಕೆ ತೊಂದರೆ ಕೊಡಲು ನಾನು ಬಯಸುವುದಿಲ್ಲ. ಬೇರೆ ಕಡೆ ಅನುಕೂಲವಾಗುತ್ತದೆ, ಹೋಗುತ್ತೇವೆ ಎಂದರೆ ನಾನು ತಡೆಯುವುದಕ್ಕೆ ಹೋಗುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಸಕರು ಬೇರೆ ಕಡೆಗೆ ಹೋಗಬೇಕು ಅಂದರೆ ಧೈರ್ಯವಾಗಿ ನನಗೆ ಹೇಳಿಯೇ ಹೋಗಿ ಅಂತ ಹೇಳಿದ್ದೇನೆ. ಅದನ್ನು ಬಿಟ್ಟು ಇಂತಹ ಕೆಲಸಗಳನ್ನು ಮಾಡಿ ಪಕ್ಷಕ್ಕೆ ಧಕ್ಕೆ ತರಬೇಡಿ ಎಂದು ಹೇಳಿದ್ದೇನೆ. ಶಾಸಕರ ಸಭೆಯಲ್ಲಿ ಒಬ್ಬರು ಬಿಟ್ಟರೆ ಉಳಿದ 17 ಮಂದಿ ಹಾಜರಿದ್ದರು. ಅವರೊಂದಿಗೆ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದೇನೆ ಎಂದು ತಿಳಿಸಿದರು.



ಕೇವಲ ಈ ನೆಪ ಇಟ್ಟುಕೊಂಡು ನಮ್ಮ ನಡುವೆ ಬಿಕ್ಕಟು ಸೃಷ್ಟಿಸಬಹುದು ಎಂದು ಕಾಂಗ್ರೆಸ್ ಪಕ್ಷ ನಂಬಿದ್ದರೆ ಅವರಿಗೆ ನಿರಾಶೆ ಆಗುವುದು ಖಚಿತ. ಅವರ ಆಸೆ ಖಂಡಿತಾ ಕೈಗೂಡುವುದಿಲ್ಲ. ಪರಿಷತ್ ಚುನಾವಣೆ ಮುಂದಿನ ವಿಧಾನಸಭೆಗೆ ದಿಕ್ಸೂಚಿಯೂ ಅಲ್ಲ.
■ **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಇಂದು ಹರಿಪ್ರಸಾದ್ ಪದಗ್ರಹಣ

• ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್‌ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಅವರು ಜೂ.21ರಂದು ಪದಗ್ರಹಣ ಮಾಡಲಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭಕ್ಕೆ ಭರ್ಜರಿ ಸಿದ್ಧತೆ ಕೈಗೊಳ್ಳಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಮುಖಂಡರು ಭಾಗವಹಿಸುವ ನಿರೀಕ್ಷೆ ಇದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಬೆಳಗ್ಗೆ 11 ಗಂಟೆಗೆ ಪಕ್ಷದ ಧ್ವಜವನ್ನು ಬಿ.ಕೆ. ಹರಿಪ್ರಸಾದ್ ಅವರಿಗೆ ಹಸ್ತಾಂತರಿಸುವ ಮೂಲಕ ಅಧಿಕಾರ ವರ್ಗಾವಣೆ ನೆರವೇರಿಸಲಿದ್ದಾರೆ. ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಸೇರಿದಂತೆ ಸಚಿವರು, ಶಾಸಕರು ಮತ್ತು ಹಿರಿಯ ನಾಯಕರು ವೇದಿಕೆಯಲ್ಲಿ ಉಪಸ್ಥಿತರಿರುತ್ತಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಅವರು, ಕಾರ್ಯಕ್ರಮಕ್ಕೆ ಆಗಮಿಸುವ ಕಾರ್ಯಕರ್ತರ ಅನುಕೂಲಕ್ಕಾಗಿ 70 ಆಹಾರ ವಿತರಣಾ ಕೇಂದ್ರಗಳನ್ನು ತೆರೆಯಲಾಗಿದ್ದು, ಬೆಳಗ್ಗೆ 8 ಗಂಟೆಯಿಂದ ಉಪಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ, ಕುಡಿಯುವ ನೀರು ಮತ್ತು ಮಜ್ಜಿಗೆಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಸುಮಾರು 1,200 ಬಸ್‌ಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದ್ದು, ಸ್ಥಳದಲ್ಲಿ 6 ಆ್ಯಂಬುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ ಎಂದರು.



ನೀಟ್ ಮರುಪರೀಕ್ಷೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯಕರ್ತರು ಸಹಕರಿಸಬೇಕು ಎಂದು ಸೂಚನೆ ನೀಡಲಾಗಿದೆ.

ಪೊಲೀಸ್ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ವಿಶೇಷ ರೂಟ್‌ಮ್ಯಾಪ್ ಸಿದ್ಧಪಡಿಸಲಾಗಿದ್ದು, ಕಾರ್ಯಕ್ರಮದ ನಿರ್ವಹಣೆಗೆ ಎಂಟು ಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

ಪುಟ ೩➡ ಅಂಚಿಪುರ, ಬನ್ನಿಗಿರಿ, ಗೊಲ್ಲಹಳ್ಳಿ ಸೇರಿದಂತೆ 8 ಗ್ರಾಮಗಳ ರೈತರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆಯಡಿ ಅಂಚಿಪುರ, ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ 518 ಎಕರೆ ಕೃಷಿ ಭೂಮಿಗೆ ಈಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಜೊತೆಗೆ ಹೆಚ್ಚುವರಿ 7,481 ಎಕರೆ ಭೂಸ್ವಾಧೀನಕ್ಕೆ ಸರ್ಕಾರ ಮುಂದಾಗಿದೆ. ಇದರಿಂದ 755 ರೈತ ಕುಟುಂಬಗಳು, ಮಾಸಿಕ 6 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಹೈನುಗಾರಿಕೆ, ರೇಷ್ಮೆ-ತೋಟಗಾರಿಕೆ ಹಾಗೂ 10 ಲಕ್ಷ ಹಸಿರು ವೃಕ್ಷಗಳಿಗೆ ಧಕ್ಕೆಯಾಗಲಿದೆ ಎಂದು ನಿಖಿಲ್ ಹೇಳಿದ್ದಾರೆ.

ಪಕ್ಷಾತೀತ ಹೋರಾಟ: 450 ದಿನಗಳಿಂದ ರೈತರು ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಯೋಜನೆಯಿಂದ ರೈತರ ಬದುಕಿಗೆ ತೊಂದರೆಯಾಗಲಿದ್ದು, ನಮ್ಮ ಈ ಹೋರಾಟ ಪಕ್ಷಾತೀತವಾಗಿ ನಡೆಯಲಿದ್ದು, ಸರ್ಕಾರದ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಬೇಕು ಎಂದು ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದ್ದಾರೆ. ಪಾದಯಾತ್ರೆಗೆ ವಿವಿಧ ರೈತ ಸಂಘಟನೆಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಬೆಂಬಲ ಸೂಚಿಸಿದ್ದು, ನಮ್ಮ ಪಾದಯಾತ್ರೆಯಲ್ಲಿ ಭಾಗಿಯಾಗಿಯಾಗಲಿದ್ದಾರೆ ಎಂದರು.

ನಾನು ಹೇಳಿದ್ದೆಲ್ಲವೂ ದಾಖಲೆಯಲ್ಲಿದೆ

• ಬೆಂಗಳೂರು: ಬಿಡದಿ ಟೌನ್‌ಶಿಪ್ ವಿಚಾರವಾಗಿ ನಾನು ಹೇಳಿದ್ದೆಲ್ಲವೂ ದಾಖಲೆಗಳಲ್ಲಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಬಗ್ಗೆ ವಿಧಾನಸಭೆಯಲ್ಲಿ ಈ ಹಿಂದೆಯೇ ಚರ್ಚೆ ಆಗಿತ್ತು. ನನ್ನ ಕಾಲದಲ್ಲಿ ಐದು ಟೌನ್‌ಶಿಪ್ ಮಾಡುವ ವಿಚಾರದ ಬಗ್ಗೆ ವಿಸ್ತೃತ ಚರ್ಚೆ ನಡೆದಿತ್ತು. ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ಬೇರೆ ರಚಿಸಿತ್ತು. ಆ ಬಗ್ಗೆ ನಾನು ಅಂದಿನ ಮುಖ್ಯಮಂತ್ರಿ ಆಗಿ ಏನು ಹೇಳಿದ್ದೇನೆ ಎಂಬುದು ದಾಖಲೆಯಲ್ಲಿದೆ ಎಂದಿದ್ದಾರೆ. ಟೌನ್‌ಶಿಪ್‌ಗಾಗಿ ರೈತರ ಒಂದಿಂಚೂ ಫಲವತ್ತಾದ ಭೂಮಿ ಸ್ವಾಧೀನ ಮಾಡುವ ವಿಚಾರ ಇಲ್ಲ ಎಂದಿದ್ದೇನೆ. ಇನ್ನೆರಡು ದಿನಗಳಲ್ಲಿ ಸುದ್ದಿಗೋಷ್ಠಿ ನಡೆಸಿ ಎಲ್ಲವನ್ನೂ ಹೇಳುತ್ತೇನೆ. ಆಗ ನನ್ನ ಜತೆ ಇದ್ದು, ಈ ಯೋಜನೆಯನ್ನು ವಿರೋಧಿಸಿದವರು ಇವತ್ತು ಬೇರೆ ಪಕ್ಷದಲ್ಲಿದ್ದು ಮಾತು ಬದಲಿಸುತ್ತಿದ್ದಾರೆ ಎಂದು ಟೀಕಿಸಿದರು. ಭೂ ಮಾಲೀಕರಿಗೆ ಶಾಸಕ ಪರಿಹಾರದ ಚೆಕ್ ಕೊಟ್ಟ ಬಗ್ಗೆ ಲೇವಡಿ ಮಾಡಿದ ಕೇಂದ್ರ ಸಚಿವರು, ಭೂ ಸ್ವಾಧೀನ ಅಧಿಕಾರಿ ಎಂಬ ವ್ಯಕ್ತಿ ಇರುತ್ತಾನೆ. ಅಥವಾ ಆ ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳು ಇರುತ್ತಾರೆ, ಅವರು ಪರಿಹಾರದ ಚೆಕ್ ಕೊಡಬೇಕಾಗುತ್ತದೆ. ಕೆಲವರು ಚೆಕ್ ತೆಗೆದುಕೊಂಡಿದ್ದಾರೆ. ಆ ಹಣ ಎಷ್ಟು ದಿನ ಇರುತ್ತದೆ? 2 ಕೋಟಿ 30 ಲಕ್ಷದ ಚೆಕ್ ಕೊಟ್ಟು ರೈತರಿಗೆ ಆಸೆ ಹುಟ್ಟಿಸಿದ್ದಾರೆ. 20 ವರ್ಷಕ್ಕೆ 2 ಕೋಟಿ ಹಣವನ್ನು ಎಫ್ ಇಟ್ಟರೆ ಹೆಚ್ಚೆಂದರೆ 40 ಲಕ್ಷ ಬಡ್ಡಿ ಸಿಗಬಹುದು. ಆದರೆ ಜಮೀನನ್ನ ಹಾಗೆ ಇಟ್ಟುಕೊಂಡರೆ 20 ಕೋಟಿ ಬೆಲೆ ಬಾಳುತ್ತದೆ ಎಂದು ಸಚಿವರು ಹೇಳಿದರು.

ರಾಜ್ಯಕ್ಕೆ ಕೇಂದ್ರದ ಯೋಜನೆ ತರಲು ಅಧಿಕಾರಿಗಳ ತಂಡ

ಪುಟ ೩➡ ಈಗಾಗಲೇ ದಿಲ್ಲಿಗೆ ತೆರಳಿ ಕರ್ನಾಟಕದ ಅಧಿಕಾರಿಗಳ ಸಭೆ ನಡೆಸಿ ಅವರ ಸಲಹೆ ಪಡೆದಿದ್ದೇನೆ. ನಮ್ಮ ಅಧಿಕಾರಿಗಳು ಹಲವಾರು ಸಲಹೆ ನೀಡಿದ್ದು, ಕರ್ನಾಟಕದ ಏಳಿಗೆಗೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ದಿಲ್ಲಿಯಲ್ಲಿರುವ ನಮ್ಮ ಅಧಿಕಾರಿಗಳು ತಂಡಗಳನ್ನು ರಚಿಸಿಕೊಂಡು ಇಲಾಖೆಗೆ ಅನುಗುಣವಾಗಿ ಸಲಹೆ ನೀಡಲು ಮುಂದೆ ಬಂದಿದ್ದಾರೆ. ಇವರ ಜೊತೆಗೆ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ನಿವೃತ್ತ ಅಧಿಕಾರಿಗಳನ್ನು ಈ ತಂಡಕ್ಕೆ ನೇಮಕ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ವಿದ್ಯುತ್ ಸಂಪರ್ಕಕ್ಕೆ 15 ದಿನ ಕಾಲಾವಕಾಶ

ಪುಟ ೩➡ ಗ್ರಾಮೀಣ ಭಾಗದ ರೇಷ್ಮೆ ಸಾಕಾಣಿಕೆ ಮನೆ, ಹೈನುಗಾರಿಕೆ ಕೊಟ್ಟಿಗೆಗಳಿಗೆ ವಿನಾಯಿತಿ ನೀಡಲಾಗಿದೆ. ಹೊಸದಾಗಿ ನಿರ್ಮಾಣ ಮಾಡಿದರೆ ಅವಕಾಶವಿಲ್ಲ. ಇಂಧನ ಸಚಿವರು, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸಚಿವರ ಬಳಿ ಇದರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

224 ಕ್ಷೇತ್ರಗಳಲ್ಲೂ ಕಡ್ಡಾಯ ಸಭೆ

ಪುಟ ೩➡ ಸ್ಥಳೀಯ ಶಾಸಕರ ಜವಾಬ್ದಾರಿ ಏನೆಂಬುದನ್ನು ಮುಂದೆ ವಿವರಿಸಲಾಗುವುದು ಎಂದು ಸಿಎಂ ಡಿಕೆಶಿ ತಿಳಿಸಿದರು. ನಮಗೆ ಜನರ ಹಿತ ಮುಖ್ಯ. ಇಲ್ಲಿ ಯಾರೂ ಸರ್ವಜ್ಞರಲ್ಲ, ಸಕಾಲ, ಇ- ಆಡಳಿತ ಸೇರಿದಂತೆ ಎಲ್ಲವನ್ನು ಬಳಸಿ ಜನರ ಸಮಸ್ಯೆ ನಿವಾರಿಸಲಾಗುವುದು. ಮಾಧ್ಯಮದಲ್ಲಿ ಬಂದಂತಹ ವಿಚಾರಗಳನ್ನು ತಿಳಿದು ನಾವೂ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾಧ್ಯಮಗಳ ಗಮನಕ್ಕೆ ಬಂದಿದ್ದನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಚಿವರಾದ ಈಶ್ವರ ಖಂಡ್ರೆ, ಯು.ಟಿ.ಖಾದರ್, ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕಾರ್ಯದರ್ಶಿ ರಾಜೇಂದ್ರ ಚೋಳನ್ ಮತ್ತಿತರರಿದ್ದರು.

ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಅನಿವಾರ್ಯ

• ಬೆಂಗಳೂರು: ರಾಜ್ಯದಲ್ಲಿ ಬಸ್ ಪ್ರಯಾಣ ದರ ಏರಿಕೆಯನ್ನು ಜನರ ಹಿತದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಸ್ ಟಿಕೆಟ್ ದರ ಏರಿಕೆ ವಿಚಾರವಾಗಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಖಾಸಗಿ ಹಾಗೂ ನಿಗಮದ ಡಿಪೋಗಳಲ್ಲಿನ ಡೀಸೆಲ್ ಬೆಲೆ ವ್ಯತ್ಯಾಸ ದರ ಸುಮಾರು 40 ರೂ.ಗಳಷ್ಟಿದೆ. ಇದು ಗಾಬರಿಯಾಗುವ ಸಂಖ್ಯೆ. ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಆಗಬೇಕು ಎಂದು ಈ ಹಿಂದೆ ತೀರ್ಮಾನ ಮಾಡಲಾಗಿತ್ತು. ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದರು. ಕೆಎಸ್‌ಆರ್‌ಟಿಸಿಯೂ ಉಳಿಬೇಕು, ಜನರಿಗೂ ಅನುಕೂವಾಗಬೇಕು. ಏಕೆಂದರೆ ಪ್ರಧಾನ ಮಂತ್ರಿಗಳೇ ಸಾರ್ವಜನಿಕ ಸಾರಿಗೆಗಳನ್ನು ಬಳಸಿ ಇಂಧನ ಉಳಿಸಿ ಎಂದು ಮಾರ್ಗದರ್ಶನ ನೀಡಿದ್ದಾರೆ. ಇದರ ಬಗ್ಗೆ ಜನರ ಹಿತ ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಲಾಗುವುದು. ಖಾಸಗಿಯವರು ಡಿಪೋಗಳ ಬದಲಾಗಿ ಸಾರ್ವಜನಿಕರಿಗೆ ಇರುವ ಬಂಕ್‌ಗಳಲ್ಲಿ ಡೀಸೆಲ್ ಖರೀದಿ ಮಾಡುತ್ತಿದ್ದಾರೆ. ಇದರ ಬಗ್ಗೆ ವರದಿ ಕೇಳಿದ್ದೇನೆ ಎಂದು ಹೇಳಿದರು.

ಕಲಬುರಗಿಯಲ್ಲೇ ಅತಿ ಹೆಚ್ಚು ಕಟ್ಟಡ ದುರಾವಸ್ಥೆ | ಜೀವ ಭಯದ ನಡುವೆ ಪಾಠ ಕೇಳುವ ವಿದ್ಯಾರ್ಥಿಗಳು

ಶಿಥಿಲಾವಸ್ಥೆಯಲ್ಲಿ ಕಲ್ಯಾಣದ 16,727 ಸರ್ಕಾರಿ ಶಾಲಾ ಕೊಠಡಿಗಳು

▸ ರಾಚಪ್ಪಾ ಜಂಬಗಿ

ದಿಗಂತ ವಿಶೇಷ

• ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಕುರಿತು ಸರ್ಕಾರಗಳು ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿರುವಾಗಲೇ, ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳ ಮೂಲಸೌಕರ್ಯದ ದುಸ್ಥಿತಿ ಆತಂಕಕಾರಿ ಚಿತ್ರಣ ತೆರೆದಿಟ್ಟಿದೆ.

ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನ ಕಲಬುರಗಿ ಸೇರಿದಂತೆ ಭಾಗದ ಏಳು ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮೈನರ್, ಮೇಜರ್ ಸೇರಿ ಒಟ್ಟು 16,727 ಶಾಲಾ ಕೊಠಡಿಗಳು ಶಿಥಿಲಾವಸ್ಥೆಗೆ ತಲುಪಿದ್ದು, ಸಾವಿರಾರು ವಿದ್ಯಾರ್ಥಿಗಳು ಜೀವಭಯದ ನಡುವೆ ಪಾಠ ಕೇಳುವಂತಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ,ಬೀದರ್, ಯಾದಗಿರಿ, ರಾಯಚೂರು,ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಸೇರಿದಂತೆ ಏಳು ಜಿಲ್ಲೆಗಳಲ್ಲಿ 8,492 ಶಾಲಾ ಕೊಠಡಿಗಳು ದೊಡ್ಡ ಪ್ರಮಾಣದಲ್ಲಿ ರಿಪೇರಿ ಅಗತ್ಯವಿರುವ ಸ್ಥಿತಿಯಲ್ಲಿದ್ದರೆ, 8,235 ಕೊಠಡಿಗಳು ಸಣ್ಣ ಪ್ರಮಾಣದ ರಿಪೇರಿ ಅಗತ್ಯವಿರುವ ಸ್ಥಿತಿಯಲ್ಲಿವೆ.

ಮಳೆಗಾಲ ಆರಂಭವಾಗಿರುವ ಈ ಸಂದರ್ಭದಲ್ಲಿ ಶಾಲೆಗಳ ಮೇಲ್ಛಾವಣಿ ಸೋರುವುದು, ಗೋಡೆಗಳಲ್ಲಿ ಬಿರುಕು ಕಾಣಿಸಿಕೊಳ್ಳುವುದು, ಪ್ಲಾಸ್ಟರ್ ಉದುರುವುದು ಹಾಗೂ ಕೆಲವೆಡೆ ಕಟ್ಟಡಗಳು ಕುಸಿಯುವ ಭೀತಿ ಎದುರಾಗಿರುವುದು ಪೋಷಕರು ಮತ್ತು ಶಿಕ್ಷಕರಲ್ಲಿ ಆತಂಕ ಮೂಡಿಸಿದೆ.

ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತ ಕಚೇರಿ ಕಲಬುರಗಿ ವಿಭಾಗ ನೀಡಿದ ಮಾಹಿತಿಯಂತೆ ಜಿಲ್ಲಾವಾರು ಶಿಥಿಲ ಶಾಲಾ ಕೊಠಡಿಗಳ ಸಂಖ್ಯೆ ಗಮನಿಸಿದಾಗ ಕಲಬುರಗಿ-2,838 ಮೈನರ್, 2,039 ಮೇಜರ್ ಆಗಿ ಶಿಥಿಲಗೊಂಡಿವೆ. ಅದೇ ರೀತಿ ಬೀದರ್-1,192-1,097, ಯಾದಗಿರಿ-720-969, ಕೊಪ್ಪಳ-1,009-846, ರಾಯಚೂರ-978-1,342, ವಿಜಯನಗರ -819 -1,148, ಬಳ್ಳಾರಿ-679 -1,051 ಶಾಲಾ ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ. ಈ ಪೈಕಿ ಕಲಬುರಗಿ ಜಿಲ್ಲೆಯಲ್ಲೇ ಅತಿ ಹೆಚ್ಚು ಶಿಥಿಲ ಶಾಲಾ ಕೊಠಡಿಗಳನ್ನು ಹೊಂದಿರುವ ಜಿಲ್ಲೆ ಎಂಬುದು ಅಂಕಿ-ಅಂಶಗಳಿಂದ ಸ್ಪಷ್ಟವಾಗಿದೆ.



ತಾಲೂಕು	ಸಣ್ಣ ಪ್ರಮಾಣ	ದೊಡ್ಡ ಪ್ರಮಾಣ
ಆಳಂದ	427	340
ಅಫಜಲಪುರ	506	210
ಚಿಂಚೋಳಿ	223	293
ಚಿತ್ತಾಪುರ	764	727
ಕಲಬುರಗಿ ದಕ್ಷಿಣ	150	158
ಜೇವರ್ಗಿ	275	317
ಸೇಡಂ	216	245
ಕಲಬುರಗಿ ಉತ್ತರ	135	209

ಒಟ್ಟು 2696 ಸಣ್ಣ ಪ್ರಮಾಣದಲ್ಲಿ, 2499 ದೊಡ್ಡ ಪ್ರಮಾಣದಲ್ಲಿ ಕೊಠಡಿ ಶಿಥಿಲಗೊಂಡಿವೆ

ಕೋಟ್ಯಂತರ ಅನುದಾನ ಎಲ್ಲಿಗೆ? ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿ ಮೀಸಲಿಡುತ್ತಿದ್ದರೂ, ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅಕ್ಷರ ಆವಿಷ್ಕಾರ ಯೋಜನೆಯಡಿ ಅನುದಾನದ ಶೇ.25% ಹಣ ಶಿಕ್ಷಣಕ್ಕಾಗಿ ಮೀಸಲಿಟ್ಟರೂ ಶಾಲಾ ಮೂಲಸೌಕರ್ಯಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಎಂಬುದು ಮೇಲಿನ ಅಂಕಿ ಅಂಶಗಳಿಂದಲೇ ಕಂಡುಬರುತ್ತಿದೆ.

ಜಿಲ್ಲೆಯಲ್ಲಿಯೇ ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಸ್ವಕ್ಷೇತ್ರವಾದ ಚಿತ್ತಾಪುರ ತಾಲೂಕಿನಲ್ಲಿ ಅತಿ ಹೆಚ್ಚು ಶಿಥಿಲ ಶಾಲಾ ಕೊಠಡಿಗಳು ಕಂಡುಬಂದಿದ್ದು, 764 ಮೈನರ್ ಹಾಗೂ 727 ಮೇಜರ್ ರಿಪೇರಿ ಅಗತ್ಯವಿರುವ ಕೊಠಡಿಗಳು ದಾಖಲಾಗಿವೆ.

ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಸಮಗ್ರ ಸಮೀಕ್ಷೆ ನಡೆಸಿ ಅಪಾಯಕಾರಿ ಕಟ್ಟಡಗಳನ್ನು ತಕ್ಷಣ ತೆರವುಗೊಳಿಸುವುದು ಹಾಗೂ ಹೊಸ ಕೊಠಡಿಗಳ ನಿರ್ಮಾಣಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಮಕ್ಕಳ ಸುರಕ್ಷತೆ ಹಾಗೂ ಗುಣಮಟ್ಟದ ಶಿಕ್ಷಣಕ್ಕಾಗಿ ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕಿದೆ. ಮಕ್ಕಳ ಭವಿಷ್ಯ ರೂಪುಗೊಳ್ಳಬೇಕಾದ ಶಾಲೆಗಳು ಇಂದು ಶಿಥಿಲ ಕಟ್ಟಡಗಳ ನೆರಳಿನಲ್ಲಿ ನಿಂತಿರುವುದು ಶಿಕ್ಷಣ ವ್ಯವಸ್ಥೆಯ ಕಹಿ ವಾಸ್ತವವಾಗಿದೆ.
■ **ಎಂ.ಎಸ್.ಪಾಟೀಲ ನರಿಬೋಳ,** ಅಧ್ಯಕ್ಷ, ಕಲ್ಯಾಣ ಕರ್ನಾಟಕ ಪ್ರತ್ಯೇಕ ಹೋರಾಟ ಸಮಿತಿ

ಕ.ಕ.ಭಾಗದಲ್ಲಿ ಒಟ್ಟು 8,235 ಶಾಲಾ ಕೊಠಡಿಗಳು ಮೈನರ್ ಆಗಿ ಹಾಗೂ 8492 ಕೊಠಡಿ ಮೇಜರ್ ಆಗಿ ಶಿಥಿಲಾವಸ್ಥೆಯಲ್ಲಿದ್ದು, ಎಲ್ಲಾ ಉಪ ನಿರ್ದೇಶಕರಿಂದ ಕ್ರಿಯಾ ಯೋಜನೆ ತರಿಸಿಕೊಂಡು ಸರ್ಕಾರಕ್ಕೆ ಹಾಗೂ ಸಂಬಂಧಪಟ್ಟ ಶಿಕ್ಷಣ ಇಲಾಖೆಗೆ ದುರಸ್ತಿ ಕಾರ್ಯಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಂತ ಹಂತಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ದುರಸ್ತಿ ಕಾರ್ಯ ನಡೆಯುತ್ತಿದೆ.
■ **ಗಣಪತಿ ಬಾರಾಕಟ್ಟಿ,** ಸಹ ನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಾರ್ಯಾಲಯ, ಕಲಬುರಗಿ ವಿಭಾಗ

ವಿಜಯಪುರದಲ್ಲಿ ಶಾಲಾ ಕಟ್ಟಡದ ಮೇಲ್ಛಾವಣಿ ಕುಸಿತು

• ವಿಜಯಪುರ: ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ ಹೊಂದಿಕೊಂಡಿದ್ದ ಶಿಥಿಲಗೊಂಡಿದ್ದ ಕಟ್ಟಡದ ಕ್ಲಾಸ್ ರೂಮ್‌ನ ಮೇಲ್ಛಾವಣಿ ಶುಕ್ರವಾರ ರಾತ್ರಿ ಕುಸಿದು ಬಿದ್ದು ಗ್ರಾಮದಲ್ಲಿ ಆತಂಕ ಮೂಡಿಸುವಂತೆ ಮಾಡಿದೆ. ಈ ಕಟ್ಟಡದಲ್ಲಿ ಶಾಲಾ ತರಗತಿಗಳು ನಡೆಯುತ್ತಿರಲಿಲ್ಲ. ಈ ಕಟ್ಟಡದ ಮೇಲ್ಛಾವಣಿ ಏಕಾಏಕಿ ಕಿತ್ತು ಬಿದಿದ್ದು, ಯಾವುದೇ ರೀತಿಯ ಹಾನಿಯಾಗಿಲ್ಲ.

ಇಂದು ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ

• **ಬೆಳಗಾವಿ:** ನಗರದ ಸಂಘ ಸದನ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಶ್ರೀ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಭಾನುವಾರ ಅದ್ದೂರಿಯಾಗಿ ಲೋಕಾರ್ಪಣೆಗೊಳ್ಳಲಿದೆ.

ಕಾರ್ಯಕ್ರಮಕ್ಕೆ ಪ.ಪೂ. ಶ್ರೀ ಮ.ನಿ.ಪ್ರ.ಗುರುಸಿದ್ಧ ಮಹಾಸ್ವಾಮಿಗಳು, ಕಾರಂಜಿಮಠದ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನೇತೃತ್ವದಲ್ಲಿ ಸ್ಮಾರಕ ಭವನವನ್ನು ಲೋಕಾರ್ಪಣೆಗೊಳಿಸಲಿದ್ದಾರೆ.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಷ್ಟ್ರೀಯ ಸ್ವಯಂಸೇವಕಸಂಘದಪ್ರಾಂತಸಂಘಚಾಲಕರಾದ ಬಸವರಾಜ ಡಂಬಳ ವಹಿಸಲಿದ್ದು, ಜನ ಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಅವರು ಸರ್ವ ಜನತೆಗೆ ಆತ್ಮೀಯ ಸ್ವಾಗತ ಕೋರಿದ್ದಾರೆ.

ಲೋಕಾರ್ಪಣೆ ಸಮಾರಂಭದ ಹಿನ್ನೆಲೆಯಲ್ಲಿ ಸ್ಮಾರಕ ಭವನವನ್ನು ಮಧುವಣಗಿತ್ತಿಯಂತೆ ಅಲಂಕರಿಸಲಾಗಿದ್ದು, ಇಡೀ ಪ್ರದೇಶ ಹಬ್ಬದ ವಾತಾವರಣವನ್ನು ಪಡೆದುಕೊಂಡಿದೆ. ಸಂಘ ಪರಿವಾರದ ಪದಾಧಿಕಾರಿಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಜನರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ನಗರದ ಪ್ರಮುಖ ಕಾರ್ಯಕ್ರಮವಾಗಿ ಗಮನ ಸೆಳೆದಿರುವ ಈ ಲೋಕಾರ್ಪಣೆ ಸಮಾರಂಭಕ್ಕೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ.

ಡಿಕೆಶಿ ಪೂಜೆ



ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಮುಂಬೈನ ಪ್ರಸಿದ್ಧ ಸಿದ್ಧಿ ವಿನಾಯಕ ದೇಗುಲಕ್ಕೆ ಶನಿವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ತಿಂಗಳಲ್ಲಿ ಕಾಮಗಾರಿ ಮುಗಿಸಿ: ಖಂಡ್ರೆ

• **ಬೆಂಗಳೂರು:** ಗ್ರಾಮೀಣ ಪ್ರದೇಶಗಳಲ್ಲಿ ಅಪೂರ್ಣವಾಗಿರುವ ಸಮುದಾಯ ಶೌಚಾಲಯಗಳ ಕಾಮಗಾರಿಯನ್ನು 1 ತಿಂಗಳಲ್ಲಿ ಪೂರ್ಣಗೊಳಿಸುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೆಆರ್‌ಐಡಿಎಲ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಶನಿವಾರ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಪ್ರಗತಿ ಪರಿಶೀಲನೆ ನಡೆಸಿದ ಅವರು, ಶೌಚಾಲಯ ನಿರ್ಮಾಣ ಕಾಮಗಾರಿಯಲ್ಲಿ ಅನಗತ್ಯ ವಿಳಂಬಕ್ಕೆ ಅವಕಾಶ ನೀಡದಂತೆ ಸೂಚಿಸಿದರು. ಕೆಆರ್‌ಐಡಿಎಲ್ ಕೈಗೊಳ್ಳುವ ಕಾರ್ಯದಲ್ಲಿ ಸೇವೆ, ನಿಷ್ಠೆ ಮತ್ತು ದಕ್ಷತೆಯನ್ನು ಕಾಪಾಡಿಕೊಳ್ಳಿ ಎಂದ ಅವರು, ವಿದ್ಯಾರ್ಥಿ ನಿಲಯ, ಸೇತುವೆ, ರಸ್ತೆ, ಚರಂಡಿ, ಸಮುದಾಯ ಭವನ, ಕ್ರೀಡಾಂಗಣ, ಬಸ್ ನಿಲ್ದಾಣ ಮೊದಲಾದ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು, ದೀರ್ಘಕಾಲ ಬಾಳಿಕೆ ಬರಬೇಕು. ಜನ ಮೆಚ್ಚುಗೆಗೆ ಪಾತ್ರವಾಗಬೇಕು ಎಂದರು.

ಅರ್ಧಕ್ಕೆ ನಿಂತ ಕಾಮಗಾರಿ ಪೂರ್ಣಗೊಳಿಸಲು ಸೂಚನೆ: ಈ ನಿಗಮದಿಂದ ಕೈಗೊಳ್ಳುವ ಯಾವುದೇ ಕಾಮಗಾರಿ ಅರ್ಧಕ್ಕೆ ನಿಲ್ಲುವಂತಾಗಬಾರದು, ಆ ಯೋಜನೆಗೆ ಅಗತ್ಯವಾದ ಹಣ, ಅನುಮತಿ ಎಲ್ಲವನ್ನೂ ಖಾತ್ರಿ ಪಡಿಸಿಕೊಂಡು ಕಾಮಗಾರಿ ಆರಂಭಿಸಬೇಕು ಎಂದು ತಿಳಿಸಿದ ಸಚಿವರು, ಇತರ ಇಲಾಖೆಗೆ ಸೇರಿದ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದರೆ ಅವರಿಗೆ ಪತ್ರ ಬರೆದು, ಹಣ ಬಿಡುಗಡೆ ಮಾಡಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು. ಕೆಆರ್‌ಐಡಿಎಲ್‌ನಿಂದ ಕೈಗೊಳ್ಳುವ ಎಲ್ಲ ಕಾಮಗಾರಿಗಳ ಗುಣಮಟ್ಟವನ್ನು ಮೂರನೇ ವ್ಯಕ್ತಿಯಿಂದ ಮೌಲ್ಯಮಾಪನ ಮಾಡಿಸಬೇಕು ಎಂದು ತಿಳಿಸಿದರು.

ಖಾಲಿ ಹುದ್ದೆಗಳ ಭರ್ತಿಗೆ ಸೂಚನೆ

ಕೆಆರ್‌ಐಡಿಎಲ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆಯ ಅನುಮೋದನೆ ಪಡೆದು, ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಹಾಗೂ ಮೌಖಿಕ ಸಂದರ್ಶನ ಇರುವ ಹುದ್ದೆಗಳ ನೇಮಕಾತಿಯನ್ನು ಯುಪಿಎಸ್‌ಸಿಗೆ ವಹಿಸುವಂತೆ ಸೂಚಿಸಿದರು.

ಕಿರುಸುದ್ದಿ

ಮಹಿಳಾ ಮೀಸಲಾತಿ ಅಧಿವೇಶನದಲ್ಲಿ ಚರ್ಚೆ

• **ಚಿತ್ರದುರ್ಗ:** ಮುಂಬರುವ ಸಂಸತ್ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯು ಅಧಿಕೃತವಾಗಿ ಅಂಗೀಕಾರಗೊಳ್ಳಲಿದೆ ಎಂದು ಸಂಸದ ಗೋವಿಂದ ಎಂ. ಕಾರಜೋಳ ಈ ವೇಳೆ ವಿಶ್ವಾಸ ವ್ಯಕ್ತಪಡಿಸಿದರು. ನಗರದ ಎಸ್‌ಜೆಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಸಿವಿಲ್ ವಿಭಾಗದ ಸರ್.ಎಂ.ವಿ. ಸೆಮಿನಾರ್ ಹಾಲ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಕ್ರಾಂತಿಕಾರಿ ಕಾಯ್ದೆಯಿಂದಾಗಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ದೊರೆಯಲಿದ್ದು, ಸಂಸತ್ತಿನಲ್ಲಿ ಅವರ ಪ್ರಾತಿನಿಧ್ಯವು ಹೆಚ್ಚೂಕಡಿಮೆ ಶೇ.50ರಷ್ಟಕ್ಕೆ ಏರಿಕೆಯಾಗಲಿದೆ. ಇದು ಲಿಂಗಭೇದದ ವಿರುದ್ಧ ಬಸವಣ್ಣನವರ ಕಾಲದಿಂದಲೂ ನಡೆದುಕೊಂಡು ಬಂದಿದ್ದ ಸುದೀರ್ಘ ಹೋರಾಟಕ್ಕೆ ಸಿಕ್ಕ ದೊಡ್ಡ ಜಯವಾಗಲಿದೆ ಎಂದು ಬಣ್ಣಿಸಿದರು.

ಲೈಂಗಿಕ ದೌರ್ಜನ್ಯ: ಶಿಕ್ಷಕರ ವಿರುದ್ಧ ದೂರು ದಾಖಲು

• **ಕಡೂರು:** ಮೂವರು ಅಪ್ರಾಪ್ತ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದ ಮೇಲೆ ಶಾಲೆಯ ಶಿಕ್ಷಕರ ವಿರುದ್ಧ ತಾಲೂಕಿನ ಯಗಟಿ ಪೊಲೀಸ್ ಠಾಣೆ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ದೂರು ದಾಖಲಾಗಿದೆ. ಸಹ ಶಿಕ್ಷಕ ನಾಗರಾಜಪ್ಪ ಪ್ರಕರಣದ ಮೊದಲ ಆರೋಪಿಯಾಗಿದ್ದು, ಮುಖ್ಯ ಶಿಕ್ಷಕ ಲೋಕೇಶಪ್ಪ ಎರಡನೇ ಆರೋಪಿಯಾಗಿದ್ದಾರೆ. ಶಿಕ್ಷಕ ನಾಗರಾಜಪ್ಪ ಮೂವರು ವಿದ್ಯಾರ್ಥಿನಿಯರ ಬಳಿ ಅಸಭ್ಯವಾಗಿ ವರ್ತಿಸಿದ್ದಲ್ಲದೆ ವಿದ್ಯಾರ್ಥಿನಿಯರು ಶಾಲೆಗೆ ಮೊಬೈಲ್ ತರುವಂತೆ ಹೇಳಿ ಅವರ ಮೊಬೈಲ್‌ಗಳಿಗೆ ಅಶ್ಲೀಲ ವಿಡಿಯೋಗಳನ್ನು ಕಳುಹಿಸಿದ್ದಾನೆ. ಒಬ್ಬ ವಿದ್ಯಾರ್ಥಿನಿ ಬಳಿ ಅಶ್ಲೀಲದ ಮಾತುಗಳನ್ನಾಡಿದ್ದಾನೆ. ಈ ಬಗ್ಗೆ ವಿದ್ಯಾರ್ಥಿನಿ ಮುಜುಗರಕ್ಕೆ ಒಳಗಾದಾಗ ಈ ವಿಷಯವನ್ನು ಯಾರಿಗೂ ಹೇಳದಂತೆ ದೇವರ ಮೇಲೆ ಆಣೆ ಪ್ರಮಾಣ ಮಾಡಿಸಿಕೊಂಡಿದ್ದಾನೆ. ಈ ಘಟನೆಯಿಂದ ವಿದ್ಯಾರ್ಥಿನಿಯರು ಶಾಲೆಗೆ ಹೋಗಲು ಹಿಂದೇಟು ಹಾಕಿದ್ದಾರೆ. ಬಳಿಕ ಪೋಷಕರು ತಮ್ಮ ಮಕ್ಕಳು ಆತಂಕದಲ್ಲಿದ್ದ ಪರಿಸ್ಥಿತಿಯನ್ನು ಗಮನಿಸಿ ವಿಚಾರಿಸಿದಾಗ ಶಿಕ್ಷಕನ ಅನುಚಿತ ವರ್ತನೆಯ ವಿಷಯ ಬೆಳಕಿಗೆ ಬಂದಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ತಿಮ್ಮಯ್ಯ ಇಬ್ಬರ ವಿರುದ್ಧ ದೂರು ನೀಡಿದ್ದಾರೆ. ಠಾಣೆಯಲ್ಲಿ ಪ್ರಕರಣ ದಾಖಲುಗೊಂಡ ಹಿನ್ನೆಲೆಯಲ್ಲಿ ಶನಿವಾರ ಡಿವೈಎಸ್ಪಿ ಪರಶುರಾಮಪ್ಪ, ಯಗಟಿ ಪಿಎಸ್ಐ ಶಾಹಿದ್ ಅಫ್ರಿದಿ ಹಾಗೂ ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಮಹಜರು ಪ್ರಕ್ರಿಯೆ ನಡೆಸಿ ಇಬ್ಬರು ಆರೋಪಿತ ವ್ಯಕ್ತಿಗಳನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದರು.

ಕಾಂಗ್ರೆಸ್‌ನಿಂದ ರಾಜಕೀಯ ಭ್ರಷ್ಟಾಚಾರ: ಬೊಮ್ಮಾಯಿ

• **ಹಾವೇರಿ:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಆಗಿರುವುದು ಅತ್ಯಂತ ಆಘಾತಕಾರಿ ಹಾಗೂ ದುರ್ದೈವದ ಸಂಗತಿ. ಕಾಂಗ್ರೆಸ್ ರಾಜಕೀಯ ಭ್ರಷ್ಟಾಚಾರ ನಡೆಸಿದ್ದು, ಬಹಳ ದೊಡ್ಡ ಪ್ರಮಾಣದ ಹಣ ಖರ್ಚು ಮಾಡಿದ್ದಾರೆ. ಹಣದ ಆಮಿಷಕ್ಕೆ ನಮ್ಮ ಕೆಲವು ಶಾಸಕರು ಬಲಿಯಾಗಿರುವುದು ನಿಜ. ಈ ಕುರಿತು ಪಕ್ಷದ ನೇಮಿಸಿರುವ ಸಮಿತಿ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗು ವುದು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆಗಬಾರದಿತ್ತು. ಅಡ್ಡ ಮತದಾನದ ಕುರಿತು ತನಿಖೆ ನಡೆಸಿ ಅದರ ವರದಿಯನ್ನು ಹೈಕಮಾಂಡ್‌ಗೆ ಕಳಿಸುವುದಾಗಿ ವಿಪಕ್ಷ ನಾಯಕರು, ಹಾಗೂ ರಾಜ್ಯಾಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಅದರ ವರದಿ ಒಂದು ವಾರದಲ್ಲಿ ತರಿಸಿಕೊಂಡು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ತಗೆದುಕೊಳ್ಳಲಾಗುತ್ತದೆ ಎಂದು ಹೇಳಿದರು.

ಬಿಡದಿ ಪ್ರದೇಶ ರೆಡ್ ಜೋನ್ ಘೋಷಣೆ: ಶಿವಕುಮಾರ್ ತಿರುಗೇಟು

ಎಚ್ಡಿಕೆ ಟೌನ್‌ಶಿಪ್ ಜನಕ

• **ಬೆಂಗಳೂರು:** ಬಿಡದಿಯ ರೈತರು ಒಳ್ಳೆಯವರು, ಅವರನ್ನು ದಾರಿ ತಪ್ಪಿಸಲಾಗುತ್ತಿದೆ. ಬಿಡದಿ ಟೌನ್‌ಶಿಪ್ ಯೋಜನೆಯ ಪಿತಾಮಹ ಕುಮಾರಸ್ವಾಮಿ ಅವರೇ ಅಲ್ಲವೇ? ಇದನ್ನು ಅವರೇ ಒಪ್ಪಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.



ಸಚಿವ ಸಂಪುಟ ಸಭೆಯ ಬಳಿಕ ಶನಿವಾರ ವಿಧಾನಸೌಧದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಪ್ರತಿಕ್ರಿಯೆ ನೀಡಿದರು. ಈ ಹಿಂದೆ ಕುಮಾರ ಸ್ವಾಮಿ ಅವರೇ ರೈತರಿಗೆ ಪರಿಹಾರವಾಗಿ ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಶೇ.40 ಕೊಡುತ್ತೇನೆಂದು ಹೇಳಿದ್ದರು. ನಾವು ಶೇ.50 ರಷ್ಟು ಭೂಮಿ ನೀಡುವು ದಾಗಿ ಹೇಳಿದ್ದೇವೆ. ರೈತರಿಗೆ ಒಂದು ಎಕರೆಗೆ 2.50 ಕೋಟಿ ರೂ. ಪರಿಹಾರ ನೀಡುವ ಕೆಲಸ ಶುಕ್ರವಾರ ಆರಂಭವಾಗಿದೆ ಎಂದು ತಿಳಿಸಿದರು.

ಕುಮಾರಸ್ವಾಮಿ ಅವರು ನೋಟಿಫಿಕೇಶನ್ ಮಾಡಿದ್ದರು. ಯಡಿಯೂರಪ್ಪ ಅವರು ಈ ಯೋಜನೆ ಮುಂದುವರೆಸಿದ್ದರು. ಅದನ್ನು ನಾವು ಇನ್ನಷ್ಟು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆಯೇ ಹೊರತು ಹೊಸದಾಗಿ ನಾವೇನೂ ಮಾಡುತ್ತಿಲ್ಲ.

ಬಿಡದಿ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನ ಮಾಡಿ ದವರು ಯಾರು? ಈಗಿರುವ 9 ಸಾವಿರ ಎಕರೆಯಲ್ಲಿ 1 ಸಾವಿರ ಎಕರೆಯನ್ನು ಬಿಜೆಪಿಯ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಸ್ವಾಧೀನ ಮಾಡಿಕೊಡಲಿಲ್ಲವೇ? ಎಂದು ಪ್ರಶ್ನಿಸಿದರು.

ನಾನು ಜೈಲಿಗೆ ಹೋಗಲು ಸಿದ್ಧನಿಲ್ಲ: ಪ್ರತಿಪಕ್ಷದವರು ರಾಜಕೀಯಕ್ಕಾಗಿ ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧ ಮಾಡುತ್ತಿದ್ದಾರೆ. ಹೊಸ ಕೈಗಾರಿಕೆಗಳು ಬರಬೇಕು ಎಂದು ಹೇಳುತ್ತಾರೆ.

ಕೇಂದ್ರ ಬೃಹತ್ ಕೈಗಾರಿಕಾ ಸಚಿವರೇ ಎಲ್ಲಿಂದ ಜಮೀನು ತೆಗೆದುಕೊಡಲಿ ಎಂದು ಹೇಳಿದ್ದಾರೆ. ಹೀಗಿರುವಾಗ ಬಿಡದಿ ಜಮೀನನ್ನು ಡಿನೋಟಿಫಿಕೇಶನ್ ಮಾಡಿ ಜೈಲಿಗೆ ಹೋಗಲು ನಾನು ಸಿದ್ಧನಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು.

ಬಿಡದಿಪ್ರದೇಶವನ್ನುರೆಡ್‌ಜೋನ್ ಎಂದು ಕುಮಾರಸ್ವಾಮಿ ಅವರು ಏಕೆ ಘೋಷಣೆ ಮಾಡಿದರು ಎಂದು ಅವರು ಮೊದಲು ತಿಳಿಸಲಿ. ನೋಟಿಫಿಕೇಶನ್ ಏಕೆ ಮಾಡಿದರು ಎಂದು ಉತ್ತರಿಸಲಿ. ಯಡಿಯೂರಪ್ಪ ಅವರು ಏಕೆ ಮುಂದುವರೆಸಿದರು, ಅವರ ಕಾಲದಲ್ಲೇ ಡಿನೋಟಿಫಿಕೇಶನ್ ಮಾಡಲು ಅವರಿಗೆ ಅವಕಾಶವಿತ್ತಲ್ಲವೇ? ಯಾಕೆ ಮಾಡಲಿಲ್ಲ ಎಂದು ಕೇಳಿದರು.

ಪ್ರತಿಪಕ್ಷದವರು ರಾಜಕೀಯ ಮಾಡುತ್ತಿದ್ದಾರೆ. ಆದರೆ, ನಾನು ಇದಕ್ಕೆ ಬೇಸರ ಮಾಡಿಕೊಳ್ಳುವುದಿಲ್ಲ. ಶೇ. 80 ರಷ್ಟು ರೈತರು ಭೂಮಿ ನೀಡಲು ಮುಂದೆ ಬಂದಿದ್ದಾರೆ. ಬೇರೆಯವರು ಮುಂದೆ ಬರಲಿಲ್ಲ ಎಂದರೆ ನಾನು ಏನು ಮಾಡಲು ಸಾಧ್ಯವಿಲ್ಲ. ನಾವು ಕಾನೂನಿನ ಪ್ರಕಾರ ಹೋಗುತ್ತೇವೆ ಎಂದು ಸ್ಪಷ್ಟಪಡಿಸಿದರು.



“ ಕುಮಾರ ಸ್ವಾಮಿ ಅವರು ದೊಡ್ಡವರು. ಬೃಹತ್ ಕೈಗಾರಿಕಾ ಸಚಿವರು. ಅವರಿಗೆ ಕೈಗಾರಿಕೆಗಳನ್ನು ತರಬೇಕು ಎನ್ನುವ ಆಸೆಯಿದೆ. ಎಲ್ಲಿಗೆ ಕೈಗಾರಿಕೆಗಳನ್ನು ತರಬೇಕು, ಹೇಗೆ ತರಬೇಕು, ಯಾರ ಜಮೀನಿನಲ್ಲಿ ತರಬೇಕು ಎಂದು ಅವರೇ ಉತ್ತರ ಹೇಳಬೇಕು.

■ ಡಿ.ಕೆ. ಶಿವಕುಮಾರ್, ಸಿಎಂ

ಸಂಸದ ಕೋಟ ಶ್ರೀನಿವಾಸ ಪೂಜಾರಿ ಆರೋಪ

ಕೇಂದ್ರ ಯೋಜನೆ ಜಾರಿಗೆ ತರಲು ಸರ್ಕಾರ ವಿಫಲ

• **ಉಡುಪಿ:** ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಗಂಭೀರ ಆರೋಪ ಮಾಡಿದರು.



ಕಡಿಯಾಳಿಯ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಉಜ್ವಲ ಯೋಜನೆಯಡಿ 12 ಕೋಟಿಗೂ ಅಧಿಕ ಅಡುಗೆ ಮನೆಗಳಿಗೆ ಗ್ಯಾಸ್ ಸಂಪರ್ಕ, ಶೌಚಾಲಯ ನಿರ್ಮಾಣ ಹಾಗೂ ಗ್ರಾಮೀಣ ಭಾಗಕ್ಕೆ ಕುಡಿಯುವ ನೀರು ಕಲ್ಪಿಸುವ ಜಲಜೀವನ್ ಮಿಷನ್ ಯೋಜನೆಗೆ 75 ಸಾವಿರ ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ ಎಂದರು. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 12 ಕೋಟಿ ರೈತ ಕುಟುಂಬಗಳ ಖಾತೆಗೆ ವಾರ್ಷಿಕ 6 ಸಾವಿರ ರೂಪಾಯಿಯಂತೆ ಈಗಾಗಲೇ 23 ಕಂತುಗಳಲ್ಲಿ ಒಟ್ಟು 3 ಲಕ್ಷದ 44 ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಆದರೆ, ಈ ಹಿಂದೆ ರಾಜ್ಯ ಸರ್ಕಾರ ನೀಡುತ್ತಿದ್ದ 4 ಸಾವಿರ ರೂಪಾಯಿ ಪ್ರೋತ್ಸಾಹಧನವನ್ನು ಪ್ರಸ್ತುತ ಸಿದ್ದರಾಮಯ್ಯ ಸರ್ಕಾರ ನಿಲ್ಲಿಸುವ ಮೂಲಕ ರೈತರಿಗೆ ದ್ರೋಹ ಬಗೆದಿದೆ ಎಂದು ದೂರಿದರು.

ದೇಶದಲ್ಲಿ ಶೇ. 100 ರಷ್ಟು ರೈಲ್ವೇ ವಿದ್ಯುದೀಕರಣ ಹಾಗೂ ಪ್ರತಿದಿನ ಸರಾಸರಿ 22 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ದೇಶದ 81 ಕೋಟಿ ಜನರಿಗೆ ಹಾಗೂ ರಾಜ್ಯದ 4 ಕೋಟಿ ಜನರಿಗೆ ಪ್ರತಿ ತಿಂಗಳು 22 ಲಕ್ಷ ಕೆಜಿ ಅಕ್ಕಿಯನ್ನು ಕೇಂದ್ರವೇ ಉಚಿತವಾಗಿ ಸರಬರಾಜು ಮಾಡುತ್ತಿದೆ ಎಂದರು.

ದಸರಾದಲ್ಲಿ ಈ ಬಾರಿ ಕಂಬಳ: ಲಕ್ಷ್ಮಿಕಾಂತ ರೆಡ್ಡಿ

• **ಮೈಸೂರು:** ಇದೇ ಮೊದಲ ಬಾರಿಗೆ ವಿಶ್ವವಿಖ್ಯಾತ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ-2026ರಲ್ಲಿ ಕಂಬಳ ಕಾರ್ಯಕ್ರಮವನ್ನು ವಿಶೇಷ ಆಕರ್ಷಣೆಯಾಗಿ ಆಯೋಜಿಸ ಲಾಗುವುದು ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಜಿ ತಿಳಿಸಿದರು.

ಸಿದ್ಧತಾ ಸಭೆ ನಡೆಸಿ ಮಾತನಾಡಿ, ಕಳೆದ ವರ್ಷವೇ ದಸರಾದಲ್ಲಿ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ ಸರಿಯಾದ ಸ್ಥಳ ದೊರಕದ ಹಿನ್ನೆಲೆಯಲ್ಲಿ ಸಾಧ್ಯವಾಗಲಿಲ್ಲ ಎಂದರು. ಈ ಬಾರಿ 3 ತಿಂಗಳ ಮೊದಲೇ ಕಂಬಳ ಆಯೋಜಿಸಲು ಮೈಸೂರು ನಗರದ ವಿಜಯನಗರ ಮೊದಲನೇ ಹಂತ, ವಿಜಯನಗರ ನಾಲ್ಕನೇ ಹಂತ ಹಾಗೂ ಸಾತಗಳ್ಳಿ ರಿಂಗ್ ರೋಡ್ ರಸ್ತೆಯಲ್ಲಿ ಮೂರು ಸ್ಥಳ ಗುರುತಿಸ ಲಾಗಿದ್ದು, ಒಂದು ಸ್ಥಳವನ್ನು ಆಯ್ಕೆ ಮಾಡುವುದು ಎಂದರು.

ಕಂಬಳ ಆಯೋಜನೆಗೆ ಕನಿಷ್ಠ ಏಳು ಎಕರೆ ಸ್ಥಳ ಬೇಕಿದ್ದು, ಸ್ಥಳ ಆಯ್ಕೆ ಮಾಡುವಾಗ ಪಾರ್ಕಿಂಗ್ ವ್ಯವಸ್ಥೆ, ವೀಕ್ಷಕರ ಗ್ಯಾಲರಿ, ಕೋಣಗಳು ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಿರುವ ಸ್ಥಳವನ್ನು ನೋಡಿ ಆಯ್ಕೆ ಮಾಡಿ ಎಂದರು.

ಅಂತಾರಾಷ್ಟ್ರೀಯ ಯೋಗ ದಿನ ಇಂದು

• **ಬೆಂಗಳೂರು:** ರಾಜ್ಯಾದ್ಯಂತ ಈ ಬಾರಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಜೂ. 21 ರಂದು ಬೆಳಗ್ಗೆ 7 ಗಂಟೆಗೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗಿದ್ದು, ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.



ಶನಿವಾರ ನಗರದ ಆರೋಗ್ಯಸೌಧದ ಸಭಾಂಗಣದಲ್ಲಿ ಮಾತನಾಡಿ, ಸುಮಾರು 2 ಸಾವಿರ ಯೋಗಸಾಧಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, 40 ನಿಮಿಷಗಳ ಯೋಗಾಭ್ಯಾಸ ನಡೆಸಲಿದ್ದಾರೆ.

2016ರಿಂದ ಕೇಂದ್ರ ಸರ್ಕಾರದ 45 ನಿಮಿಷಗಳ ಯೋಗ ಶಿಷ್ಟಾಚಾರದಂತೆ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ಬಾರಿ ಯೋಗವನ್ನು ನಿತ್ಯ ಜೀವನದ ಭಾಗವನ್ನಾಗಿಸುವ ಉದ್ದೇಶದಿಂದ ನಿತ್ಯ ಯೋಗ ಕಾರ್ಯಕ್ರಮಕ್ಕೆ ವಿಶೇಷ ಒತ್ತು ನೀಡಲಾಗಿದೆ ಎಂದು ಖಾದರ್ ಹೇಳಿದರು.

ಗ್ರಾಮೀಣ ಪ್ರದೇಶದ ಜನರು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ಪ್ರತಿದಿನ ಯೋಗಾಭ್ಯಾಸ ಮಾಡುವಂತೆ ಉತ್ತೇಜಿಸಲು ವಿಶೇಷ ಯೋಜನೆಗಳನ್ನು ರೂಪಿಸಲಾಗಿದ್ದು, ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಯೋಗದತ್ತ ಯುವಕರ ಆಕರ್ಷಣೆ: ಈಗಾಗಲೇ 100 ದಿನಗಳ ಕ್ಷಣಗಣನೆ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು ಸಹಯೋಗದಲ್ಲಿ 12 ರಾಷ್ಟ್ರೀಯ ಮಟ್ಟದ ಯೋಗ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 16 ರಾಜ್ಯಗಳ 100ಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಯುವಜನರನ್ನು ಯೋಗದತ್ತ ಆಕರ್ಷಿಸುವಲ್ಲಿ ಯಶಸ್ಸು ಸಾಧಿಸಲಾಗಿದೆ ಎಂದು ಹೇಳಿದರು.

ಜುಲೈ ಮೊದಲ ವಾರದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನ ಯೋಗ ರಾಷ್ಟ್ರೀಯ ವಿಚಾರ ಸಂಕಿರಣ, ಎರಡನೇ ವಾರದಲ್ಲಿ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಕಾರ್ಡಿಯೋ ಯೋಗ ಹಾಗೂ ಮೂರನೇ ವಾರದಲ್ಲಿ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಕಾರ್ಸಿನೋ ಯೋಗ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಈ ವೇಳೆ ಆರೋಗ್ಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನ ಪಾಂಡೆ, ಆಯುಕ್ತ ಗುರುದತ್ತ ಹೆಗಡೆ, ಆಯುಷ್ ಇಲಾಖೆ ಆಯುಕ್ತ ಡಾ. ಸುನೀಲ್ ಪಂವಾರ್ ಸೇರಿದಂತೆ ಇತರರಿದ್ದರು.

“ ಸಾಮಾಜಿಕ ಜಾಲತಾಣಗಳಲ್ಲಿ ಆಯೋಜಿಸಿದ್ದ 12 ವಿಶೇಷ ರಾಷ್ಟ್ರೀಯ ಸ್ಪರ್ಧೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದು, ಸರ್ಕಾರಿ ಶಾಲೆಗಳ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗ ಕ್ವಿಜ್, ರಂಗೋಲಿ, ಪ್ರಬಂಧ, ಚಿತ್ರಕಲೆ ಹಾಗೂ ಪತಂಜಲಿ ಯೋಗ ಸೂತ್ರ ಪಾರಾಯಣ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

■ ಯು.ಟಿ.ಖಾದರ್, ಆರೋಗ್ಯ ಸಚಿವ

ಆಲಮಟ್ಟಿ ಮಟ್ಟ ಕುಸಿತ



• **ಆಲಮಟ್ಟಿ:** ಸದಾಕಾಲವೂ ನೀರಿನಿಂದ ತುಂಬಿ ತುಳುಕುತ್ತಿದ್ದ ಏಷ್ಯಾ ಖಂಡದಲ್ಲಿಯೇ ಎರಡನೇ ದೊಡ್ಡ ಅಣೆಕಟ್ಟೆ ಎಂದು ಹೆಗ್ಗಳಿಕೆ ಪಡೆದಿರುವ ಆಲಮಟ್ಟಿ ಲಾಲ ಬಹದ್ದೂರ್ ಶಾಸ್ತ್ರೀ ಸಾಗರಕ್ಕೆ ಮಳೆಗಾಲ ಪ್ರಾರಂಭವಾಗಿ ತಿಂಗಳು ಕಳೆಯುತ್ತಿದ್ದರೂ ನೀರಿನ ಕೊರತೆ ಕಾಣುತ್ತಿದ್ದು, ಜಲಾಶಯದ ಹಿಂಭಾಗದಲ್ಲಿ ಸ್ವಲ್ಪ ನೀರು ಕಂಡರೂ, ಜಲಾಶಯದ ಮುಂಭಾಗವಂತೂ ಖಾಲಿ-ಖಾಲಿ. 519.60 ಮೀ ಎತ್ತರದ ಜಲಾಶಯದಲ್ಲಿ ಶನಿವಾರ 508.10 ಮೀ.ದಲ್ಲಿ 21.783 ಟಿಎಂಸಿ ನೀರು ಸಂಗ್ರಹವಿದ್ದರೂ, ಅದರಲ್ಲಿ ಡೆಡ್ ಸ್ಟೋರೇಜ್ ನೀರು 17.62 ಟಿಎಂಸಿ ಇದನ್ನು ಬಿಟ್ಟು ಬಳಕೆ ಯೋಗ್ಯ ನೀರು 4.163 ಟಿಎಂಸಿ ಮಾತ್ರ ಇದೆ. ಕಳೆದ ವರ್ಷ ಇದೇ ದಿನದಂದು 515.55 ಮೀ 68.343 ಟಿಎಂಸಿ. ಒಳಹರಿವು 70,440 ಕ್ಯೂಸೆಕ್ ಇದ್ದರೆ ಹೊರಹರಿವು 70,440 ಕ್ಯೂಸೆಕ್ ಲಭ್ಯವಿತ್ತು ಎನ್ನುತ್ತವೆ ಕೆಬಿಜೆನ್ನೆಲ್ ಮೂಲಗಳು. ಹೀಗಾಗಿ ಜುಲೈ ಅಂತ್ಯದವರೆಗೂ ಕುಡಿಯುವ ನೀರಿಗೆ ಯಾವುದೇ ತೊಂದರೆಯಿಲ್ಲ ಎಂದರು.

ಗೋಲಗುಂಬಜ್ ಎಕ್ಸ್‌ಪ್ರೆಸ್ ಸಂಚಾರಕ್ಕೆ ರೈಲ್ವೆ ಮಂಡಳಿ ಅಸ್ತು

• **ಬೆಂಗಳೂರು:** ಮೈಸೂರು- ಫಂಡರಾಪುರ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ರೈಲನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್‌ಗಳ ಮೂಲಕ ಓಡಿಸಲು ರೈಲ್ವೆ ಮಂಡಳಿ ಶುಕ್ರವಾರ ಒಪ್ಪಿಗೆ ನೀಡಿದ್ದು, ಇದರಿಂದ ವಿಜಯಪುರ, ಬಾಗಲಕೋಟೆ ಭಾಗದ ಜನರ ಬಹುದಿನಗಳಬೇಡಿಕೆಗೆಮನ್ನಣೆ ಸಿಕ್ಕಂತಾಗಿದೆ ಎಂದು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹರ್ಷ ವ್ಯಕ್ತಪಡಿಸಿದ್ದಾರೆ.



ವಿಜಯಪುರ ಕಡೆಗೆ ಚಲಿಸುವ ರೈಲುಗಳನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕವೇ ಓಡಿಸಬೇಕೆಂದು ಹಲವು ಬಾರಿ ಪತ್ರ ಬರೆದು ಕೋರಿಕೆ ಸಲ್ಲಿಸಲಾಗಿತ್ತು. ಅದಕ್ಕೆ ರೈಲ್ವೆ ಮಂಡಳಿ, ಸಕಾರಾತ್ಮಕವಾಗಿ ಸ್ಪಂದಿಸಿದ್ದು ಹೆಚ್ಚಿನ ಅನುಕೂಲ ಆಗಲಿದೆ. ಇದಕ್ಕಾಗಿ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್, ವಿ. ಸೋಮಣ್ಣ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.


ಇದರಿಂದ ಎರಡೂ ನಗರಗಳ ನಡುವಿನ ಪ್ರಯಾಣಅವಧಿ 55 ನಿಮಿಷ ಕಡಿಮೆ ಆಗಲಿದೆ ಎಂದು ಹೇಳಿದ್ದಾರೆ. ಇದರ ಜತೆಗೆ ಸದ್ಯ ವಿಜಯಪುರ-ಬೆಂಗಳೂರು ನಡುವೆ ವಾರದಲ್ಲಿ 2 ದಿನ ಸಂಚರಿಸುತ್ತಿರುವ ವಿಶೇಷ ರೈಲನ್ನು ಕೂಡ ಕಾಯಂ ಮಾಡಬೇಕು ಎಂದು ಪಾಟೀಲ ಒತ್ತಾಯಿಸಿದ್ದಾರೆ.

ಬೈಪಾಸ್ ಮಾರ್ಗದಲ್ಲಿ ರೈಲು ಸಂಚರಿಸಲು ಶುರುವಾದ ಮೇಲೆ ಗೋಲಗುಂಬಜ್ ಎಕ್ಸ್‌ಪ್ರೆಸ್ ಇನ್ನು ಮುಂದೆ ಹುಬ್ಬಳ್ಳಿ, ಗದಗದಲ್ಲಿ ಊರೊಳಕ್ಕೆ ಹೋಗುವುದಿಲ್ಲ ಎಂದು ಹೇಳಿದರು.


ವೇಳಾಪಟ್ಟಿ ಬದಲು

ಮೈಸೂರು-ಫಂಡರಾಪುರ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ಬೈಪಾಸ್ ಮಾರ್ಗಗಳಲ್ಲಿ ಓಡಲು ಆರಂಭಿಸಿದ ಬಳಿಕ ಮೈಸೂರಿನಿಂದ ಮಧ್ಯಾಹ್ನ 3.50ಕ್ಕೆ ಹೊರಟು ಮರುದಿನ ಬೆಳಿಗ್ಗೆ 10.05ಕ್ಕೆ ಫಂಡರಾಪುರವನ್ನು ತಲುಪಲಿದೆ. ಹಾಗೆಯೇ ಫಂಡರಾಪುರದಿಂದ ಬೆಳಿಗ್ಗೆ ಮಧ್ಯಾಹ್ನ 1.15ಕ್ಕೆ ಹೊರಟು ಮರುದಿನ ಬೆಳಿಗ್ಗೆ 11.30ಕ್ಕೆ ಮೈಸೂರನ್ನು ತಲುಪಲಿದೆ. ಮೊದಲಿಗೆ ಹೋಲಿಸಿದರೆ ಪ್ರಯಾಣದಲ್ಲಿ 55 ನಿಮಿಷ ಉಳಿತಾಯವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಹೊಸ ಹೊತ್ತಿಗೆ




ವ್ಯಕ್ತಿತ್ವ ವಿಕಸನ ವಿಚಾರಧಾರೆ
ಯುವಜನಾಂಗದ ಪ್ರಗತಿಗಾಗಿ ಕೃತಿ
ಲೇ: ಜಯಪ್ರಕಾಶ್ ಪುತ್ತೂರು
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 252 ರೂ. 300
ಸಂಪರ್ಕ: 080-40114455



ತೇರು
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಾದಂಬರಿ
ಲೇ: ರಾಘವೇಂದ್ರ ಪಾಟೀಲ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2003
ಪುಟ: 168 ರೂ. 250
ಸಂಪರ್ಕ: 9448110034



ಅವಿಶ್ರಾಂತ ಧ್ಯೇಯಜೀವಿ
ಮೈ.ಚ. ಜಯದೇವ: ಬದುಕು-ನೆನಪು
ಲೇ: ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಮೊದಲ ಮುದ್ರಣ: 2026
ಪುಟ: 262 ರೂ. 200
ಸಂಪರ್ಕ: 8904421965



ಹೇ... ರಾಮ್!
ಕವನಗಳು
ಲೇ: ಡಾ|| ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 128 ರೂ. 180
ಸಂಪರ್ಕ: 0836-4252498/ 9448110034



ನೋವು ನಲಿವು
ಕವನ ಸಂಕಲನ
ಲೇ: ಮಹಾದೇವ ಮಾ. ಜಗತಾಪ
ಪ್ರ: ಶಶಿಕಲಾ ಪ್ರಕಾಶನ, ಗುಳೇದಗುಡ್ಡ
ಮೊದಲ ಮುದ್ರಣ: 2026
ಪುಟ: 60 ರೂ. 80
ಸಂಪರ್ಕ: 9341162918

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಜೋಶಿ ಹೇಳಿಕೆ

ಪಡಿತರಕ್ಕೆ ಜಾತಿ ಪ್ರಮಾಣಪತ್ರ ಕಾನೂನು ಬಾಹಿರ

• **ಹೊಸದಿಲ್ಲಿ:** ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರ ಲಿಂಕ್ ಮಾಡುವುದು ಕಾನೂನು ಬಾಹಿರ ವಾದ ಕ್ರಮವಾಗಿದ್ದು, ಈ ಬಗ್ಗೆ ಮಾಹಿತಿ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಹಾರ ಭದ್ರತೆ ಒದಗಿಸುವಲ್ಲಿ ಯಾವುದೇ ಜಾತಿ ಲಿಂಕ್ ಮಾಡಲು ಸಾಧ್ಯವಿಲ್ಲ ಎಂದಿರುವ ಸಚಿವರು, ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿ ಪಡಿತರ ಪಡೆಯುವ ಫಲಾನುಭವಿಗಳಿಂದ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಕೇಳಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ ಕೇಂದ್ರ ಸಚಿವರೂ ಆಗಿರುವ ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.ಪ್ರಧಾನಿಮೋದಿಅವರನೇತೃತ್ವದಲ್ಲಿಕೇಂದ್ರಸರ್ಕಾರ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸುವಲ್ಲಿ ಬದ್ಧತೆ ತೋರಿದೆ. ಯಾವುದೇ ಜಾತಿ, ಜನಾಂಗವೆಂದೆಣಿಸುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪಡಿತರ ಪಡೆಯಲು ರಾಜ್ಯ ಸರ್ಕಾರ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವುದು ನಿಜಕ್ಕೂ ದುರಂತವೇ ಸರಿ ಎಂದು ಸರ್ಕಾರದ ಕ್ರಮವನ್ನು ಖಂಡಿಸಿದ್ದಾರೆ.

ಸಲ್ಲದ ನೀತಿ-ನಿಯಮ ಹೇರುವುದರ ಉದ್ದೇಶವೇನು:? ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ಅವರ ಆರ್ಥಿಕಸ್ಥಿತಿ, ಅರ್ಹತೆಆಧಾರದಮೇಲೆಯಾವುದೇ ತಾರತಮ್ಯವಿಲ್ಲದೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಆಧಾರ್, ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಗಳ ಯಶಸ್ವಿ ಏಕೀಕರಣದ ಹೊರತಾಗಿಯೂ ಜಾತಿ ಪ್ರಮಾಣ ಪತ್ರ ಕಡ್ಡಾಯಗೊಳಿಸುವುದರ ಹಿಂದಿನ ಉದ್ದೇಶವೇನು? ಎಂದು ಪ್ರಶ್ನಿಸಿದ್ದಾರೆ.

ದೇಶದ ಯಾವುದೇ ಭಾಗದಲ್ಲಿ ಅರ್ಹ ಫಲಾನುಭವಿಗಳಿಗೆ ಸಬ್ಸಿಡಿ ಆಹಾರ ಧಾನ್ಯ ಸುಲಭ ವಾಗಿ ಲಭ್ಯವಾಗುವಂತೆ ಕೇಂದ್ರ, ಈಗಾಗಲೇ ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಉಪಕ್ರಮವನ್ನು ಪರಿಚಯಿಸಿದೆ. ದೇಶವಾಸಿಗಳಿಗೆ, ಅರ್ಹ ಫಲಾನುಭವಿಗಳಿಗೆ ಯಾವುದೇ ಅಡೆತಡೆ ಇಲ್ಲದಂತೆ ಆಹಾರ ಭದ್ರತೆ ಪ್ರಯೋಜನ ಕಲ್ಪಿಸುವುದು ಎಂದರು.



ಪ್ರಶ್ನೋತ್ತರ ರತ್ನಮಾಲಿಕೆ

▪ ವಿದ್ವಾನ್ ನರಸಿಂಹ ಭಟ್

ರಾಮನಿಗಿಂತಲೂ ಶೂರ ಯಾರು?

▶ **ಮನ್ಮಥನಿಂದ ಪೀಡಿತನಾಗಿದ್ದರೂ ನಿಶ್ಚಲನಾದ ವ್ಯಕ್ತಿ.**

ರಾಮನಿಗಿಂತಲೂ ಶೂರ ಯಾರಾದರೂ ಇದ್ದಾರೆಯೇ ಎಂದು ಯಾರಾದರೂ ಕೇಳಿದರೆ ಉತ್ತರ 'ಇಲ್ಲ' ಎಂಬುದೇ. ಶೂರನು ಯಾರು? ಎಂದು ಕೇಳಿದಾಗ 'ರಾಮನೇ' ಎಂಬುದೇ ಉತ್ತರ ಸಾಮಾನ್ಯ. ಚಿಕ್ಕ ಮಗುವಿಗೂ ತಿಳಿದಿರುವ ವಿಷಯ. ಹೀಗಿರುವಾಗ ರಾಮನಿಗಿಂತಲೂ ಶೂರ ಯಾರು? ಎಂಬ ಪ್ರಶ್ನೆಗೆ ಇಲ್ಲಿನ ಉತ್ತರ ಚಿಂತನಾಪೂರ್ಣವಾಗಿದೆ. ಒಬ್ಬ ಶೂರನಾಗಲು ಏನು ಬೇಕು? ಎಂದರೆ ಅವನು ರಾಮನಿಗಿಂತಲೂ ಶ್ರೇಷ್ಠನಾಗಬೇಕು ಅಂತಾದರೆ ಅವನ ಗುಣ ಇರಬೇಕು? ಅವನು ರಾಮನಿಗಿಂತಲೂ ಶೂರ ಎನಿಸಬೇಕಾದರೆ ಅವನು ಯಾವುದೇ ಕಾರಣಕ್ಕೂ ಮನ್ಮಥನಿಂದ ಅಥವಾ ಕಾಮಪೀಡಿತನಾಗದೇ ಇದ್ದರೆ ಮಾತ್ರ ಸಾಧ್ಯ ಎಂಬುದಾಗಿ ಇಲ್ಲಿ ಉತ್ತರಿಸಿದೆ. ಶೂರ ಎಂದರೇನು? ಶೂರನೇ ಆಗಬೇಕಾದರೆ ಅವನು ಹೇಗೆ ಕಾಮವನ್ನು ಅಥವಾ ಮನ್ಮಥನನ್ನು ಹೇಗೆ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು ಎಂಬುದನ್ನೂ ಕೂಡ ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ. ಪರಾಕ್ರಮ ಬಲ ಇತ್ಯಾದಿ ಗುಣಗಳು ಬರಬೇಕಾದರೆ ಅವನ ಬುದ್ಧಿಯು ನಿಯಂತ್ರಣದಲ್ಲಿ ಇರಬೇಕು. ಯಾರ ಬುದ್ಧಿ ಸನ್ಮಾರ್ಗದಲ್ಲಿ ಇರುತ್ತದೆಯೋ ಅವನೇ ನಿಜವಾದ ಧೀರ. ಹಾಗಾಗಿ ಅಂತಹ ಶೂರನಾಗಬಲ್ಲವನು ತನ್ನ ನಿಯೋಜಿತಕಾರ್ಯವನ್ನು ಉಚಿತವಾಗಿ ಮಾಡಬಲ್ಲ ಸಾಮರ್ಥ್ಯವನ್ನು ಸಂಪಾದನೆ ಮಾಡಿರುತ್ತಾನೆ. ಹಾಗಿಲ್ಲದೆ ಕಾಮಪರವಶನಾಗಿ ಅಥವಾ ಮೋಹದಿಂದ ಕೂಡಿದ್ದರೆ ಅವನು ಧೀರನಾಗಲು ಸಾಧ್ಯವಿಲ್ಲ. ಅವನು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದಾಗಿ ಒಂದು ಸುಭಾಷಿತ ಹೇಳುತ್ತದೆ– ''ಪ್ರಾಯಃ ಸಮಾಸನ್ನವಿಪತ್ತಿಕಾಲೇ ಧಿಯೋಽಪಿ ಪುಂಸಾಂ ಮಲಿನೀಭವಂತಿ'' ಅಂದರೆ ಧೀರನಾದವರೂ ಕೂಡ ವಿಪತ್ತಿನ ಕಾಲದಲ್ಲಿ ತನ್ನ ಬುದ್ಧಿಯ ಸ್ಥಿಮಿತವನ್ನು ಕಳೆದುಕೊಳ್ಳುತ್ತಾರೆ ಎಂಬುದಾಗಿ. ಇಲ್ಲಿ ರಾಮನನ್ನೇ ಉದಾಹರಣೆಯಾಗಿ ಕೊಡಲಾಗಿದೆ. ಸೀತೆಯು ಮಾಯಾಜಿಂಕೆಯನ್ನು ಕಂಡು ಅದು ತನಗೆ ಬೇಕೆಂಬುದಾಗಿ ಹಠ ಮಾಡುತ್ತಾಳೆ. ಒಂದು ಕ್ಷಣ ಯೋಚಿಸಿ ಮತ್ತೆ ಆ ಸೀತೆಯ ಬಯಕೆಯನ್ನು ಈಡೇರಿಸಲು ಮಾಯಾಜಿಂಕೆಯ ಹಿಂದೆ ರಾಮ ಧಾವಿಸುತ್ತಾನೆ. ವಸ್ತುತಃ ಅದು ಮಾಯಾಜಿಂಕೆಯೇ ಆಗಿತ್ತು. ಆದರೆ ರಾಮನಂತಹ ರಾಮನು ಕೂಡ ಆ ಕ್ಷಣದಲ್ಲಿ ತನ್ನ ಬುದ್ಧಿಯನ್ನು ಸ್ಥಿಮಿತವಾಗಿ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ, ಯಾಕೆಂದರೆ ಸೀತೆ ಮೇಲಿನ ಮೋಹ. ಅವಳ ಬಯಕೆಯನ್ನು ಈಡೇರಿಸಬೇಕೆಂಬುದೇ ಅವನ ಇಚ್ಛೆಯಾಗಿತ್ತು. ಅವನು ಸೀತೆಯ ಕಾಮನೆಗೆ ಅನುಸಾರವಾಗಿ ಅವಳ ಪ್ರೀತಿಗೆ ಮನಸೋತು ಮಾಯಾಜಿಂಕೆಯ ಹಿಂದೆ ಓಡಿದನು. ಆದರಿಂದ ರಾಮನು ಧೀರನಾದರೂ ತನ್ನ ಮಡದಿಯನ್ನು ಕಳೆದುಕೊಳ್ಳುವಸಂದರ್ಭ ಒದಗಿತು. ರಾಮನಂತಹವರಿಗೆ ಇಂತಹ ಬುದ್ಧಿಯು ಮಂಕಾಗುವ ಸಂದರ್ಭವಿದೆ ಎಂದಾದರೆ ಸಾಮಾನ್ಯವ್ಯಕ್ತಿಯ ಮಾತೇನು! ಹಾಗಾಗಿ ಇಲ್ಲಿ ಹೇಳಿರುವುದು ರಾಮನಿಗಿಂತಲೂ ಅವನು ಶೂರನಾಗಬೇಕು ಎಂದಾದರೆ ಆಸೆಯನ್ನು ಅಥವಾ ಮನ್ಮಥನಿಂದ ಪ್ರೇರಿತವಾದ ಕಾಮನೆಯನ್ನು ಅವನು ಬಿಡಬೇಕು. ಹಾಗೆ ಬಿಟ್ಟಾಗ ಮಾತ್ರ ಅವನು ತನ್ನ ಬುದ್ಧಿಯನ್ನು ಶುದ್ಧವಾಗಿ ಇಟ್ಟುಕೊಳ್ಳಲು ಸಾಧ್ಯ. ಯಾವಾಗ ಬುದ್ಧಿ ಶುದ್ಧವಾಗಿರುತ್ತದೆಯೋ ಆಗ ಅದು ಕಾಮಾದಿಗಳನ್ನು ವಿವೇಚನೆಯಿಂದ ಬೇಡಿದ್ದನ್ನು ಕೊಡಲು ಸಾಧ್ಯ. ಅದ್ದರಿಂದ ಕಾಮಪರವಶನಾಗದಿದ್ದ ಅವನು ರಾಮನೇ ಎಂಬುದಾಗಿ ಇಲ್ಲಿ ಹೇಳಲಾಗಿದೆ.



ವ್ಯಾಸ ವೀಕ್ಷಿತ

▪ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಭೀಮ-ಸಹದೇವರ ದಿಗ್ವಿಜಯಗಳು

ಧರ್ಮರಾಜನ ಆಜ್ಞೆಗೆ ಅನುಸಾರವಾಗಿ ಮಹಾಪ್ರತಾಪಶಾಲಿಯಾದ ಭೀಮಸೇನನು ಪೂರ್ವದಿಕ್ಕಿನತ್ತ ಹೊರಟನು. ಭೀಮನು ಏನನ್ನು ಮಾಡಲಿರುವನೆಂಬುದನ್ನು ಕೇಳಿ ತಿಳಿದ ಚೇದಿರಾಜನಾದ ಶಿಶುಪಾಲನು ಸಹ ನಗರದಿಂದ ಹೊರಬಂದು ಭೀಮನನ್ನು ಎದುರುಗೊಂಡನು. ಕುರುಕುಲ ಶ್ರೇಷ್ಠನಾದ ಭೀಮನೂ ಚೇದಿಶ್ರೇಷ್ಠನಾದ ಶಿಶುಪಾಲನು ಕಲೆತು ಪರಸ್ಪರ ತಮ್ಮ ವಂಶಗಳ ಬಗ್ಗೆ ಕುಶಲಪ್ರಶ್ನೆಯನ್ನು ಮಾಡಿಕೊಂಡರು. ಆಗ ಶಿಶುಪಾಲನು ತನ್ನ ಚೇದಿರಾಜ್ಯವನ್ನು ಭೀಮನಿಗೊಪ್ಪಿಸಿ ನಗುತ್ತಾ, ಭೀಮನನ್ನು ನೀನಿದೇನು ಮಾಡುತ್ತಿರುವೆ? ಎಂಬುದಾಗಿ ಕೇಳಿದನು. ಆದಕ್ಕೆ ಭೀಮನು ಧರ್ಮರಾಜನು ಮಾಡಹೊರಟಿರುವ ಯಜ್ಞದ ವಿಷಯವನ್ನು ಹೇಳಿದನು. ಆತನೂ ಆ ಮಾತುಗಳನ್ನು ಹಾಗೆಯೇ ಸ್ವೀಕರಿಸಿ, ತದನುಸಾರಿಯಾಗಿಯೇ ವರ್ತಿಸಿದನು. ಆಮೇಲೆ ಭೀಮನು ಅಲ್ಲಿಯೇ ಹದಿಮೂರು ರಾತ್ರಿಗಳನ್ನು ಕಳೆದನು. ಸತ್ಕಾರವನ್ನು ಪಡೆದು ತನ್ನ ಸೈನ್ಯಸಹಾರಿಗಳೊಂದಿಗೆ ಶಿಶುಪಾಲನ ಸ್ಥಾನವನ್ನು ಬಿಟ್ಟು ಹೊರಟನು. ಆ ಬಳಿಕ ಭೀಮನು ಕುಮಾರದೇಶದ ಶ್ರೇಣಿಮಂತನನ್ನು ಜಯಿಸಿದನು. ಆಮೇಲೆ ಕೋಸಲರಾಜನಾದ ಬೃಹದ್ಬಲನನ್ನು ಗೆದ್ದನು. ಹೆಚ್ಚು ಕಷ್ಟವೇ ಪಡದೆ ಅಯೋಧ್ಯಾಧಿಪತಿಯಾದ ಹಾಗೂ ಬಲಶಾಲಿಯೂ ಧರ್ಮಜ್ಞನೂ ಆದ ದೀರ್ಘಯಜ್ಞನನ್ನು ಜಯಿಸಿದನು.

ಆಮೇಲೆ ಉತ್ತರ ಕೋಸಲಾಧಿಪತಿ, ಮಲ್ಲರಾಷ್ಟ್ರಾಧಿಪತಿಗಳನ್ನೂ, ಶುಕ್ತಿಮಂತ ಪರ್ವತ, ಹಿಮಾಲಯಪರ್ವತಗಳ ತಪ್ಪಲಿನ ಪ್ರದೇಶಗಳನ್ನೂ, ಕಾಶಿರಾಜನಾದ ಸುಬಾಹು, ಸುಪಾರ್ಶ್ವ ಪರ್ವತದ ಬಳಿಯಿದ್ದ ಕ್ರಥನೆಂಬ ರಾಜ, ಮತ್ಸ್ಯದೇಶ- ಮಲದದೇಶ-ನೇಪಾಳದೇಶ-ವಸುಭೂಮಿಗಳ ರಾಜರುಗಳು, ಸಿಂಧುರಾಜ, ವಿದೇಹ-ರಾಜನಾದ ಜನಕರನ್ನು ಇವರೆಲ್ಲರನ್ನೂ ಗೆದ್ದನು. ಶಕರನ್ನೂ ಬರ್ಬರರನ್ನೂ ಮೋಸದಿಂದ, ಗೆದ್ದುಕೊಂಡನು. ವಿದೇಹದೇಶದ ಸುತ್ತಲಿನ ಏಳು ಕಿರಾತಾಧಿಪತಿಗಳನ್ನು ಜಯಿಸಿದನು. ಬಳಿಕ ಸುಹ್ಮ ಪ್ರಸುಹ್ಮರಾಜರನ್ನು ಸೋಲಿಸಿದನು. ಜರಾಸಂಧಪುತ್ರನನ್ನು ಕರಸಾಮಂತನನ್ನಾಗಿ ಮಾಡಿಕೊಂಡನು. ಹಾಗೆಯೇ ಕರ್ಣನನ್ನು ಮತ್ತೊಬ್ಬ ರಾಜ, ಮೋದಾಗಿರಿಯ ರಾಜರನ್ನು ಸೋಲಿಸಿದನು. ಪೌಂಡ್ರಕ-ವಾಸುದೇವನನ್ನೂ ಜಯಿಸಿ ವಂಗದೇಶದ ಮೇಲೆ ಆಕ್ರಮಣ ಮಾಡಿದನು. ಸುತ್ತಲಿನ ಮ್ಲೇಚ್ಛ-ರಾಜರೆಲ್ಲರೂ ಬಗ್ಗಬೇಕಾದರು. ಹೀಗೆ ಹಲವು ಅರಸರನ್ನು ಮೆಟ್ಟಿ ಅವರ ಐಶ್ವರ್ಯವನ್ನು ತೆಗೆದುಕೊಂಡು, ಮ್ಲೇಚ್ಛರಿಂದ ಕರವನ್ನೂ ನಾನಾರತ್ನಗಳನ್ನೂ ಚಂದನ-ಅಗರು-ವಸ್ತ್ರಗಳನ್ನೂ ಮಣಿ-ಮುತ್ತು-ಕಂಬಲಗಳನ್ನೂ ಕಾಂಚನ-ರಜತ-ವಿದ್ರುಮ(ಹವಳ)ಗಳನ್ನೂ ಕೋಟಿಸಂಖ್ಯೆಯಲ್ಲಿ ಪಡೆದನು. ಇಂದ್ರಪ್ರಸ್ಥಕ್ಕೆ ಹಿಂದಿರುಗಿ ಧರ್ಮರಾಜನಿಗೆ ಎಲ್ಲವನ್ನೂ ಒಪ್ಪಿಸಿದನು ಭೀಮ. ಇತ್ತ ಸಹದೇವನು ಧರ್ಮರಾಜನಿಂದ ಸಮ್ಮಾನಿತನಾಗಿ, ದೊಡ್ಡಸೈನ್ಯದೊಂದಿಗೆ ದಕ್ಷಿಣದಿಕ್ಕಿಗೆ ಹೊರಟನು. ಮೊಟ್ಟಮೊದಲು ಆತನು ಶೂರಸೇನರನ್ನು ಜಯಿಸಿದನು. ಆಮೇಲೆ ಮತ್ಸ್ಯರಾಜನನ್ನು, ಬಳಿಕ ಅಧಿರಾಜರಿಗೆ ಅಧಿಪತಿಯಾದ ದಂತವಕ್ತ್ರನನ್ನು ಸೋಲಿಸಿದನು. ಅವನಿಂದ ಕರವನ್ನು ಸ್ವೀಕರಿಸಿ ಅದೇ ರಾಜ್ಯದಲ್ಲೇ ಆತನನ್ನು ಪ್ರತಿಷ್ಠಾಪಿಸಿದನು. ಆಮೇಲೆ ಅಪರ-ಮತ್ಸ್ಯ, ನಿಷಾದದೇಶ, ಗೋಶೃಂಗಪರ್ವತ ಮುಂತಾದವನ್ನು ವಶಪಡಿಸಿಕೊಂಡನು.

ಸಹದೇವನು ಕುಂತಿಭೋಜನ ಮೇಲೆ ಸೇನಸಲು ಹೋಗುತ್ತಿದ್ದಂತೆಯೇ, ಆತನೇ ಈತನನ್ನು ಪ್ರೀತಿಯಿಂದ ಸ್ವಾಗತಿಸಿ ಆತನ ಶಾಸನವನ್ನು ಒಪ್ಪಿಕೊಂಡನು. ಆಮೇಲೆ ಚರ್ಮಣ್ವತೀನದಿಯ ಬಳಿಯ ಜಂಭಕ-ಅಪರನೇಕರಾಜ್ಯಗಳ ರಾಜರು, ಮತ್ತೆ ಹಲವು ಅರಸರು, ಭೀಷ್ಮಕರಾಜ, ಪೂರ್ವಕೋಸಲದ ರಾಜ, ಇತ್ಯಾದ ನಾನಾರಾಜರುಗಳನ್ನು ಸೋಲಿಸಿ ಅವರಿಂದ ಕರವನ್ನು ಪಡೆದನು. ಮಾಹಿಷ್ಮತಿಯ ನೀಲನೆಂಬ ರಾಜನೊಂದಿಗೆ ಮಾತ್ರ ಬಹಳ ಕಠಿಣವಾದ ಯುದ್ಧವಾಯಿತು. ಅವರು ಸೋಲದಿದ್ದರೂ ಸಹದೇವನ ವಿಷಯದಲ್ಲಿ ಸಂತೋಷಪಟ್ಟು, ಹೀಗೆ ಹೇಳಿದರು: ''ಪಾಂಡವಶ್ರೇಷ್ಠನಾದ ಸಹದೇವನೇ, ಇವೆಲ್ಲ ರತ್ನಗಳನ್ನೂ ಸಾಗಿಸು. ಧರ್ಮರಾಜನ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ.''

ಪೇಷೆಂಟಿಗೆ ಅಟೆಂಡರಾಗುವುದೆಂದರೆ...



ವಕ್ರದೃಷ್ಟಿ

▪ ಎನ್. ರಾಮನಾಥ್
anakuramanath@gmail.com

ಸೀನು ಆಸ್ಪತ್ರೆಗೆ ಸೇರಿದ. ಅವನನ್ನು ನೋಡಿಕೊಳ್ಳುವ ರಾತ್ರಿಪಾಳಿ ನನ್ನದಾಯಿತು. ವಾರ್ಡ್‌ನ ಸುತ್ತಲೂ ಕಣ್ಣಾಡಿಸಿದೆ. ಕೆಲವು ಪೊಲೀಸ್ ಠಾಣೆಗಳಲ್ಲಿ ಇನ್‌ಸ್ಪೆಕ್ಟರ್‌ನ ಮೇಜಿನ ಮುಂದೆ ಕುರ್ಚಿಗಳು ಇರುವುದಿಲ್ಲ. ''ಬಂದ ಕಳ್ರು ಕಾಕ್ರು ಎಲ್ರಿಗೂ ಕುರ್ಚಿ ಕೊಟ್ರೆ ತಲೆಮೇಲೆಕೂತ್ಕೋತಾರೆ. ಆಖೂಳರುನಿಂತಿರೋದೇಸರಿ'' ಎಂಬುದು ಅಲ್ಲಿನ ಅಭಿಪ್ರಾಯವಂತೆ. ಈ ವಾರ್ಡ್‌ನಲ್ಲಿಯೂ ''ಪೇಷಂಟ್‌ನ ನೋಡಕ್ಬಂದವ್ರು ನಿಂತು ನೋಡಿ ಹೋಗ್ತಿರ್ಬೇಕಷ್ಟೆ'' ಎಂಬ ಅಲಿಖಿತ ನಿಯಮ ಇದ್ದಂತಿತ್ತು.

''ನೋಡಕ್ಬಂದವ್ರಿಗೆ ಚೇರ್ ಬೇಡ ಬಿಡಿ. ಆದರೆ ರಾತ್ರಿಯ ಅಟೆಂಡರ್ ಮಲಗಕ್ಕೆ...?'' ಎಂದೆ. ''ಮಲಗ್ಬೇಕಾದ್ರೆ ಮನೇಲೇ ಇರಲಿ. ಇಲ್ಲಿ horizontal ಆದವರಿಗೆಲ್ಲ ನರ್ಸಿಂಗ್ ಹೋಂ ಚಾರ್ಜು ಅನ್ವಯ ಆಗತ್ತೆ. Vertical ಮಾತ್ರ ಫ್ರೀ'' ಎಂದ ಆಸ್ಪತ್ರೆಯವ.

'ಒನ್ ಬೆಡ್ ಟೂ ವಾರ್ಡ್' ಆಗಿದ್ದ ಆ ಕೊಠಡಿಯಲ್ಲಿದ್ದ ಮತ್ತೊಬ್ಬ ರೋಗಿಯ ಅಟೆಂಡರ್ ಕುರ್ಚಿಯೊಂದರ ಮೇಲೆ ಕುಳಿತು ಮೊಬೈಲ್ ಪಠಣದಲ್ಲಿ ನಿರತರಾಗಿದ್ದರು. ''ಈ ಕುರ್ಚಿ ಎಲ್ಸಿಕ್ತು ನಿಮ್ಗೆ?'' ಎಂದೆ. ಋಷಿಮುನಿಗಳು ತಪಸ್ಸಿನಲ್ಲಿ ನಿರತರಾದಷ್ಟೇ ಗಾಢವಾಗಿ ಕರವಾಣಿ(ಮೊಬೈಲ್)ಪಠಣದಲ್ಲಿ ಮುಳುಗಿದ್ದ ಆತನಿಗೆ ನನ್ನ ಧ್ವನಿ ತಲುಪಲಿಲ್ಲವೆನಿಸುತ್ತದೆ.

ಪ್ರಶ್ನೆಯನ್ನು ರಿಪೀಟಿಸಿದೆ. ಆವನಿಂದ ನನಗಾದುದು ಶೂನ್ಯ ಸಂಪಾದನೆ ಅಷ್ಟೆ. ಅಟೆಂಡರ್ ಆಗಿ ಕುಳಿತ ಇವನ ಗಮನವನ್ನು ಸೆಳೆಯಬೇಕಾದರೆ ರೋಗಿಯು ಇವನಿಗೆ ಕರೆ ಮಾಡಬೇಕು ಅಥವಾ ಮೆಸೇಜ್ ಕಳಿಸಬೇಕಷ್ಟೆ ಎಂದುಕೊಳ್ಳುತ್ತಲೇ ವಾರ್ಡಿನಿಂದ ಹೊರಬಂದು ಅತ್ತಿತ್ತ ಕಣ್ಣಾಡಿಸಿದೆ. ರಿಸೆಪ್ಷನ್‌ನಲ್ಲಿ ಅವನು ಕುಳಿತ ಮಾದರಿಯ ಚೇರುಗಳಿದ್ದವು. ಸುತ್ತಲೂ ನೋಡಿದೆ. ಯಾರೆಂದರೆ ಯಾರೂ ಕಾಣಲಿಲ್ಲ. ವಾರಸುದಾರರು ಗೋಚರಿಸದಂತಹ ವಸ್ತುಗಳೆಲ್ಲವೂ ನನ್ನದೇ ಎಂಬ ಧೋರಣೆಯುಳ್ಳ ನಾನು ಎರಡು ಕುರ್ಚಿಗಳನ್ನು ಒಳಕ್ಕೆ ರವಾನಿಸಿಕೊಂಡು, ಒಂದರ ಮೇಲೆ ಕುಳಿತು ಇನ್ನೊಂದರ ಮೇಲೆ ಕಾಲು ಚಾಚಿಕೊಂಡು ಅರ್ಧಕೋನಾಸನದಲ್ಲಿ ಕತ್ತನ್ನು ತಿರುಗಿಸಿ ಸೀನುವನ್ನು ಗಮನಿಸತೊಡಗಿದೆ.

ಟ್ಯೂಬಾಭರಣಭೂಷಿತನಾದ ಸೀನುವನ್ನು ಶ್ರೀರಂಗಪಟ್ಟಣದ ರಂಗನಾಥಾಸನದಲ್ಲಿ ಮಲಗಿಸಿದ್ದರು. ಆ ರಿಕ್ಲೈನಾಸನವು ತನಗೆ ಮೆಚ್ಚಿಗೆಯಾಗಿದೆಯೆಂದು ಸೀನುವು ಗೊರಕೆಯ ಮೂಲಕ ತೋರ್ಪಡಿಸುತ್ತಿದ್ದ. ಕೊಂಚ ಸಮಯ ಕಳೆಯಿತು. ವಾರ್ಡಿನ ಪ್ರಶಾಂತತೆಯು ಮಂಪರು ಮೂಡಿಸುವಂತಿದ್ದು, ಅದರ ಪ್ರಭಾವ ನಾನು ತಲೆದೂಗುತ್ತಾ 'ಚಲಕಂಠಾಸನ'ದಲ್ಲಿ ಕುಳಿತೆ. ಕ್ರಮೇಣ ಚಲಕಂಠಾಸನವು 'ಮುಂದುಬೆಂಡಾಸನ'ಕ್ಕೆ ಎಡೆಮಾಡಿಕೊಟ್ಟು, ಕುಳಿತಲ್ಲೇ ತೂಕಡಿಸುವ 'ಆಫೀಸ್ ನಿದ್ರಾಸನ'ದತ್ತ ನನ್ನನ್ನು ಒಯ್ದಿತು.

ಆಸ್ಪತ್ರೆಯ ಪಕ್ಕದಲ್ಲಿ ಸಾ ಮಿಲ್ ಇದ್ದಿತೆನಿಸುತ್ತದೆ. ಯಾವುದೋ ಅರ್ಜೆಂಟ್ ಗಿರಾಕಿಗೆಂದು ಆ ಹೊತ್ತಿನಲ್ಲಿ ಮರ ಕೊಯ್ಯಲು ಆರಂಭಿಸಿದ್ದರು. ಆ ಗರಗಸದ ಸದ್ದಿಗೆ ನಿದ್ರಾಸನದಿಂದ ಥಟ್ಟನೆ 'ಹಿಂದುಬೆಂಡಾಸನ'ಕ್ಕೆ ತಲುಪಿ ನೇರಾಸನದಲ್ಲಿ ಕುರ್ಚಿಗೆ ಒರಗಿದೆ. ಬರಬರುತ್ತಾ ಹೆಚ್ಚಾದ ಸದ್ದಿಗೆ ಸೀನುವು ಎಚ್ಚರಗೊಳ್ಳುವನೇನೋ ಎಂದು ಕಳವಳಗೊಂಡು ಅವನತ್ತ ದೃಷ್ಟಿ ಬೀರಿದೆ. 'ರಂಗನಾಥಾಸನ'ದಿಂದ 'ಎಡಪಾರ್ಶ್ವಕೋನಾಸನ'ಕ್ಕೆ ಬದಲಾಗಿದ್ದ ಅವನ ತುಟಿಗಳು ಕಂಪನಾಸನಕ್ಕೆ ಒಳಗಾಗುತ್ತಿದ್ದವು; ಮೂಗಿನ ಹೊಳ್ಳೆಗಳು 'ಅರಳಾಸನ'ದಲ್ಲಿ ಹಿಗ್ಗಿದ್ದವು. ನಿಜಾರ್ಥದಲ್ಲಿ 'ಸೌಂಡ್ ಸ್ಲೀಪ್'ನಲ್ಲಿದ್ದ ಸೀನುವಿನಿಂದ ದೃಷ್ಟಿಯನ್ನು ಸಮಾನದುಃಖಿಯಾದ ಪಕ್ಕದ ಬೆಡ್ಡಿನ ಅಟೆಂಡರಿನತ್ತ ಹರಿಸಿದೆ.

ನನ್ನ ಎಣಿಕೆ ತಪ್ಪಾಗಿತ್ತು. ಅವನು ಸಮಾನದುಃಖಿಯಾಗಿರಲಿಲ್ಲ, ಗರಗಸದ ಸದ್ದನ್ನು ಹೊರಡಿಸುತ್ತಿದ್ದುದು ಅವನೇ!

ಕರವಾಣಿವೀಕ್ಷನಾಸನದಿಂದ 'ಅರೆಸ್ಲಂಪಾಸನ'ಕ್ಕೆ ಕುಸಿದು ಪವಡಿಸಿದ್ದ ಅವನಿಂದ ಸಾ ಮಿಲ್ ಸದ್ದು ಹೊರಡುತ್ತಿತ್ತು. ನನ್ನ ಜೇಬಿನಿಂದ ಕರ್ಚೀಫನ್ನು ಹೊರತೆಗೆದು, ತುದಿಯನ್ನು ಚೂಪಾಗಿಸಿ, ಅವನ ಮೂಗಿನ ಹೊಳ್ಳೆಯೊಂದನ್ನು ಅದರಿಂದ ಚುಚ್ಚಿದೆ. ಸೈಲೆನ್ಸರ್ ಅಳವಡಿಸಿದ ಬೈಕಿನಂತೆ ಸಾ ಮಿಲ್‌ನ ಸದ್ದು ಜನರೇಟರ್‌ನ ಸದ್ದಿನ ಮಟ್ಟಕ್ಕೆ ಇಳಿಯಿತು.

ಯಥಾಸ್ಥಾನಕ್ಕೆ ಮರಳಿ ಪಾದಚಾಚಾಸನದಲ್ಲಿ ಕುಳಿತೆ. ಬೆನ್ನುಹುರಿಯ ಕೆಳಭಾಗಕ್ಕೆ ಗಾಂಧೀಜಿಯ ಬಗ್ಗೆ ತಿಳಿದಿತ್ತೆ? ಅದು ಸ್ವಾತಂತ್ರ್ಯ ಹೋರಾಟದ ಪಠ್ಯವನ್ನು ಮನನ ಮಾಡಿಕೊಂಡಿತ್ತೆ? ಹೌದೆನಿಸುತ್ತದೆ. ಏಕೆಂದರೆ ಆ ಕ್ಷಣದಲ್ಲಿ ಆ ಭಾಗವು 'ಅಸಹಕಾರ ಚಳುವಳಿ'ಯನ್ನು ಆರಂಭಿಸಿತ್ತು.

'ಈ ಖಾತೆ ಕೊಟ್ಟರೆ ರಾಜೀನಾಮೆ ನೀಡುವೆ. ಆ ಖಾತೆ ಕೊಟ್ಟರೆ ಜೊತೆಗಿರುವೆ' ಎಂದು ಎಲ್ಲಿ 'ಖೂಬ್ ಖಾನೇ ಕೇ ಲಿಯೇ' ಅವಕಾಶ ಸಿಗುವುದೋ ಆ ಖಾತೆಯನ್ನೇ ಕೇಳುವ ಸಚಿವರು ಪೊಸಿಷನ್ ಷಿಫ್ಟ್ ಆದಾಗ ತೃಪ್ತರಾಗುವ ರೀತಿಯಲ್ಲಿಯೇ ನಾನೂ ಪೊಸಿಷನ್ ಚೇಂಜ್ ಮಾಡಿದರೆ ಅಸಹಕಾರ ಚಳುವಳಿ ಬಂದ್ ಆದೀತೆಂದು 'ಎಡಪಾರ್ಶ್ವಾಸನ'ದಲ್ಲಿ ಕುಳಿತೆ. ಅಸಹಕಾರ ಕೊಂಚ ಕಡಿಮೆಯಾಯಿತು. ಸೀನುವಿನ ಲಯಬದ್ಧ 'ರಾಗಾಸನ' ಹಾಗೂ ಸಹಅಟೆಂಡರನ ಜನರೇಟರ್ ಸದ್ದಾಸನಗಳ ಜೋಡಿಮೇಳವು, ದೊಡ್ಡಂಗಡಿಯ ಯಂತ್ರಚಾಲಿತ ರೋಲಿಂಗ್ ಶಟರನ್ನು ನಿಧಾನವಾಗಿ ಕೆಳಗಿಳಿಸುವಂತೆ, ನನ್ನ ರೆಪ್ಪೆಗಳನ್ನು ಕೆಳಕ್ಕೆಳೆದವು. ಎಡಗೈಯನ್ನು ಕೆನ್ನೆಗಾನಿಸಿ 'ಹಸ್ತಾಧಾರಿತಕಪೋಲಾಸನ'ದಲ್ಲಿ ತಿರುಗಿ ಮಲಗಿದೆ. ಶವಾಸನದ ಭಂಗಿಗೆ ಬರುವಷ್ಟರಲ್ಲಿ ಆಸ್ಪತ್ರೆಯ ಎದುರಿನ ರೈಲ್ವೇಹಳಿಯ ಮೇಲೆ ಜೋಡಿ ಗೂಡ್ಸ್ ಟ್ರೈನ್ ಹೋದಂತಹ ಸದ್ದಿಗೆ ಬೆಚ್ಚಿ ಎದ್ದೆ.

ಯಾವುದೇ ಟ್ರೈನ್ ಒಂದು ಸ್ಥಳವನ್ನು ದಾಟಬೇಕಾದರೆ ಮೂರು ನಿಮಿಷಗಳು ಹಿಡಿದಾವು. ಐದು ನಿಮಿಷಗಳಾದರೂ ಈ ಟ್ರೈನ್‌ಗಳ ಸದ್ದು ಕೇಳಿಬರುತ್ತಲೇ ಇತ್ತು. 'ಎಷ್ಟು ದೊಡ್ಡ ಟ್ರೈನ್ ಇದು!' ಎಂದು ವಿಸ್ಮಿತನಾಗಿಯೇ ಅರೆನಿಮೀಲಿತ ಚಕ್ಷುರಾಸನದಲ್ಲಿ ಒರಗಿದೆ. ಸ್ಪೈನಲ್ ಕಾರ್ಡಿನ ಬುಡವು ತನ್ನ ಅಸಹಕಾರ ಚಳುವಳಿಯನ್ನು ಮತ್ತೆ ಆರಂಭಿಸಿತು.

ಎದ್ದು ಕಿಟಕಿಯ ಆಚೆಗೆ ದೃಷ್ಟಿ ಹಾಯಿಸಿದೆ. 'ಈ ಇಡೀ ಏರಿಯಾದಲ್ಲಿ ರೈಲ್ವೇ ಟ್ರ್ಯಾಕ್ ಇಲ್ಲ' ಎಂದು ನೆನಪಾಯಿತು. ''ನಿಮ್ಮಲ್ಲೇ ಹುದುಗಿರುವುದನ್ನು ಹೊರಗೆಲ್ಲೋ ಹುಡುಕುತ್ತೀರಿ'' ಎಂದು ನೆಮ್ಮದಿಯ ಬಗ್ಗೆ ಗುರುಗಳೊಬ್ಬರು ಹೇಳಿದ್ದರು. ನೆಮ್ಮದಿಗೆ ಅನ್ವಯವಾಗುವುದು ಸದ್ದಿಗೂ ಅನ್ವಯವಾದೀತೆಂದು ಕರವಾಣಿದಾಸನತ್ತ ದೃಷ್ಟಿ ಹಾಯಿಸಿದೆ. ಅವನ ಕಿವಿಯಿಂದ ಇಯರ್ ಫೋನ್ ಕಳಚಿಬಿದ್ದಿತ್ತು. ಆದರೆ ಜೋಡಿ ಗೂಡ್ಸ್ ಟ್ರೈನ್ ಸದ್ದು ಅಲ್ಲಿಂದಾಗಲಿ, ಅವನಿಂದಾಗಲಿ ಹೊಮ್ಮುತ್ತಿರಲಿಲ್ಲ. ಸೀನುವಿನತ್ತ ನೋಡಿದೆ. ಅವನದೇನಿದ್ದರೂ ಮಂದ್ರಸ್ಥಾಯಿಯೇ. ವಿವಾಹಿತ ಸೀನುವಿಗೆ ದಿನದಲ್ಲಿ ಗಟ್ಟಿಯಾಗಿ ಮಾತನಾಡಲು ಅನುಮತಿ ಇಲ್ಲ. ಅಂತೆಯೇ ನಿದ್ರೆಯಲ್ಲೂ ಗಟ್ಟಿಯಾಗಿ ಗೊರಕೆ ಹೊಡೆಯಲು ಅನುಮತಿ ಇಲ್ಲ!

ಅಟೆಂಡರನಿಂದ ಅಟೆಂಡಿನತ್ತ ಗಮನ ಹರಿಸಿದೆ. ಸುದೀರ್ಘವಾಗಿ ಉಸಿರನ್ನು ಎಳೆದೆಳೆದು ಬಿಡುತ್ತಿದ್ದ ಅವನು ಉಸಿರೆಳೆದುಕೊಂಡಾಗ ಒಂದು ಗೂಡ್ಸ್ ಟ್ರೈನ್, ಉಸಿರು ಬಿಟ್ಟಾಗ ಇನ್ನೊಂದು ಗೂಡ್ಸ್ ಟ್ರೈನಿನ ಸದ್ದು ಹೊರಡುತ್ತಿದ್ದವು. ಅರೆಲಂಬಾಸನದಲ್ಲಿ ಮಲಗಿದ್ದ ಅವನ ಮಂಚದ ತಿರುಗಣೆಯನ್ನು ತಿರುಗಿಸಿ ಅವನನ್ನು ಸಮಕೋನಾಸನಕ್ಕೆ ಇಳಿಸಿದೆ. ಅಲುಗಾಟದ ಕಾರಣ ಗೂಡ್ಸ್ ಟ್ರೈನ್ ಸಪ್ಪಳವು ತನ್ನ ಲಾಸ್ಟ್ ಸ್ಟೇಷನ್ ತಲುಪಿತು.

ಮತ್ತೆ ಯಥಾಸ್ಥಾನಕ್ಕೆ ಮರಳಿ, ಈ ಬಾರಿ ಬಲಹಸ್ತಕಪೋಲಾಧಾರಾಸನದಲ್ಲಿ ಮಲಗಿದೆ. ಅದೇ ಸಮಯದಲ್ಲಿ ಸೀನುವು 'ಟ್ಯೂಬುಮುಕ್ತಾಸನ'ವನ್ನು ಹೊಂದಬೇಕೆಂದು ನಿರ್ಧರಿಸಿ ತನ್ನ ಟ್ಯೂಬನ್ನು ಕಿತ್ತುಕೊಳ್ಳಲು ಕೈ ಹಾಕಿದ. ಎದ್ದು ಅವನ ಕೈಬೆರಳುಗಳನ್ನು 'ಟ್ಯೂಬುಗ್ರಹಣಾಸನ'ದಿಂದ 'ಮುಕ್ತಾಸನ'ಕ್ಕೆ ತಂದೆ. ಸೀನು 'ಪ್ರೊಟೆಸ್ಟಾಸನ'ದಲ್ಲಿ ಕುಳಿತ. ಅವನ ಕಂಠದ ನರಗಳು 'ಉಬ್ಬಾಸನ'ದಲ್ಲಿ ತೊಡಗಿ ವಿರೋಧಕ್ಕೆ ಒತ್ತು ನೀಡಿದವು. ಸೀನುವನ್ನು 'ರಿಕ್ಲೈನಾಸನ'ದಿಂದ ಕ್ರಮೇಣ 'ಸಮಕೋನಾಸನ'ಕ್ಕೆ ತಂದು, ಸಡಿಲವಾಗಿದ್ದ ಟ್ಯೂಬನ್ನು ಭದ್ರಗೊಳಿಸಿ, ಅವನ ಉಸಿರಾಟವು ನಿದ್ರಾಂಗನೆಯನ್ನು ಆಲಿಂಗಿಸಿರುವುದನ್ನು ಸೂಚಿಸುವ ಮಟ್ಟಕ್ಕೆ ಲಯವನ್ನು ಹೊಂದಿದ ಮೇಲೆ ನನ್ನ ಕುರ್ಚಿಗೆ ಹಿಂತಿರುಗಿ, ಈ ಬಾರಿ ಮುಂದಿನ ಕುರ್ಚಿಯ ಆರ್ಮ್ ರೆಸ್ಟ್‌ಗಳ ಮೇಲೆ ಮೊಳಕೈಗಳನ್ನೂರಿ, ಬೊಗಸೆಗಳನ್ನು ಹೆಣೆದುಕೊಂಡು 'ಅಂಜಲೀಬದ್ಧಾಸನ'ದಲ್ಲಿ ಶಿರವಿರಿಸಿ ನಿದ್ರಾದೇವಿಗಾಗಿ ಕಾಯತೊಡಗಿದೆ. ಈ ಬಾರಿ ಗೂಡ್ಸ್ ಟ್ರೈನ್ ಬರಲಿಲ್ಲ. ಸಾ ಮಿಲ್‌ನ ಗರಗಸದ ಸದ್ದೂ ಇರಲಿಲ್ಲ. ಪ್ರಶಾಂತವಾದ ವಾತಾವರಣವಿರಲ್ ಬಾರದಿರ್ಪಳೇನ್ ನಿದ್ರಾದೇವಿ ಸಮೀಪಕೆ? ಬಂದಳು. ಅವಳ ವಶವಾದೆ.

ಇದ್ದಕ್ಕಿದ್ದಂತೆ ನನ್ನ ಮೂಗು ಮುಂದಿನ ಕುರ್ಚಿಯ ಮಧ್ಯಭಾಗಕ್ಕೆ ಬಡಿಯಿತು. ನಾನು ಕುಳಿತಿದ್ದ ಕುರ್ಚಿಯು ಲಘುಕೋನಾಸನಕ್ಕೆ ಬಾಗಿತು. ಸಂಭಾಳಿಸಿಕೊಳ್ಳಲು ಯತ್ನಿಸಿದಾಗ ಮುಂದಿನ ಕುರ್ಚಿಯು ವಿಶಾಲಕೋನಾಸನಕ್ಕೆ ಚಾಚಿಕೊಂಡಿತು. ನನ್ನ ಎಡಮೊಣಕೈ ಕುರ್ಚಿಯ ಹಿಡಿಯಿಂದ ಜಾರಿದುದೇ ಈ ಎಲ್ಲಕ್ಕೂ ಕಾರಣವಾಯಿತೆಂದು ಅಲ್ಲಿನ ಕಿತ್ತ ಚರ್ಮವು ಸಾಕ್ಷಿ ಹೇಳುತ್ತಿತ್ತು.

''ನಿದ್ರೆ ಮಾಡೋದಾದ್ರೆ ಇಲ್ಲ್ಯಾಕ್ ಬಂದೆಯೋ?'' ಎಂಬ ಸೀನುವಾಣಿಯು ನನ್ನನ್ನು ಪೂರ್ಣವಾಗಿ ಎಚ್ಚರಗೊಳಿಸಿತು. ಟೈಂ ನೋಡಿದೆ. ಸರಿರಾತ್ರಿ ಮೂರುಗಂಟೆ. ಮೊಬೈಲ್ ಆನ್ ಮಾಡಿ ವರ್ಡ್ ಗೇಮ್‌ನಲ್ಲಿ ನಿರತನಾದೆ. ಮಹಡಿಯ ಮೇಲೆ ಯಾವುದೋ ಸಾಮಾನುಗಳನ್ನು ಧರಧರಧರ್ರನೆ ಎಳೆಯುವ ಸದ್ದು ಕೇಳಿಸಿದಂತಾಯ್ತು. ಈ ಹೊತ್ತಿನಲ್ಲಿ ಇದೆಂತಹ ಉಪದ್ರವವೋ ಎಂದು ಮನದಲ್ಲೇ ಶಪಿಸುತ್ತಾ ಕಣ್ಬಿಟ್ಟೆ.

ಜ್ಞಾನೋದಯವಾಯಿತು. ಆ ಕಟ್ಟಡಕ್ಕೆ ಫಸ್ಟ್ ಫ್ಲೋರೇ ಇರಲಿಲ್ಲ. ಎಚ್ಚರವಾಗಿದ್ದು ಗೊರಕೆಯ ಸದ್ದಿಗೆ. ನನ್ನದೇ ಗೊರಕೆಯ ಸದ್ದಿಗೆ!

ನಿದ್ರೆ-ಎಚ್ಚರಗಳು ಚಂದ್ರ-ಮೋಡದಂತೆ ಆಗಾಗ್ಗೆ ಇಣುಕುತ್ತಿದ್ದಂತೆಯೇ ಮುಂಜಾವಿನ ಕೋಳಿ ಕೂಗಿತು. ಬೆಳಗಿನ ಪಾಳಿಯ ಕಿಟ್ಟಿ ಕಾಫಿ ಫ್ಲಾಸ್ಕಿನೊಡನೆ ಪ್ರತ್ಯಕ್ಷನಾದ.

''ನಾಳೆ ರಾತ್ರಿ ಡ್ಯೂಟಿಗೆ ನೀನು ಬರಬೇಡ'' ಎಂದ ಸೀನು. ಪಿಂಕ್ ಸ್ಲಿಪ್ ಪಡೆದ ಸಾಫ್ಟ್‌ವೇರ್ ಇಂಜಿನಿಯರ್‌ನಂತೆ ಮರುಮಾತಾಡದೆ ಅಲ್ಲಿಂದ ನಿರ್ಗಮಿಸಿದೆ.

ಮರಣಶಯ್ಯೆಯಲ್ಲೂ ಮೊಳಗಿದ ರಾಷ್ಟ್ರಧ್ವನಿ

▶ ಡಾ. ಶೇಖರ ದೊಡ್ಡಗೌಡರ

1940ರ ಜೂನ್ ತಿಂಗಳ ಆ ದಿನಗಳು ಭಾರತೀಯ ಇತಿಹಾಸದ ಅತ್ಯಂತ ಭಾವುಕ ಹಾಗೂ ನಿರ್ಣಾಯಕ ಕ್ಷಣಗಳಿಗೆ ಸಾಕ್ಷಿಯಾಗಿದ್ದವು. ಅತ್ತ ನಾಗಪುರದ ರೇಶಿಮ್ ಭಾಗ್‌ನಲ್ಲಿ ನಡೆಯುತ್ತಿದ್ದ ಸಂಘ ಶಿಕ್ಷಾ ವರ್ಗದಲ್ಲಿ ಸ್ವಾತಂತ್ರ್ಯ ಪೂರ್ವ ಭಾರತದ ಮೂಲೆ ಮೂಲೆಗಳಿಂದ ಬಂದ ನೂರಾರು ತರುಣರು ರಾಷ್ಟ್ರ ಸೇವೆಯ ದೀಕ್ಷೆ ಪಡೆಯುತ್ತಿದ್ದರು. ಅದೇ ಸಮಯದಲ್ಲಿ, ಆ ಮಹಾ ಸಂಘಟನೆಯ ಶಿಲ್ಪಿ, ಯುಗಪ್ರವರ್ತಕ ಡಾ. ಕೇಶವ ಬಲಿರಾಮ್ ಹೆಡ್ಗೇವಾರ್ (ಡಾಕ್ಟರ್‌ಜೀ) ಅವರು ತೀವ್ರ ಜ್ವರ ಮತ್ತು ಅಸಹನೀಯ ಬೆನ್ನುನೋವಿನಿಂದ ಮರಣಶಯ್ಯೆಯಲ್ಲಿದ್ದರು.


ಇಲ್ಲಿ ನಾವು 1920–30ರ ದಶಕದ ಭಾರತೀಯ ರಾಜಕೀಯ ಮುತ್ಸದ್ದಿ ಹಾಗೂ ಇತಿಹಾಸದ ದ್ರಷ್ಟಾರರಾಗಿದ್ದ ಡಾಕ್ಟರ್‌ಜೀ ಅವರ ವಿಶಿಷ್ಟ ಚಿಂತನೆಯನ್ನು ಆಳವಾಗಿ ಸ್ಮರಿಸಬೇಕಾಗುತ್ತದೆ. ಏಕೆಂದರೆ, ಅಂದಿನ ಕಾಲದ ಬಹುತೇಕ ನಾಯಕರು ಬ್ರಿಟಿಷರ ವಿರುದ್ಧ ಹೋರಾಡಲು ರಾಜಕೀಯ ಕಾನೂನುಗಳನ್ನು ಮತ್ತು ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವ ಕಡೆಗೆ ಮಾತ್ರ ಗಮನ ಹರಿಸಿದ್ದರು. ಆದರೆ ಡಾ. ಹೆಡ್ಗೇವಾರ್ ವ್ಯವಸ್ಥೆಗಿಂತ 'ವ್ಯಕ್ತಿ ಮುಖ್ಯ' ಎಂದು ದೃಢವಾಗಿ ನಂಬಿದ್ದರು. ಕೇವಲ ಕಾನೂನುಗಳನ್ನು ಬದಲಾಯಿಸುವುದರಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಗದು, ಬದಲಿಗೆ ದೇಶದ ಪ್ರತಿಯೊಬ್ಬ ನಾಗರಿಕನ ಚಾರಿತ್ರ್ಯ ನಿರ್ಮಾಣವಾಗಬೇಕು ಎಂಬುದು ಅವರ ಅಚಲ ನಿಲುವಾಗಿತ್ತು. ಈ ಕಾರಣಕ್ಕಾಗಿಯೇ, ದೇಹದ ಪ್ರತಿಯೊಂದು ಕಣವೂ ಅಸಹನೀಯ ವೇದನೆಯಿಂದ ಬಳಲುತ್ತಿದ್ದರೂ, ತಮ್ಮ ಕೊನೆಯ ಕ್ಷಣದವರೆಗೂ ಆ ಚಾರಿತ್ರ್ಯ ನಿರ್ಮಾಣದ ಮಹಾಯಜ್ಞದಲ್ಲೇ ತೊಡಗಿದ್ದ ಆ ಮಹಾಚೇತನ, ಜೂನ್ 9 ರಂದು ತನ್ನ ಅಂತಿಮ ಭಾಷಣದ ಮೂಲಕ ಮೊಳಗಿಸಿದ ರಾಷ್ಟ್ರಧ್ವನಿ ಇಂದಿಗೂ ಕೋಟ್ಯಂತರ ಸ್ವಯಂಸೇವಕರ ಎದೆಯಲ್ಲಿ ಜಾಗೃತ ಮಂತ್ರವಾಗಿ ಅನುರಣಿಸುತ್ತಿದೆ.

ಇತಿಹಾಸದ ಆ ಭಾವುಕ ಕ್ಷಣಗಳು

ದೈಹಿಕವಾಗಿ ಅನಾರೋಗ್ಯ ತೀವ್ರವಾಗಿದ್ದರೂ, ಡಾಕ್ಟರ್‌ಜೀ ಅವರ ಧೀಮಂತ ಮನಸ್ಸು ಮಾತ್ರ ಸದಾ ಶಿಬಿರದಲ್ಲಿದ್ದ ಸ್ವಯಂಸೇವಕರ ಶಿಸ್ತು ಮತ್ತು ಉತ್ಸಾಹದ ಕಡೆಗೇ ಇರುತ್ತಿತ್ತು. ವೈದ್ಯರು ಅವರಿಗೆ ಸಂಪೂರ್ಣ ವಿಶ್ರಾಂತಿ ಪಡೆಯಲು ಸೂಚಿಸಿ, ಯಾರನ್ನೂ ಭೇಟಿಯಾಗದಂತೆ ಕಠಿಣ ನಿರ್ಬಂಧ ಹೇರಿದ್ದರೂ ಅವರು ಅದಕ್ಕೆ ಒಪ್ಪಲಿಲ್ಲ. ತಮ್ಮ ಕೊನೆಯ ದಿನಗಳು ಹತ್ತಿರವಾಗುತ್ತಿವೆ ಎಂದು ಮನಗಂಡಿದ್ದ ಆ ಮಹಾಪುರುಷನಿಗೆ, ವೈಯಕ್ತಿಕ ಆರೋಗ್ಯಕ್ಕಿಂತ ದೇಶದ ತರುಣರನ್ನು ಪ್ರೇರೇಪಿಸುವುದೇ ಪರಮ ಕರ್ತವ್ಯವಾಗಿತ್ತು.

ಅಂತಿಮವಾಗಿ ಅವರು ಕಷ್ಟಪಟ್ಟು ಶಿಬಿರದ ಮೈದಾನಕ್ಕೆ ಆಗಮಿಸಿದಾಗ ಅಲ್ಲಿ ನೆರೆದಿದ್ದ ಸ್ವಯಂಸೇವಕರಲ್ಲಿ ಉಂಟಾದ ರೋಮಾಂಚನ ಮತ್ತು ಕರುಣಾಜನಕ ಸ್ಥಿತಿ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದಂತೆ ಉಳಿದಿದೆ. ಅದು ಕೇವಲ ಒಬ್ಬ ಸಂಘಟನಾ ಮುಖ್ಯಸ್ಥನ ಸಾಧಾರಣ ಭೇಟಿಯಾಗಿರಲಿಲ್ಲ; ಬದಲಿಗೆ ಇಡೀ ದೇಶದ ಭವಿಷ್ಯವನ್ನು ಕಣ್ಣಾರೆ ಕಂಡು ಹರಸಲು ಬಂದ ದ್ರಷ್ಟಾರನೊಬ್ಬನ ದಿವ್ಯ ಸನ್ನಿಧಿಯಾಗಿತ್ತು. ಈ ಸನ್ನಿಧಿಯಲ್ಲಿ ಮೂಡಿಬಂದದ್ದೇ ಸಂಘದ ಇತಿಹಾಸದ ಆ ಸುವರ್ಣ ಸಂದೇಶ.

ಅಂತಿಮ ಭಾಷಣದ ಮಹಾಸೂತ್ರ



ಜೂನ್ 9, 1940ರಂದು ಡಾಕ್ಟರ್‌ಜೀ ಅವರು ಕುಳಿತ ಸ್ಥಿತಿಯಲ್ಲೇ ಮಾಡಿದ ಆ ಕೊನೆಯ ಭಾಷಣ ಕೇವಲ 10 ರಿಂದ 15 ನಿಮಿಷಗಳಷ್ಟು ಅಲ್ಪ ಅವಧಿಯದ್ದಾಗಿತ್ತು. ಆದರೆ ಆ ಮಾತುಗಳು ಕೇವಲ ಭಾಷಣವಾಗಿರದೆ, ಸಂಘದ ಅಸ್ತಿತ್ವದ ದಿಕ್ಸೂಚಿ ಮತ್ತು ಅವರ ಇಡೀ ಜೀವಿತಾವಧಿಯ ತಪಸ್ಸಿನ ಸಾರವಾಗಿತ್ತು. ಈ ಐತಿಹಾಸಿಕ ಸಂದೇಶದಲ್ಲಿ ಅವರು ಮುಖ್ಯವಾಗಿ ಮೂರು ಸೂತ್ರಗಳನ್ನು ಸಮಾಜದ ಮುಂದಿಟ್ಟರು:

ಮೊದಲನೆಯದಾಗಿ, ದೇಶದ ಮೂಲೆ ಮೂಲೆಗಳಿಂದ, ವಿಭಿನ್ನ ಪ್ರಾಂತ್ಯ, ಭಾಷೆ ಮತ್ತು ಜಾತಿಗಳಿಂದ ಬಂದಿದ್ದ ನೂರಾರು ತರುಣರು ಶಿಸ್ತಿನಿಂದ ಒಟ್ಟಿಗೆ ನಿಂತಿರುವುದನ್ನು ನೋಡಿ ಡಾಕ್ಟರ್‌ಜೀ ಅವರು ಭಾವಪರವಶರಾಗಿ, 'ನಾನು ಇಂದು ನನ್ನ ಕಣ್ಣಮುಂದೆ ಅಖಂಡ ಹಿಂದೂ ಸಮಾಜದ ಒಂದು ಸಣ್ಣ ರೂಪವನ್ನು ನೋಡುತ್ತಿದ್ದೇನೆ' ಎಂದರು. ಭಾಷೆ, ಪ್ರಾಂತ್ಯ ಅಥವಾ ಭೌಗೋಳಿಕ ವೈವಿಧ್ಯತೆಗಳು ರಾಷ್ಟ್ರೀಯತೆಯ ಒಂದೇ ದಾರದಡಿಯಲ್ಲಿ ಒಂದಾದಾಗ ಹೇಗೆ ಕರಗಿಹೋಗುತ್ತವೆ ಎಂಬುದನ್ನು ಅವರು ಮನದಟ್ಟು ಮಾಡಿಕೊಟ್ಟರು.

ಎರಡನೆಯದಾಗಿ, ಅವರು ಸ್ವಯಂಸೇವಕರಿಗೆ ಕಠಿಣವಾದ ಎಚ್ಚರಿಕೆಯ ಸಂದೇಶ ನೀಡುತ್ತಾ, 'ಸಂಘದ ಕಾರ್ಯವನ್ನು ಕೇವಲ ಯಾವುದೋ ಒಂದು ಹವ್ಯಾಸದಂತೆ ಭಾಗಶಃ ಮಾಡಬೇಡಿ. ಸಂಘದ ಹೊರಗೆ ನಾವು ಬೇರೆ, ಸಂಘದ ಒಳಗೆ ಬೇರೆ ಎಂಬಂತಿರಬಾರದು. ಇಲ್ಲಿ ಕಲಿತ ದೇಶಸೇವೆ ಮತ್ತು ಚಾರಿತ್ರ್ಯದ ಮೌಲ್ಯಗಳು ನಿಮ್ಮ ದೈನಂದಿನ ಬದುಕಿನ ಭಾಗವಾಗಬೇಕು ಹಾಗೂ ಇದು ಇಡೀ ಜೀವನದ ವ್ರತವಾಗಬೇಕು' ಎಂದು ಕರೆ ನೀಡಿದರು.

ಮೂರನೆಯದಾಗಿ, ಶಿಬಿರದ ಮೌಲ್ಯಗಳು, ಶಿಸ್ತು ಮತ್ತು ಒಗ್ಗಟ್ಟು ಕೇವಲ ಆ ಮೈದಾನದ ಗಡಿಯೊಳಗೆ ಅಥವಾ ಆ ದಿನಗಳಿಗೆ ಮಾತ್ರ ಸೀಮಿತವಾಗಿರಬಾರದು, ಈ ತರಬೇತಿಯನ್ನು ಮುಗಿಸಿ ತಮ್ಮ ತಮ್ಮ ಹಳ್ಳಿ, ಪಟ್ಟಣಗಳಿಗೆ ಮರಳಿದ ನಂತರವೂ ಪ್ರತಿಯೊಬ್ಬ ಸ್ವಯಂಸೇವಕನು ದೇಶದ ಜಾಗೃತ ಸೈನಿಕನಂತೆ ಕಾರ್ಯನಿರ್ವಹಿಸಬೇಕು ಮತ್ತು ಇಡೀ ಸಮಾಜವನ್ನು ಸಂಘಟಿಸುವ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ತೆಗೆದುಕೊಳ್ಳಬೇಕು ಎಂದು ಆಶಿಸಿದರು.

ಅವರ ಈ ಕೊನೆಯ ಮಾತುಗಳು ಕೇವಲ ಭಾಷಣವಾಗಿರದೆ, ಇಡೀ ಸಂಘಟನೆಯ ಬೆಳವಣಿಗೆಗೆ ದಿಕ್ಸೂಚಿಯಾದ ಅಮೃತ ಮಂತ್ರಗಳಾಗಿದ್ದವು. ಮರಣದ ಹತ್ತಿರದಲ್ಲೂ ಸ್ವಂತ ಸುಖವನ್ನು ಮರೆತು ಸಮಾಜದ ಹಿತವನ್ನೇ ಬಯಸಿದ ಅವರ ಈ ದೂರದರ್ಶಿತ್ವವು, ಮುಂದೆ ಸಂಘದ ನಾಯಕತ್ವದ ಹಸ್ತಾಂತರದಲ್ಲೂ ಅತ್ಯಂತ ಸ್ಪಷ್ಟವಾಗಿ ಗೋಚರಿಸಿತು.

ನಾಯಕತ್ವದ ಹಸ್ತಾಂತರ ಮತ್ತು ಅಖಂಡತೆಯ ಮಂತ್ರ ಡಾಕ್ಟರ್‌ಜೀ ಅವರ ಸಾಂಸ್ಥಿಕ ಶಿಸ್ತು ಮತ್ತು ದೂರದೃಷ್ಟಿ ಎಷ್ಟಿತ್ತೆಂದರೆ, ತಮಗೆ ಕಾಲ ಹತ್ತಿರ ಬಂದಾಗ ಸಂಘಟನೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ಮುನ್ನೆಚ್ಚರಿಕೆ ವಹಿಸಿದ್ದರು. ತಾವು ಸ್ವರ್ಗಸ್ಥರಾಗುವ ಒಂದು ದಿನ ಮುಂಚೆ, ಅಂದರೆ ಜೂನ್ 20ರಂದು ಪ್ರಜ್ಞೆ ತಪ್ಪುವ ಮುನ್ನವೇ ಹಿರಿಯ ಪ್ರಮುಖರ ಸಮ್ಮುಖದಲ್ಲಿ ಮಾಧವ ಸದಾಶಿವ ಗೋಳವಲ್ಕರ್ (ಶ್ರೀ ಗುರೂಜಿ) ಅವರನ್ನು ಹತ್ತಿರ ಕರೆದು, 'ಇನ್ನು ಮುಂದೆ ಸಂಘದ ಜವಾಬ್ದಾರಿಯನ್ನು ನೀವೇ ವಹಿಸಿಕೊಳ್ಳಬೇಕು' ಎಂದು ಅಧಿಕೃತವಾಗಿ ಆ ಮಹೋನ್ನತ ಹೊಣೆಗಾರಿಕೆಯನ್ನು ಹಸ್ತಾಂತರಿಸಿದರು. ಈ ಮೂಲಕ ವ್ಯಕ್ತಿಗಿಂತ ಸಂಘಟನೆ, ಸಂಘಟನೆಗಿಂತ ಸಿದ್ಧಾಂತ ದೊಡ್ಡದು ಎಂಬುದನ್ನು ಅವರು ಸ್ವತಃ ತಮ್ಮ ಜೀವನದ ಮೂಲಕವೇ ಸಾಬೀತುಪಡಿಸಿದರು. ಜಗತ್ತಿನ ಬಹುತೇಕ ದೊಡ್ಡ ಸಂಸ್ಥೆಗಳು ಸಂಸ್ಥಾಪಕರ ನಿಧನದ ನಂತರ ನಾಯಕತ್ವದ ಕಲಹದಿಂದ ಒಡೆದು ಹೋಗುತ್ತವೆ. ಆದರೆ ವ್ಯಕ್ತಿ ಪೂಜೆಗೆ ಆಸ್ಪದ ನೀಡದೆ, ತತ್ವ ಪೂಜೆಗೆ (ಭಗವಾಧ್ವಜ) ಮಹತ್ವ ನೀಡಿದ ಡಾಕ್ಟರ್‌ಜೀ ಅವರ ಈ ಸುಸೂತ್ರ ನಾಯಕತ್ವದ ಹಸ್ತಾಂತರವೇ ಸಂಘದ ಅಖಂಡತೆಗೆ ಮತ್ತು ಸತತ ಬೆಳವಣಿಗೆಗೆ ಭದ್ರ ಬುನಾದಿಯಾಯಿತು. ನಾಯಕರು ಬದಲಾಗಬಹುದು, ಆದರೆ ರಾಷ್ಟ್ರಕಾರ್ಯ ನಿರಂತರವಾಗಿ ಸಾಗಬೇಕು ಎಂಬ ಸತ್ಯವನ್ನು ಇದು ಇಡೀ ಜಗತ್ತಿಗೆ ಸಾರಿತು. ಈ ಭದ್ರ ಅಡಿಪಾಯದ ಮೇಲೆಯೇ ಇಂದು ಸಂಘ ತನ್ನ ನೂರು ವರ್ಷಗಳ ಯಶೋಗಾಥೆಯನ್ನು ಬರೆದಿದೆ.

ರಾಷ್ಟ್ರಧರ್ಮದ ಶತಮಾನ

ಹೀಗೆ 1925ರ ವಿಜಯದಶಮಿಯಂದು ಕೇವಲ 15–20 ಜನ ತರುಣರೊಂದಿಗೆ ಬಿತ್ತಿದ ಆ ಸಣ್ಣ ದೇಶಪ್ರೇಮದ ಬೀಜ, ಇಂದು ಶತಮಾನದ (100 ವರ್ಷಗಳ) ಹೊಸ್ತಿಲಲ್ಲಿ ನಿಂತು ಜಗತ್ತಿನ ಅತ್ಯಂತ ದೊಡ್ಡ ಸ್ವಯಂಸೇವಾ ಸಂಸ್ಥೆಯಾಗಿ ಹೆಮ್ಮರವಾಗಿದೆ. 1940ರಲ್ಲಿ ಮರಣಶಯ್ಯೆಯಲ್ಲಿದ್ದಾಗ ಆ ಮಹಾಪುರುಷ ಉದುರಿಸಿದ ಕಣ್ಣೀರಿನ ಹನಿಗಳು ಮತ್ತು ಆಡಿದ ಮಾತುಗಳು ವ್ಯರ್ಥವಾಗಲಿಲ್ಲ ಎಂಬುದಕ್ಕೆ ಇಂದಿನ ಸಂಘದ ಜಾಗತಿಕ ವಿಸ್ತಾರವೇ ಜೀವಂತ ಸಾಕ್ಷಿಯಾಗಿದೆ. ಇಂದು ದೇಶವು ಎದುರಿಸುತ್ತಿರುವ ಆಂತರಿಕ ಭದ್ರತೆಯ ಸವಾಲುಗಳು, ಸಾಂಸ್ಕೃತಿಕ ಆಕ್ರಮಣಗಳು ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ನಡುವೆ ಡಾಕ್ಟರ್‌ಜೀ ಅವರು ಅಂದು ನೀಡಿದ 'ಸಾಮಾಜಿಕ ಒಗ್ಗಟ್ಟು, ವೈಯಕ್ತಿಕ ಶಿಸ್ತು ಮತ್ತು ರಾಷ್ಟ್ರೀಯ ಚಾರಿತ್ರ್ಯದ' ಸಂದೇಶ ಇಂದಿನ ಯುವ ಪೀಳಿಗೆಗೆ ಅತ್ಯಂತ ಅಗತ್ಯವಾಗಿದೆ. ಜಾತಿ-ಮತಗಳ ಭೇದ ಮರೆತು ರಾಷ್ಟ್ರಪ್ರೇಮದ ಅಡಿಯಲ್ಲಿ ಒಂದಾಗದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಎಂಬ ಅವರ ಎಚ್ಚರಿಕೆ ಇಂದಿಗೂ ಅಷ್ಟೇ ಪ್ರಸ್ತುತವಾಗಿದೆ ಮತ್ತು ಆ ದಾರಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸಬೇಕಾದ ನಿಜವಾದ ಗೌರವವಾಗಿದೆ.

ಅಂತಿಮವಾಗಿ ಜೂನ್ 21, 1940 ರಂದು ಡಾಕ್ಟರ್‌ಜೀ ಅವರು ಭೌತಿಕವಾಗಿ ನಮ್ಮನ್ನು ಅಗಲಿದರಾದರೂ, ಅವರು ಹಚ್ಚಿದ ರಾಷ್ಟ್ರಭಕ್ತಿಯ ಜ್ಯೋತಿ ಇಂದಿಗೂ ಕೋಟ್ಯಂತರ ಹೃದಯಗಳಲ್ಲಿ ನಿರಂತರವಾಗಿ ಬೆಳಗುತ್ತಿದೆ. ಆದ್ದರಿಂದ, ಅವರ ಪುಣ್ಯಸ್ಮರಣೆಯ ಈ ಪವಿತ್ರ ಸಂದರ್ಭದಲ್ಲಿ ನಾವು ಕೇವಲ ಭಾವನಾತ್ಮಕವಾಗಿ ಕಣ್ಣೀರು ಸುರಿಸುವುದಕ್ಕಿಂತ ಅಥವಾ ಕೇವಲ ಶಬ್ದಗಳ ಮೂಲಕ ಗೌರವ ಸಲ್ಲಿಸುವುದಕ್ಕಿಂತ, ಅವರು ನಮಗಾಗಿ ಬಿಟ್ಟುಹೋದ ತಪೋಮಯ ಸಂದೇಶವನ್ನು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ದೇಶಕ್ಕಾಗಿ ಸ್ವಾರ್ಥರಹಿತವಾಗಿ, ನಿರಹಂಕಾರದಿಂದ ಸೇವೆ ಸಲ್ಲಿಸುವುದೇ ಆ ಮಹಾ ಚೇತನಕ್ಕೆ ನಾವು ಸಲ್ಲಿಸಬಹುದಾದ ಅತ್ಯುನ್ನತ ಮತ್ತು ನಿಜವಾದ 'ಕಾರ್ಯಾಂಜಲಿ'.

ಯೋಗ: ಆರೋಗ್ಯಕರ ಸಮಾಜದ ಅಡಿಪಾಯ

ವಿಶ್ವ ಯೋಗ ದಿನಾಚರಣೆ

▶ ಡಾ. ಮೈತ್ರಿ ಭಟ್, ವಿಟ್ಲ

ವೇಗವಾಗಿ ಬದಲಾಗುತ್ತಿರುವ ಆಧುನಿಕ ಜಗತ್ತಿನಲ್ಲಿ ಮನುಷ್ಯನ ಜೀವನಶೈಲಿ, ಆಲೋಚನಾ ಕ್ರಮ ಮತ್ತು ಮೌಲ್ಯಗಳು ಗಮನಾರ್ಹವಾಗಿ ಬದಲಾಗುತ್ತಿವೆ. ತಂತ್ರಜ್ಞಾನ, ನಗರೀಕರಣ ಮತ್ತು ಜಾಗತೀಕರಣವು ಮಾನವನಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿವೆ. ಆದರೆ ಇದೇ ಸಂದರ್ಭದಲ್ಲಿ ಒತ್ತಡ, ಆತಂಕ, ಅಸಹನೆ, ಏಕಾಂಗಿತನ ಮತ್ತು ಆರೋಗ್ಯ ಸಮಸ್ಯೆಗಳೂ ಹೆಚ್ಚಾಗಿವೆ. ಜೀವನದ ಗುಣಮಟ್ಟಕ್ಕಿಂತ ಜೀವನದ ವೇಗಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಒಟ್ಟಿನಲ್ಲಿ, ಮನುಷ್ಯನ ಕೈಯಲ್ಲಿ ಎಲ್ಲ ಸೌಲಭ್ಯಗಳಿದ್ದರೂ ಮನಸ್ಸಿನಲ್ಲಿ ನೆಮ್ಮದಿ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಜ್ಞಾನಪರಂಪರೆಯ ಅಮೂಲ್ಯ ಕೊಡುಗೆಯಾದ ಯೋಗವು ಕೇವಲ ಆರೋಗ್ಯ ಸಾಧನವಲ್ಲ, ಬದುಕನ್ನು ಸಮಗ್ರವಾಗಿ ರೂಪಿಸುವ ಜೀವನದರ್ಶನವಾಗಿ ನಮ್ಮ ಮುಂದೆ ನಿಂತಿದೆ.

ಯೋಗದ ವ್ಯಾಪ್ತಿ ಬಹಳ ವಿಶಾಲವಾಗಿದೆ. ಯೋಗವೆಂದರೆ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ನಡುವೆ ಸಮನ್ವಯ ಸಾಧಿಸುವ ಪ್ರಕ್ರಿಯೆ. ವ್ಯಕ್ತಿಯ ಒಳಜಗತ್ತು(ಅಂತರಂಗ) ಮತ್ತು ಹೊರಜಗತ್ತಿನ(ಬಹಿರಂಗ) ನಡುವೆ ಸಾಮರಸ್ಯವನ್ನು ನಿರ್ಮಿಸುವ ಮಾರ್ಗ.

ಮನುಷ್ಯನ ಜೀವನದಲ್ಲಿ ದೈಹಿಕ ಆರೋಗ್ಯ ಎಷ್ಟು ಮುಖ್ಯವೋ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವೂ ಅಷ್ಟೇ ಮುಖ್ಯ. ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ನೆಲೆಸುತ್ತದೆ ಎನ್ನುವುದು ಸತ್ಯ. ಆದರೆ ಮನಸ್ಸಿನ ನೆಮ್ಮದಿ ಇಲ್ಲದಿದ್ದರೆ ದೇಹದ ಆರೋಗ್ಯವೂ ದೀರ್ಘಕಾಲ ಉಳಿಯುವುದಿಲ್ಲ. ಆದ್ದರಿಂದ ಯೋಗವು ಕೇವಲ ದೇಹವನ್ನು ಬಲಪಡಿಸುವುದಲ್ಲ; ಮನಸ್ಸನ್ನು ಸ್ಥಿರಗೊಳಿಸುವುದನ್ನೂ ಕಲಿಸುತ್ತದೆ.

ಯೋಗಾಭ್ಯಾಸ ದೇಹದ ಪ್ರತಿಯೊಂದು ಅಂಗಕ್ಕೂ ಚೈತನ್ಯವನ್ನು ತುಂಬಿ ರಕ್ತಪರಿಚಲನೆಯನ್ನು ಸುಧಾರಿಸುತ್ತದೆ. ಉಸಿರಾಟ ವ್ಯವಸ್ಥೆ ಪರಿಣಾಮಕಾರಿಯಾಗಿ, ಸ್ನಾಯುಗಳು ಮತ್ತು ಕೀಲುಗಳು ಚುರುಕಾಗುತ್ತವೆ. ದೇಹದ ಸಮತೋಲನ ಮತ್ತು ಲವಲವಿಕೆ ಹೆಚ್ಚುತ್ತದೆ. ಇದರಿಂದ ವ್ಯಕ್ತಿಯಲ್ಲಿ ಉತ್ಸಾಹ, ಆತ್ಮವಿಶ್ವಾಸ ಮತ್ತು ಚೈತನ್ಯ ವೃದ್ಧಿಯಾಗುತ್ತದೆ.

ಇಂದಿನ ಸಮಾಜದಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ಪರೀಕ್ಷೆಯ ಒತ್ತಡದಿಂದ ಬಳಲುವ ವಿದ್ಯಾರ್ಥಿಗಳು, ಉದ್ಯೋಗದ ಅನಿಶ್ಚಿತತೆಯಿಂದ ಆತಂಕದಲ್ಲಿರುವ ಯುವಕರು, ಕೆಲಸದ ಒತ್ತಡದಲ್ಲಿ ಬದುಕುತ್ತಿರುವ ವೃತ್ತಿಪರರು ಮತ್ತು ಏಕಾಂಗಿತನದಿಂದ ನರಳುತ್ತಿರುವ ಹಿರಿಯರು ಎಲ್ಲಾ ವರ್ಗದ ಜನರ ಬದುಕಿನಲ್ಲೂ ಒತ್ತಡ ಪ್ರಮುಖ ಸಮಸ್ಯೆಯಾಗಿದೆ. ಇಂತಹ ಸಂದರ್ಭದಲ್ಲಿ ಯೋಗವು ಮನಸ್ಸಿಗೆ ವಿಶ್ರಾಂತಿಯನ್ನು ನೀಡುತ್ತದೆ. ಪ್ರಾಣಾಯಾಮ ಮತ್ತು ಧ್ಯಾನ ಮನಸ್ಸಿನ ಅಶಾಂತತೆಯನ್ನು ಶಮನಗೊಳಿಸಿ, ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಬೆಳೆಸುತ್ತವೆ.

ಯೋಗಾಭ್ಯಾಸ ಮಾಡುವವರು ಸಾಮಾನ್ಯವಾಗಿ ಹೆಚ್ಚು ಸಮಚಿತ್ತತೆ, ಸಹನೆ ಮತ್ತು ಧೈರ್ಯವನ್ನು ಹೊಂದಿರುತ್ತಾರೆ ಎಂಬುದು ಅನೇಕ ಅಧ್ಯಯನಗಳಿಂದಲೂ ತಿಳಿದುಬಂದಿದೆ. ಕೋಪ, ಆತಂಕ ಮತ್ತು ಭಯದಂತಹ ನಕಾರಾತ್ಮಕ ಭಾವನೆಗಳನ್ನು ನಿಯಂತ್ರಿಸಲು ಯೋಗವು ಸಹಕಾರಿಯಾಗಿದೆ.

ಯೋಗದ ಮಹತ್ವ ಅದರ ದೈಹಿಕ ಪ್ರಯೋಜನಗಳಲ್ಲಿ ಮಾತ್ರ ಸೀಮಿತವಾಗಿಲ್ಲ. ಅದು ಮೌಲ್ಯಯುತ ಬದುಕಿನತ್ತ ಕರೆದೊಯ್ಯುವ ಮಾರ್ಗವೂ ಆಗಿದೆ. ಪತಂಜಲಿಯ ಅಷ್ಟಾಂಗ ಯೋಗದಲ್ಲಿ ಯಮ ಮತ್ತು ನಿಯಮಗಳಿಗೆ ವಿಶೇಷ ಸ್ಥಾನವಿದೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಯಮಗಳು ವ್ಯಕ್ತಿಯ ಸಾಮಾಜಿಕ ನಡವಳಿಕೆಯನ್ನು ಶುದ್ಧಗೊಳಿಸುತ್ತವೆ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಪ್ರಣಿಧಾನ ಎಂಬ ನಿಯಮಗಳು ವ್ಯಕ್ತಿಯ ಆಂತರಿಕ ಬೆಳವಣಿಗೆಗೆ ನೆರವಾಗುತ್ತವೆ. ಇವು ಕೇವಲ ಯೋಗಾಭ್ಯಾಸಿಗಳಿಗೆ ಮಾತ್ರವಲ್ಲ, ಪ್ರತಿಯೊಬ್ಬ ಮಾನವನಿಗೂ ಅಗತ್ಯವಾದ ಸಾರ್ವಕಾಲಿಕ ಜೀವನಮೌಲ್ಯಗಳಾಗಿವೆ. ಸಮಾಜದಲ್ಲಿ ಹೆಚ್ಚುತ್ತಿರುವ ಅಸಹನೆ, ಹಿಂಸೆ, ಭ್ರಷ್ಟಾಚಾರ ಮತ್ತು ಸ್ವಾರ್ಥದ ಮನೋಭಾವಗಳಿಗೆ ಪರಿಹಾರ ಹುಡುಕಬೇಕಾದರೆ ಈ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ.

ಜೀವನ ಎಂದಿಗೂ ಒಂದೇ ರೀತಿಯಲ್ಲಿರುವುದಿಲ್ಲ. ಸುಖ ಮತ್ತು ದುಃಖ, ಯಶಸ್ಸು ಮತ್ತು ವೈಫಲ್ಯ, ಲಾಭ ಮತ್ತು ನಷ್ಟಗಳು ಜೀವನದ ಅವಿಭಾಜ್ಯ ಭಾಗಗಳು. ಆದರೆ ಈ ಎಲ್ಲ ಸಂದರ್ಭಗಳನ್ನು ಸಮಭಾವದಿಂದ ಸ್ವೀಕರಿಸುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಯೋಗವು ವ್ಯಕ್ತಿಗೆ ಸಮಚಿತ್ತತೆಯನ್ನು ಕಲಿಸುತ್ತದೆ. ಪರಿಸ್ಥಿತಿ ಹೇಗೇ ಇದ್ದರೂ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಳ್ಳುವ ಶಕ್ತಿಯನ್ನು ನೀಡುತ್ತದೆ.

ಇಂದಿನ ಮಾಹಿತಿ ಯುಗದಲ್ಲಿ ಪ್ರತಿದಿನ ಸಾವಿರಾರು ಮಾಹಿತಿಗಳು ನಮ್ಮನ್ನು ತಲುಪುತ್ತಿವೆ. ಆದರೆ ಮಾಹಿತಿಯ ಹೆಚ್ಚಳವೇ ಜ್ಞಾನವಲ್ಲ. ನಿಜವಾದ ಜ್ಞಾನವು ಅನುಭವ ಮತ್ತು ಆತ್ಮಾವಲೋಕನದಿಂದ ರೂಪುಗೊಳ್ಳುತ್ತದೆ. ಯೋಗವು ಈ ಪ್ರಕ್ರಿಯೆಗೆ ನೆರವಾಗುತ್ತದೆ. ಅದು ವ್ಯಕ್ತಿಯ ಗಮನ, ಏಕಾಗ್ರತೆ ಮತ್ತು ಆತ್ಮಜಾಗೃತಿಯನ್ನು ಹೆಚ್ಚಿಸುತ್ತದೆ. ತನ್ನನ್ನು ತಾನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಅಂತಃದೃಷ್ಟಿ ಮತ್ತು ಪ್ರಜ್ಞೆ ಬೆಳೆಯುವಾಗ ಜೀವನದ ಕುರಿತು ಆಳವಾದ ಅರಿವು ಮೂಡುತ್ತದೆ. ಈ ಅರಿವೇ ವ್ಯಕ್ತಿಯನ್ನು ಹೆಚ್ಚು ಪ್ರಬುದ್ಧನನ್ನಾಗಿಸುತ್ತದೆ.

ಯೋಗದ ಪ್ರಯೋಜನಗಳು ಕೇವಲ ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗಿಲ್ಲ. ಆರೋಗ್ಯವಂತ ವ್ಯಕ್ತಿಗಳಿಂದ ಆರೋಗ್ಯವಂತ ಕುಟುಂಬಗಳು ನಿರ್ಮಾಣವಾಗುತ್ತವೆ. ಆರೋಗ್ಯವಂತ ಕುಟುಂಬಗಳಿಂದ ಸದೃಢ ಸಮಾಜ ರೂಪುಗೊಳ್ಳುತ್ತದೆ. ಯೋಗವನ್ನು ಜೀವನಶೈಲಿಯ ಭಾಗವನ್ನಾಗಿ ಮಾಡಿಕೊಂಡ ಸಮಾಜದಲ್ಲಿ ಶಿಸ್ತು, ಸಹಕಾರ, ಸಹಾನುಭೂತಿ ಮತ್ತು ಸಮತೋಲನ ಹೆಚ್ಚಾಗುತ್ತದೆ. ಮಾನಸಿಕ ಆರೋಗ್ಯ ಸುಧಾರಣೆಗೊಳ್ಳುತ್ತದೆ.

ಪ್ರತಿದಿನ ಸ್ವಲ್ಪ ಸಮಯವನ್ನು ಯೋಗಕ್ಕೆ ಮೀಸಲಿಟ್ಟರೆ ದೇಹ ಆರೋಗ್ಯಕರವಾಗುತ್ತದೆ, ಮನಸ್ಸು ಪ್ರಶಾಂತವಾಗುತ್ತದೆ ಮತ್ತು ಬದುಕು ಸಮತೋಲನದಿಂದ ಕೂಡಿರುತ್ತದೆ. ಯೋಗವು ಕೇವಲ ಆರೋಗ್ಯದ ಸಾಧನವಲ್ಲ; ಅದು ಸುಂದರ, ಸಾರ್ಥಕ ಮತ್ತು ಸಮೃದ್ಧ ಬದುಕಿನತ್ತ ಕರೆದೊಯ್ಯುವ ಸೋಪಾನ. ಯೋಗವನ್ನು ಒಂದು ದಿನದ ಆಚರಣೆಯಾಗಿ ಅಲ್ಲ, ಪ್ರತಿದಿನದ ಬದುಕಿನ ಭಾಗವಾಗಿ ಅಳವಡಿಸಿಕೊಂಡಾಗ ಮಾತ್ರ ಅದರ ನಿಜವಾದ ಅರ್ಥ ಮತ್ತು ಮಹತ್ವವನ್ನು ಅನುಭವಿಸಲು ಸಾಧ್ಯ.

ಆಕ್ಷೇಪ ಬೆನ್ನಲ್ಲೇ ಎನ್‌ಟಿಎ ಸ್ಪಷ್ಟನೆ

ಅಬುದಾಬಿ ಆಯ್ಕೆ ವಿದ್ಯಾರ್ಥಿಯದ್ದೇ

• **ನಾಗ್ಪುರ:** ನೀಟ್-ಯುಜಿ ಮರುಪರೀಕ್ಷೆಗೆ ಇಲ್ಲಿನ ವಿದ್ಯಾರ್ಥಿಯೊಬ್ಬರಿಗೆ ಯುಎಇಯ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರ ನೀಡಲಾಗಿದೆ ಎಂಬ ಸುದ್ದಿ ತಿರುವು ಪಡೆದಿದ್ದು, ಈ ಪರೀಕ್ಷಾ ಕೇಂದ್ರವನ್ನು ಸ್ವತಃ ವಿದ್ಯಾರ್ಥಿಯೇ ಆಯ್ಕೆ ಮಾಡಿಕೊಂಡಿದ್ದಾನೆ ಎಂದು ಎನ್‌ಟಿಎ ಹೇಳಿದೆ.

ಶನಿವಾರ ಬೆಳಗ್ಗೆ ಈ ಸಂಬಂಧ ವಿದ್ಯಾರ್ಥಿಯ ಕುಟುಂಬಸ್ಥರು ಆಕ್ಷೇಪವೆತ್ತಿದ್ದರು. ಬಳಿಕ ತಾಂತ್ರಿಕ ದೋಷದಿಂದ ಹೀಗಾಗಿರಬೇಕು ಎಂದು ಎನ್‌ಟಿಎ ಸರಿಪಡಿಸಿ, ನಾಗ್ಪುರಕ್ಕೇ ಬದಲು ಮಾಡಿತ್ತು. ಜತೆಗೆ, ತಾಂತ್ರಿಕ ದೋಷ ಎಲ್ಲಿ ಆಗಿರಬಹುದು ಎಂಬ ಶೋಧಕ್ಕಿಳಿದಾಗ ಸ್ವತಃ ವಿದ್ಯಾರ್ಥಿ ಆಯ್ಕೆ ಮಾಡಿಕೊಂಡಿರುವುದು ಗೊತ್ತಾಗಿದೆ.

ಈ ಮೊದಲು ಪ್ರತಿಕ್ರಿಯೆ ನೀಡಿದ್ದ ವಿದ್ಯಾರ್ಥಿಯತಂದೆ ಡಾ. ಮೊಹಮ್ಮದ್ ತಾಲಿಬ್, ಪ್ರವೇಶಪತ್ರದಲ್ಲಿ ಅಬುಧಾಬಿ ಕೇಂದ್ರ ಕಂಡು ತೀವ್ರ ಆತಂಕಕ್ಕೊಳಗಾಗಿದ್ದೆವು. ಇದೀಗ ಕೇಂದ್ರ ಬದಲಾಯಿಸಿರುವುದರಿಂದ ನೆಮ್ಮದಿ ದೊರೆತಿದೆ. ಆದರೆ ಈ ಗೊಂದಲದಿಂದ ಮಗ ಒತ್ತಡಕ್ಕೆ ಒಳಗಾಗಿದ್ದು, ಪರೀಕ್ಷೆಗೆ ಹಾಜರಾಗಲು ಹಿಂದೇಟು ಹಾಕುತ್ತಿದ್ದಾನೆ ಎಂದಿದ್ದರು.

ಅಭ್ಯರ್ಥಿಯ ಖಾತೆಯಿಂದಲೇ ಬದಲಾವಣೆ: ಸಂಸ್ಥೆ: ವಿದ್ಯಾರ್ಥಿಯ ನೋಂದಾಯಿತ ಖಾತೆಯ ಮೂಲಕವೇ ಪರೀಕ್ಷಾ ನಗರವನ್ನು ಅಬುಧಾಬಿಗೆ ಬದಲಾಯಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸ್ಪಷ್ಟಪಡಿಸಿದೆ. ತಿದ್ದುಪಡಿ ಅವಧಿಯಲ್ಲಿ ಅಭ್ಯರ್ಥಿಯ ಖಾತೆಯಿಂದ ಏಕರೂಪದ ಬಳಕೆ ದಾಖಲಾಗಿದ್ದು, ಅಬುಧಾಬಿ ಕೇಂದ್ರವನ್ನು ಆಯ್ಕೆ ಮಾಡಲಾಗಿದೆ. ಬಳಿಕ ಎರಡು ಬಾರಿ ಪ್ರವೇಶಪತ್ರದ ಪೂರ್ವವೀಕ್ಷಣೆಯನ್ನೂ ಮಾಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ಪರೀಕ್ಷೆಗೆ ಕೇವಲ 48 ಗಂಟೆಗಳು ಬಾಕಿ ಇದ್ದಾಗ ಜೂ.19ರ ಸಂಜೆ ಕೇಂದ್ರವನ್ನು ನಾಗ್ಪುರಕ್ಕೆ ಬದಲಿಸುವಂತೆ ಅನೌಪಚಾರಿಕ ಮನವಿ ಬಂದಿತ್ತು. ಅಭ್ಯರ್ಥಿಯ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಂಡು, ಕುಟುಂಬವನ್ನು ಸಂಪರ್ಕಿಸಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ಸಂಸ್ಥೆ ಹೇಳಿದೆ.



ವಿದ್ಯಾರ್ಥಿಯೇ ಮೊದಲ ಆದ್ಯತೆ: ಆಡಳಿತಾತ್ಮಕ ಗೊಂದಲದಿಂದ ಯಾವುದೇ ಅಭ್ಯರ್ಥಿ ಪರೀಕ್ಷೆಯಿಂದ ವಂಚಿತರಾಗಬಾರದು ಎಂಬುದು ಸಂಸ್ಥೆಯ ಆದ್ಯತೆಯಾಗಿದೆ. ಇದೇ ಕಾರಣಕ್ಕೆ ಅಭ್ಯರ್ಥಿಯ ಮನವಿಯಂತೆ ಕೊನೆಯ ಕ್ಷಣದಲ್ಲೂ ಕೇಂದ್ರವನ್ನು ಬದಲಾಯಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹೇಳಿದೆ.

ದೇಶದೆಲ್ಲೆಡೆ ನೀಟ್ ಮಾಕ್ ಡ್ರಿಲ್ ಯಶಸ್ವಿ: ನೀಟ್(ಯುಜಿ) 2026 ಮರುಪರೀಕ್ಷೆ ಹಿನ್ನೆಲೆ ಎನ್‌ಟಿಎ ದೇಶದೆಲ್ಲೆಡೆ ನೀಟ್ ಮರುಪರೀಕ್ಷೆಯ ಪೂರ್ವಾಭ್ಯಾಸ(ಮಾಕ್ ಡ್ರಿಲ್) ಅನ್ನು ಶನಿವಾರ ಆಯೋಜಿಸಿತು. ನೀಟ್ ಮರುಪರೀಕ್ಷೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ನಡೆಸಲಾಗಿದ್ದು, ಸುರಕ್ಷಾ ವ್ಯವಸ್ಥೆಯಲ್ಲಿ ಲೋಪಗಳಿದ್ದರೆ ಸರಿಪಡಿಸುವ ಉದ್ದೇಶದಿಂದ ಮಾಕ್ ಡ್ರಿಲ್ ನಡೆಸಲಾಗಿದೆ.

ಮಾಕ್ ಡ್ರಿಲ್ ವೇಳೆ ಪ್ರಶ್ನೆಪತ್ರಿಕೆ ಸಾಗಣೆ, ಪರೀಕ್ಷಾರ್ಥಿಗಳ ತಪಾಸಣೆ, ಸಿಸಿಟಿವಿ ಮತ್ತು ಕಣ್ಗಾವಲು ವ್ಯವಸ್ಥೆ, ಸುರಕ್ಷತೆ, ಮರುಪರೀಕ್ಷೆಗೆ ಪರೀಕ್ಷಾ ಕೇಂದ್ರಗಳ ಸನ್ನದ್ಧತೆ ಇತ್ಯಾದಿ ಪರಿಶೀಲನೆಗಳನ್ನು ನಡೆಸಲಾಯಿತು. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷೆಗೆ ಕುಳಿತುಕೊಳ್ಳುವ ಸ್ಥಳ, ದಾಖಲೆಗಳ ತಪಾಸಣೆ ಪ್ರಕ್ರಿಯೆ ಮತ್ತು ಸುರಕ್ಷಾ ವ್ಯವಸ್ಥೆಗಳ ಪರಿಶೀಲನೆ ನಡೆಸಲಾಯಿತು. ಎನ್‌ಟಿಎ ಅಧಿಕಾರಿಗಳು, ಜಿಲ್ಲಾಡಳಿತ, ಪೊಲೀಸರು ಹಾಗೂ ಸಿಎಪಿಎಫ್ ಸಿಬ್ಬಂದಿ ನಡುವಿನ ಸಮನ್ವಯ ಪರೀಕ್ಷಿಸಲಾಯಿತು.

ಶ್ರೀರಾಮನ ಪ್ರತಿಮೆ ಅಪವಿತ್ರ ಢಾಕಾದಲ್ಲಿ ತೀವ್ರ ಪ್ರತಿಭಟನೆ

• **ಢಾಕಾ:** ಬಾಂಗ್ಲಾದೇಶದಲ್ಲಿ ಭಗವಾನ್ ಶ್ರೀ ರಾಮನ ಮೂರ್ತಿಯನ್ನು ಅಪವಿತ್ರಗೊಳಿಸಿದ ಘಟನೆಸಂಭವಿಸಿದ್ದು, ಹಿಂದುಸಮುದಾಯದವರು ರಾಜಧಾನಿ ಢಾಕಾದಲ್ಲಿ ಭಾರಿ ಪ್ರತಿಭಟನೆ ನಡೆಸಿದ್ದಾರೆ. ಅದೇ ರೀತಿ ಗೈಬಂಧ ಜಿಲ್ಲೆಯಲ್ಲಿ 81 ಅಡಿ ಎತ್ತರದ ಶ್ರೀ ರಾಮನ ಪ್ರತಿಮೆ ನಿರ್ಮಾಣ ಯೋಜನೆಯನ್ನು ಸ್ಥಗಿತಗೊಳಿಸಿರುವುದನ್ನು ವಿರೋಧಿಸಿ ಹಿಂದು ಸಂಘಟನೆಗಳು ರಾಜಧಾನಿ ಹಾಗೂ ದೇಶದ ವಿವಿಧೆಡೆ ಬೃಹತ್ ಪ್ರತಿಭಟನೆ ನಡೆಸಿದೆ.

ಸ್ಥಗಿತಗೊಂಡ ಪ್ರತಿಮೆ ಯೋಜನೆ: ಉತ್ತರ ಗೈಬಂಧ ಜಿಲ್ಲೆಯ ಪಲಾಶ್‌ಬಾರಿಯಲ್ಲಿ ನಿರ್ಮಾಣವಾಗುತ್ತಿರುವ ಪ್ರತಿಮೆಯ ಸುತ್ತ ಈ ವಿವಾದಕೇಂದ್ರಿಕೃತವಾಗಿದೆ. ಈಯೋಜನೆ, ಶ್ರೀಕೃಷ್ಣ ಮತ್ತು ಶಿವನ ಪ್ರತಿಮೆಗಳನ್ನು ಒಳಗೊಂಡಿರುವ ದೇವಾಲಯದ ಸಂಕೀರ್ಣದ ಭಾಗವಾಗಿದೆ. ಶೇ.80 ಕಾಮಗಾರಿ ಪೂರ್ಣಗೊಂಡಿದ್ದರೂ, ಇಸ್ಲಾಮಿಕ್ ಸಂಘಟನೆಗಳಿಂದ ಬೆದರಿಕೆ ಬಂದ ಹಿನ್ನೆಲೆಯಲ್ಲಿ ದೇವಾಲಯದ ಅಧಿಕಾರಿಗಳು ನಿರ್ಮಾಣವನ್ನು ಸ್ಥಗಿತಗೊಳಿಸಿದ್ದಾರೆ.

ಜಾಗತಿಕ ಸ್ವಾಸ್ಥ್ಯದ ಕಡೆಗೆ ಹೆಜ್ಜೆ

ಅಂತಾರಾಷ್ಟ್ರೀಯ ಯೋಗ ದಿನವನ್ನು ಇಂದು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಈ ಪ್ರಾಚೀನ ಭಾರತೀಯ ಪದ್ಧತಿಯನ್ನು ಸಂಭ್ರಮಿಸಲು ಲಕ್ಷಾಂತರ ಜನರು ಒಂದಾಗಲಿದ್ದಾರೆ. ಯೋಗದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಜನರು ತಮ್ಮ ದೈನಂದಿನ ಜೀವನದಲ್ಲಿ ಇದನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಈ ವಾರ್ಷಿಕ ಆಚರಣೆಯ ಮುಖ್ಯ ಉದ್ದೇಶ. ಜಗತ್ತಿನಲ್ಲಿ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಆರೋಗ್ಯ ಸವಾಲುಗಳನ್ನು ಎದುರಿಸಲು ಯೋಗ ಒಂದು ಪ್ರಮುಖ ಸಾಧನ ಎಂದು ಸಾಬೀತಾಗುತ್ತಲೇ ಬಂದಿದೆ.

ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿಕ್ರಿಯೆ

ಈ ಆಚರಣೆಗೆ ಜಾಗತಿಕ ಮಟ್ಟದಲ್ಲಿ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಯೋಗ ದಿನಾಚರಣೆ ವಿವಿಧ ಖಂಡಗಳು ಮತ್ತು ದೇಶಗಳಾಚೆಗೆ ವಿಸ್ತರಿಸಿವೆ. ನಿಯಮಿತ ದೈಹಿಕ-ಮಾನಸಿಕ ವ್ಯಾಯಾಮದ ಜಂಟಿ ಗುರಿಯಡಿಯಲ್ಲಿ ಅಂತಾರಾಷ್ಟ್ರೀಯ ಸಮುದಾಯಗಳನ್ನು ಒಂದುಗೂಡಿಸಲು ಸುಮಾರು 175 ದೇಶಗಳಲ್ಲಿ ಏಕಕಾಲೀನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ಐಸಿಸಿಆರ್) ಸಂಘಟಿತ ಕಾರ್ಯಾಚರಣೆಗಳ ಮೂಲಕ, ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ಪ್ರಾದೇಶಿಕ ಯೋಗ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿವೆ. ಈ ಪ್ರಯತ್ನಗಳ ಫಲವಾಗಿ ಜಗತ್ತಿನಾದ್ಯಂತ ಸುಮಾರು 2,500 ಸ್ಥಳಗಳಲ್ಲಿ ಸಕ್ರಿಯ ಆಚರಣೆಗಳು ನಡೆಯುತ್ತಿವೆ. ಈ ವ್ಯಾಪಕ ಅಂತಾರಾಷ್ಟ್ರೀಯ ಸ್ಪಂದನೆ, ಭಾರತದ ಐತಿಹಾಸಿಕ ಜ್ಞಾನದಲ್ಲಿ ಬೇರೂರಿರುವ ಪದ್ಧತಿಯೊಂದು ದೈನಂದಿನ ರೋಗ ತಡೆಗಟ್ಟುವಿಕೆ ಮತ್ತು ಸ್ವಾಸ್ಥ್ಯಕ್ಕಾಗಿ ಅತ್ಯಂತ ಪ್ರಾಯೋಗಿಕ ಜಾಗತಿಕ ಚಳುವಳಿಯಾಗಿ ಹೇಗೆ ರೂಪುಗೊಂಡಿದೆ ಎಂಬುದನ್ನು ತೋರಿಸುತ್ತದೆ.



ಆರೋಗ್ಯಕರ ವೃದ್ಧಾಪ್ಯದ ಧ್ಯೇಯವಾಕ್ಯ

2026ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಧಿಕೃತ ಧ್ಯೇಯವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ (ಯೋಗ ಫಾರ್ ಹೆಲ್ತಿ ಏಜಿಂಗ್). ಜಗತ್ತಿನಾದ್ಯಂತ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಅವರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಜಾಗತಿಕ ಅಗತ್ಯವನ್ನು ಈ ಧ್ಯೇಯವಾಕ್ಯ ತಿಳಿಸುತ್ತದೆ. ದೀರ್ಘಾಯುಷ್ಯ, ಚಟುವಟಿಕೆ, ದೃಢತೆ, ಮತ್ತು ರೋಗನಿರೋಧಕ ಆರೋಗ್ಯ ರಕ್ಷಣೆಯನ್ನು ಹೆಚ್ಚಿಸುವಲ್ಲಿ ಯೋಗದ ಪಾತ್ರದ ಬಗ್ಗೆ ಜಾಗೃತಿ ಮೂಡಿಸಲು ಈ ಸಲದ ಆಚರಣೆ ಪ್ರಯತ್ನಿಸಲಿದೆ.

ಸಾಮರಸ್ಯ, ಆರೋಗ್ಯ

ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಉದ್ಭವಿಸಿದ ಯೋಗ, ಮಾನವನ ಮನಸ್ಸು ಮತ್ತು ದೇಹದ ನಡುವೆ ಸಂಪೂರ್ಣ ಸಾಮರಸ್ಯವನ್ನು ಸೃಷ್ಟಿಸಲು ವಿನ್ಯಾಸಗೊಳಿಸಲಾದ ಸಮಗ್ರ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ಅಭ್ಯಾಸ, ದೈಹಿಕ ಭಂಗಿಗಳು, ಉಸಿರಾಟದ ವ್ಯಾಯಾಮಗಳು, ಧ್ಯಾನ ಮತ್ತು ನಿಖರವಾದ ಜಾಗೃತಿಯ ತಂತ್ರಗಳನ್ನು ರಚನಾತ್ಮಕವಾಗಿ ಸಂಯೋಜಿಸುತ್ತದೆ. ದೇಹದ ಉತ್ತಮ ಸಮತೋಲನ ಮತ್ತು ಸುಧಾರಿತ ಏಕಾಗ್ರತೆ ಸೇರಿದಂತೆ ದಾಖಲಿತ ದೈಹಿಕ ಪ್ರಯೋಜನಗಳ ಬಗ್ಗೆ ಜನರಿಗೆ ಶಿಕ್ಷಣ ನೀಡಲು ಈ ಜಾಗತಿಕ ವೇದಿಕೆ ಸಹಾಯ ಮಾಡುತ್ತದೆ. ಮೇಲಾಗಿ, ನಿಯಮಿತ ಅಭ್ಯಾಸ ದೈನಂದಿನ ಒತ್ತಡ ನಿರ್ವಹಣೆಗೆ ಹಲವು ರೀತಿಯ ಪರಿಹಾರಗಳನ್ನು ಒದಗಿಸುತ್ತದೆ, ವ್ಯಕ್ತಿಗಳು ರೋಗ ಬಂದ ನಂತರ ಚಿಕಿತ್ಸೆ ಪಡೆಯುವ ಬದಲಿಗೆ ರೋಗನಿರೋಧಕ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಲು ಸಹಾಯ ಮಾಡುತ್ತದೆ.



ಮಾನಸಿಕ ಸ್ವಾಸ್ಥ್ಯ

ಕೇವಲ ದೈಹಿಕ ಸಾಮರ್ಥ್ಯವನ್ನು ಮೀರಿ, ಯೋಗ ಭಾವನಾತ್ಮಕ ಮತ್ತು ಮಾನಸಿಕ ಸ್ಥಿರತೆಗೆ ಅತ್ಯಗತ್ಯ ಸಾಧನ ವಾಗಿ ಕಾರ್ಯ ನಿರ್ವಹಿಸುತ್ತದೆ. ಆಧುನಿಕ ಸಾಮಾಜಿಕ ಒತ್ತಡಗಳ ನಡುವೆ ದೈನಂದಿನ ಒತ್ತಡವನ್ನು ಕಡಿಮೆ ಮಾಡಲು, ಆಂತರಿಕ ಸ್ವಯಂ ಜಾಗೃತಿಯನ್ನು ಹೆಚ್ಚಿಸಲು ಮತ್ತು ಆಂತರಿಕ ಭಾವನಾತ್ಮಕ ಸಮತೋಲ ನವನ್ನು ಕಾಯ್ದುಕೊಳ್ಳಲು ಯೋಗಾಭ್ಯಾಸಿಗಳು ಈ ತಂತ್ರವನ್ನು ಬಳಸುತ್ತಾರೆ.

ಜಾಗತಿಕ ಆಚರಣೆಗಳ ವಿಸ್ತರಣೆ

ಇಂದು ಜಗತ್ತಿನಾದ್ಯಂತ ಸಾಮೂಹಿಕ ಯೋಗ ಅವಧಿಗಳು, ಶೈಕ್ಷಣಿಕ ಕಾರ್ಯಾಗಾರಗಳು, ಸಮುದಾಯ ಅಭಿಯಾನಗಳು ಮತ್ತು ಸ್ವಾಸ್ಥ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸರ್ಕಾರಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು ಮತ್ತು ಸ್ವತಂತ್ರ ಯೋಗ ತರಬೇತುದಾರರು ಸಕ್ರಿಯ ಜೀವನದ ಮೌಲ್ಯವನ್ನು ಉತ್ತೇಜಿಸಲು ಕೈಜೋಡಿಸಿದ್ದಾರೆ. ಎಲ್ಲಾ ವಯೋಮಾನದ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಸಾರ್ವಜನಿಕ ಸ್ಥಳಗಳು, ಶಾಲೆಗಳು, ಕಚೇರಿಗಳು ಮತ್ತು ಉದ್ಯಾನವನಗಳಲ್ಲಿ ಮುಕ್ತ ಯೋಗ ಅವಧಿಗಳನ್ನು ಆಯೋಜಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳು ಯೋಗದ ವ್ಯಾಪಕ ಸಾಂಸ್ಕೃತಿಕ ಸ್ವೀಕಾರ ಮತ್ತು ಬೆಳೆಯುತ್ತಿರುವ ಅಂತಾರಾಷ್ಟ್ರೀಯ ಆಕರ್ಷಣೆಯನ್ನು ತೋರಿಸುತ್ತದೆ.

ಯೋಗದ ಹಬ್ಬ

12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಇಂದು ದೇಶಾದ್ಯಂತ ''ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'' ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಡೆಹ್ರಾಡೂನ್‌ನಲ್ಲಿ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೋಲ್ಕತ್ತಾದ ರೆಡ್ ರೋಡ್‌ನಲ್ಲಿ ರಾಷ್ಟ್ರೀಯ ಕಾರ್ಯಕ್ರಮಕ್ಕೆ ನೇತೃತ್ವ ವಹಿಸಲಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಲಡಾಖ್‌ನಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಆಯುಷ್ ಸಚಿವಾಲಯ, ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಸುವಂತೆ ಸೂಚಿಸಿದೆ.

ಇತಿಹಾಸ ಮತ್ತು ಮೂಲ

ಯೋಗಕ್ಕಾಗಿ ಪ್ರತ್ಯೇಕ ಜಾಗತಿಕ ದಿನವನ್ನು ಮೀಸಲಿಡುವ ಕಲ್ಪನೆ ಸೆಪ್ಟೆಂಬರ್ 2014ರಲ್ಲಿ ಪ್ರಾರಂಭವಾಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಈ ಪರಿಕಲ್ಪನೆಯನ್ನು ಅಧಿಕೃತವಾಗಿ ಪ್ರಸ್ತಾಪಿಸಿದರು. ಈ ಪ್ರಸ್ತಾಪಕ್ಕೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಂದ ತಕ್ಷಣದ ಮತ್ತು ಅಭೂತಪೂರ್ವ ಬೆಂಬಲ ದೊರೆಯಿತು. ಈ ಒಮ್ಮತದ ಫಲವಾಗಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಡಿಸೆಂಬರ್ 2014ರಲ್ಲಿ ಅಧಿಕೃತ ನಿರ್ಣಯವನ್ನು ಅಂಗೀಕರಿಸಿ, ಜೂನ್ 21 ರನ್ನು ಅಂತರರಾಷ್ಟ್ರೀಯ ಯೋಗ ದಿನ ಎಂದು ಘೋಷಿಸಿತು. ಆಯ್ದ ದಿನಾಂಕ ಸಾಂಸ್ಕೃತಿಕ ಮಹತ್ವ ಹೊಂದಿದೆ, ಏಕೆಂದರೆ ಇದು ಉತ್ತರ ಗೋಳಾರ್ಧದಲ್ಲಿ ಬೇಸಿಗೆ ಅಯನ ಸಂಕ್ರಾಂತಿಯೊಂದಿಗೆ ಹೊಂದಿಕೆಯಾಗುತ್ತದೆ. ಇದು ಕ್ಯಾಲೆಂಡರ್ ವರ್ಷದ ಅತಿ ಉದ್ದದ ದಿನವೂ ಹೌದು. ಈ ನಿರ್ಣಯದ ನಂತರ, ಉದ್ಘಾಟನಾ ಅಂತಾರಾಷ್ಟ್ರೀಯ ಯೋಗ ದಿನವನ್ನು ಜೂನ್ 21, 2015 ರಂದು ಆಚರಿಸಲಾಯಿತು. ಇದು ಪ್ರಪಂಚದಾದ್ಯಂತ ಏಕಕಾಲೀನ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಆ ಮೊದಲ ಸಾಮೂಹಿಕ ಆಚರಣೆಯ ನಂತರ, ವಾರ್ಷಿಕ ಆಚರಣೆ ಜಗತ್ತಿನ ಅತಿ ದೊಡ್ಡ ಸ್ವಾಸ್ಥ್ಯ ಯೋಜನೆಗಳಲ್ಲಿ ಒಂದಾಗಿ ಅಪೂರ್ವ ಯಶಸ್ಸು ಕಂಡಿದೆ.

ಕಿರುಸುದ್ದಿ

ಕಾಂಗ್ರೆಸ್‌ನಲ್ಲೇ ರಾಗಾಗೆ ಬೆಂಬಲ ಕುಸಿತ

• **ಹೊಸದಿಲ್ಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸ್ವಪಕ್ಷದಲ್ಲೇ ಬೆಂಬಲ ಕ್ಷೀಣಿಸುತ್ತಿದೆ ಎಂದು ಬಿಜೆಪಿ ಶನಿವಾರ ಆರೋಪಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯವೈಖರಿಯನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಶ್ಲಾಘಿಸಿದ್ದಾರೆ ಎನ್ನಲಾದ ಹೇಳಿಕೆಯನ್ನು ಉಲ್ಲೇಖಿಸಿ ಬಿಜೆಪಿ ರಾಹುಲ್ ವಿರುದ್ಧ ವಾಗ್ದಾಳಿ ನಡೆಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ನಾವಿಕರ ವಿಚಾರವನ್ನು ಪ್ರಧಾನಿ ಮೋದಿ ಪ್ರಬಲವಾಗಿ ಪ್ರಸ್ತಾಪಿಸಿದ್ದು, ಭಾರತದ ನಿಲುವನ್ನು ಪರಿಣಾಮಕಾರಿಯಾಗಿ ಮನವರಿಕೆ ಮಾಡಿದ್ದಾರೆ ಎಂಬ ತರೂರ್ ಹೇಳಿಕೆ ರಾಹುಲ್ ಗಾಂಧಿ ಅವರ ನಿಲುವಿಗೆ ವಿರುದ್ಧವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ. ಶುಕ್ರವಾರ ರಾಹುಲ್ ಗಾಂಧಿ ಅವರ ಜನ್ಮದಿನವಾಗಿತ್ತು. ಆದರೆ ಅವರಿಗೆ ಯಾವುದೇ ಉಡುಗೊರೆ ಸಿಗಲಿಲ್ಲ. ಬದಲಾಗಿ, ಅದೇ ವಿಚಾರದಲ್ಲಿ ಶಶಿ ತರೂರ್ ಅವರ ನಿಲುವನ್ನೇ ಅಲ್ಲಗಳೆದಿದ್ದಾರೆ ಎಂದು ಪೂನಾವಾಲಾ ವಿಡಿಯೊ ಹೇಳಿಕೆಯಲ್ಲಿ ವ್ಯಂಗ್ಯವಾಡಿದರು. ಪ್ರಧಾನಿ ಮೋದಿ ಅವರ ದೂರದೃಷ್ಟಿ, ನಾಯಕತ್ವ, ಮಾತುಗಾರಿಕೆ ಮತ್ತು ಕ್ರಿಯಾಶೀಲತೆಯನ್ನು ತರೂರ್ ಹಲವು ಬಾರಿ ಪ್ರಶಂಸಿಸಿದ್ದಾರೆ. ಮೋದಿ ಅವರು ಭಾರತೀಯರ ಬದುಕಿನ ಮೇಲೆ ತಮ್ಮದೇ ಛಾಪು ಮೂಡಿಸಿದ್ದಾರೆ ಎಂದೂ ತರೂರ್ ಹೇಳಿದ್ದಾರೆ ಎಂದು ಪೂನಾವಾಲಾ ಪ್ರತಿಪಾದಿಸಿದರು.

ಪಾಕ್‌ನಲ್ಲಿ ಮಾಧ್ಯಮಗಳಿಗೆ ಸ್ವತಂತ್ರವಿಲ್ಲ: ಜೆ.ಡಿ ವ್ಯಾನ್ಸ್

• **ವಾಷಿಂಗ್ಟನ್:** ಪಾಕಿಸ್ತಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಇಲ್ಲ. ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಿತ ಪಾಕ್ ನೀತಿ ನಿಯಮಗಳು ಸರಿಯಿಲ್ಲ. ಅಮೆರಿಕ-ಇರಾನ್ ಶಾಂತಿ ಒಪ್ಪಂದದ ಪ್ರಮುಖಾಂಶಗಳ ಬಿಡುಗಡೆ ವಿಳಂಬವಾಗಲು ಇದು ಕೂಡ ಪ್ರಮುಖ ಕಾರಣವೆಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಪೊಡ್‌ಕಾಸ್ಟ್‌ನಲ್ಲಿ ಟೀಕಿಸಿದ್ದಾರೆ. ಈ ಮೂಲಕ ಪಾಕಿಸ್ತಾನ ಮಾಧ್ಯಮವನ್ನು ಎಷ್ಟರಮಟ್ಟಿಗೆ ಹಿಡಿತದಲ್ಲಿಟ್ಟುಕೊಂಡಿದೆ ಎಂಬುದನ್ನು ಬಹಿರಂಗಪಡಿಸಿದ್ದಾರೆ.



ಮಧ್ಯಂತರ ಶಾಂತಿ ಒಪ್ಪಂದದ ಮುಖ್ಯಾಂಶಗಳು ಬಿಡುಗಡೆಯಾಗಬೇಕೆಂದು ನಾವು ಬಯಸಿದ್ದೇವೆ. ಆದರೆ ಪಾಕ್ ಮತ್ತು ಖತಾರಿ ವ್ಯವಸ್ಥೆಗಳಲ್ಲಿ ಪ್ರಥಮ ತಿದ್ದುಪಡಿ (ಫಸ್ಟ್ ಅಮೆಂಡ್‌ಮೆಂಟ್)ಮತ್ತು ಪತ್ರಿಕಾ ಸ್ವಾತಂತ್ರ್ಯಗಳಿಲ್ಲ. ಒಪ್ಪಂದದ ಮುಖ್ಯಾಂಶ ಬಿಡುಗಡೆ ವಿಳಂಬವಾಗಲು ಇದು ಕೂಡ ಕಾರಣವೆಂದು ವಾನ್ಸ್ ಆರೋಪಿಸಿದ್ದಾರೆ.

ನಿಂಬಾಳ್ಕರ್ ಕೊಲೆ ಕೇಸ್: ಆರೋಪಿಗಳ ಖುಲಾಸೆ

• **ಮುಂಬೈ:** 2006ರಲ್ಲಿ ನಡೆದ ಮಹಾರಾಷ್ಟ್ರ ಕಾಂಗ್ರೆಸ್ ನಾಯಕ ಪವನರಾಜೆ ನಿಂಬಾಳ್ಕರ್ ಕೊಲೆ ಪ್ರಕರಣದ ಎಲ್ಲಾ ಆರೋಪಿಗಳನ್ನು 20 ವರ್ಷಗಳ ಬಳಿಕ ಮುಂಬೈನ ವಿಶೇಷ ನ್ಯಾಯಾಲಯವು ಶನಿವಾರ ದೋಷಮುಕ್ತಗೊಳಿಸಿದೆ.

2006ರ ಜೂ.3ರಂದು ನಿಂಬಾಳ್ಕರ್(41) ಮತ್ತು ಚಾಲಕ ಸಮದ್ ಕಾಜಿ ಮುಂಬೈನಿಂದ ಒಸ್ಮಾನಾಬಾದ್ (ಈಗಿನ ಧಾರಾಶಿವ್) ನತ್ತ ಪ್ರಯಾಣಿಸುತ್ತಿದ್ದರು. ನವಿಮುಂಬೈನ ಕಲಂಬೊಲಿ ತಲುಪಿದಾಗ ಇಬ್ಬರು ಶೂಟರ್‌ಗಳು ಕಾರು ಅಡ್ಡಗಟ್ಟಿದ್ದರು. ಬಳಿಕ ಗುಂಡಿನ ದಾಳಿ ನಡೆಸಿದ್ದು, ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು.

20 ವರ್ಷಗಳ ಬಳಿಕ ತೀರ್ಪು ಪ್ರಕಟ

ನಿಂಬಾಳ್ಕರ್ ಸೋದರಸಂಬಂಧಿ ಮತ್ತು ಎನ್‌ಸಿಪಿ ಮಾಜಿ ಸಂಸದ ಈಗ 86 ವರ್ಷದವರಾದ ಪದ್ಮಸಿಂಹ ಪಾಟೀಲ್, ಉದ್ಯಮಿ ಸತೀಶ್ ಮಂದಾಡೆ, ಮಾಜಿ ಬಿಜೆಪಿ ಕಾರ್ಪೊರೇಟರ್ ಮತ್ತು ನಿವೃತ್ತ ಅಬಕಾರಿ ಇನ್‌ಸ್ಪೆಕ್ಟರ್ ಮೋಹನ್ ಶುಕ್ಲಾ, ಪರಸ್ಮಾಲ್ ಜೈನ್, ಮಾಜಿ ಅಬಕಾರಿ ಇನ್‌ಸ್ಪೆಕ್ಟರ್ ಶಶಿಕಾಂತ್ ಕುಲಕರ್ಣಿ, ಬಿಎಸ್‌ಪಿ ಕಾರ್ಯಕರ್ತ ಕೈಲಾಶ್ ಯಾದವ್ ಹಾಗೂ ಶೂಟರ್‌ಗಳಾದ ದಿನೇಶ್ ತಿವಾರಿ, ಪಿಂಟು ಸಿಂಗ್ ಮತ್ತು ಚೋಟೆ ಪಾಂಡೆ ವಿಚಾರಣೆ ಎದುರಿಸಿದ್ದರು.

ಹೈಕೋರ್ಟ್‌ಗೆ ಸಿಬಿಐ: 2009ರಲ್ಲಿ ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿದ್ದು, 2011ರಲ್ಲಿ ವಿಚಾರಣೆ ಆರಂಭವಾಗಿತ್ತು. ಪಾಟೀಲರಿಂದ ಜೀವ ಬೆದರಿಕೆ ಪಡೆದಿದ್ದ ಅಣ್ಣಾ ಹಜಾರೆ ಸೇರಿ 128 ಸಾಕ್ಷಿದಾರರನ್ನು ಸಿಬಿಐ ಪ್ರಸ್ತುತಪಡಿಸಿತ್ತು. ಇದೀಗ ತೀರ್ಪನ್ನು ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೆಟ್ಟಿಲೇರಲಿದೆ.

ಶೀಘ್ರ ಪ್ರಗತಿ ಪ್ರಕ್ರಿಯೆ ಪರಿವರ್ತನೆಗಳಿಗೆ ಸಾಕ್ಷಿ

• **ಹೂಗ್ಲಿ (ಪ.ಬಂಗಾಳ):** ಪ್ರಜಾತಾಂತ್ರಿಕ ಪ್ರಕ್ರಿಯೆಗಳ ಶಕ್ತಿ ಏನೆಂಬುದನ್ನು ಪ.ಬಂಗಾಳದಲ್ಲಿನ ತ್ವರಿತಗತಿಯ ಪ್ರಗತಿ-ಪರಿವರ್ತನೆಗಳು ಸಾಕ್ಷೀಕರಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಂಗಾಳದ ಜನರ ಹಣ ಸುಲಿಗೆ ಮಾಡಿದವರನ್ನು ಜೈಲಿಗೆ ಕಳುಹಿಸಲಾಗುವುದು ಎಂದು ಪ್ರಧಾನಿ ಗುಡುಗಿದರು. ಬಂಗಾಳದ ಜನತೆಯ ದುಡ್ಡನ್ನು ಯಾರೆಲ್ಲ ಸುಲಿಗೆ ಮಾಡಿದ್ದಾರೋ ಅವರೀಗ ದುಡ್ಡು ವಾಪಸ್ ನೀಡೋದು ಕಡ್ಡಾಯವಾಗಿದೆ. ಮಾಡಿರುವ ತಪ್ಪಿಗೆ ಆಪಾದಿತರು ಜೈಲು ಶಿಕ್ಷೆ ಕೂಡ ಅನುಭವಿಸಲೇಬೇಕು ಎಂದವರು ಹೂಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ ,ಪಶ್ಚಿಮ ಬಂಗಾಳ ದಿನಾಚರಣೆ ಕಾರ್ಯಕ್ರಮದಲ್ಲಿ ಹಿಂದಿನ ಸರಕಾರಗಳನ್ನು ತೀವ್ರವಾಗಿ ತರಾಟೆಗೆತ್ತಿಕೊಂಡರು.

ರಾಜ್ಯದಲ್ಲಿನ ಹಿಂದಿನ ಸರಕಾರಗಳು ಅಭಿವೃದ್ಧಿಯನ್ನು ಕಡೆಗಣಿಸುವ ಮುಖೇನ, ಜನರು ಅವಕಾಶಗಳ ಅರಸಿ ಬೇರೆ ರಾಜ್ಯಗಳಿಗೆ ವಲಸೆ ಹೋಗುವಂತಹ ದಯನೀಯ ಸನ್ನಿವೇಶ ಸೃಜಿಸಿದ್ದವು. ಹಿಂದಿನ ಸರಕಾರಗಳ ಕಾರ್ಯ ವೈಖರಿಗೆ ನಾವು ಸಾಕ್ಷಿಯಾಗಿದ್ದೇವೆ. ಅವರುಗಳು ಬಂಗಾಳವನ್ನು ತೀರಾ ಹಿಂದುಳಿದ ಹೀನಾಯ ಸ್ಥಿತಿಗೆ ದೂಡಿ, ನಾಡನ್ನು ಸಾಮೂಹಿಕ ನಿರ್ಗಮನ ಭೂಮಿಯಾಗಿ ಪರಿವರ್ತಿಸಿದರು. ಇದೀಗ ಪ್ರಸಕ್ತ ಸರಕಾರದ ಆಳ್ವಿಕೆಯಲ್ಲಿ ಅಭಿವೃದ್ಧಿ ಪ್ರಯತ್ನಗಳಿಗೆ ಹೊಸ ಆಯಾಮ ದೊರೆತಿದೆ ಮತ್ತು ಪ.ಬಂಗಾಳವು ಆಶಾವಾದದ ನವ ಅನುಭವಕ್ಕೆ ಸಾಕ್ಷಿಯಾಗುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಗಡಿಗೆ ತಂತಿಬೇಲಿ ನಿರ್ಮಿಸಲು ಅಗತ್ಯ ಭೂಮಿ ಹಸ್ತಾಂತರಕ್ಕೆ ಹಿಂದಿನ ಸರಕಾರ ತಡೆಯೊಡ್ಡಿತ್ತು ಎಂದು ಆರೋಪಿದ್ದಾರೆ.

ಮೋದಿ ಯುದ್ಧದಿಂದ ದೂರ ಉಳಿದ ನಾಯಕ

• **ವಾಷಿಂಗ್ಟನ್:** ಭಾರತದ ಪ್ರಧಾನಿ ನರೇಂದ್ರ ಮೋದಿ ಮಹಾನ್ ನಾಯಕ, ಯುದ್ಧಗಳಿಂದ ದೂರ ಉಳಿಯುವುದು ಭಾರತದ ಬುದ್ಧಿವಂತಿಕೆಯ ನಿರ್ಧಾರ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಂಡಾಡಿದ್ದಾರೆ. ಶುಕ್ರವಾರ ತಡರಾತ್ರಿ ನೀಡಿದ ಸಂದರ್ಶನದಲ್ಲಿ ಭಾರತದೊಂದಿಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತ ಪ್ರಶ್ನೆಗೆ ಉತ್ತರಿಸಿದ ಅಧ್ಯಕ್ಷ ಟ್ರಂಪ್, ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಾವು ಹೆಚ್ಚು ಮೆಚ್ಚಿಕೊಳ್ಳುವ ವಿಶ್ವನಾಯಕರೆಂದು ಹೇಳಿದ್ದಾರೆ. ತಮ್ಮ ಪ್ರಭಾವಶಾಲಿ ನಾಯಕತ್ವದ ಗುಣ, ಸಾಮರ್ಥ್ಯ ಮತ್ತು ಫಲಿತಾಂಶಗಳಿಂದ ಈ ನಾಯಕರು ವಿಶೇಷ ಸ್ಥಾನ ಪಡೆದಿದ್ದಾರೆ.

ಮೋದಿ ಮಹಾನ್ ನಾಯಕ, ಅವರ ನೇತೃತ್ವದಲ್ಲಿ ಭಾರತ ಒಳ್ಳೆಯ ಬೆಳವಣಿಗೆಗಳನ್ನು ಕಾಣುತ್ತಿದೆ. ಯುದ್ಧಗಳಿಂದ ದೂರ ಉಳಿಯುವುದು ಅವರ ಬುದ್ಧಿವಂತಿಕೆಯ ನಡೆ. ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಇರುವ ಭಾರತವನ್ನು ಮುನ್ನಡೆಸುವ ಮೋದಿ ನಿಜಕ್ಕೂ ಅದ್ಭುತ ನಾಯಕ ಎಂದು ಟ್ರಂಪ್ ಶ್ಲಾಘಿಸಿದ್ದಾರೆ.

ಭಾರತದೊಂದಿಗೆ ನಾವು ಸಾಕಷ್ಟು ವ್ಯಾಪಾರ ಮಾಡುತ್ತೇವೆ. ಈಗ ಭಾರತದೊಂದಿಗೆ ನ್ಯಾಯಯುತ ವ್ಯಾಪಾರ ಮಾಡುತ್ತಿದ್ದೇವೆ. ಈ ಹಿಂದೆ ಭಾರತದವರು ನಮ್ಮೊಂದಿಗೆ ಹೆಚ್ಚು ಲಾಭದಾಯಕ ವ್ಯಾಪಾರ ಮಾಡುತ್ತಿದ್ದರು. ಅದಕ್ಕಾಗಿ ನಾನು ಭಾರತೀಯರನ್ನು ದೂರುವುದಿಲ್ಲ. ನಮ್ಮ ದೇಶದಲ್ಲಿದ್ದ ಮೂರ್ಖ ರಾಜಕಾರಣಿಗಳು ನಷ್ಟದ ವ್ಯಾಪಾರಕ್ಕೆ ಅನುಮತಿ ನೀಡಿದ್ದರು. ನಾವೀಗ ಉತ್ತಮ ವ್ಯಾಪಾರ ಮಾಡುತ್ತಿದ್ದೇವೆ. ಮೋದಿ ಒಬ್ಬ ಮಹಾನ್ ನಾಯಕ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ.

ದೇಗುಲದ ಛಾವಣಿ ಕುಸಿತ: ಏಳು ಸಾವು

• **ಪರಭಣಿ:** ಮಹಾರಾಷ್ಟ್ರದಲ್ಲಿ ಧಾರ್ಮಿಕ ಸಭೆಯ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿದ್ದ ಹನುಮಾನ್ ದೇವಸ್ಥಾನದ ಮೇಲ್ಛಾವಣಿ ಕುಸಿದು ಬಿದ್ದ ಪರಿಣಾಮ ಏಳು ಜನರು ಮೃತಪಟ್ಟಿದ್ದು, ಸುಮಾರು 30 ಜನರು ಗಾಯಗೊಂಡಿದ್ದಾರೆ. ಮಾನವತ್ ತಾಲೂಕಿನ ಯಶ್ವಾಡಿ ಗ್ರಾಮದಲ್ಲಿ ಭಕ್ತರು ಆಧ್ಯಾತ್ಮಿಕ ಕಾರ್ಯಕ್ರಮಕ್ಕಾಗಿ ಜಮಾಯಿಸಿದ್ದಾಗ ಈ ಘಟನೆ ಸಂಭವಿಸಿದೆ. ಸ್ಥಳೀಯ ನಿವಾಸಿಗಳು, ಪೊಲೀಸ್ ಸಿಬ್ಬಂದಿ ಮತ್ತು ತುರ್ತು ಸೇವಾ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದವು. ಭಗ್ನಾವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದ ಜನರನ್ನು ಹೊರತೆಗೆಯಲು ರಕ್ಷಣಾ ಸಿಬ್ಬಂದಿ ಭಾರೀ ಯಂತ್ರೋಪಕರಣಗಳನ್ನು ಬಳಸಬೇಕಾಯಿತು. ಘಟನೆ ನಡೆದಾಗ ಕಟ್ಟಡ ನಿರ್ಮಾಣ ಹಂತದಲ್ಲಿದ್ದು, ಕುಸಿತಕ್ಕೆ ನಿಖರ ಕಾರಣವನ್ನು ಪತ್ತೆಹಚ್ಚಲು ಅಧಿಕಾರಿಗಳು ಅಧಿಕೃತ ತನಿಖೆಗೆ ಆದೇಶಿಸಿದ್ದಾರೆ.

ಗೃಹ ಸಚಿವ ಅಮಿತ್ ಶಾ ಬಣ್ಣನೆ | ಅಸಾಧ್ಯವೆನಿಸಿದ್ದ ಕಾರ್ಯಗಳು ಸಾಕಾರ

12 ವರ್ಷ ಸುವರ್ಣಾಕ್ಷರಗಳಲ್ಲಿ ದಾಖಲು

• **ಕೊಲ್ಹಾಪುರ:** ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶನಿವಾರ ಅಂಬಾಬಾಯಿ ಮಹಾಲಕ್ಷ್ಮೀ ದೇವಸ್ಥಾನ ಕಾರಿಡಾರ್ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮೋದಿ ನೇತೃತ್ವದಲ್ಲಿ ಭಾರತವು ಪುನರುತ್ಥಾನಗೊಂಡಿದ್ದು, ಜಾಗತಿಕ ಮಟ್ಟದಲ್ಲಿ ದೇಶದ ಗೌರವ ಹೆಚ್ಚಾಗಿದೆ ಎಂದರು.

ಸ್ವತಂತ್ರ ಭಾರತದ ಇತಿಹಾಸ ಬರೆಯುವಾಗ, ಬಲಿಷ್ಠ ಹಾಗೂ ಪುನರುತ್ಥಾನಗೊಂಡ ಭಾರತ ನಿರ್ಮಾಣ ಮತ್ತು ವಿಶ್ವದಾದ್ಯಂತ ದೇಶದ ಪ್ರತಿಷ್ಠೆ ಹೆಚ್ಚಿಸಿದ ಮೋದಿ ಆಡಳಿತದ 12 ವರ್ಷಗಳ ಅಧ್ಯಾಯವು ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ಶಾ ಹೇಳಿದರು.

ಕಳೆದ 12 ವರ್ಷಗಳಲ್ಲಿ ಅಸಾಧ್ಯವೆಂದು ಪರಿಗಣಿಸಲಾಗಿದ್ದಹಲವುಕಾರ್ಯಗಳನ್ನು ಮೋದಿ ಸರಕಾರ ಸಾಕಾರಗೊಳಿಸಿದೆ. ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ಅಭಿವೃದ್ಧಿ, ಕೇದಾರನಾಥ, ಬದರಿನಾಥ, ಸೋಮನಾಥ ಮತ್ತು ಕಾಮಾಖ್ಯಾ ದೇವಾಲಯಗಳ ಅಭಿವೃದ್ಧಿ ಇದಕ್ಕೆ ನಿದರ್ಶನ ಎಂದು ತಿಳಿಸಿದರು.

ದೇಶದಲ್ಲಿ ಸಾಂಸ್ಕೃತಿಕ ಪುನರುತ್ಥಾನ: ಅಂಬಾಬಾಯಿ ದೇವಸ್ಥಾನ ಕಾರಿಡಾರ್ ಯೋಜನೆಯೂ ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಶಾ ಹೇಳಿದರು. ಸುಮಾರು 500 ಕೋಟಿ ರೂ. ವೆಚ್ಚದ ಈ ಯೋಜನೆಯನ್ನು 28,058 ಚದರ ಮೀಟರ್ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಏಳನೇ ಶತಮಾನದ ಐತಿಹಾಸಿಕ ದೇವಾಲಯವನ್ನು ಆಧುನಿಕ ಯಾತ್ರಾಕ್ಷೇತ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಕೃತಕ ಬುದ್ಧಿಮತ್ತೆ ಆಧಾರಿತ ಭದ್ರತಾ ವ್ಯವಸ್ಥೆ, ವಿದ್ಯುತ್ ದೀಪಾಲಂಕಾರ, ಪರಂಪರೆ ಗ್ಯಾಲರಿಗಳು, ಬೆಳಕು ಮತ್ತು ಧ್ವನಿ ಪ್ರದರ್ಶನ ಹಾಗೂ ಬಹುಉದ್ದೇಶಿತ ಸಭಾಂಗಣ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ.

ಮಹಾಲಕ್ಷ್ಮೀ ದೇವಸ್ಥಾನದ ಸುತ್ತಮುತ್ತಲಿನ 41 ದೇವಾಲಯಗಳನ್ನು ಪುರಾತತ್ವ ಇಲಾಖೆಯ ಸಲಹೆಯಂತೆ ಸಂರಕ್ಷಿಸಲಾಗುವುದು ಎಂದು ಅವರು ತಿಳಿಸಿದರು.

ಭಾರತ ಧರ್ಮಶಾಲೆ ಅಲ್ಲ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಬೆಂಬಲಿಸಿದ ಜನರಿಗೆ ಕೃತಜ್ಞತೆ ಸಲ್ಲಿಸಿದ ಶಾ, ದೇಶದಲ್ಲಿರುವ ಪ್ರತಿಯೊಬ್ಬ ಅಕ್ರಮ ನುಸುಳುಕೋರನನ್ನೂ ಗುರುತಿಸಿ ಹೊರದಬ್ಬಲಾಗುವುದು ಎಂದು ಘೋಷಿಸಿದರು. ನುಸುಳುಕೋರರನ್ನು ಮತಬ್ಯಾಂಕ್ ಆಗಿ ಪರಿವರ್ತಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. 'ಭಾರತ ಧರ್ಮಛತ್ರವಲ್ಲ. ಈ ದೇಶಕ್ಕೆ ಸೇರಿದವರು ಮಾತ್ರ ಇಲ್ಲಿ ವಾಸಿಸುತ್ತಾರೆ. ಪ್ರತಿಯೊಬ್ಬ ನುಸುಳುಕೋರನನ್ನೂ ಗುರುತಿಸಿ ದೇಶದಿಂದ ಹೊರಹಾಕಲಾಗುವುದು ಎಂದು ಎಚ್ಚರಿಸಿದರು.

ಹಿಂದುಗಳು ಬಹುಸಂಖ್ಯಾತರಲ್ಲ: ಮೌಲಾನ

ಹಿಂದು ವಿಭಜನೆಗೆ ಕುತಂತ್ರ

• **ಲಖನೌ:** ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಲ್ಲವಂತೆ! ಹೀಗೆಂದು ಬೊಗಳೆ ಬಿಟ್ಟಿರುವ ಉತ್ತರಪ್ರದೇಶದ ಮೌಲಾನ ಖಲೀಲುರ್ ರಹಮಾನ್ ಸಜ್ಜದ್ ನೊಮಾನಿ ಹೊಸ ವಿವಾದ ಸೃಷ್ಟಿಸಿದ್ದಾನೆ. ಮೌಲಾನನದ್ದು ವಿಷಪೂರಿತ ಜಿಹಾದಿ ಮನಸ್ಥಿತಿ, ಇದು ಜಾತ್ಯಾತೀತತೆ ಸೋಗಿನಲ್ಲಿ ಹಿಂದುಗಳನ್ನು ವಿಭಜಿಸುವ ಪ್ರಯತ್ನವೆಂದು ಬಿಜೆಪಿ ಕಿಡಿಕಾರಿದೆ.

ಇತ್ತೀಚೆಗೆ ನಡೆದ ಇಸ್ಲಾಮಿಕ್ ಸಮ್ಮೇಳನವೊಂದರಲ್ಲಿ ಅಖಿಲ ಭಾರತ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಸದಸ್ಯ ಮೌಲಾನ ಸಜ್ಜದ್ ಮಾತನಾಡಿದ್ದು, ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಲ್ಲ ಎಂಬುದನ್ನು ಹಜರ್-ಎ-ಅಸ್ವದ್(ಬ್ಲ್ಯಾಕ್ ಸ್ಟೋನ್) ಮತ್ತು ಕಿಸ್ವಾ(ಕಾಬಾ ಬಟ್ಟೆ) ಮೇಲೆ ಕೈ ಇಟ್ಟು ಬೇಕಿದ್ದರೆ ಹೇಳಬಲ್ಲೆ ಎಂದು ಸವಾಲೊಡ್ಡಿದ್ದಾನೆ.

ಹಲವು ಸಮುದಾಯಗಳನ್ನು ಹಿಂದುಗಳಲ್ಲಿ ಸೇರಿಸಿಕೊಂಡು ಜನರ ದಾರಿ ತಪ್ಪಿಸುತ್ತಿದ್ದಾರೆ. ಸಿಖ್ಖರು, ಕ್ರಿಶ್ಚಿಯನ್ನರು, ಬೌದ್ಧರು, ಪರಿಶಿಷ್ಟ ಜಾತಿ(ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್‌ಟಿ), ಜಾಟ್, ತಮಿಳರು ಮತ್ತು ಲಿಂಗಾಯತರು ಹಿಂದುಗಳಲ್ಲ ಎಂಬ ಮಾತುಗಳನ್ನಾಡಿ ಮೌಲಾನಾ ಹಿಂದು ಜನಸಂಖ್ಯಾ ವಿಚಾರದಲ್ಲಿ ಅನಾವಶ್ಯಕ ಮೂಗು ತೂರಿಸಿದ್ದಾನೆ.

ವೋಟ್ ಬ್ಯಾಂಕ್ ರಾಜಕೀಯ: ಮೌಲಾನಾ ಸಜ್ಜದ್ ನೊಮಾನಿ ತನ್ನದು ವಿಷಪೂರಿತ ಜಿಹಾದಿ ಮನಸ್ಥಿತಿಯನ್ನು ತೋರಿಸಿದ್ದಾರೆ. ಕಳೆದ ವಿಧಾನಸಭೆ ಚುನಾವಣೆ ವೇಳೆ ಮಹಾ ವಿಕಾಸ್ ಅಘಾಡಿ(ಎಂವಿಎ)ಗೆ ಮತ ಚಲಾಯಿಸಲು ಮುಸ್ಲಿಮರಿಗೆ ಕರೆ ನೀಡಿದ್ದ ಮೌಲಾನಾ, ಹಿಂದುಗಳು ಸಂಪೂರ್ಣ ಒಡೆದುಹೋಗಿದ್ದಾರೆ. ಜಾತ್ಯಾತೀತತೆ ಸೋಗಿನಲ್ಲಿ ಹಿಂದುಗಳ ಒಗ್ಗಟ್ಟು ಒಡೆದು ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ಮೌಲಾನಾ ವಿವಾದ ಸೃಷ್ಟಿಸಿದ್ದಾರೆ ಎಂದು ಬಿಜೆಪಿ ನಾಯಕ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ.

ಕಿರುಸುದ್ದಿ

ಸಚಿವ ಸ್ಥಾನಕ್ಕೆ ಆಗ್ರಹ

ಹುಬ್ಬಳ್ಳಿ: ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಶನಿವಾರ ಜವಳಿ ಸಾಲಿನ ವರ್ತಕರು ಅಂಗಡಿ ಬಂದ್ ಮಾಡಿ ಹಿರೇಪೇಟೆ ವೃತ್ತದಲ್ಲಿ ಸಭೆ ನಡೆಸಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಹಕ್ಕೊತ್ತಾಯ ಮಂಡಿಸಿದರು. ಹುಡಾ ಮಾಜಿ ಅಧ್ಯಕ್ಷ ಅನ್ವರ ಮುಧೋಳ ಮಾತನಾಡಿ, ಶಾಸಕ ಪ್ರಸಾದ ಅಬ್ಬಯ್ಯ ಸತತ ಮೂರು ಬಾರಿ ವಿಧಾನಸಭೆ ಪ್ರವೇಶಿಸುವ ಮೂಲಕ ಹ್ಯಾಟ್ರಿಕ್ ಮಾಡಿದ್ದಾರೆ. ಅಭಿವೃದ್ಧಿಯ ಹರಿಕಾರ ಆಗಿದ್ದು, ಅಂಥವರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆ ಮಾತ್ರವಲ್ಲದೆ ರಾಜ್ಯವು ಇನ್ನಷ್ಟು ಬೆಳವಣಿಗೆ ಆಗಲಿದೆ. ಅವರಿಗೆ ಸಚಿವ ಸ್ಥಾನ ನೀಡುವ ಅಗತ್ಯವಿದೆ ಎಂದರು.

ಪಾಲಿಕೆಯ ಮಾಜಿ ಉಪ ಮಹಾಪೌರ ಮೋಹನ ಸವಣೂರ ಮಾತನಾಡಿ, ಶಾಸಕ ಪ್ರಸಾದ ಅಬ್ಬಯ್ಯ ಜನಪರ ಕಾಳಜಿವುಳ್ಳ ಜಾತ್ಯತೀತ ನಾಯಕರಾಗಿದ್ದು, ಅವರಿಗೆ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ದೊರೆಯಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪಾಲಿಕೆಯ ಮಾಜಿ ಸದಸ್ಯ ಚಂದ್ರಶೇಖರ ಅಳಗುಂಡಗಿ ಮಾತನಾಡಿ, ಪ್ರಸಾದ ಅಬ್ಬಯ್ಯ ಪಕ್ಷ ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಹೀಗಾಗಿ ಅವರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗುವಂತಾಯಿತು. ಈಗ ಸಚಿವ ಸ್ಥಾನ ನೀಡಿದರೆ ಇನ್ನಷ್ಟು ಕೆಲಸ ಮಾಡುವ ಉಮೇದಿ ಅವರಲ್ಲಿ ಹೆಚ್ಚಳಿದೆ ಎಂದರು. ವರ್ತಕ ವಿಜಯಕುಮಾರ ಅಳಗುಂಡಗಿ ಪ್ರಾಸ್ತಾವಿಕ ಮಾತನಾಡಿ, ದಕ್ಷಿಣ ಭಾಗದವರಿಗೆ ಸಚಿವ ಸ್ಥಾನ ಹೆಚ್ಚಿಗೆ ಕೊಡಲಾಗುತ್ತಿದೆ. ಎರಡನೇ ಬಾರಿಯ ಸಚಿವರ ಪಟ್ಟಿಯಲ್ಲಿ ಶಾಸಕ ಪ್ರಸಾದ ಅಬ್ಬಯ್ಯ ಅವರದು ಇರಬೇಕು ಎಂದರು. ವರ್ತಕರು ತಹಶೀಲ್ದಾರ್ ಮಹೇಶ ಗಸ್ತೆ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಮನವಿ ಸಲ್ಲಿಸಿದರು. ತಾರಾದೇವಿ ವಾಲಿ, ಜಗದೀಶ ಬುರ್ಲಬಡ್ಡಿ, ಗೌತಮಚಂದ ಜೈನ, ನವೀನಸಿಂಗ ರಜಪೂತ, ಖೇತುಸಿಂಗ ಠಾಕೂರ, ಗೋವಿಂದ ಶರ್ಮಾ, ತೇಜಾರಾಮ ಪಟೇಲ, ನರೇಂದ್ರ ಜೈನ, ಲಲಿತ ಜೈನ, ಭಾವೇಶ ಜೈನ ಇತರರಿದ್ದರು.

ಕನ್ನಡದಲ್ಲಿ ಪರೀಕ್ಷೆ ನಡೆಸಿ

ಹುಬ್ಬಳ್ಳಿ: ನೈರುತ್ಯ ರೈಲ್ವೆಯಿಂದ ಜೂನ್ 25ರಂದು ಗೂಡ್ಸ್ ರೈಲು ವ್ಯವಸ್ಥಾಪಕ ಹುದ್ದೆಗಳ ನೇಮಕಾತಿಗೆ ಪರೀಕ್ಷೆ ನಡೆಸುತ್ತಿದೆ. ಹಿಂದಿ, ಇಂಗ್ಲಿಷ್ ಜತೆಗೆ ಕನ್ನಡದಲ್ಲಿಯೂ ಪರೀಕ್ಷೆ ನಡೆಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಘಟಕದ ಸಂಚಾಲಕ ಸುರೇಶ ಗೋವಣ್ಣವರ ಆಗ್ರಹಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡದಲ್ಲಿ ಪರೀಕ್ಷೆ ನಡೆಸದಿದ್ದರೆ ಪರೀಕ್ಷಾ ಕೇಂದ್ರಗಳಿಗೆ ನುಗ್ಗಿ ಪರೀಕ್ಷೆ ರದ್ದತಿಗೆ ಆಗ್ರಹಿಸಲಾಗುವುದು ಎಂದರು. ಇದೇ ಪರೀಕ್ಷೆಯನ್ನು ಈ ಹಿಂದೆ ಮಾರ್ಚ್ 17ರಂದು ನಡೆಸಲು ನಿರ್ಧರಿಸಲಾಗಿತ್ತು. ಆಗಲೂ ಕನ್ನಡವನ್ನು ಕಡೆಗಣಿಸಿದ್ದರಿಂದ ಕರವೇ ವತಿಯಿಂದ ಪ್ರತಿಭಟನೆ ನಡೆಸಿದ್ದರಿಂದ ಪರೀಕ್ಷೆ ರದ್ದುಪಡಿಸಲಾಗಿತ್ತು. ಈಗ ಮತ್ತೆ ಅದೇ ಧೋರಣೆ ಮುಂದುವರಿಸಿದರೆ ಹೋರಾಟ ಅನಿವಾರ್ಯ ಎಂದರು.

ಮುಖಂಡ ಹನಮಂತಪ್ಪ ಮೇಟಿ ಮಾತನಾಡಿ, ಈ ಹಿಂದೆ ಪ್ರತಿಭಟನೆ ನಡೆಸಿದ್ದ ವೇಳೆ ಕನ್ನಡದಲ್ಲಿಯೂ ಪರೀಕ್ಷೆ ನಡೆಸಲಾಗುವುದು ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ ಈಗ ಆ ರೀತಿ ನಡೆದುಕೊಳ್ಳುತ್ತಿಲ್ಲ, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮತ್ತು ರಾಜ್ಯದ ಸಂಸದರು ಈ ಬಗ್ಗೆ ಒತ್ತಡ ಹಾಕಬೇಕು ಎಂದರು.

ಮುಖಂಡ ಬಸವನಗೌಡ ಪಾಟೀಲ ಮಾತನಾಡಿ, ಜೂನ್ 25ರಂದು ನಡೆಯಲಿರುವ ಪರೀಕ್ಷೆಯನ್ನು ತಕ್ಷಣ ಮುಂದೂಡಬೇಕು. ಪರೀಕ್ಷೆಯಲ್ಲಿ ಕನ್ನಡ ಭಾಷೆ ಸೇರಿಸಿ ಹೊಸದಾಗಿ ವೇಳಾಪಟ್ಟಿ ಪ್ರಕಟಿಸಬೇಕು. ರಾಜ್ಯದಲ್ಲಿ ನಡೆಯುವ ಎಲ್ಲ ರೈಲ್ವೆ ನೇಮಕಾತಿ ಮತ್ತು ಪದೋನ್ನತಿ ಪರೀಕ್ಷೆಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೂ ನಡೆಸಬೇಕು. ಕನ್ನಡಿಗರ ಭಾಷಾ ಹಕ್ಕು ಉಲ್ಲಂಘಿಸುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರೆಹಮಾನ ಹೊಳಿ, ಸತೀಶಗೌಡ ಮುದಿಗೌಡರ, ಸಾಗರ ಗಾಯಕವಾಡ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಭೂ-ಅಕ್ರಮ ತಡೆಗೆ ಆಗ್ರಹ



ಧಾರವಾಡ: ರಾಜ್ಯದಲ್ಲಿ ಹೆಚ್ಚುತ್ತಿರುವ ಭೂ ಅಕ್ರಮಗಳು, ಭೂಮಿ ಕಬಳಿಕೆ, ರೈತರ ಹಿತಾಸಕ್ತಿಗೆ ಧಕ್ಕೆ ತರುವ ಬೆಳವಣಿಗೆ ನಿಯಂತ್ರಣಕ್ಕೆ ಆಗ್ರಹಿಸಿ ಜನತಾ ದಳ ಪಕ್ಷದ ಕಾರ್ಯಕರ್ತರಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಧರಣಿ ನಡೆಯಿತು.

ರಾಜ್ಯ ಯುವ ಜನತಾ ದಳದ ಅಧ್ಯಕ್ಷ ನಿಖಿಲ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿರುವ ನಮ್ಮ ಭೂಮಿ-ನಮ್ಮ ಹಕ್ಕು ಹೋರಾಟಕ್ಕೆ ಬೆಂಬಲಿಸುವುದರ ಮೂಲಕ ಧಾರವಾಡ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೂ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ಭೂ-ಆಸ್ತಿ ವ್ಯವಹಾರಗಳಿಗೆ ಅಕ್ರಮಗಳು ಹಾಗೂ ರೈತರ ಭೂಮಿಗೆ ಅನ್ಯಾಯ ಹಾಗೂ ಸಾರ್ವಜನಿಕರ ಹಿತಾಸಕ್ತಿಗೆ ಧಕ್ಕೆ ತರುವ ಬೆಳವಣಿಗೆಗಳ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಇಂತಹ ಅಕ್ರಮ ತಡೆಗೆ ಕಠಿಣ ಕ್ರಮ ಕೈಗೊಳ್ಳಲು ಆಗ್ರಹಿಸಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ, ಮುಖಂಡ ಮಂಜುನಾಥ ಹಗೇದಾರ, ಗಂಗಾಧರ ಶಿರೂರು, ಎ.ಸಿ.ಅರಸಿಕೇರಿ, ದೇವರಾಜ ಕಂಬಳಿ, ಭೀಮರಾವ ಗುಡೇನಕಟ್ಟಿ, ಪ್ರೇಮಾ ಭಟ್, ಸುಧೀರ ಕ್ಷತ್ರಿಯ ಅನೇಕರು ಪಾಲ್ಗೊಂಡಿದ್ದರು.

ಬೃಹತ್ ಕ್ರೀಡಾ ಸಂಕೀರ್ಣಕ್ಕೆ ಸಚಿವ ಪ್ರಹ್ಲಾದ ಜೋಶಿ ಭೇಟಿ | ಸೂಚನೆ

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಹುಬ್ಬಳ್ಳಿ: ಇಲ್ಲಿಯ ಲೋಹಿಯಾ ನಗರದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ನಿರ್ಮಿಸುತ್ತಿರುವ ಬೃಹತ್ ಕ್ರೀಡಾ ಸಂಕೀರ್ಣಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಶನಿವಾರ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ಕ್ರೀಡಾ ಸಂಕೀರ್ಣ ಈಜುಕೊಳ, ಶೂಟಿಂಗ್ ಕೇಂದ್ರ, ಬಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್ ಕೋರ್ಟ್ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಅಧಿಕಾರಿಗಳಿಂದ ಕಾಮಗಾರಿ ಯಾವ ಹಂತದಲ್ಲಿದೆ, ಇನ್ನೂ ಎಷ್ಟು ಬಾಕಿ ಉಳಿದಿದೆ, ಅನುದಾನ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮಾಹಿತಿ ಪಡೆದು, ಉಳಿದ ಕಾಮಗಾರಿ ತಕ್ಷಣ ಪೂರ್ಣಗೊಳಿಸಲು ಸೂಚಿಸಿದರು. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸ್ಮಾರ್ಟ್ ಸಿಟಿ ಯೋಜನೆಯಡಿ 175 ಕೋಟಿ ವೆಚ್ಚದಲ್ಲಿ ಬೃಹತ್ ಕ್ರೀಡಾ ಸಂಕೀರ್ಣದ ಕಾಮಗಾರಿ ಈಗಾಗಲೇ ಶೇ.95ರಷ್ಟು ಮುಗಿದಿದ್ದು, ಸಣ್ಣ ಪುಟ್ಟ ಕೆಲಸಗಳು ಬಾಕಿ ಇವೆ. ಶೇ.91ರಷ್ಟು ಅನುದಾನ ಈಗಾಗಲೇ ಬಿಡುಗಡೆ ಸಹ ಆಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸದಲಾಗಿದ್ದು, ಶೀಘ್ರದಲ್ಲಿಯೇ ಉದ್ಘಾಟನೆಯಾಗಲಿದೆ ಎಂದು ತಿಳಿಸಿದರು.



- ಮೈಸೂರು-ಪಂಡರಾಪುರ ಮಾರ್ಗದಲ್ಲಿ ಸಂಚರಿಸುತ್ತಿದ್ದ ಗೋಲ್ ಗುಂಬಜ್ ರೈಲು ಇನ್ನು ಮುಂದೆ ಗದಗ ಬೈಪಾಸ್ ಹಾಗೂ ಹುಬ್ಬಳ್ಳಿ ದಕ್ಷಿಣ ಭಾಗದಿಂದ ಸಂಚಾರ
- ವಿಜಯಪುರ ಹಾಗೂ ಬಾಗಲಕೋಟೆ ಸಂಸದ ಬಹುದಿನ ಬೇಡಿಕೆ ಇದ್ದಾಗಿತ್ತು. ಈ ಹಿನ್ನೆಲೆ ಈ ನಿರ್ಧಾರ
- ಬೆಂಗಳೂರು ಹಾಗೂ ಹುಬ್ಬಳ್ಳಿಯ ಮಧ್ಯೆ ಸಾಕಷ್ಟು ರೈಲುಗಳಿವೆ. ಇದರಿಂದ ಹುಬ್ಬಳ್ಳಿ ಅವರಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸ್ಪಷ್ಟನೆ

ಕ್ರೀಡಾ ಸಂಕೀರ್ಣಕ್ಕೆ ರಾಜ್ಯ ಸರ್ಕಾರ ಭೂಮಿ ನೀಡಿದೆ. ಇದರ ನಿಮಗಳ ಜಾರಿಗೆ, ನಿರ್ವಹಣೆ ಹಾಗೂ ಇನ್ನಿತರ ಕಾರ್ಯಗಳನ್ನು ರಾಜ್ಯ ಸರ್ಕಾರ ಮಟ್ಟದಲ್ಲಿ ಆಗಬೇಕಿದೆ. ಕ್ರೀಡಾ ಸಚಿವ ಜಿ.ಪರಮೇಶ್ವರ ಹಾಗೂ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಈ ಬಗ್ಗೆ ಮಾತನಾಡುತ್ತೇನೆ. ಕೇಂದ್ರದಿಂದ ಏನೇ ಸಹಕಾರ ಬೇಕಿದ್ದರೂ ನಾವು ನೀಡುತ್ತೇವೆ ಎಂದು ಹೇಳಿದರು. ಹುಬ್ಬಳ್ಳಿ-ಧಾರವಾಡ ಮಧ್ಯದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆದಷ್ಟು ಬೇಗ ಮುಗಿಯಲಿದೆ. ಭೂಸ್ವಾಧೀನ ಸೇರಿದಂತೆ ಹಲವಾರು ತಾಂತ್ರಿಕ ಸಮಸ್ಯೆಗಳಿಂದ ನಿರೀಕ್ಷಿತ ಮಟ್ಟದಲ್ಲಿ ಕಾಮಗಾರಿ ಆಗಿಲ್ಲ. ಸದ್ಯ ಸಮಸ್ಯೆಗಳ ಪರಿಹರಿಸಲಾಗಿದೆ ಎಂದು ತಿಳಿಸಿದರು.

> ನಗರದಲ್ಲಿ ಘನತ್ಯಾಜ ಸಂಸ್ಕರಿಸಿ ಹಸಿರು ಇದ್ದಿಲು ಉತ್ಪಾದಿಸುವ ಆತ್ಯಾಧುನಿಕ ಘಟಕವನ್ನು ಸುಮಾರು 78 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. ದೇಶದಲ್ಲಿ ವಾರಣಾಸಿ ಬಿಟ್ಟರೆ ಹುಬ್ಬಳ್ಳಿಯಲ್ಲಿ ಯೋಜನೆ ಜಾರಿಗೆ ತರಲಾಗಿದೆ. ಇದರಿಂದ ಕಸಕ್ಕೆ ಮುಕ್ತಿ ದೊರೆಯಲಿದೆ. ಈ ಜಾಗಕ್ಕೆ ಹೋಗಲು 3 ಕೋಟಿ ವೆಚ್ಚದಲ್ಲಿ ರಸ್ತೆ ಸಹ ನಿರ್ಮಿಸಲಾಗುತ್ತಿದೆ. ಇದನ್ನು ಸಹ ಶೀಘ್ರದಲ್ಲಿ ಉದ್ಘಾಟಿಸಲಾಗುವುದು.
> ■ **ಪ್ರಹ್ಲಾದ ಜೋಶಿ, ಸಚಿವ**

ಧಾರವಾಡದಲ್ಲಿ ವಿಧಿ ವಿಜ್ಞಾನ ಕೇಂದ್ರ ಸ್ಥಾಪನೆಗೆ ಈಗಾಗಲೇ ಟೆಂಡರ್ ನೀಡಲಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು. ಶಾಸಕ ಮಹೇಶ ಟೆಂಗಿನಕಾಯಿ, ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಪಾಲಿಕೆ ಸದಸ್ಯ ತಿಪ್ಪಣ್ಣ ಮಜ್ಜಗಿ, ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ, ಪ್ರಭು ನವಲಗುಂದಮಠ, ಅನುಪ ಬಿಜವಾಡ ಸೇರಿದಂತೆ ಅನೇಕರಿದ್ದರು.

ಮಹಿಳೆಯರು ಸಬಲರಾಗಲಿ: ದೇವಾಂಗ

ಮುಂಡರಗಿ: ಇಲ್ಲಿಯ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಮುಂಡರಗಿ ಹಾಗೂ ನಾರಾಯಣ ಹೃದಯಾಲಯ ಧಾರವಾಡ ಇವರ ಸಂಯೋಗದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಉಚಿತ ಹೃದಯ ತಪಾಸಣೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಗದಗ ಜಿಲ್ಲಾ ನಿರ್ದೇಶಕಕೇಶವದೇವಾಂಗಉದ್ಘಾಟಿಸಿ ಮಾತನಾಡಿ, ಧರ್ಮಸ್ಥಳ ಯೋಜನೆ ಹಲವಾರು ಸಾಮಾಜಿಕ ಧಾರ್ಮಿಕ ಕಾರ್ಯಕ್ರಮಗಳನ್ನು ಡಾ. ವೀರೇಂದ್ರ ಹೆಗ್ಗಡೆ ದಂಪತಿ ಆಶೀರ್ವಾದದಿಂದ ಮಾಡುತ್ತಿದ್ದು, ಅದರಲ್ಲಿ ಜ್ಞಾನ ವಿಕಾಸ ಕಾರ್ಯಕ್ರಮ ವಿಶೇಷ ಕಾರ್ಯಕ್ರಮವಾಗಿದ್ದು ಜ್ಞಾನವಿಕಾಸ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಆರ್ಥಿಕ ಸಾಮಾಜಿಕವಾಗಿ ಸ‌ಬಲರಾಗುವುದರೊಟ್ಟಿಗೆ ಕುಟುಂಬದ ಜವಾಬ್ದಾರಿ ನಿರ್ವಹಣೆಯಲ್ಲಿ ಆರೋಗ್ಯದಲ್ಲಿ ಪ್ರಮುಖ ಪಾತ್ರ ವಹಿಸುವುದು ಬಹು ಮುಖ್ಯವಾಗಿರುತ್ತದೆ. ಮನುಷ್ಯನ ಪ್ರಮುಖವಾದ ಅಂಗ ಹೃದಯ. ಇತ್ತೀಚಿನ ದಿನಗಳಲ್ಲಿ ಹೃದಯಾಘಾತ ಎಂಬುದು ಒಂದು ದೊಡ್ಡ ಜ್ವಲಂತ ವಿಷಯವಾಗಿದೆ. ಅವರಿಂದ ಪ್ರತಿಯೊಬ್ಬರು ಹೃದಯಕ್ಕೆ ಸಂಬಂಧಪಟ್ಟ ಚಿಕಿತ್ಸೆಗಳನ್ನು ಮಾಡಿಸಿಕೊಳ್ಳುವುದು ಬಹು ಮುಖ್ಯವಾಗಿರುತ್ತದೆ ಎಂದರು.

ಅಧ್ಯಕ್ಷತೆಯನ್ನು ಪುರಸಭೆ ಮಾಜಿಉಪಾಧ್ಯಕ್ಷ ಹಾಗೂ ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತ ವೇದಿಕೆ ಸದಸ್ಯ ನಾಗೇಶ್ ಹುಬ್ಬಳ್ಳಿ ಮಾತನಾಡಿ, ಧರ್ಮಸ್ಥಳ ಯೋಜನೆ ಕಾರ್ಯಕ್ರಮಗಳು ಉತ್ತಮವಾಗಿದ್ದು ಅದರ ಪ್ರಯೋಜನೆಯನ್ನು ಪಡೆದುಕೊಳ್ಳುವಂತೆ ತಿಳಿಸಿದರು. ಗದಗ ಜಿಲ್ಲಾ ಜನಜಾಗೃತಿ ವೇದಿಕೆಯ ಕೋಶ ಅಧಿಕಾರಿ ಎ.ಕೆ. ಮುಲ್ಲಾನವರ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಪ್ರಕಾಶ್ ಗೌಡ (ನಾರಾಯಣ ಹೃದಯಾಲಯ ಧಾರವಾಡ), ಕ್ಷೇತ್ರಾಧಿಕಾರಿ ಶ್ರೀಮತಿ ವಿಶಾಲ ಮಲ್ಲಾಪುರ್,ಜ್ಞಾನವಿಕಾಸ ಸಮನ್ವಯಾಧಿಕಾರಿ ಮಂಜುಳಾ ಜೈನ್, ಮೇಲ್ವಿಚಾರಕರಾದ ಗಾಯತ್ರಿ ಕಾಕಡೆ, ರಾಜಪ್ಪ ಟಿ, ಸಿ, ಎಸ್‌ಟಿ ನೋಡಲ್ ಅಧಿಕಾರಿ ಕಿರಣ್ ಕುಮಾರ್, ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು. 200 ಸದಸ್ಯರು ಭಾಗವಹಿಸಿ ಉಚಿತವಾಗಿ ಬಿಪಿ, ಇಕೋ ಪರೀಕ್ಷೆ ಮಾಡಿಸಿಕೊಂಡರು.



ಪತ್ನಿ ಜೊತೆ ಅನೈತಿಕ ಸಂಬಂಧ: ವ್ಯಕ್ತಿ ಕೊಲೆ

ಹುಬ್ಬಳ್ಳಿ: ಪತ್ನಿಯ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದ ಎಂಬ ಕಾರಣಕ್ಕೆ ವ್ಯಕ್ತಿಯೊಬ್ಬನ್ನು ಕೊಲೆ ಮಾಡಿದ ಘಟನೆ ತಾಲೂಕಿನ ಬ್ಯಾಹಟ್ಟಿ ಗ್ರಾಮ ಬಸ್ ನಿಲ್ದಾಣ ಹತ್ತಿರ ನಡೆದಿದೆ.

ಗ್ರಾಮದ ಫಕೀರೇಶ ಅಕ್ಕಿವಳ್ಳಿ(33) ಹತ್ಯೆಯಾದ ವ್ಯಕ್ತಿ. ಪ್ರಕಾಶ ಕರಶೆಟ್ಟಿ ಹತ್ಯೆ ಮಾಡಿದ ಆರೋಪಿ. ಫಕೀರೇಶ ತನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವ ಕಾರಣಕ್ಕೆ ಶುಕ್ರವಾರ ರಾತ್ರಿ ಅಡ್ಡಗಟ್ಟಿದ್ದಾನೆ. ಅಲ್ಲಿಂದ ಫಕೀರೇಶ ತಪ್ಪಿಸಿಕೊಂಡು ಹೋದರು ಬೆನ್ನಟ್ಟಿ ಕೊಡಲಿಯಿಂದ ಹೊಡೆದು ಕೊಲೆ ಮಾಡಿದ್ದಾನೆ ಎಂದು ಗ್ರಾಮೀಣ ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕಾಶನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹರಾಜು ಷರತ್ತುಗಳು :- (1) ಹರಾಜುವಿನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭವಾಗುವ ಪೂರ್ವದಲ್ಲಿ **ರೂ. 20000/-** ಗಳ ಡಿ.ಡಿ ಯನ್ನು ಪಿಡಿಓ ಮತ್ತು ಅಧ್ಯಕ್ಷರು ಗ್ರಾಮ ಪಂಚಾಯತ ಕಲಕೇರಾ ರವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು (2) ಮೀನು ಪಾಶುವಾರು ಹಕ್ಕಿನ ವಿಲೇವಾರಿಗಾಗಿ ಮೀನುಗಾರಿಕೆ ಫಸಲಿ ವರ್ಷವು **ದಿನಾಂಕ: 01/07/2026 ರಿಂದ 30/06/2027** ರವರೆಗೆ ಇರುವುದು. (3) ಸ್ಥಳೀಯ ಮೀನುಗಾರಿಕೆ ಸಹಕಾರಿ ಸಂಘಗಳಿಗೆ ಪ್ರಥಮ ಆದ್ಯತೆ (4) ಮೀನುಗಾರಿಕೆ ಇಲಾಖೆಯಿಂದ ನಿಷೇಧಿತಗೊಂಡ ತಳೀಯ ಮೀನು ಮರಿಗಳನ್ನು ಹಾಗೂ ಸ್ಥಳೀಯ ಮೀನು ಸಂತತಿಯ ನಾಶಕ್ಕೆ ಕಾರಣವಾಗುವ ಮೀನು ತಳಿಗಳನ್ನು ಯಾವುದೇ ಕಾರಣಕ್ಕೂ ಕೆರೆಗಳಿಗೆ ಬಿತ್ತನೆ ಮಾಡತಕ್ಕದಲ್ಲ (5) ಕೆರೆಗಳಲ್ಲಿ ಸಿಡಿ ಮದ್ದು ಮತ್ತು ವಿಷ ಪ್ರಯೋಗ ಮಾಡಿ ಮೀನು ಹಿಡಿಯುವದನ್ನು ನಿಷೇಧಿಸತಕ್ಕದ್ದು. (6) ಹರಾಜು ಲೀಲಾವು ಪಡೆದ ಹರಾಜುದಾರರು ಹರಾಜು ಮೊತ್ತದ ಸಂಪೂರ್ಣ ಮೊತ್ತವನ್ನು ಗ್ರಾಮ ಪಂಚಾಯತಿಗೆ ಪಾವತಿಸಿ ಮೀನು ಪಾಶುವಾರು ವಿಲೇವಾರಿ ಹಕ್ಕಿನ ಪ್ರತಿಯನ್ನು ಪಡೆಯತಕ್ಕದ್ದು (7) ಗ್ರಾಮ ಪಂಚಾಯತಿಯಿಂದ ನೀಡಲಾದ ಮೀನು ಪಾಶುವಾರು ವಿಲೇವಾರಿ ಹಕ್ಕನ್ನು ರದ್ದು ಮಾಡುವ ಅಧಿಕಾರವನ್ನು ಗ್ರಾಮ ಪಂಚಾಯತಿ ಹೊಂದಿರುತ್ತದೆ. (8) ಕೆರೆಯ ಸುತ್ತ-ಮುತ್ತ ಸ್ವಚ್ಛತೆ ಹಾಗೂ ನೈರ್ಮಲ್ಯಕ್ಕೆ ಆದ್ಯತೆ ನೀಡುವುದು.
ಸಹಿ/- ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಕಲಕೇರಾ
ವಾ.ಸಾ.ಸಂಇ/ಕೊಪ್ಪಳ/175/ದೇಶಪಾಂಡೆಪಬ್ಲಿಸಿಟಿ/2026-27

ಪಿ&ಎಸ್ ಸಿ ನಂಬರ್:2/2026
ಮಾನ್ಯ ಹಿರಿಯ ದಿವಾಣಿ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು:1] ಶ್ರೀ ಗಂಗಾಧರ ತಂದೆ ಮಾದೇವಪ್ಪ ಬಡಿಗೇರ, ವಯಸ್ಸು: 56 ವರ್ಷ, ಉದ್ಯೋಗ: ಶೇತ್ಕಿ, ಸಾಕೀನ: ಕಮಡೊಳ್ಳಿ, ತಾಲೂಕ: ಕುಂದಗೋಳ, ಜಿಲ್ಲಾ: ಧಾರವಾಡ.
ವಿರುದ್ಧ
ಎದುರುಗಾರ :ಯಾರು ಇಲ್ಲ
ಸಾರ್ವಜನಿಕ ನೋಟೀಸು
ಮೇಲ್ಕಂಡ ಪ್ರಕರಣದಲ್ಲಿ ಮೇಲ್ಕಂಡ ಅರ್ಜಿದಾರರು ಮೃತ ಸೋಮೇಶ್ವರ ತಂದೆ ಈಶ್ವರಪ್ಪ ಸುತಾರ ಸಾಕೀನ: ಕುಂದಗೋಳ ಇವರ ನೇರ ಮತ್ತು ಸಮೀಪದ ಉತ್ತರಾಧಿಕಾರಿಗಳು ಅಂತಾಉತ್ತರಾಧಿಕಾರ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದ್ದು ಇರುತ್ತದೆ.
ಸದರಿ ಅರ್ಜಿಗೆ ಯಾವದೇ ಪ್ರಕ್ರಿಯ ತಕರಾರು ಇದ್ದಲ್ಲಿ ಮೇಲ್ಕಂಡ ಪ್ರಕರಣವು ದಿನಾಂಕ:01/07/2026ರಂದು ಮುಂಜಾನೆ 10.30 ಗಂಟೆಗೆ ಸದರಿ ಪ್ರಕರಣದ ವಿಚಾರಣೆಗಾಗಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ, ಸಾ|| ತಾ|| ಕುಂದಗೋಳ ಇವರಲ್ಲಿ ನಿಯಮಿಸಿದ್ದು ಇರುತ್ತದೆ ತಮ್ಮದೇನಾದರೂ ತಕರಾರುಗಳು ಇದ್ದರೆ ಅವುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವದು. ಈ ಹೊತ್ತು ದಿ:11/06/2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೋಹರು ಹಾಕಿ ಕೊಡಲ್ಪಟ್ಟಿತು.
ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/ಶಿರಸ್ತೇದಾರ
ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ
ಸಹಿ/- ಯು ಎಮ್ ಪಾಟೀಲ
ಅರ್ಜಿದಾರರ ಪರ ವಕೀಲರು

ಕ್ರಿಮಿನಲ್ ಮೀಸಲೇನಿಯಸ್ ನಂ :144/2026
ಮೆ|| ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ನವಲಗುಂದ ಇವರ ನ್ಯಾಯಾಲಯದಲ್ಲಿ, ನವಲಗುಂದ
ಅರ್ಜಿದಾರ: ಮಲ್ಲೇಶಪ್ಪ ತಂದೆ ಬಸಪ್ಪ ದುರಗದ,
ವಿರುದ್ಧ
ಎದುರುದಾರ :ಮೆ|| ತಹಶೀಲ್ದಾರರು, ನವಲಗುಂದ. ತಾಲೂಕ: ನವಲಗುಂದ.
ಪತ್ರಿಕಾ ಪ್ರಕಟಣೆ.
ಅರ್ಜಿದಾರನ ತಂದೆಯಾದ ಬಸಪ್ಪ ತಂದೆ ದ್ಯಾಮಪ್ಪ ದುರಗದ ಇವನು ದಿನಾಂಕ:23/11/24 ರಂದು ಅಣ್ಣೀಗೇರಿ ತಾಲೂಕ ಪೈಕಿ ಹಳ್ಳಿಕೇರಿ ಗ್ರಾಮದಲ್ಲಿ ಮೋತಿಯಾದದ್ದು ಇರುತ್ತದೆ. ಅಂತಾ ಎದುರುದಾರರ ಜನನ ಮರಣ ನೋಂದಣಿ ಇಲಾಖೆಯಲ್ಲಿ ದಾಖಿಲ್ ಮಾಡಿಕೊಳ್ಳಲು ಹುಕುಂ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಈ ಬಗ್ಗೆ ಯಾರದ್ದಾದರೂ ತಕರಾರು ವಗೈರೆ ಇದ್ದರೆ ಅಥವಾ ಯಾರಾದರೂ ಬೇರೆ ವಾರಸುದಾರರು ಇದ್ದರೆ ದಿನಾಂಕ:24/7/2026 ರಂದು ಬೆಳಿಗ್ಗೆ 11:00 ಘಂಟೆಗೆ ಈ ನ್ಯಾಯಾಲಯಕ್ಕೆ ಸ್ವತಹ ಆಗಲಿ ಅಥವಾ ವಕೀಲರ ಮೂಲಕವಾಗಿ ಅಗಲಿಹಾಜರ್ ಆಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಯಾರದೂ ತಕರಾರು ಇರುವುದಿಲ್ಲ ಅಂತಾ ಏಕತರ್ಫಿ ಆದೇಶವನ್ನು ಮಾಡಲಾಗುವುದು. ಈ ಸಾರ್ವಜನಿಕ ನೋಟಿಸು ಇಂದಿನ ದಿವಸ ದಿನಾಂಕ:20/06/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರಿಗೆ
ನವಲಗುಂದ.
ದಿನಾಂಕ:20/06/2026.
ಶಿರಸ್ತೇದಾರರು, ದಿವಾಣಿ ವ ಜೆ.ಎಮ್.ಎಫ್.ಸಿ ನ್ಯಾಯಾಲಯ, ನವಲಗುಂದ ಜಿಲ್ಲಾ:ಧಾರವಾಡ
ಸಹಿ/-(ಶ್ರೀ ಎಸ್.ಎ.ಪಟ್ಟಿ)ಅರ್ಜಿದಾರನ ಪರ ವಕೀಲರು,

ಕ್ರಿಮಿನಲ್ ಮೀಸಲೇನಿಯಸ್ ನಂ: 143/2026
ಮೆ|| ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ನವಲಗುಂದ ಇವರ ನ್ಯಾಯಾಲಯದಲ್ಲಿ, ನವಲಗುಂದ
ಅರ್ಜಿದಾರ :ಕೃಷ್ಣಪ್ಪ ತಂದೆ ಹನಮಂತಪ್ಪ ಬಳ್ಳಾರಿ
ವಿರುದ್ಧ
ಎದುರುದಾರ:ಮೆ|| ತಹಶೀಲ್ದಾರರು ನವಲಗುಂದ. ತಾಲೂಕ: ನವಲಗುಂದ.
ಪತ್ರಿಕಾ ಪ್ರಕಟಣೆ.
ಅರ್ಜಿದಾರನ ಸಹೋದರನಾದ ಗೋವಿಂದರಾಜ ತಂದೆ ಸಂಜೀವಪ್ಪ ಬಳ್ಳಾರಿ ಇವನು ದಿನಾಂಕ: 10/10/2010 ರಂದು ನವಲಗುಂದ ತಾಲೂಕ ಪೈಕಿ ಆಳಗವಾಡಿ ಗ್ರಾಮದಲ್ಲಿ ಮೋತಿಯಾದದ್ದು ಇರುತ್ತದೆ ಅಂತಾ ಎದುರುದಾರರ ಜನನ ಮರಣ ನೋಂದಣಿ ಇಲಾಖೆಯಲ್ಲಿ ದಾಖಿಲ್ ಮಾಡಿ ಕೊಳ್ಳಲು ಹುಕುಂ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಈ ಬಗ್ಗೆ ಯಾರದ್ದಾದರೂ ತಕರಾರು ವಗೈರೆ ಇದ್ದರೆ ಅಥವಾ ಯಾರಾದರೂ ಬೇರೆ ವಾರಸುದಾರರು ಇದ್ದರೆ ದಿನಾಂಕ:24/7/2026 ರಂದು ಬೆಳಿಗ್ಗೆ 11:00 ಘಂಟೆಗೆ ಈ ನ್ಯಾಯಾಲಯಕ್ಕೆ ಸ್ವತಹ ಆಗಲಿ ಅಥವಾ ವಕೀಲರ ಮೂಲಕವಾಗಿ ಅಗಲಿ ಹಾಜರ್ ಅಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಯಾರದೂ ತಕರಾರು ಇರುವುದಿಲ್ಲ ಅಂತಾ ಏಕತರ್ಫಿ ಆದೇಶವನ್ನು ಮಾಡಲಾಗುವುದು. ಈ ಸಾರ್ವಜನಿಕ ನೋಟಿಸು ಇಂದಿನ ದಿವಸ ದಿನಾಂಕ: 20/6/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರಿಗೆ
ನವಲಗುಂದ.
ದಿನಾಂಕ:20/06/2026.
ಸಹಿ/-ಶಿರಸ್ತೇದಾರರು, ದಿವಾಣಿ ವ ಜೆ ಎಮ್ ಎಫ್ ಸಿ ನ್ಯಾಯಾಲಯ, ನವಲಗುಂದ ಜಿಲ್ಲಾ: ಧಾರವಾಡ
ಸಹಿ/-(ಶ್ರೀ ಎಸ್.ಎ.ಪಟ್ಟಿ)ಅರ್ಜಿದಾರನ ಪರ ವಕೀಲರು,

IN THE COURT OF THE HON'BLE IV ADDITIONAL CIVIL JUDGE, CUM J.M.F.C. AT BALLARI
Cri. M.C. NO. 258/2026
Between :
Ramanjini and others .....Petitioners
And
The Tahasildar cum Register of Births and Deaths, Taluk Office, Ballari .....Respondent
NOTICE
TO WHOM SO EVER IT MAY CONCERNED
To
Respondent:
The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners father death certificate by name HANUMANTHAPPA S/o Late. RUDRAPPA, who died on 15-05-1995 at Petitioner No. 1 resident at KAREKALLU VILLAGE, BALLARI TALUK AND DISTRICT.
You are here by directed to appear in this court in person or by a pleader duly instructed on 31/07/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 20th day of June-2026.
By order of the court.
Sd/- Chief Ministerial officer
Hon'ble IV.A.C.J & J.M.F.C. Court Ballari.
Sd/- Laliya Naik
Advocate for the Petitioner

IN THE COURT OF THE HON'BLE IV ADDITIONAL CIVIL JUDGE, CUM J.M.F.C. AT BALLARI
Cri. M.C. NO. 259/2026
Between :
Ramanjini and others .....Petitioners
And
The Tahasildar cum Register of Births and Deaths, Taluk Office, Ballari .....Respondent
NOTICE
TO WHOM SO EVER IT MAY CONCERNED
To
Respondent:
The Tahasildar cum Register of Births and Deaths, Taluk Office, Ballari.
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners Mother death certificate by name THIMMAKKA W/O Late. HANUMANTHAPPA, who died on 08-09-1984 at Petitioner No. 1 resident at KAREKALLU VILLAGE, BALLARI TALUK AND DISTRICT.
You are here by directed to appear in this court in person or by a pleader duly instructed on 31/07/2026 at about 11.00 am in the before this court to show cause against the above petitions filling wherein the petition will be heard and determined ex-parte.
Given under my hand and seal of the court on this day of 20th day of June-2026.
By order of the court.
Sd/- Chief Ministerial officer
Hon'ble IV.A.C.J & J.M.F.C. Court Ballari.
Sd/- Laliya Naik
Advocate for the Petitioner

ಮಿನಲ್ ಮೀಸಲೇನಿಯಸ್ ನಂ: 142/2026
ಮೆ|| ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ನವಲಗುಂದ ಇವರ ನ್ಯಾಯಾಲಯದಲ್ಲಿ, ನವಲಗುಂದ
ಅರ್ಜಿದಾರ: ಕೃಷ್ಣಪ್ಪ ತಂದೆ ಹನಮಂತಪ್ಪ ಬಳ್ಳಾರಿ
ವಿರುದ್ಧ
ಎದುರುದಾರ:ಮೆ||ತಹಶೀಲ್ದಾರರು, ನವಲಗುಂದ. ತಾಲೂಕ:ನವಲಗುಂದ.
ಪತ್ರಿಕಾ ಪ್ರಕಟಣೆ.
ಅರ್ಜಿದಾರನ ತಂದೆಯಾದ ಹನಮಂತಪ್ಪ ತಂದೆ ಸಂಜೀವಪ್ಪ ಬಳ್ಳಾರಿ ಇವನು ದಿನಾಂಕ: 08/06/2022 ರಂದು ನವಲಗುಂದ ತಾಲೂಕ ಪೈಕಿ ಆಳಗವಾಡಿ ಗ್ರಾಮದಲ್ಲಿ ಮೋತಿಯಾದದ್ದು ಇರುತ್ತದೆ ಅಂತಾ ಎದುರುದಾರರ ಜನನ ಮರಣ ನೋಂದಣಿ ಇಲಾಖೆಯಲ್ಲಿ ದಾಖಿಲ್ ಮಾಡಿ ಕೊಳ್ಳಲು ಹುಕುಂ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಈ ಬಗ್ಗೆ ಯಾರದ್ದಾದರೂ ತಕರಾರು ವಗೈರೆ ಇದ್ದರೆ ಅಥವಾ ಯಾರಾದರೂ ಬೇರೆ ವಾರಸುದಾರರು ಇದ್ದರೆ ದಿನಾಂಕ: 24/7/2026 ರಂದು ಬೆಳಿಗ್ಗೆ 11-00 ಘಂಟೆಗೆ ಈ ನ್ಯಾಯಾಲಯಕ್ಕೆ ಸ್ವತಹ ಆಗಲಿ ಅಥವಾ ವಕೀಲರ ಮೂಲಕವಾಗಿ ಅಗಲಿ ಹಾಜರ್ ಅಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಯಾರದೂ ತಕರಾರು ಇರುವುದಿಲ್ಲ ಅಂತಾ ಏಕತರ್ಫಿ ಆದೇಶವನ್ನು ಮಾಡಲಾಗುವುದು. ಈ ಸಾರ್ವಜನಿಕ ನೋಟಿಸು ಇಂದಿನ ದಿವಸ ದಿನಾಂಕ: 20/6/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರಿಗೆ
ನವಲಗುಂದ.
ದಿನಾಂಕ:20/06/2026.
ಸಹಿ/-ಶಿರಸ್ತೇದಾರರು, ದಿವಾಣಿ ವ ಜೆ.ಎಮ್.ಎಫ್.ಸಿ ನ್ಯಾಯಾಲಯ, ನವಲಗುಂದ ಜಿಲ್ಲಾ: ಧಾರವಾಡ
ಸಹಿ/-(ಶ್ರೀ ಎಸ್.ಎ.ಪಟ್ಟಿ)
ಅರ್ಜಿದಾರನ ಪರ ವಕೀಲರು,

ಭಾನುವಾರದ ಪಂದ್ಯಗಳು

ಎಕ್ವಡಾರ್-ಕುರಾಕಾವೊ, (ಬೆಳಗ್ಗೆ 5:30)
ಟ್ಯೂನೇಷ್ಯಾ-ಜಪಾನ್, (ಬೆಳಗ್ಗೆ 9:30)
ಸ್ಪೇನ್-ಸೌದಿ ಅರೇಬಿಯಾ, (ರಾತ್ರಿ 9:30)
ಬೆಲ್ಜಿಯಂ-ಇರಾನ್, (ಮಧ್ಯರಾತ್ರಿ 12:30)
ಉರುಗ್ವೆ-ಕೇಪ್ ವರ್ಡೆ, (ಮಧ್ಯರಾತ್ರಿ 3:30)

ಕಿರುಸುದ್ದಿ

ಶೂಟಿಂಗ್: ಭಾರತಕ್ಕೆ 5 ಪದಕ

ಸೂಹ್ಲ್(ಜರ್ಮನಿ): ಜೂನಿಯರ್ ಶೂಟಿಂಗ್ ವಿಶ್ವ ಚಾಂಪಿಯನ್‌ಶಿಪ್ ಕೂಟದಲ್ಲಿ ಭಾರತೀಯರು 5 ಪದಕಗಳನ್ನು ಗೆದ್ದರು. 25 ಮೀ. ರ್‍ಯಾಪಿಡ್ ಫೈಯರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ರೋಹಿತ್ ಕನ್ಯಾನ್ ಕೂಡ ಚಿನ್ನದ ಪದಕ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಪ್ರಾಚಿ ಗಾಯಕ್ವಾಡ್ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ವಿಭಾಗದಲ್ಲಿ ರೋಹಿತ್, ವೇದಾಂತ್ ಮತ್ತು ಹಿತೇಶ್ ಕಂಚಿನ ಪದಕ ಮುಡಿಗೇರಿಸಿಕೊಂಡರು. 25 ಮೀ. ರ್‍ಯಾಪಿಡ್ ಫೈಯರ್ ಪಿಸ್ತೂಲ್ ವಿಭಾಗದಲ್ಲಿ ಸಮೀರ್, ಅಭಿನವ್ ಮತ್ತು ಸಾಹಿಲ್ ಮತ್ತೊಂದು ಕಂಚಿನ ಪದಕ ಗಿಟ್ಟಿಸಿಕೊಂಡರು.

ಅಶ್ಮಿತಾಗೆ ಸೋಲು

ಹೊಸದಿಲ್ಲಿ: ಭರವಸೆಯ ಆಟಗಾರ್ತಿ ಅಶ್ಮಿತಾ ಚಲಿಹಾ ಅವರ ಸೆಮಿಫೈನಲ್ ಸೋಲಿನೊಂದಿಗೆ ಪ್ರತಿಷ್ಠಿತ ಮಕಾವು ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಅಭಿಯಾನ ಅಂತ್ಯಗೊಂಡಿದೆ. ಶನಿವಾರದ ಸೆಮಿಫೈನಲ್ ಪಂದ್ಯದಲ್ಲಿ ಕೊರಿಯಾದ ಪಾರ್ಕ್ ಗಾ ಅವರೊಂದಿಗೆ ಆಡಿದ ಅವರು, 17-21, 9-21ರಿಂದ ಸೋತರು.

ಆಸ್ಟ್ರೇಲಿಯಾ ವಿರುದ್ಧ ಆತಿಥೇಯರಿಗೆ ಭರ್ಜರಿ ಗೆಲುವು

32ರ ಸುತ್ತಿಗೆ ಅಮೆರಿಕ



ಸಿಯಾಟಲ್: ಸ್ಟಾರ್ ಆಟಗಾರ ಕ್ರಿಶ್ಚಿಯನ್ ಪುಲಿಸಿಕ್ ಗಾಯದ ಕಾರಣದಿಂದ ಪಂದ್ಯದಿಂದ ಹೊರಗುಳಿದರೂ, ಆತಿಥೇಯ ಅಮೆರಿಕ ತಂಡ ಆಸ್ಟ್ರೇಲಿಯಾವನ್ನು 2-0 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ.

ಮೊದಲ ಎರಡು ಪಂದ್ಯಗಳಲ್ಲೇ ನಾಕೌಟ್ ಸ್ಥಾನ ಖಚಿತಪಡಿಸಿಕೊಂಡ ಅಮೆರಿಕ, ತನ್ನ ಅಭಿಯಾನವನ್ನು ಅತ್ಯಂತ ಯಶಸ್ವಿಯಾಗಿ ಮುಂದುವರಿಸಿದೆ. ಅಮೆರಿಕ ಪಂದ್ಯದ 11ನೇ ನಿಮಿಷದಲ್ಲೇ ಮುನ್ನಡೆ ಸಾಧಿಸಿತು. ಫೋಲರಿನ್ ಬಾಲೋಗುನ್ ಎಡಭಾಗದಿಂದ ನೀಡಿದ ಪಾಸ್‌ನ್ನು ತಡೆಯಲು ಯತ್ನಿಸಿದ ಆಸ್ಟ್ರೇಲಿಯಾ ರಕ್ಷಣಾಪಟು ಕ್ಯಾಮೆರೂನ್ ಬರ್ಗೆಸ್ ತಪ್ಪಾಗಿ ಚೆಂಡನ್ನು ತನ್ನದೇ ಗೋಲ್‌ಪೋಸ್ಟ್‌ಗೆ ತಳ್ಳಿದರು. ಇದರಿಂದ ಅಮೆರಿಕ 1-0 ಮುನ್ನಡೆ ಪಡೆಯಿತು.

ಆಸ್ಟ್ರೇಲಿಯಾಗೆ ಶಾಕ್: 43ನೇ ನಿಮಿಷದಲ್ಲಿ ಅಮೆರಿಕ ತನ್ನ ಮುನ್ನಡೆಯನ್ನು ದ್ವಿಗುಣಗೊಳಿಸಿತು. ಸೆಟ್‌ಪೀಸ್ ಸಂದರ್ಭದಲ್ಲಿನ ಸರ್ಜಿನೊ ಡೆಸ್ಟ್ ಅವರ ಶಾಟ್ ಡಿಫ್ಲೆಕ್ಟ್ ಆದ ನಂತರ, 21 ವರ್ಷದ ಅಲೆಕ್ಸ್ ಫ್ರೀಮನ್ ಹೆಡರ್ ಮೂಲಕ ಗೋಲು ದಾಖಲಿಸಿದರು. ವಿಡಿಯೋ ಪರಿಶೀಲನೆಯ ಬಳಿಕ ಗೋಲು ಮಾನ್ಯಗೊಂಡಿತು. ದ್ವಿತಿಯಾರ್ಧದಲ್ಲಿ ಆಸ್ಟ್ರೇಲಿಯಾ ಹೋರಾಟ ನಡೆಸಿದರೂ ಅಮೆರಿಕದ ರಕ್ಷಣಾ ವಿಭಾಗವನ್ನು ಭೇದಿಸಲು ವಿಫಲವಾಯಿತು. ಪರಿಣಾಮ ಅಮೆರಿಕ 2-0 ಅಂತರದ ಸುಲಭ ಜಯ ದಾಖಲಿಸಿತು.

- 11ನೇ ನಿಮಿಷ ಕ್ಯಾಮೆರೂನ್ ಬರ್ಗೆಸ್ ಆತ್ಮಘಾತಿ ಗೋಲು (ಅಮೆರಿಕ 1-0)
- 43ನೇ ನಿಮಿಷ ಅಲೆಕ್ಸ್ ಫ್ರೀಮನ್ ಹೆಡರ್ ಗೋಲು (ಅಮೆರಿಕ 2-0)
- ಕ್ರಿಶ್ಚಿಯನ್ ಪುಲಿಸಿಕ್ ಗಾಯದ ಕಾರಣ ಪಂದ್ಯದಿಂದ ಹೊರಗುಳಿದರೂ ಅಮೆರಿಕದ ಪ್ರದರ್ಶನಕ್ಕೆ ಧಕ್ಕೆಯಾಗಲಿಲ್ಲ.
- ಸತತ ಎರಡನೇ ಜಯದೊಂದಿಗೆ ನಾಕೌಟ್ ಹಂತಕ್ಕೆ ಅಮೆರಿಕ

ಅಮೆರಿಕ 2-0 ಆಸ್ಟ್ರೇಲಿಯಾ

ಅಂಕಿಅಂಶ
- ಆತ್ಮಘಾತಿ ಗೋಲು: ಕ್ಯಾಮೆರೂನ್ ಬರ್ಗೆಸ್ (11ನೇ ನಿಮಿಷ)
- ಅಲೆಕ್ಸ್ ಫ್ರೀಮನ್ (43ನೇ ನಿಮಿಷ)

ನಾಕೌಟ್ ಹಂತದಿಂದ ಹೈಟಿ ಹೊರಕ್ಕೆ

ಬ್ರೆಜಿಲ್‌ಗೆ ಗೆಲುವು

ಫಿಲಡೆಲ್ಫಿಯಾ: ಸ್ಟಾರ್ ಆಟಗಾರ ವಿನಿಸಿಯಸ್ ಜೂನಿಯರ್ ಅವರ ಗೋಲು ಹಾಗೂ ಅಸಿಸ್ಟ್ ಮಥೆಯಸ್ ಕುನ್ಹಾ ಗಳಿಸಿದ ಎರಡು ಗೋಲುಗಳ ಬಲದಿಂದ 5 ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್ ತಂಡ ಹೈಟಿ ಯನ್ನು 3-0 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್ ನಲ್ಲಿ ತನ್ನ ಮೊದಲ ಗೆಲುವು ದಾಖಲಿಸಿತು. ಈ ಸೋಲಿನೊಂದಿಗೆ 1974ರ ನಂತರ ಮೊದಲ ಬಾರಿಗೆ ವಿಶ್ವಕಪ್‌ಗೆ ಅರ್ಹತೆ ಪಡೆದ ಹೈಟಿ, ನಾಕೌಟ್ ಹಂತದ ಸ್ಪರ್ಧೆಯಿಂದ ಹೊರಬಿದ್ದ ಮೊದಲ ತಂಡ ಎನಿಸಿತು.

ಬ್ರೆಜಿಲ್, ಈ ಬಾರಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು.

ಅಂಕಿ-ಅಂಶ
- 28: ಮಥೆಯಸ್ (ಬ್ರೆಜಿಲ್)
- 42: ಮಥೆಯಸ್ (ಬ್ರೆಜಿಲ್)

ಪಂದ್ಯ ಆರಂಭದಲ್ಲೇ ರಫಿನ್ಹಾ ಗೋಲು ಗಳಿಸಿದ್ದರೂ ಆಫ್‌ಸೈಡ್ ಕಾರಣದಿಂದ ಅದು ತಿರಸ್ಕೃತವಾಯಿತು.

ಆದರೆ 28ನೇ ನಿಮಿಷದಲ್ಲಿ ಮಥೆಯಸ್ ಕುನ್ಹಾ ರೀಬೌಂಡ್ ಚೆಂಡನ್ನು ಗೋಲಾಗಿ ಪರಿವರ್ತಿಸಿ ಬ್ರೆಜಿಲ್‌ಗೆ ಮುನ್ನಡೆ ತಂದುಕೊಟ್ಟರು. ಬಳಿಕ 42ನೇ ನಿಮಿಷದಲ್ಲಿ ಎಡ ಕಾಲಿನ ಅದ್ಭುತ ಶಾಟ್ ಮೂಲಕ ಮತ್ತೊಂದು ಗೋಲು ದಾಖಲಿಸಿ ತಂಡದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಬ್ರೆಜಿಲ್ ಸುಲಭ ಜಯ ದಾಖಲಿಸಿತು.

ಸ್ಕಾಟ್ಲೆಂಡ್ ಮಣಿಸಿದ ಮೊರಾಕೊ

ಫಾಕ್ಸ್‌ಬರೋ (ಮ್ಯಾಸಚೂಸೆಟ್ಸ್): ಪಂದ್ಯ ಆರಂಭವಾಗಿ ಕೇವಲ 72 ಸೆಕೆಂಡುಗಳಲ್ಲೇ ಇಸ್ಮಾಯೆಲ್ ಸೈಬಾರಿ ಗಳಿಸಿದ ಅದ್ಭುತ ಗೋಲಿನ ನೆರವಿನಿಂದ ಮೊರಾಕೊ ತಂಡ ಸ್ಕಾಟ್ಲೆಂಡ್ ವಿರುದ್ಧ 1-0 ಅಂತರದ ಮಹತ್ವದ ಗೆಲುವು ದಾಖಲಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಕತಾರ್ ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದ ಮೊರಾಕೊ, ಮೊದಲ ಪಂದ್ಯದಲ್ಲಿ ಬ್ರೆಜಿಲ್ ವಿರುದ್ಧ

- ಮೊರಾಕೊ 1-0 ಸ್ಕಾಟ್ಲೆಂಡ್
- ಗೋಲು: ಇಸ್ಮಾಯೆಲ್ ಸೈಬಾರಿ (2ನೇ ನಿಮಿಷ)

1-1 ಸಮಬಲ ಸಾಧಿಸಿತ್ತು. ಪಂದ್ಯದ ಎರಡನೇ ನಿಮಿಷದಲ್ಲೇ ಬ್ರಹಿಮ್ ಡಿಯಾಸ್ ನೀಡಿದ ಅದ್ಭುತ ಪಾಸ್‌ನ್ನು ಸದುಪಯೋಗಪಡಿಸಿಕೊಂಡ ಸೈಬಾರಿ, ಗೋಲು ಬಾರಿಸಿದರು. ಮತ್ತೊಂದು ಪಂದ್ಯದಲ್ಲಿ ಪರಾಗ್ವೆ ಜಯ ಸಾಧಿಸಿತು.

ಬೆಂಗಳೂರು ಬ್ಲಾಸರ್ಸ್ ಶುಭಾರಂಭ

ಮೈಸೂರು: ಒಟ್ಟು ಸಾಂಘಿಕ ಪ್ರದರ್ಶನದೊಂದಿಗೆ ಮಿಂಚಿರುವ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಶನಿವಾರ ಶುರುವಾದ ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಗೆಲುವಿನಾರಂಭ ಮಾಡಿತು.

ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲಿತ ಪ್ರದರ್ಶನ ನೀಡಿದ ಬೆಂಗಳೂರು 200+ ಸ್ಕೋರ್ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದೆ. ಇಲ್ಲಿನ ಶ್ರೀಕಂಠದತ್ತ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿತು. ಪ್ರಖರ್ 38 ಬಾಲ್‌ಗಳಲ್ಲಿ 64 ರನ್ ಗಳಿಸಿದರು. ಆರವ್



ಮಹೇಶ್ 41 ಬಾಲ್‌ಗಳಲ್ಲಿ 63 ರನ್ ಗಳಿಸಿದರು. ಶುಭಾಂಗ್ ಹೆಗ್ಡೆ ಮತ್ತು ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಬೆಂಗಳೂರು 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿತು. ಆರಂಭಿಕ ಭುವನ್ 56 ರನ್‌ಗಳಿಸಿದರು. ರೋಹನ್ ಪಾಟೀಲ್ 31, ಕೃಷ್ಣನ್ 22 ರನ್ ಗಳಿಸಿದರು. ಶುಭಾಂಗ್ 36 ರನ್ ಗಳಿಸಿದರೆ, ಪ್ರವೀಣ್ ದುಬೆ 32 ರನ್ ಗಳಿಸಿ ಪಂದ್ಯ ಮುಗಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಶಿವಮೊಗ್ಗ ಹಾಗೂ ಮೈಸೂರು ತಂಡಗಳು ಎದುರಾಗಿದ್ದವು. ಉತ್ತಮ ಬ್ಯಾಟಿಂಗ್ ಮಾಡಿದ ಶಿವಮೊಗ್ಗ 190 ರನ್ ಗಳಿಸಿತು. ಭಾನುವಾರದಂದು ಕೋಸ್ಟಲ್ ಕಿಂಗ್ಸ್ ಮಂಗಳೂರು ಮತ್ತು ಹುಬ್ಬಳ್ಳಿ ಟೈಗರ್ಸ್ ಎದುರಾಗಲಿದ್ದರೆ, ಎರಡನೇ ಪಂದ್ಯದಲ್ಲಿ ಬೆಂಗಳೂರು ಮತ್ತು ಶಿವಮೊಗ್ಗ ತಂಡಗಳು ಮುಖಾಮುಖಿಯಾಗಲಿವೆ.

ಕ್ಲೀನ್‌ಸ್ವೀಪ್ ಗುರಿ ಯಶಸ್ವಿ

ಚೆನ್ನೈ: ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಶತಕ, ರೋಹಿತ್ ಶರ್ಮ ಅವರ ಕರಾರುವಾಕ್ ಬ್ಯಾಟಿಂಗ್ ಮತ್ತು ಪ್ರಸಿದ್ಧ ಕೃಷ್ಣ ಅವರ ಫೈಫರ್ ಬಲದೊಂದಿಗೆ ಭಾರತ ತಂಡವು ಪ್ರವಾಸಿ ಅಫ್ಘಾನಿಸ್ತಾನ ತಂಡದ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸಿ ಸರಣಿ ಕ್ಲೀನ್‌ಸ್ವೀಪ್ ಮಾಡಿತು.

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಆಯ್ದುಕೊಂಡಿದ್ದ ಅಫ್ಘಾನಿಸ್ತಾನ ತಂಡವನ್ನು 218 ರನ್‌ಗಳಿಗೆ ಆಲೌಟ್ ಮಾಡಿತು. ನಾಯಕ ಹಶ್ಮತ್ತುಲ್ಲಾ ಶತಕ ಬಾರಿಸಿದರು. ಅಜ್ಮತ್ತುಲ್ಲಾ ಓಮರ್ಝೈ ಅರ್ಧಶತಕ ಬಾರಿಸಿದರು. ಇನ್ನುಳಿದ ಬ್ಯಾಟಿಗರು 10ರ ಗಡಿಯೇ ದಾಟಲಿಲ್ಲ.

ಗುರಿ ಬೆನ್ನತ್ತುವಾಗ ಯಾವುದೇ ಅಡೆತಡೆಗಳನ್ನು ಎದುರಿಸಿದ ಭಾರತ 28.4 ಓವರ್‌ಗಳಲ್ಲೇ ಪಂದ್ಯವನ್ನು ಮುಗಿಸಿತು. ಯಶಸ್ವಿ ಜೈಸ್ವಾಲ್ ತಮ್ಮ ಮೊದಲ ಏಕದಿನ ಶತಕ ಬಾರಿಸಿದರು. ಅತ್ತ ರೋಹಿತ್ ಶರ್ಮ ಕಂಬ್ಯಾಕ್ ಮಾಡಿದ್ದು 79 ರನ್ ಗಳಿಸಿದರು. ಪಂದ್ಯ ಗೆಲ್ಲುವುದಕ್ಕೆ ಉಳಿದ ಬ್ಯಾಟಿಗರ ಕೊಡುಗೆ ಅವಶ್ಯಕತೆಯೇ ಬೀಳಲಿಲ್ಲ.

ಜೈಸ್ವಾಲ್ ಅರ್ಭಟ: ಗುರಿ ಬೆನ್ನತ್ತುವಾಗ ಜೈಸ್ವಾಲ್ ಮತ್ತು ರೋಹಿತ್ ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುತ್ತಾ ಕಸಿದುಕೊಂಡರು. 38 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಯಶಸ್ವಿ 83 ಬಾಲ್‌ಗಳಲ್ಲಿ ಶತಕ ಪೂರೈಸಿದರು. ಅವರ ಇನ್ನಿಂಗ್ಸ್‌ನಲ್ಲಿ 14 ಬೌಂಡರಿ, 3 ಸಿಕ್ಸರ್‌ಗಳು ಸೇರಿವೆ.ಅತ್ತ ರೋಹಿತ್ ಕೂಡ ಅರ್ಧಶತಕ ಬಾರಿಸಿದರು. 79 ರನ್‌ಗೆ ರೋಹಿತ್ ವಿಕೆಟ್ ಒಪ್ಪಿಸಿದರು.

ಆಫ್ಘನ್‌ಗೆ 5 ರನ್ ಪೆನಾಲ್ಟಿ

ಅಫ್ಘಾನಿಸ್ತಾನ ತಂಡಕ್ಕೆ 5 ರನ್‌ಗಳ ಪೆನಾಲ್ಟಿ ನೀಡಿದ ಅಪರೂಪದ ಸಂಗತಿ ನಡೆಯಿತು. ಆಫ್ಘನ್ ತಂಡದ ನಾಯಕ ಹಶ್ಮತ್ತುಲ್ಲಾ ಬ್ಯಾಟಿಂಗ್ ಮಾಡುವ ವೇಳೆ ಪಿಚ್‌ನ ಪ್ರೊಟೆಕ್ಟೆಡ್ ಪ್ರದೇಶದಲ್ಲಿ ಎರಡು ಬಾರಿ ಓಡಿದರು. ಪರಿಣಾಮ ಮೊದಲಿಗೆ ಒಂದು ಬಾರಿ ಎಚ್ಚರಿಕೆ ಕೊಟ್ಟ ನಿರ್ಣಾಯಕರು ಎರಡನೇ ಬಾರಿ ಮಾಡಿದಾಗ 5 ರನ್ ಪೆನಾಲ್ಟಿ ಕೊಟ್ಟರು. ಪರಿಣಾಮ ಭಾರತ 5 ರನ್‌ಗಳೊಂದಿಗೆ ಬ್ಯಾಟಿಂಗ್ ಶುರು ಮಾಡಿತು.

ಸಂಕ್ಷಿಪ್ತ ಸ್ಕೋರ್

ಅಫ್ಘಾನಿಸ್ತಾನ 44.2 ಓವರ್‌ಗಳಲ್ಲಿ 218: ಹಶ್ಮತ್ತುಲ್ಲಾ 102, ಓಮರ್ಝೈ 50; ಪ್ರಸಿದ್ಧ ಕೃಷ್ಣ 23/5
ಭಾರತ 28.4 ಓವರ್‌ಗಳಲ್ಲಿ 224/1: ಜೈಸ್ವಾಲ್ 110★, ರೋಹಿತ್ 79

ಇಂದು ಭಾರತ-ಆಫ್ರಿಕಾ ಪಂದ್ಯ

ಮ್ಯಾಂಚೆಸ್ಟರ್: ಸತತ ಎರಡು ಪಂದ್ಯಗಳಲ್ಲಿ ಜಯ ಸಾಧಿಸಿರುವ ಭಾರತ ಮಹಿಳಾ ತಂಡವು ಹ್ಯಾಟ್ರಿಕ್ ಗೆಲುವಿನ ಕನಸಿನೊಂದಿಗೆ ಮೂರನೇ ಪಂದ್ಯವಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಬಲಿಷ್ಠ ದ.ಆಫ್ರಿಕಾ ತಂಡವನ್ನು ಎದುರಿಸಬೇಕಿರುವುದರಿಂದ ಭಾರತ ಕಠಿಣ ಅಭ್ಯಾಸವನ್ನು ಕಳೆದ ಎರಡು ದಿನಗಳಿಂದಲೂ ನಡೆಸಿತು. ಮಂಧಾನ ಅವರ ಬ್ಯಾಟಿಂಗ್ ಬಲ ಮತ್ತು ಬೌಲರುಗಳ ಸಾಂಘಿಕ ಆಟದೊಂದಿಗೆ ಭಾರತ ಮೊದಲಿಗೆ ಪಾಕಿಸ್ತಾನ ನಂತರ ನೆದರ್ಲೆಂಡ್ಸ್ ತಂಡಗಳನ್ನು ಸೋಲಿಸಿ ಅಜೇಯವಾಗಿದೆ. ಏಕದಿನ ವಿಶ್ವಕಪ್ ಗೆದ್ದ ನಂತರ ಭಾರತದ ಪಾರುಪತ್ಯ ಅಚಲವಾಗಿದ್ದು ಮೂರನೇ ಗೆಲುವಿನೊಂದಿಗೆ ಸೂಪರ್ 8ಗೆ ಲಗ್ಗೆ ಹಾಕಲು ಮುಂಚೂಣಿಯಲ್ಲಿದೆ.

ಬ್ಯಾಟಿಂಗ್‌ನಲ್ಲಿ ಸ್ಮೃತಿ ಮಂಧಾನ ಎರಡು ಪಂದ್ಯಗಳಲ್ಲಿ 142 ರನ್ ಗಳಿಸಿ ಲಯದಲ್ಲಿದ್ದಾರೆ. ಶೆಫಾಲಿ ವರ್ಮಾ ಕೂಡ ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಹರ್ಮನ್ ಪ್ರೀತ್ ಕೌರ್ ಅವರು ಜವಾಬ್ದಾರಿಯುತ ಬ್ಯಾಟಿಂಗ್ ಮಾಡುತ್ತಿದ್ದಾರೆ. ಫಿನಿಶಿಂಗ್ ವೇಳೆ ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್ ಮಾಡುತ್ತಿರುವುದು ತಂಡದ ಬಲ ಹೆಚ್ಚಿಸಿದೆ. ಶ್ರೀ ಚಾರಣಿ ಬೌಲಿಂಗ್ ಭಾರತ ತಂಡದ ದೊಡ್ಡ ಬಲ. ದೀಪ್ತಿ ಶರ್ಮ ಅವರ ಅನುಭವ ಕೂಡ ಪಂದ್ಯ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅತ್ತ ದ.ಆಫ್ರಿಕಾ ಕೂಡ ಗೆಲುವಿನ ನಾಗಾಲೋಟದ ಮೇಲೆ ಕಣ್ಣಿಟ್ಟಿದೆ.

ಪಂದ್ಯದ ವಿವರ:
ಯಾವಾಗ: ಭಾನುವಾರ
ಎಲ್ಲಿ: ಮ್ಯಾಂಚೆಸ್ಟರ್
ಸಮಯ: ಸಂಜೆ 7:00

ಖಾತೆ ತೆರೆದ ಕಿವೀಸ್


ಲೀಡ್ಸ್: ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಪಂದ್ಯದಲ್ಲಿ ಮೊದಲ ಗೆಲುವು ಸಾಧಿಸಿದೆ. ಚೊಚ್ಚಲ ಪಂದ್ಯದಲ್ಲಿ ಸೋತಿದ್ದ ಕಿವೀಸ್ ಎರಡನೇ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಿತ್ತು.

ಶುಕ್ರವಾರ ತಡರಾತ್ರಿಯ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 40 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 140 ರನ್ ಗಳಿಸಿದರು. ಮೆಲ್ಲಿ ಕೇರ್ 30, ಬ್ರೋಕ್ 34 ಮತ್ತು ಇಝಿ ಶಾರ್ಪ್ 36 ರನ್ ಗಳಿಸಿದರು. ಐರ್ಲೆಂಡ್ ಪರ ಓರ್ಲಾ, ಕಾರಾ 2, ಕೆಲ್ಲಿ, ಐಮಿ 1 ವಿಕೆಟ್ ಕಿತ್ತರು.

ಗುರಿ ಬೆನ್ನತ್ತಿದ ಐರ್ಲೆಂಡ್ 136 ರನ್ ಗಳಿಸಿತು. 4 ವಿಕೆಟ್ ಮಾತ್ರ ಕಳೆದುಕೊಂಡರೂ ಐರ್ಲೆಂಡ್ ಡಾಟ್ ಮಾಡಿ ತತ್ತರಿಸಿತು. ಗ್ಯಾಬಿ 58, ಓರ್ಲಾ 59 ರನ್ ಗಳಿಸಿದರು. ಕಿವೀಸ್ ಪರ ಕೆರ್ 2, ಇಲ್ಲಿಂಗ್, ಮೈರ್ 1 ವಿಕೆಟ್ ಕಿತ್ತರು. ಶನಿವಾರದ ಪಂದ್ಯದಲ್ಲಿ 216 ರನ್ ಗಳಿಸಿದ್ದ ಆಸ್ಟ್ರೇಲಿಯಾ ನೆದರ್ಲೆಂಡ್ಸ್ ತಂಡವನ್ನು 123 ರನ್‌ಗಳಿಗೆ ಕಟ್ಟಿಹಾಕಿ ಜಯ ಸಾಧಿಸಿದೆ. ಆ ಮೂಲಕ ಬಹುತೇಕ ಸೂಪರ್ 8ಕ್ಕೆ ಲಗ್ಗೆ ಹಾಕಿದೆ. ಭಾನುವಾರ ಶ್ರೀಲಂಕಾ ಹಾಗೂ ವಿಂಡೀಸ್ ತಂಡಗಳು ಮುಖಾಮುಖಿಯಾಗಲಿವೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6021

ಎಡದಿಂದ ಬಲಕ್ಕೆ
1.ಮರದ ನಡುವೆ ರತ್ನಪಡಿ ವ್ಯಾಪಾರಿಯಿದ್ದಾನೆ (4)
3.ಮದವನ್ನೊಳಗೊಂಡ ಸಮದರ್ಶಿ (4)
5.ಉಲ್ಟಾ ಚಲಿಸುವ ಎಂಬರ್ಥದ ಶಬ್ದ (3)
6.ಜಾವ-ನತ ಒಳಗೊಂಡ ಇದೀಗ ತಾನೆ ಜನಿಸಿದ್ದು (4)
8.ಪಾಳಿ-ಅನುಕ್ರಮದ ಸಮಾನಪದ (3)
9.ಕಾಡು, ಒಂದು ಚಲನಚಿತ್ರವಾಗಿ ಬಂದಿದೆ (3)
11.ವಿಘ್ನನಿವಾರಕ-ಶಿವಪುತ್ರ (4)
13.ಸೌಂದರ್ಯ ಬಣ್ಣಿಸಲು ಬಳಸುವ ಶಬ್ದ (3)
14.ರುಚಿಕರ,ನಾಲಿಗೆಗೆ ಹಿತವೆನಿಸುವ ಭೋಜನ (4)
15.ಇದ್ದುದ್ದನ್ನು ಕಳೆದುಕೊಂಡವನು-ನಿರ್ಭಾಗ್ಯ (4)

ಮೇಲಿನಿಂದ ಕೆಳಕ್ಕೆ
1.ಮನದ ನಡುವೆ ಸ್ನಾನವಡಗಿದೆ (3)
2.ಇಲ್ಲದ-ಮುಕ್ತವಾದ ಎಂಬರ್ಥದ ಶಬ್ದ (3)
3.ಮುಖ ಸಣ್ಣಗೆ ಮಾಡಿಕೊಂಡಿರುವ ಗೆಳೆಯ (2)
4.ದರದ ನಡುವೆ ಸಂಯುಕ್ತಾಕ್ಷರವಿದೆ (4)
7.ಕುವೆಂಪು ಅವರ ಪ್ರಸಿದ್ಧ ಸಾಮಾಜಿಕ ನಾಟಕ (4)
8.ಪವಿತ್ರಮನ, ಗೌರವದಿಂದ ಇನ್ನೊಬ್ಬರಿಗೆ ನೀಡುವುದು (4)
10.ಹೊಂದಾಣಿಕೆ ಎಂಬರ್ಥದ ಶಬ್ದ (4)
11.ಭಾರತದ ರಾಷ್ಟ್ರಧ್ವಜ ತಯಾರಿಸುವ ಅಧಿಕೃತ ಕೇಂದ್ರ (3)
12.ಮೂರು ಮೂಲೆಗಳುಳ್ಳ ಆಕೃತಿ (3)
13.ತೆರಿಗೆ-ಕರದ ಸಮಾನಪದ (2)

6020 ಉತ್ತರ

ಎಡದಿಂದ ಬಲಕ್ಕೆ:
1.ಸಹಿತ 5.ಕರುಣಾಳು
6.ಗಿರಿಧರ 7.ರಮಣಿ
9.ಬೇಡಿ 10.ಧರೆ
11.ಪಾರಜ
13.ದಂಡಪಿಂಡ
14.ಪರಿಣತಿ 15.ರಜತ

ಮೇಲಿನಿಂದ ಕೆಳಕ್ಕೆ :
1.ಸಮಾಚಾರ 2.ತರಂಗಿಣಿ
3.ಶಂಕರ 4.ಕಾಳುಕಡಿ
8.ಮದಿರೆ 9.ಬೇಸರ
10.ಧನಪತಿ 11.ಜಡಧರ
13.ಪಾರಂಗತ 13.ದಂತಿನಿ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ: ಬದುಕಿನ ದಿನಗಳಿಗೆ ಸಾರ್ಥಕತೆಯ ಸ್ಪರ್ಶ

ಸಿ.ಪಿ. ರಾಧಾಕೃಷ್ಣನ್



ಬಹಳ ಹಿಂದಿನಿಂದಲೂ, ಇಡೀ ಪ್ರಪಂಚವನ್ನು ಒಂದು ದೊಡ್ಡ ಕುಟುಂಬ ಎಂದು ಭಾವಿಸುವ ಮತ್ತು ಎಲ್ಲಾ ಜೀವಿಗಳನ್ನು ಒಂದೇ ಎಂದು ಕಾಣುವ ವಸುಧೈವ ಕುಟುಂಬಕಂ ಎಂಬ ಉದಾತ್ತ ಆಲೋಚನೆಯೇ ಭಾರತದ ಹೆಮ್ಮೆಯ ಗುರುತಾಗಿದೆ. ಭಾರತದ ಆಧ್ಯಾತ್ಮಿಕ ಜ್ಞಾನದಿಂದ ಬಂದಿರುವ ಯೋಗವು ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಒಂದಕ್ಕೊಂದು ಜೋಡಿಸುವ ಪ್ರಾಚೀನ ಪದ್ಧತಿಯಾಗಿದೆ. ಯೋಗದ ಮುಖ್ಯ ಭಾಗಗಳೆಂದರೆ ಆಸನಗಳು (ದೈಹಿಕ ಕಸರತ್ತುಗಳು), ಪ್ರಾಣಾಯಾಮ (ಉಸಿರಾಟದ ಕ್ರಿಯೆಗಳು) ಮತ್ತು ಧ್ಯಾನ. ಇವೆಲ್ಲವೂ ಸೇರಿದಾಗ ನಮ್ಮ ದೇಹಕ್ಕೆ ಗಟ್ಟಿಮುಟ್ಟಾದ ಶಕ್ತಿ, ಮನಸ್ಸಿಗೆ ಸ್ಪಷ್ಟತೆ ಮತ್ತು ಭಾವನೆಗಳ ಮೇಲೆ ಹತೋಟಿ ಸಿಗುತ್ತದೆ.

ನಮ್ಮ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಅವರು 2014ರ ಸೆಪ್ಟೆಂಬರ್ 27ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಇಡೀ ಜಗತ್ತು ಚೆನ್ನಾಗಿರಲು ಮತ್ತು ಬದುಕಲು ಯೋಗ್ಯವಾಗಲು ಜನರ ಜೀವನಶೈಲಿ ಬದಲಾಗಬೇಕು ಎಂದು ಒತ್ತಿ ಹೇಳಿದರು. ಯೋಗವು ಮನಸ್ಸು ಮತ್ತು ದೇಹವನ್ನು ಒಂದು ಮಾಡುತ್ತದೆ; ಆಲೋಚನೆ ಮತ್ತು ಕೆಲಸವನ್ನು ಜೋಡಿಸುತ್ತದೆ; ಹತೋಟಿ ಮತ್ತು ಪರಿಪೂರ್ಣತೆಯನ್ನು ತರಲು ನೆರವಾಗುತ್ತದೆ; ಮನುಷ್ಯ ಮತ್ತು ಪ್ರಕೃತಿಯ ನಡುವೆ ಒಳ್ಳೆಯ ಸಂಬಂಧವನ್ನು ಬೆಳೆಸುತ್ತದೆ; ಹಾಗೂ ಆರೋಗ್ಯವಾಗಿರಲು ಒಂದು ಉತ್ತಮ ಮಾರ್ಗವಾಗಿದೆ ಎಂದು ಅವರು ತಿಳಿಸಿದರು. ಪ್ರಧಾನಮಂತ್ರಿಯವರ ಮನವಿಯ ಮೇರೆಗೆ, ವಿಶ್ವಸಂಸ್ಥೆಯು 2014ರ ಡಿಸೆಂಬರ್ 11ರಂದು, ದಾಖಲೆಯ 174ಕ್ಕೂ ಹೆಚ್ಚು ದೇಶಗಳು ಬೆಂಬಲಿಸಿದ ಪ್ರಸ್ತಾವನೆಯನ್ನು ಒಪ್ಪಿಕೊಂಡು, ಜೂನ್ 21 ಅನ್ನು ಅಂತಾರಾಷ್ಟ್ರೀಯ ಯೋಗ ದಿನ ಎಂದು ಘೋಷಿಸಿತು. 2015ರಿಂದ, ಪ್ರಪಂಚದಾದ್ಯಂತ ಲಕ್ಷಾಂತರ ಜನರು ಒಟ್ಟಿಗೆ ಯೋಗ ಮಾಡಲು ಸಾರ್ವಜನಿಕ ಜಾಗಗಳಲ್ಲಿ ಸೇರುತ್ತಿದ್ದಾರೆ. ಇದರಿಂದಾಗಿ ನಮ್ಮ ಪ್ರಾಚೀನ ಜ್ಞಾನವು ಇಂದು ಜಗತ್ತಿನಾದ್ಯಂತ ದೊಡ್ಡ ಆಂದೋಲನವಾಗಿ ಬದಲಾಗಿದೆ.

ಈ ವರ್ಷದ ಜೂನ್ 21ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದಲ್ಲಿ ಯೋಗ ದಿನದ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರೆ, ನಾನು ಅದೇ ಸಂಭ್ರಮದಲ್ಲಿ ಭಾಗವಹಿಸಲು ಲಡಾಖ್‌ಗೆ ಹೋಗುತ್ತಿದ್ದೇನೆ. ನನಗೆ ವೈಯಕ್ತಿಕವಾಗಿ, ಹಲವು ವರ್ಷಗಳಿಂದ ಯೋಗ ಮತ್ತು ಪಂಚಕರ್ಮದಿಂದ ತುಂಬಾ ಅನುಕೂಲಗಳಾಗಿವೆ. ಇವೆರಡನ್ನೂ ಒಂದಕ್ಕೊಂದು ಸಂಬಂಧವಿರುವ 'ಸಹೋದರಿ ವಿಜ್ಞಾನಗಳು'(sister sciences) ಎಂದು ಕರೆಯುತ್ತಾರೆ. ಯೋಗದಿಂದ ಮನುಷ್ಯನ ಆರೋಗ್ಯಕ್ಕೆ ಎಷ್ಟು ಒಳ್ಳೆಯದಾಗುತ್ತದೆ ಎಂಬ ಬಗ್ಗೆ ನನ್ನ ಆಲೋಚನೆಗಳನ್ನು ಬರೆಯಲು ನನ್ನ ಈ ಸ್ವಂತ ಅನುಭವಗಳೇ ಕಾರಣ.

ಯೋಗ: ಭಾರತದ ಕಾಲಾತೀತ ಪರಂಪರೆ

ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಆರೋಗ್ಯವಾಗಿಡುವ ಯೋಗವು ನಮ್ಮ ಸಂಸ್ಕೃತಿಯ ಆರಂಭದಲ್ಲೇ ಶುರುವಾಯಿತು ಎಂದು ನಂಬಲಾಗಿದೆ. ಪುರಾಣ ಕಥೆಗಳಲ್ಲಿ ಶಿವನನ್ನು ಮೊದಲ ಯೋಗಿ ಅಥವಾ 'ಆದಿ ಯೋಗಿ' ಮತ್ತು ಮೊದಲ ಗುರು ಅಥವಾ 'ಆದಿ ಗುರು' ಎಂದು ಕರೆಯಲಾಗುತ್ತದೆ. ಇನ್ನು ಮಹರ್ಷಿ ಪತಂಜಲಿ ಅವರು ಯೋಗದ ನಿಯಮಗಳನ್ನು ಅಚ್ಚುಕಟ್ಟಾಗಿ ಜೋಡಿಸಿಕೊಟ್ಟಿದ್ದರಿಂದ ಅವರನ್ನು ಯೋಗದ ಪಿತಾಮಹ ಎಂದು ಗೌರವಿಸಲಾಗುತ್ತದೆ. ಮಹರ್ಷಿ ಪತಂಜಲಿ ಅವರಿಗೂ ತಮಿಳುನಾಡಿಗೂ ಆಳವಾದ ಆಧ್ಯಾತ್ಮಿಕ ಸಂಬಂಧವಿದೆ. ಅವರ ಭೌತಿಕ ಜೀವ ಸಮಾಧಿಯು ತಿರುಪತ್ತೂರಿನಲ್ಲಿದೆ ಎಂದು ನಂಬಲಾಗಿದೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಪ್ರತಿ ವರ್ಷ ಅಂತಾರಾಷ್ಟ್ರೀಯ ಯೋಗ ದಿನವನ್ನು ನಮ್ಮ ದೇಶದಲ್ಲಿ ಒಂದು ಒಳ್ಳೆಯ ಸಂದೇಶದೊಂದಿಗೆ ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಈ ವರ್ಷದ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ವಿಷಯವು ತುಂಬಾ ಮುಖ್ಯವಾದುದಾಗಿದೆ. ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಉತ್ತಮಗೊಂಡಿರುವುದರಿಂದ ಮತ್ತು ಸಾವಿನ ಪ್ರಮಾಣ ಕಡಿಮೆ ಆಗಿರುವುದರಿಂದ, ಜಗತ್ತಿನಾದ್ಯಂತ ಜನರ ಜೀವಿತಾವಧಿ (ಬದುಕುವ ವಯಸ್ಸು) ಹೆಚ್ಚಾಗಿದೆ. ಭಾರತದಲ್ಲೂ ಈ ದೊಡ್ಡ ಬದಲಾವಣೆ ಕಾಣಿಸುತ್ತಿದೆ. ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (UNFPA) ನೀಡಿದ 'ಇಂಡಿಯಾ ಏಜಿಂಗ್ ರಿಪೋರ್ಟ್ 2023' ರ ಪ್ರಕಾರ, 2050ರ ವೇಳೆಗೆ ಭಾರತದಲ್ಲಿ ಪ್ರತಿ ಐದು ಜನರಲ್ಲಿ ಒಬ್ಬರು 60 ವರ್ಷ ದಾಟಿದ ಹಿರಿಯರಿರುತ್ತಾರೆ.

ಹೆಚ್ಚು ಕಾಲ ಬದುಕುವುದು ಒಂದು ಅದ್ಭುತ ಕೊಡುಗೆ. ಆದರೆ, ಬದುಕಿನ ವರ್ಷಗಳು ಹೆಚ್ಚಾಗುವುದರ ಜೊತೆಗೆ, ಆ ದಿನಗಳು ನೆಮ್ಮದಿಯಿಂದ ಮತ್ತು ಸಾರ್ಥಕತೆಯಿಂದ ಕಳೆಯುವಂತೆ ನೋಡಿಕೊಳ್ಳುವ ದೊಡ್ಡ ಜವಾಬ್ದಾರಿ ನಮ್ಮ ಸಮಾಜದ ಮೇಲಿದೆ. ಈ ಕಾರಣಕ್ಕಾಗಿಯೇ, 2026ರ ಅಂತಾರಾಷ್ಟ್ರೀಯ ಯೋಗ ದಿನದ ವಿಷಯವಾದ ''ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'' ಎಂಬುದು ಈಗಿನ ಕಾಲಕ್ಕೆ ತಕ್ಕ ಸೂಕ್ತ ಸಂದೇಶವಾಗಿದೆ.

ಹಿರಿಯರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಭಾರತದಲ್ಲಿ ಹಿರಿಯ ನಾಗರಿಕರ ಆರೋಗ್ಯ ಮತ್ತು ಅವರ ಅಗತ್ಯ ವಸ್ತುಗಳಿಗೆ ಸಂಬಂಧಿಸಿದ 'ಸಿಲ್ವರ್ ಎಕಾನಮಿ' (ಬೆಳ್ಳಿ ಆರ್ಥಿಕತೆ) ಮಾರುಕಟ್ಟೆ ದೊಡ್ಡದಾಗುತ್ತಿದೆ. ತಜ್ಞರ ಪ್ರಕಾರ, ಈಗಲೇ ಈ ಮಾರುಕಟ್ಟೆಯ ಮೌಲ್ಯ ಸುಮಾರು 73,000 ಕೋಟಿ ರೂಪಾಯಿಗಳಷ್ಟಿದೆ. ಮುಂಬರುವ ದಿನಗಳಲ್ಲಿ ಇದು ಇನ್ನೂ ದೊಡ್ಡದಾಗಿ ಬೆಳೆಯುವ ನಿರೀಕ್ಷೆಯಿದೆ.

ಜನರಿಗೆ ಚಿಕ್ಕ ವಯಸ್ಸಿನಲ್ಲೇ ಯೋಗವನ್ನು ಕಲಿಸುವುದು ಇವತ್ತಿನ ಅಗತ್ಯವಾಗಿದೆ. ಎಷ್ಟು ಬೇಗ ಯೋಗ ಮಾಡಲು ಶುರು ಮಾಡುತ್ತಾರೋ, ಅದರ ಲಾಭ ಇಡೀ ಜೀವನದುದ್ದಕ್ಕೂ ಅಷ್ಟೇ ಹೆಚ್ಚಾಗಿ ಸಿಗುತ್ತಾ ಹೋಗುತ್ತದೆ. ನಮ್ಮ 'ರಾಷ್ಟ್ರೀಯ ಶಿಕ್ಷಣ ನೀತಿ 2020' ಯೋಗಕ್ಕೆ ಆರೋಗ್ಯ ಮತ್ತು ಮೌಲ್ಯದ ಶಿಕ್ಷಣದ ಮುಖ್ಯ ಭಾಗವಾಗಿ ಒಳ್ಳೆಯ ಸ್ಥಾನ ಕೊಟ್ಟಿದೆ ಎಂದು ಹೇಳಲು ನನಗೆ ಖುಷಿಯಾಗುತ್ತದೆ. ಯುವಜನರಿಗೆ ಯೋಗವನ್ನು ಪರಿಚಯಿಸಲು ಇದು ಒಂದು ಒಳ್ಳೆಯ ಹೆಜ್ಜೆ. ಇದು ವಿದ್ಯಾರ್ಥಿಗಳಲ್ಲಿ ಶಿಸ್ತು, ಏಕಾಗ್ರತೆ, ಮನಸ್ಸಿನ ಹತೋಟಿ ಮತ್ತು ಒಳ್ಳೆಯ ಜೀವನಶೈಲಿಯನ್ನು ಬೆಳೆಸಲು ಖಂಡಿತ ನೆರವಾಗುತ್ತದೆ.

ಹಾಗಾಗಿ, ಜಗತ್ತಿನಾದ್ಯಂತ ವಯಸ್ಸಾಗುತ್ತಿರುವ ಜನರ ಸಂಖ್ಯೆಯನ್ನು ಸರಿಯಾಗಿ ನಿಭಾಯಿಸಲು ಭಾರತವು ಇಡೀ ಪ್ರಪಂಚಕ್ಕೆ ಒಂದು ಅಪರೂಪದ ಮಾದರಿಯನ್ನು ತೋರಿಸಿಕೊಡುತ್ತಿದೆ. ಅದುವೇ ನಮ್ಮ ಹಳೆಯ ಕಾಲದ ಜ್ಞಾನವನ್ನು ಇಂದಿನ ವಿಜ್ಞಾನದ ಒಪ್ಪಿಗೆಯೊಂದಿಗೆ ಜೋಡಿಸುವ ಯೋಗ.

ಯೋಗ – ಇಂದಿನ ಕಾಲದ ವಯಸ್ಸಾದವರಿಗೆ ಒಂದು ಪರಿಹಾರ

ನಿಯಮಿತ ಜೀವನ, ಯೋಗ ಮತ್ತು ಧ್ಯಾನದ ಮೂಲಕ ನಮ್ಮ ಋಷಿಮುನಿಗಳು ಹೇಗೆ ದೀರ್ಘಕಾಲ ಬದುಕಿದರು, ಶಕ್ತಿಶಾಲಿಯಾಗಿದ್ದರು ಮತ್ತು ಚುರುಕಾಗಿದ್ದರು ಎಂಬುದನ್ನು ಇಂದಿನ ವಿಜ್ಞಾನವೂ ಒಪ್ಪಿಕೊಳ್ಳುತ್ತಿದೆ. ಯೋಗದಿಂದ ಕಾಯಿಲೆಗಳನ್ನು ಗುಣಪಡಿಸುವ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ಲೋಕದಲ್ಲಿ ಆಸಕ್ತಿ ತುಂಬಾ ಹೆಚ್ಚಾಗಿದೆ.

'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್', 'ಹಾರ್ವರ್ಡ್ ಮೆಡಿಕಲ್ ಸ್ಕೂಲ್' ಮತ್ತು 'ಲ್ಯಾನ್ಸೆಟ್' ನಂತಹ ದೊಡ್ಡ ಸಂಸ್ಥೆಗಳ ಸಂಶೋಧನೆಗಳ ಪ್ರಕಾರ, ದಿನವೂ ಯೋಗ ಮಾಡುವುದರಿಂದ ಹಿರಿಯರಲ್ಲಿ ದೇಹದ ಸಮತೋಲನ, ನರಗಳ ಸಡಿಲತೆ ಮತ್ತು ನಡಿಗೆ ಸುಲಭವಾಗುತ್ತದೆ. ಇದರಿಂದ ಅವರು ಆಯತಪ್ಪಿ ಬೀಳುವ ಭಯ ಮತ್ತು ಅಪಾಯ ತುಂಬಾ ಕಡಿಮೆಯಾಗುತ್ತದೆ. ಮೂಳೆಗಳನ್ನು ಬಲಪಡಿಸಲು, ಕೀಲು ನೋವು ಕಡಿಮೆ ಮಾಡಲು, ಉಸಿರಾಟ ಸುಲಭವಾಗಿಸಲು, ರಕ್ತದೊತ್ತಡವನ್ನು ಹತೋಟಿಯಲ್ಲಿಡಲು ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿಡಲು ಯೋಗ ಸಹಾಯ ಮಾಡುತ್ತದೆ ಎಂದು ಸಂಶೋಧನೆಗಳು ಸಾಬೀತುಪಡಿಸಿವೆ. ಅಷ್ಟೇ ಅಲ್ಲದೆ, ಧ್ಯಾನ ಮತ್ತು ಉಸಿರಾಟದ ಕ್ರಿಯೆಗಳು ವಯಸ್ಸಾದವರಲ್ಲಿ ಒಳ್ಳೆಯ ನಿದ್ರೆ, ಮಾನಸಿಕ ಧೈರ್ಯ ಮತ್ತು ನೆನಪಿನ ಶಕ್ತಿಯನ್ನು ಹೆಚ್ಚು ಮಾಡುತ್ತವೆ ಎಂದು ತಿಳಿದುಬಂದಿದೆ.

ಹಾಗೆಯೇ ಮನೆಯಲ್ಲಿರುವ ವಯಸ್ಸಾದವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿರುವ ಕುಟುಂಬದ ಸದಸ್ಯರಿಗೆ ಆ ದೈಹಿಕ ಮತ್ತು ಮಾನಸಿಕ ಹೊರೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಯೋಗ ನೀಡುತ್ತದೆ. ಈ ಎಲ್ಲಾ ಲಾಭಗಳನ್ನು ನೋಡಿ, ನಮ್ಮ ಆಯುಷ್ ಸಚಿವಾಲಯವು ಕೆಲವು ಕಾಯಿಲೆಗಳು ಮತ್ತು ಹಿರಿಯ ನಾಗರಿಕರಿಗಾಗಿ ವಿಶೇಷವಾದ 10 ಯೋಗ ನಿಯಮಗಳನ್ನು ತಂದಿದೆ. ಇದರಲ್ಲಿ ವಯಸ್ಸಾದವರ ಆರೋಗ್ಯಕ್ಕೆಂದೇ ಸಂಶೋಧನೆ ಮಾಡಿ ಸಿದ್ಧಪಡಿಸಿದ ಯೋಗದ ಭಾಗವೂ ಇದೆ. ಅಷ್ಟೇ ಅಲ್ಲದೆ, ವರ್ಷದ 365 ದಿನಗಳೂ ಉಚಿತವಾಗಿ 100 ದಿನಗಳ ಆನ್‌ಲೈನ್ ಯೋಗ ತರಬೇತಿ ನೀಡುವ 'ಯೋಗ 365' ಎಂಬ ದೇಶಾದ್ಯಂತದ ಅಭಿಯಾನವನ್ನು ಶುರು ಮಾಡಲಾಗಿದೆ. ಇದು ಎಲ್ಲಾ ವಯಸ್ಸಿನವರಿಗೂ ಯೋಗ ಸುಲಭವಾಗಿ ಸಿಗುವಂತೆ ಮತ್ತು ಅವರ ದೈನಂದಿನ ಸಂಗಾತಿಯಾಗುವಂತೆ ಮಾಡಲು ಸಹಾಯ ಮಾಡುತ್ತದೆ.

ಎರಡು ಸಾವಿರ ವರ್ಷಗಳಿಗಿಂತಲೂ ಮುಂಚೆ, ತಮಿಳಿನ ಪ್ರಸಿದ್ಧ ಸಂತ ಮತ್ತು ವಿದ್ವಾಂಸ ತಿರುವಳ್ಳುವರ್ ಅವರು ತಮ್ಮ ಕುರಲ್ (949) ನಲ್ಲಿ ಹೀಗೆ ಹೇಳಿದ್ದರು: ಚಿಕಿತ್ಸೆ ಕೊಡುವ ಮೊದಲು ರೋಗಿಯ ಪರಿಸ್ಥಿತಿ, ರೋಗದ ರೀತಿ ಮತ್ತು ಸರಿಯಾದ ಸಮಯವನ್ನು ಯೋಚಿಸಬೇಕು.

ಈ ಹಳೆಯ ಮಾತು ಇಂದಿನ ಆರೋಗ್ಯಕರ ವೃದ್ಧಾಪ್ಯದ ಯೋಗದ ನಿಯಮಗಳಿಗೂ ಹೊಂದಿಕೆಯಾಗುತ್ತದೆ. ಇಲ್ಲಿ ಯೋಗದ ಅಭ್ಯಾಸಗಳನ್ನು ವ್ಯಕ್ತಿಯ ವಯಸ್ಸು, ಆರೋಗ್ಯ ಮತ್ತು ಅವರ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲಾಗುತ್ತದೆ. ಇದರಿಂದ ಹಿರಿಯರು ತಮ್ಮ ವಯಸ್ಸಾದ ಕಾಲದಲ್ಲೂ ಹೆಚ್ಚು ಆರೋಗ್ಯವಾಗಿ, ಸಕ್ರಿಯವಾಗಿ ಮತ್ತು ಗೌರವದ ಬದುಕು ನಡೆಸಲು ಸಾಧ್ಯವಾಗುತ್ತದೆ.

ನಾವು 2026ರ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿರುವ ಈ ಸಮಯದಲ್ಲಿ, ಪ್ರತಿಯೊಬ್ಬ ನಾಗರಿಕರು, ಶಾಲೆ-ಕಾಲೇಜುಗಳು, ಸಂಘ-ಸಂಸ್ಥೆಗಳು, ವೈದ್ಯರು ಮತ್ತು ಸಮಾಜದ ಮುಖಂಡರು ಯೋಗವನ್ನು ಬರೀ ಅಪರೂಪಕ್ಕೆ ಮಾಡುವ ಕಸರತ್ತು ಎಂದು ತಿಳಿಯದೆ, ಇಡೀ ಜೀವನದ ಒಳ್ಳೆಯ ಹವ್ಯಾಸವನ್ನಾಗಿ ಮಾಡಿಕೊಳ್ಳಬೇಕು ಎಂದು ನಾನು ವಿನಂತಿಸುತ್ತೇನೆ. ಒಂದು ಸಮಾಜವು ತನ್ನ ಹಿರಿಯರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದರ ಮೇಲೆಯೇ ಆ ಸಮಾಜದ ಯೋಗ್ಯತೆ ತಿಳಿಯುತ್ತದೆ. ಆದ್ದರಿಂದ, ನಮ್ಮ ಹಿರಿಯ ನಾಗರಿಕರು ಯಾವುದೇ ಭಯ, ಬೇರೆಯವರ ಮೇಲಿನ ಅವಲಂಬನೆ ಅಥವಾ ಒಂಟಿತನವಿಲ್ಲದೆ ಗೌರವ, ಉತ್ಸಾಹ, ನೆಮ್ಮದಿಯಿಂದ ಬದುಕುವಂತಹ ವಾತಾವರಣವನ್ನು ನಿರ್ಮಿಸಲು ನಾವೆಲ್ಲರೂ ಶ್ರಮಿಸೋಣ. ಯೋಗವನ್ನು ನಮ್ಮ ದಿನನಿತ್ಯದ ಬದುಕಿನ ಭಾಗವಾಗಿಸಿಕೊಳ್ಳುವ ಮೂಲಕ, ನಮ್ಮ ಹಿರಿಯರ ಜೀವನದ ಕೊನೆಯ ದಿನಗಳು ನಿಜವಾಗಿಯೂ ಆರೋಗ್ಯ, ಶಾಂತಿ ಮತ್ತು ತೃಪ್ತಿಯ ದಿನಗಳಾಗುವಂತೆ ನಾವೆಲ್ಲರೂ ಒಟ್ಟಾಗಿ ನೋಡಿಕೊಳ್ಳೋಣ!

(ಭಾರತದ ಉಪರಾಷ್ಟ್ರಪತಿ)

ಕಿರುಸುದ್ದಿ

ಅನೈತಿಕ ಸಂಬಂಧ: ವ್ಯಕ್ತಿ ಕೊಲೆ

ಸಂಕೇಶ್ವರ: ಹಳೆ ವೈಷಮ್ಯ ಹಾಗೂ ಅನೈತಿಕ ಸಂಬಂಧ ಹಿನ್ನೆಲೆ ವ್ಯಕ್ತಿಯನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ಸಂಕೇಶ್ವರ ಪಟ್ಟಣದಲ್ಲಿ ಶನಿವಾರ ತಡ ರಾತ್ರಿ ನಡೆದಿದೆ. ಬಾಬು ಶಂಕರ ಭೂಸಗೋಳ (35) ಕೊಲೆಯಾದ ವ್ಯಕ್ತಿಯಾಗಿದ್ದು, ತನ್ನ ಸ್ಕೂಟಿ ಮೇಲಿಂದ ಸುಮಾರು ರಾತ್ರಿ 1 ಗಂಟೆಗೆ ಸುಮಾರಿಗೆ ತನ್ನ ಮನೆ ಕಡೆಗೆ ಹೊರಟಿದ್ದ ವೇಳೆಯಲ್ಲಿ ಆರೋಪಿಗಳು ಕೊಡುಗೋಲು, ರಾಡ್, ಮತ್ತು ಕಲ್ಲಿನಿಂದ ಹಲ್ಲೆ ನಡೆಸಿ ಭೀಕರವಾಗಿ ಕೊಲೆ ಮಾಡಲಾಗಿದೆ ಎನ್ನಲಾಗಿದೆ. **ಘಟನೆಯ ವಿವರ:** ಕೊಲೆಯಾದ ಬಾಬು ಬೂಸಗೋಳ ಆರೋಪಿ ಸುಬ್ಬರಾವ್ ಬಿಸುರೆ ಪತ್ನಿ ಜತೆ ಅನೈತಿಕ ಸಂಬಂಧ ಬೆಳೆಸಿದ್ದನು ಹಾಗೂ ಇನ್ನುಳಿದ ಆರೋಪಿತರ ಜತೆ ಮನೆಗೆ ಹೋಗುವ ದಾರಿ ವಿಚಾರವಾಗಿ ಗಲಾಟೆ ನಡೆದಿತ್ತು ಮತ್ತು ಪುರಸಭೆಯ ಉಪ ಚುನಾವಣೆಯ ಹಳೆಯ ವೈಷಮ್ಯದಿಂದ ಕೊಲೆ ಮಾಡಲಾಗಿದೆ ಎನ್ನಲಾಗಿದೆ. ಈ ಸಂಬಂಧ ಆರೋಪಿಗಳಾದ ಸುಬ್ಬರಾವ್ ಬಿಸುರೆ, ಅಕ್ಷಯ ಮರಡಿ, ಪವನ ಮರಡಿ, ಅನಿಲ ಮರಡಿ, ಸಂದೀಪ ಮರಡಿ, ಸುರೇಶ ಮರಡಿ ಎಂಬುವವರನ್ನು ಬಂಧಿಸಲಾಗಿದೆ ಎಂದು ಪ್ರಕರಣ ದಾಖಲಿಸಿಕೊಂಡ ಸಂಕೇಶ್ವರ ಠಾಣೆ ಪೊಲೀಸರು ತಿಳಿಸಿದ್ದಾರೆ.



ಟ್ರ್ಯಾಕ್ಟರ್ ಪಲ್ಟಿ: ಇಬ್ಬರ ಸಾವು

ಗೋಕಾಕ: ತಾಲೂಕಿನ ಪಂಚನಟ್ಟಿ ಗ್ರಾಮದ ರಸ್ತೆ ತಿರುವಿನಲ್ಲಿ ಟ್ರ್ಯಾಕ್ಟರ್ ಪಲ್ಟಿಯಾಗಿ ಇಬ್ಬರು ಸ್ಥಳದಲ್ಲೆ ಮೃತಪಟ್ಟ ಘಟನೆ ಶುಕ್ರವಾರ ನಡೆದಿದೆ. ಮೃತ ದುರ್ದೈವಿಗಳನ್ನು ಈರಪ್ಪ ಮಲ್ಲಪ್ಪ ನಂದಿಗೌಡರ (32), ಮಲ್ಲಪ್ಪ ಮಹಾದೇವ ನಂದಿಗೌಡರ (27) ಎಂದು ತಿಳಿದು ಬಂದಿದೆ. ಈ ಕುರಿತು ಗೋಕಾಕ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗಳ ಪ್ರಕರಣದ ಆಘಾತ ತಾಳಲಾರದೆ ತಾಯಿ ಆತ್ಮಹತ್ಯೆ

ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದಲ್ಲಿ ಮಾಜಿ ಸೈನಿಕ ಸಂದೀಪ್ ಮಂಜರಗಿ ಕೊಲೆ ಪ್ರಕರಣ ರಾಜ್ಯಾದ್ಯಂತ ಭಾರೀ ಚರ್ಚೆಗೆ ಗ್ರಾಸವಾಗಿದ್ದ ಆಘಾತದಿಂದ ಮನನೊಂದಿದ್ದ ತಾಯಿ ಶನಿವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ದಾರುಣ ಘಟನೆ ನಡೆದಿದೆ. ಮೃತ ಮಹಿಳೆ ಮಹಾದೇವಿ ಘೋಡಗೇರಿ ಆತ್ಮಹತ್ಯೆ ಮಾಡಿಕೊಂಡ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಶನಿವಾರ ಮನೆಯಲ್ಲಿ ಯಾರೂ ಇಲ್ಲದ ವೇಳೆ ತಮ್ಮ ನಿವಾಸದಲ್ಲೇ ಅವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಘಟನೆ ತಿಳಿಯುತ್ತಿದ್ದಂತೆ ಕುಟುಂಬಸ್ಥರು ಹಾಗೂ ಗ್ರಾಮಸ್ಥರಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ. ಘೋಡಗೇರಿ ಗ್ರಾಮದಲ್ಲೇ ಕೆಲವು ತಿಂಗಳುಗಳ ಹಿಂದೆ ನಡೆದಿದ್ದ ಮಾಜಿ ಸೈನಿಕ ಸಂದೀಪ್ ಮಂಜರಗಿ ಕೊಲೆ ಪ್ರಕರಣ ರಾಜ್ಯದ ಗಮನ ಸೆಳೆದಿತ್ತು. ಸುಮಾರು ರೂ.2 ಕೋಟಿ ವಿಮೆ ಹಣಕ್ಕಾಗಿ ಪತಿ ಸಂದೀಪ್ ಮಂಜರಗಿಯನ್ನು ಪತ್ನಿ ಸುಮಾ ಮಂಜರಗಿ ಸಂಚು ರೂಪಿಸಿ ಕೊಲೆ ಮಾಡಿಸಿದ್ದಾಳೆ ಎಂಬ ಆರೋಪ ಕೇಳಿಬಂದಿತ್ತು. ಪ್ರಕರಣ ಬೆಳಕಿಗೆ ಬಂದ ಬಳಿಕ ಕುಟುಂಬದ ಒಳಜಗಳ, ಹಣದಾಸೆ ಹಾಗೂ ಸಂಬಂಧಗಳ ಸಂಕೀರ್ಣತೆ ಕುರಿತು ರಾಜ್ಯಾದ್ಯಂತ ವ್ಯಾಪಕ ಚರ್ಚೆ ನಡೆದಿತ್ತು. ಪ್ರಕರಣದ ಪ್ರಮುಖ ಆರೋಪಿ ಸುಮಾ ಮಂಜರಗಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾಳೆ. ಮಗಳ ಈ ಕೃತ್ಯದಿಂದ ಮಹಾದೇವಿ ತೀವ್ರ ಮಾನಸಿಕ ಆಘಾತಕ್ಕೆ ಒಳಗಾಗಿದ್ದರು ಎನ್ನಲಾಗಿದೆ. ಮಗಳು ಕೊಲೆ ಪ್ರಕರಣದಲ್ಲಿ ಸಿಲುಕಿರುವುದು ಮಾತ್ರವಲ್ಲದೆ, ಬಳಿಕ ಬಹಿರಂಗಗೊಂಡ ಕೆಲ ವೈಯಕ್ತಿಕ ಸಂಗತಿಗಳೂ ಅವರಿಗೆ ತೀವ್ರ ನೋವುಂಟುಮಾಡಿದ್ದವು ಎಂದು ಸ್ಥಳೀಯರು ತಿಳಿಸಿದ್ದಾರೆ. ಮಗಳ ವರ್ತನೆ, ಕುಟುಂಬದ ಮೇಲೆ ಬಿದ್ದ ಕಳಂಕ ಹಾಗೂ ಸಮಾಜದಲ್ಲಿ ಎದುರಿಸಬೇಕಾದ ಮಾನಸಿಕ ಒತ್ತಡದಿಂದ ಮಹಾದೇವಿ ಸಾಕಷ್ಟು ಕುಗ್ಗಿ ಹೋಗಿದ್ದರು ಎಂದು ಗ್ರಾಮಸ್ಥರು ಹೇಳುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅವರು ಹೆಚ್ಚು ಮೌನವಾಗಿದ್ದು, ಆತಂಕದಲ್ಲೇ ಕಾಲ ಕಳೆಯುತ್ತಿದ್ದರು ಎನ್ನಲಾಗಿದೆ. ಈ ಎಲ್ಲ ಬೆಳವಣಿಗೆಗಳ ನಡುವೆಯೇ ಅವರು ಆತ್ಮಹತ್ಯೆ ಮಾಡಿಕೊಂಡಿರುವುದು ಕುಟುಂಬದ ದುಃಖವನ್ನು ಮತ್ತಷ್ಟು ಹೆಚ್ಚಿಸಿದೆ. ಒಂದೇ ಕುಟುಂಬದಲ್ಲಿ ಸಂಭವಿಸಿರುವ ಸರಣಿ ದುರಂತಗಳು ಗ್ರಾಮಸ್ಥರನ್ನು ಕಂಗಾಲಾಗಿಸಿವೆ. ಘಟನಾ ಸ್ಥಳಕ್ಕೆ ಕಾಕತಿ ಹಾಗೂ ಯಮಕನಮರಡಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.



ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ | ಸಚಿವ ಪ್ರಹ್ಲಾದ ಜೋಶಿ ಅಭಿಮತ

ಕೃಷಿ ಕ್ಷೇತ್ರದ ಪ್ರಗತಿಗೆ ಕೇಂದ್ರ ಒತ್ತು

ಧಾರವಾಡ: ಕೇಂದ್ರ ಸರ್ಕಾರ ಕೃಷಿ ಕ್ಷೇತ್ರದ ಸಮಗ್ರ ಬಲವರ್ಧನೆ, ಪ್ರಗತಿಯ ಜೊತೆಗೆ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ನಗರದ ಕೃಷಿ ವಿವಿ ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಶನಿವಾರ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ 23ನೇ ಕಂತಿನ ಹಣ ಬಿಡುಗಡೆ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಮಾರುಕಟ್ಟೆ ಮತ್ತು ತಂತ್ರಜ್ಞಾನ: ರೈತರಿಗಾಗಿ ನೇರ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ. ಸಂಶೋಧನೆಗಳು ಕೇವಲ ಪ್ರಯೋಗಾಲಯಕ್ಕೆ ಸೀಮಿತವಾಗದೆ, ರೈತರ ಕೈಸೇರಬೇಕೆಂಬ ಉದ್ದೇಶದಿಂದ 'ಲ್ಯಾಬ್ ಟು ಲ್ಯಾಂಡ್' ಯೋಜನೆಗೆ ಒತ್ತು ನೀಡಿದ್ದಾಗಿ ತಿಳಿಸಿದರು.

ಡ್ರೋನ್ ತಂತ್ರಜ್ಞಾನ: ಮೋದಿ ಸರ್ಕಾರ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ. ಕೃಷಿಯಲ್ಲಿ ಆಧುನಿಕತೆ ತರುವಲ್ಲಿ ಡ್ರೋನ್ ಮೂಲಕ ಕೀಟನಾಶಕ ಹಾಗೂ ಔಷಧಿ ಸಿಂಪಡಣೆಯ ಯೋಜನೆ ಪ್ರಗತಿ ಸಾಧಿಸಿದ ಕೀರ್ತಿ ಕೇಂದ್ರಕ್ಕೆ ಇದೆ ಎಂದರು.

ಬೆಂಬಲ ಬೆಲೆ ಏರಿಕೆ: ರೈತರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಗೊಬ್ಬರ ಬೆಲೆ ಏರಿಸಿಲ್ಲ, ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಯನ್ನು ದಾಖಲೆಯ ಪ್ರತಿಶತ 800ರಷ್ಟು ಏರಿಕೆ ಮಾಡಲಾಗಿದೆ ಎಂದು ಮೋದಿ ಸರ್ಕಾರದ ಸಾಧನೆ ಗುಣಗಾನ ಮಾಡಿದರು.

ರಫ್ತು ಮತ್ತು ಮೌಲ್ಯವರ್ಧನೆ: ಅಕ್ಕಿ ಹಾಗೂ ಗೋಧಿ ರಫ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದ್ದು, ರೈತರ ಆದಾಯ ದ್ವಿಗುಣಗೊಳಿಸಲು ಆಹಾರ ಉತ್ಪಾದನೆ ಮತ್ತು ಆಹಾರ ಮೌಲ್ಯವರ್ಧನೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಉಪ ಕಸುಬುಗಳಿಗೆ ಉತ್ತೇಜನ: ಕೃಷಿ ಮಾತ್ರವಲ್ಲದೆ ಮೀನುಗಾರಿಕೆ ಮತ್ತು ಹೈನುಗಾರಿಕೆ ಕ್ಷೇತ್ರಗಳ ಪ್ರಗತಿಗೂ ಸರ್ಕಾರ ವಿಶೇಷ ಉತ್ತೇಜನ ನೀಡಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಎಂ.ವಿ.ಮಂಜುನಾಥ, ಕೃಷಿ ಇಲಾಖೆಯ ಅಧಿಕಾರಿಗಳು, ಪ್ರಮುಖ ಜನಪ್ರತಿನಿಧಿಗಳು, ಅಪಾರ ಸಂಖ್ಯೆಯ ರೈತರು ಇದ್ದರು.



ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಕೇಂದ್ರ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯಡಿ ದೇಶದ ರೈತರಿಗೆ ವಾರ್ಷಿಕವಾಗಿ ರೂ.6,000 ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದೆ. ಆದರೆ, ಈ ಹಿಂದೆ ರಾಜ್ಯ ಸರ್ಕಾರ ನೀಡುತ್ತಿದ್ದ ರೂ.4,000 ಪ್ರೋತ್ಸಾಹಧನ ಪ್ರಸ್ತುತ ರಾಜ್ಯ ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿದ ಬಗ್ಗೆ ಜೋಶಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

> “ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿಯ 23ನೇ ಕಂತಿನ ಅಡಿಯಲ್ಲಿ ಧಾರವಾಡ ಜಿಲ್ಲೆಯ ಸುಮಾರು 97 ಸಾವಿರ ರೈತರಿಗೆ ಒಟ್ಟು 18 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ.
>
> ■ ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

ಅಮಿತ್ ಶಾ ಭೇಟಿಗೆ ತೆರಳುತ್ತಿದ್ದ ಎಂಇಎಸ್ ಕಾರ್ಯಕರ್ತರ ತಡೆದ ಪೊಲೀಸರು

ಬೆಳಗಾವಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಕೊಲ್ಹಾಪುರ ಪ್ರವಾಸದ ಹಿನ್ನೆಲೆಯಲ್ಲಿ ಅವರನ್ನು ಭೇಟಿಯಾಗಲು ತೆರಳುತ್ತಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕಾರ್ಯಕರ್ತರನ್ನು ಕರ್ನಾಟಕ ಪೊಲೀಸರು ಹತ್ತರಗಿ ಟೋಲ್ ಗೇಟ್ ಬಳಿ ತಡೆದಿದ್ದಾರೆ. ಇದರಿಂದಾಗಿ ಆಕ್ರೋಶಗೊಂಡ ಎಂಇಎಸ್ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿಯಲ್ಲೇ ಕುಳಿತು ಪ್ರತಿಭಟನೆ ನಡೆಸಿ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

ಮಹಾರಾಷ್ಟ್ರ ಏಕೀಕರಣ ಸಮಿತಿಯ ನಾಯಕರು ಹಾಗೂ ಕಾರ್ಯಕರ್ತರ ನಿಯೋಗವು ವಿವಿಧ ವಾಹನಗಳಲ್ಲಿ ಕೊಲ್ಹಾಪುರಕ್ಕೆ ತೆರಳುತ್ತಿದ್ದ ವೇಳೆ, ಸುರಕ್ಷಾ ಕಾರಣಗಳನ್ನು ಉಲ್ಲೇಖಿಸಿ ಕೊಲ್ಹಾಪುರ ಜಿಲ್ಲಾಡಳಿತದ ಸೂಚನೆಯ ಮೇರೆಗೆ ಬೆಳಗಾವಿ ಪೊಲೀಸರು ಹತ್ತರಗಿ ಟೋಲ್ ನಾಕಾ ಬಳಿ ತಡೆದರು.

ಈ ಕ್ರಮವನ್ನು ತೀವ್ರವಾಗಿ ವಿರೋಧಿಸಿದ ಎಂಇಎಸ್ ನಾಯಕ ಅಮರ್ ಬೆಳ್ಳೂರಕರ್ ಅವರು ಲಿಖಿತ ಆದೇಶ ತೋರಿಸುವಂತೆ ಆಗ್ರಹಿಸಿದರು. ಆದರೆ, ಆದೇಶ ಪತ್ರ ತೋರಿಸದ ಹಿನ್ನೆಲೆಯಲ್ಲಿ ನೂರಾರು ಕಾರ್ಯಕರ್ತರು ಹೆದ್ದಾರಿಯಲ್ಲೇ ಧರಣಿ ಸತ್ಯಾಗ್ರಹ ಆರಂಭಿಸಿದರು.

ಬೆಳಗಾವಿ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವರನ್ನು ಭೇಟಿಯಾಗಿ ಗಡಿಭಾಗದ ಮರಾಠಿ ಭಾಷಿಕರ ಬೇಡಿಕೆಗಳನ್ನು ಮಂಡಿಸುವ ಉದ್ದೇಶದಿಂದ ಈ ನಿಯೋಗ ತೆರಳುತ್ತಿತ್ತು. ಈ ಸಂಬಂಧ ಕೊಲ್ಹಾಪುರ ಜಿಲ್ಲಾಡಳಿತದ ಬಳಿ ಭೇಟಿಗೆ ಸಮಯ ಕೋರಲಾಗಿದ್ದು, ಮರಾಠಿ ದಿನಪತ್ರಿಕೆಯ ಸಂಪಾದಕ ಪ್ರತಾಪಸಿಂಹ ಜಾಧವ್ ಅವರೂ ಭೇಟಿಗೆ ಅವಕಾಶ ಕಲ್ಪಿಸಲು ಪ್ರಯತ್ನ ನಡೆಸಿದ್ದರು ಎಂದು ಸಮಿತಿಯ ಮುಖಂಡರು ತಿಳಿಸಿದರು. ಇದೇ ವೇಳೆ, ಕೊಲ್ಹಾಪುರ ತಲುಪಿದ ಮತ್ತೊಂದು ಎಂಇಎಸ್ ನಿಯೋಗವು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರನ್ನು ಭೇಟಿಯಾಗಿ ಗಡಿ ವಿವಾದದ ಕುರಿತು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಮಿತಿಯ ಹಿರಿಯ ನಾಯಕ ಹಾಗೂ ಮಾಜಿ ಮಹಾಪೌರ ಮಾಲೋಜಿರಾವ್ ಅಷ್ಟೇಕರ, ಮಹಾರಾಷ್ಟ್ರ ಏಕೀಕರಣ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.



ಎನ್‌ಐಎಸ್‌ಎಂ, ಬಿವಿವಿ ಸಂಘದ ನಡುವೆ ಒಡಂಬಡಿಕೆಗೆ ಸಹಿ

ಬಾಗಲಕೋಟೆ: ಭಾರತದ ಷೇರುಪೇಟೆ ಮತ್ತು ಹಣಕಾಸು ಮಾರುಕಟ್ಟೆ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಜ್ಞಾನ ಹಾಗೂ ಉದ್ಯೋಗಾರ್ಹತೆಯನ್ನು ವೃದ್ಧಿಸುವ ಉದ್ದೇಶದಿಂದ, ನಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೆಕ್ಯೂರಿಟೀಸ್ ಮಾರ್ಕೆಟ್ ಮತ್ತು ಬಿವಿವಿ ಸಂಘದ ನಡುವೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು.

ಸಂಘದ ಆಡಳಿತ ಕಛೇರಿಯಲ್ಲಿ ಶುಕ್ರವಾರ ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಸಿ. ಚರಂತಿಮಠ ಹಾಗೂ ಎನ್ ಐಎಸ್‌ಎಂನ ಪಾಲುದಾರಿಕೆ ಮತ್ತು ಮಾರುಕಟ್ಟೆ ವಿಭಾಗ-2ರ ಜನರಲ್ ಮ್ಯಾನೇಜರ್ ಸಂಜೀವ್ ಬಜಾಜ್ ಸಹಿ ಹಾಕುವುದರ ಮೂಲಕ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು.

ಈ ಒಡಂಬಡಿಕೆ ವ್ಯಾಪ್ತಿಯಲ್ಲಿ ಬಿ.ವಿ.ವಿ ಸಂಘದ ಅಧೀನದಲ್ಲಿರುವ ಸುಮಾರು 11 ಶಿಕ್ಷಣ ಸಂಸ್ಥೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದ್ದು, ಬಿವಿವಿ ಸಂಘದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ವಿದ್ಯಾಗಿರಿ ಬಾಗಲಕೋಟೆ ಸಂಸ್ಥೆಯು ಎನ್‌ಐಎಸ್‌ಎಂ ಪರೀಕ್ಷಾ ಕೇಂದ್ರದ ಸಮನ್ವಯ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ.

ಈ ಸಂದರ್ಭದಲ್ಲಿ ಬಿವಿವಿ ಸಂಘದ ಕಾಲೇಜು ಆಡಳಿತ ಮಂಡಳಿಯ ಮಾನ್ಯ ಕಾರ್ಯಾಧ್ಯಕ್ಷರಾದ ಗುರುಬಸವ ಎಸ್. ಸೂಳಿಭಾವಿರವರುಹಾಗೂಬಿ.ವಿ.ವಿಸಂಘದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ ಸ್ಟಡೀಜ್‌ನ ನಿರ್ದೇಶಕರಾದ ಡಾ. ಪ್ರಕಾಶ ಕೆ. ವಡವಡಗಿರವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಷೇರು ಮಾರುಕಟ್ಟೆ ಸಂಬಂಧಿಯ ವಿಷಯಗಳಲ್ಲಿ ತರಬೇತಿ ನೀಡುವುದು ಹಾಗೂ ಎನ್‌ಐಎಸ್ ಎಂ ಪ್ರಮಾಣಪತ್ರಗಳನ್ನು ಪಡೆಯಲು ನೆರವಾಗುವುದರ ಜೊತೆಗೆ ವಿದ್ಯಾರ್ಥಿಗಳ ವೃತ್ತಿಪರ ಜ್ಞಾನ, ಕೌಶಲ್ಯ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವು ಈ ಒಡಂಬಡಿಕೆಯಪ್ರಮುಖ ಉದ್ದೇಶವಾಗಿದೆ ಎಂದು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಸಿ. ಚರಂತಿಮಠರವರು ತಿಳಿಸಿದರು.



ಬಿವಿಟಿ ನೂತನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಅಧಿಕಾರ ಸ್ವೀಕಾರ

ಶಿರಸಿ: ಸೆಲ್ಕೋ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಮೋಹನ ಭಾಸ್ಕರ ಹೆಗಡೆ ಹೆರವಟ್ಟ ಅವರನ್ನು ಭಾರತೀಯ ವಿಕಾಸ ಟ್ರಸ್ಟ್‌ನ (ಬಿವಿಟಿ) ನೂತನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಅಂತಾರಾಷ್ಟ್ರೀಯ ಖ್ಯಾತಿಯ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಹಾಗೂ ಸೆಲ್ಕೋ ಸಂಸ್ಥೆಯ ಸಂಸ್ಥಾಪಕ ಹರೀಶ್ ಹಂದೆ ಅವರು ಮೋಹನ ಹೆಗಡೆ ಅವರಿಗೆ ಈ ಮಹತ್ವದ ಜವಾಬ್ದಾರಿಯನ್ನು ವಹಿಸಿದ್ದಾರೆ. ಸೌರ ವಿದ್ಯುತ್ ಕ್ಷೇತ್ರದಲ್ಲಿ ಸೆಲ್ಕೋ ಸಂಸ್ಥೆಯ ಮೂಲಕ ಗ್ರಾಮೀಣಾಭಿವೃದ್ಧಿ ಹಾಗೂ ಸುಸ್ಥಿರ ಇಂಧನ ಬಳಕೆಯ ವಿಸ್ತರಣೆಯಲ್ಲಿ ಮೋಹನ ಹೆಗಡೆ ಅವರು ಗಮನಾರ್ಹ ಕೊಡುಗೆ ನೀಡಿದ್ದಾರೆ. ಆಡಳಿತ, ಯೋಜನಾ ನಿರ್ವಹಣೆ ಮತ್ತು ಸಾಮಾಜಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ಅವರು ಅಪಾರ ಅನುಭವ ಹೊಂದಿದ್ದಾರೆ. ಸಾಮಾಜಿಕ ಕ್ಷೇತ್ರದ ಜೊತೆಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿಯೂ ಗುರುತಿಸಿಕೊಂಡಿರುವ ಮೋಹನ ಹೆಗಡೆ ಅವರು ಪ್ರಸಿದ್ಧ ತಾಳಮದ್ದಳೆ ಅರ್ಥಧಾರಿಯಾಗಿದ್ದು, ಲೇಖಕ ಹಾಗೂ ಪ್ರಭಾವಿ ವಾಗ್ಮಿಯಾಗಿ ಹೆಸರುವಾಸಿಯಾಗಿದ್ದಾರೆ.

ಇನ್ನು ಶ್ರೀರಾಮಚಂದ್ರಾಪುರ ಮಠದ ಆಡಳಿತ ವಿಭಾಗದ ಶಾಸನ ತಂತ್ರ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಅವರ ನೇಮಕದಿಂದ ಮಣಿಪಾಲ ಕೇಂದ್ರ ಕಚೇರಿಯಿಂದ ಕೆಲಸ ಮಾಡುವ ಭಾರತೀಯ ವಿಕಾಸ ಟ್ರಸ್ಟ್‌ನ ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ ಹಾಗೂ ಜೀವನಾಧಾರ ಕಾರ್ಯಕ್ರಮಗಳಿಗೆ ಮತ್ತಷ್ಟು ಚೈತನ್ಯ ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.



ಎಂಎಲ್ಸಿ ಡಾ.ಬಿ.ಜಿ.ಪಾಟೀಲಗೆ ಮಾತೃವಿಯೋಗ

ಕಲಬುರಗಿ: ವಿಧಾನ ಪರಿಷತ್ ಸದಸ್ಯ, ಉದ್ಯಮಿ ಡಾ.ಬಿ.ಜಿ.ಪಾಟೀಲ, ಉದ್ಯಮಿ ಮತ್ತು ಡಾ.ಸೂರ್ಯಕಾಂತ ಪಾಟೀಲ ಅವರ ತಾಯಿ ಶತಾಯುಷಿ ವೀರಮ್ಮ ಗಳಂಗಳಪ್ಪ ಪಾಟೀಲ ಅವರು ಶನಿವಾರ ನಿಧನ ಹೊಂದಿದ್ದು, ಇದರಿಂದ ಎಸ್.ಬಿ.ಪಾಟೀಲ ಪರಿವಾರದ ಕೊನೆಯ ಹಿರಿಯ ಕೊಂಡಿ ಕಳಚಿದಂತಾಗಿದೆ.

ಮೃತರು ಇಬ್ಬರು ಪುತ್ರರು, ಅಪಾರ ಬಂಧು ಮತ್ತು ಬಳಗ ಅಗಲಿದ್ದಾರೆ. ನೆಹರು ಗಂಜ್ ಪ್ರದೇಶದಲ್ಲಿರುವ ಎಸ್.ಬಿ.ಪಾಟೀಲ ಗ್ರೂಪ್ ಕಚೇರಿ ಆವರಣದಲ್ಲಿ ಶನಿವಾರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಹುಮನಾಬಾದ್ ರಸ್ತೆಯ ಕಪನೂರಿನ ಪೈಪ್ ಫ್ಯಾಕ್ಟರಿ ಆವರಣದಲ್ಲಿ ಜೂ.21ರಂದು ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖ್ಯಾತ ಉದ್ಯಮಿ ದಿ.ಡಾ.ಗಳಂಗಳಪ್ಪ ಪಾಟೀಲ ಅವರ ಪತ್ನಿ ವೀರಮ್ಮನವರು ಪತಿಯ ಹಿಂದಿನ ಶಕ್ತಿಯಾಗಿ ನಿಂತು, ಉದ್ಯಮ ಸಾಮ್ರಾಜ್ಯ ನಿರ್ಮಾಣ ಮಾಡಲು ಬೆನ್ನೆಲುಬಾಗಿ ಕೈಜೋಡಿಸಿದ್ದರು. ಈ ಮೂಲಕ ಇಂದು ಎಸ್.ಬಿ.ಪಾಟೀಲ ಗ್ರೂಪ್‌ನಲ್ಲಿ ಸಾವಿರಾರು ಕೈಗಳಿಗೆ ಕೆಲಸ ದೊರೆತಿದೆ. ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಸಾವಿರಾರು ಕುಟುಂಬಗಳು ದಿ.ಗಳಂಗಳಪ್ಪನವರನ್ನು ನಿತ್ಯ ಸ್ಮರಿಸುತ್ತಿವೆ.

ವಿ.ಆರ್.ಎಲ್ ಸಮೂಹ ಸಂಸ್ಥೆಗಳ ನಿರ್ದೇಶಕರಾದ ವಾಣಿ ಆನಂದ ಸಂಕೇಶ್ವರ್, ಮೊಮ್ಮಕ್ಕಳಾದ ಬಿಜೆಪಿ ಮಹಾನಗರ ಜಿಲ್ಲಾಧ್ಯಕ್ಷ ಚಂದು ಪಾಟೀಲ್, ಹೈ.ಕ.ಶಿಕ್ಷಣ ಸಂಸ್ಥೆಯ ಜಂಟಿ ಕಾರ್ಯದರ್ಶಿ ಡಾ.ಕೈಲಾಶ ಪಾಟೀಲ್, ಉದ್ಯಮಿ ಸೋಮನಾಥ.ಎ.ಪಾಟೀಲ್, ಸುಹಾಸ ಎಸ್.ಪಾಟೀಲ ಅವರು ಮೃತರ ಮೊಮ್ಮಕ್ಕಳಾಗಿದ್ದು, ಉದ್ಯಮಿ ಡಾ.ಸೂರ್ಯಕಾಂತ ಪಾಟೀಲ ಪುತ್ರರಾಗಿದ್ದಾರೆ.

ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ.ವಿಜಯ ಸಂಕೇಶ್ವರ್, ವ್ಯವಸ್ಥಾಪಕ ನಿರ್ದೇಶಕರಾದ ಡಾ.ಆನಂದ ಸಂಕೇಶ್ವರ್, ವಿಜಯಾನಂದ ಟ್ರಾವೆಲ್ಸ್ ವ್ಯವಸ್ಥಾಪಕ ನಿರ್ದೇಶಕ ಶಿವಾ ಸಂಕೇಶ್ವರ್ ಉದ್ಯಮಿಗಳು, ಗಣ್ಯರು, ರಾಜಕೀಯ ಧುರೀಣರು, ಸಂಸ್ಥೆಯ ಸಿಬ್ಬಂದಿ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.



ರೈತರ ಮೇಲೆ ಪೊಲೀಸರಿಂದ ದೌರ್ಜನ್ಯ: ಆರೋಪ

ಯಲಬುರ್ಗಾ: ರೈತರಿಗೆ ರಕ್ಷಣೆ ನೀಡಬೇಕಾದ ಪೊಲೀಸರು, ಖಾಸಗಿ ಕಂಪನಿ ಗುತ್ತಿಗೆದಾರರ ಪರವಾಗಿ ಕೆಲಸ ಮಾಡುತ್ತಿದ್ದಾರೆಂದು ರೈತರ ಗಂಭೀರ ಆರೋಪ ಮಾಡಿದ್ದಾರೆ.

ತಾಲೂಕಿನ ಗುತ್ತೂರು ಸೀಮೆಯ ಸರ್ವೆ ನಂ.151/ಕೆ1ರಲ್ಲಿ ಹೈಟೆನ್ಷನ್ ವಿದ್ಯುತ್ ಟವರ್ ನಿರ್ಮಾಣ ಕಾಮಗಾರಿ ವಿವಾದಕ್ಕೆ ಕಾರಣವಾಗಿದೆ. ಜಮೀನು ಮಾಲೀಕರಾದ ಸರೋಜಮ್ಮ ಲಿಂಗಪ್ಪ ಯಾರಾಶಿ ಅವರ ಸುಮಾರು 10 ಎಕರೆ ಜಮೀನಿನಲ್ಲಿ ಒಟ್ಟು ಐದು ಹೈಟೆನ್ಷನ್ ಟವರ್‌ಗಳನ್ನು ನಿರ್ಮಿಸಲಾಗುತ್ತಿದೆ.

ರೈತರ ಪ್ರಾಥಮಿಕ ಒಪ್ಪಿಗೆಯ ಮೇರೆಗೆ ಒಂದು ಟವರ್ ನಿರ್ಮಿಸಲಾಗಿದ್ದರೂ, ನಂತರ ಇದೇ ಸರ್ವೆ ನಂಬರ್‌ನಲ್ಲಿ ಕ್ರಾಸಿಂಗ್ ಲೈನ್ ಹೆಸರಿನಲ್ಲಿ ಇನ್ನೂ ನಾಲ್ಕು ಟವರ್‌ಗಳನ್ನು ರೈತರಿಗೆ ಪೂರ್ವ ಮಾಹಿತಿ ನೀಡದೇ ಹಾಗೂ ಪರಿಹಾರದ ಕುರಿತು ಅಂತಿಮ ಒಪ್ಪಂದ ಮಾಡಿಕೊಳ್ಳದೇ ನಿರ್ಮಿಸಲಾಗಿದೆ ಎಂದು ಆರೋಪಿಸಲಾಗಿದೆ.

ಈ ವಿಚಾರ ತಿಳಿದ ಬಳಿಕ ರೈತರು ವಿರೋಧ ವ್ಯಕ್ತಪಡಿಸಿದ್ದು, ಸ್ಥಳಕ್ಕೆ ಬೇವೂರ್ ಪೊಲೀಸ್ ಠಾಣೆಯ ಪಿಎಸ್‌ಐ ಹಾಗೂ ಸಿಬ್ಬಂದಿ ಆಗಮಿಸಿದ್ದಾರೆ. ಪ್ರತಿಭಟನೆ ನಡೆಸಿದ ನಾಲ್ವರು ರೈತರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದಾರೆ, ಅವರ ಹೆಸರು ಪ್ರಕಾಶ, ಶ್ರೀಕಾಂತ, ಮಲ್ಲಪ್ಪ ವಿಜಯರಡ್ಡಿ, ಎಂದು ಶರಣಪ್ಪ ಯರಾಶಿ ಎಂಬ ರೈತರು ಆರೋಪ ಮಾಡಿದ್ದಾರೆ.

ಇದರಿಂದ ಪವರ್ ಸರ್ವಿಸ್ ಟವರ್ ಕಂಪನಿಯ ಗುತ್ತಿಗೆದಾರರು ಮತ್ತು ಪೊಲೀಸರು ಕೈಜೋಡಿಸಿದ್ದಾರೆ ಎಂಬ ಅನುಮಾನ ವ್ಯಕ್ತಪಡಿಸಿರುವ ರೈತರು ನ್ಯಾಯಕ್ಕಾಗಿ ಆಗ್ರಹಿಸಿದ್ದಾರೆ. ಇನ್ನೊಂದೆಡೆ, ಟವರ್ ನಿರ್ಮಾಣಕ್ಕಾಗಿ ಸುಮಾರು 20/20 ಅಡಿ ವಿಸ್ತೀರ್ಣ ಹಾಗೂ 15 ರಿಂದ 20 ಅಡಿ ಆಳದ ಗುಂಡಿಗಳನ್ನು ತೋಡಲಾಗುತ್ತಿದೆ. ಆದರೆ, ಭೂ ಮತ್ತು ಗಣಿ ಇಲಾಖೆಯ ಅನುಮತಿ ಪಡೆಯದೇ ಈ ಕಾಮಗಾರಿಗಳು ನಡೆಯುತ್ತಿವೆ ಎಂದು ಸ್ಥಳೀಯರು ಆರೋಪವು ಕೇಳಿಬಂದಿದೆ.

ರೈತರ ಆರೋಪದಂತೆ, ಕೆಲವು ಕಂಪನಿಗಳು ಮಧ್ಯವರ್ತಿಗಳ ಮೂಲಕ ಹಣದ ಆಮಿಷ ತೋರಿಸಿ, ಇದು ಸರ್ಕಾರಿ ಯೋಜನೆ, ನಿಮ್ಮ ಒಪ್ಪಿಗೆ ಇಲ್ಲದಿದ್ದರೂ ಜಮೀನು ಪಡೆದುಕೊಳ್ಳಲಾಗುತ್ತದೆ ಎಂಬ ಭಯ ಮತ್ತು ಗೊಂದಲವನ್ನು ಸೃಷ್ಟಿಸುತ್ತಿದ್ದಾರೆ.

ಈ ಪ್ರಕರಣದ ಕುರಿತು ಸಂಬಂಧಿತ ಅಧಿಕಾರಿಗಳು ಹಾಗೂ ಕಂಪನಿ ಪ್ರತಿನಿಧಿಗಳಿಂದ ಸ್ಪಷ್ಟನೆ ದೊರಕಬೇಕಿದ್ದು, ರೈತರು ನ್ಯಾಯಕ್ಕಾಗಿ ಸರ್ಕಾರದ ಸಹಾಯ ಹಸ್ತಕ್ಕೆ ಆಗ್ರಹಿಸಿದ್ದಾರೆ. ಮತ್ತು ಕಾನೂನು ಮೂಲಕ ಹೋರಾಟ ಮಾಡುವುದಾಗಿ ಜಮೀನು ಮಾಲೀಕ ಸಂಬಂಧಿ ರೈತ ಶರಣಪ್ಪ ಯಾರಾಶಿ ತಿಳಿಸಿದ್ದಾರೆ.




ದಿ.ಜಗನ್ನಾಥರಾವ್ ಜೋಶಿ ಜೊತೆ ಕೆಲ ಕ್ಷಣಗಳು

ದಿ.ಜಗನ್ನಾಥರಾವ ಜೋಶಿ ಅವರಂಥ ಮಹಾನ್ ನಾಯಕ ಅಪ್ರತಿಮ ಭಾಷಣಕಾರರ ಹತ್ತಿರ ಕೆಲವು ಸಮಯ ಕಳೆಯುವ ಅವಕಾಶ ನನಗೆ ದೊರಕಿದ್ದು ನನ್ನ ಸೌಭಾಗ್ಯ. ಜಮಖಂಡಿ ಅಥವಾ ಸಮೀಪದ ಬಾಗಲಕೋಟ-ವಿಜಯಪುರಗಳಲ್ಲಿ ಅವರ ಸಭೆಗಳು ಇದ್ದಾಗ ನಾನು ವಿದ್ಯಾರ್ಥಿಯಾಗಿದ್ದಾಗೂ ಕೂಡಾ ಶ್ರಮಪಟ್ಟು ಅಲ್ಲಿಗೆ ಹೋಗಿ ಅವರ ಭಾಷಣ ಕೇಳಿ ತೃಪ್ತಿ ಪಡುತ್ತಿದ್ದೆ. ಹಾಗೂ ಅವರಂತೆ ನಾನೂ ಭಾಷಣಕಾರ ನಾಗಬೇಕೆಂಬ ಹವ್ಯಾಸ ಬೆಳೆಸಿಕೊಂಡಿದ್ದೆ.

ಕರ್ಮಧರ್ಮ ಸಂಯೋಗದಿಂದ 1987ರಲ್ಲಿ ಮಾನ್ಯ ಜಗನ್ನಾಥರಾಯರು ರಾಜ್ಯಾದ್ಯಂತ ತಾಲೂಕು ಶ; ಪ್ರಯಾಣ ಹಾಕಿಕೊಂಡಿದ್ದರು. (ಬಹುಶ; ಅದು ಅವರ ಕೊನೆಯ ಪ್ರವಾಸ) ಜಮಖಂಡಿಗೆ ಒಂದು ದಿನ ಪ್ರವಾಸ ನಿಗದಿಯಾಯಿತು. ಬೆಳಗ್ಗೆ ಒಂದು ಕಾರ್ಯಕರ್ತರ ಸಭೆ ಸಾಯಂಕಾಲ ಸಾರ್ವಜನಿಕ ಸಭೆ 1987ರ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ ಕೇವಲ 164 ಮತಗಳ ಅಂತರದಿಂದ ಸೋತಿದ್ದೆ.

ಸಾರ್ವಜನಿಕರು ತುಂಬಾ ಒತ್ತಡ ಹಾಕಿ ನನ್ನಜೊತೆಗೆ 13 ಜನ ಪ್ರತಿನಿಧಿಗಳನ್ನು ಮಂಡಲ ಪಂಚಾಯತ್‌ಗೆ ಅವಿರೋಧವಾಗಿ ಆಯ್ಕೆ ಮಾಡಿ ನನ್ನನ್ನು ಮಂಡಳ ಪ್ರಧಾನ ಎಂದು ಆಯ್ಕೆ ಮಾಡಿದರು. ಕಾರ್ಯಕರ್ತರ ಸಭೆಯಲ್ಲಿ ನಾನು ಮಂಡಲ ಪ್ರಧಾನ ಎಂದು ಹೇಳಿದಾಗ ಅವರಿಗೆ ತುಂಬಾ ಸಂತೋಷ ಹಾಗೂ ಆಶ್ಚರ್ಯವಾಗಿ ನನ್ನ ಜೊತೆಗೆ ಅವರ ಸಂಭಾಷಣೆ ಹಾಗೂ ಹಾಸ್ಯ ಪೂರಿತವಾದ ಅವರ ಅಮೂಲ್ಯವಾದ ಮಾರ್ಗದರ್ಶನ ಜೀವನದಲ್ಲಿ ಮರೆಯಲಿಕ್ಕಾಗದು.

ಅವರು ಅತ್ಯಂತ ವಿನೋದವಾಗಿ ಮಾತನಾಡಿ ಒಂದು ಮರಾಠಿಗಾದೆ ಮಾತನ್ನು ಹೇಳಿದರು. (ಸೋನಾರ, ಸಿಂಪಿ, ಕುಲಕರ್ಣಿ ಅಪ್ಪಾ ಸಂಘಟ ನಕೋರೆ ತ್ಯಾಚ ಬಪ್ಪಾ) ಅಂದರೆ ಪತ್ತಾರ, ಟೇಲರ, ಹಾಗೂ ಕುಲಕರ್ಣಿ ಅವರ ಗೆಳೆತನ ಮಾಡಬಾರದು ಅಂತಾ ಇದೆ. ನೀನು ಕುಲಕರ್ಣಿ ಪಂಚಾಯತ್ ಅಧ್ಯಕ್ಷನಾಗಿದ್ದೀಯಾ ಪಂಚಾಯತ್‌ನ ಗತಿ ಏನು? ಅಂತಾ ಕೇಳಿದಾಗ ಇಡೀ ಸಭೆ ನಗೆ ಗಡಲಿನಲ್ಲಿ ಮುಳುಗಿತು. ಅವರು ತಮ್ಮ ಮಾತನ್ನು ಮುಂದುವರೆಸುತ್ತಾ ರಾಮಕೃಷ್ಣ ಹೆಗಡೆ ನಿನಗೆ ಎಷ್ಟು ಹಣ ಮಂಜೂರು ಮಾಡಲು ಅವಕಾಶ ಕೊಟ್ಟಾನ? ಅಂತ ಕೇಳಿದಾಗ ನಾನು 500 ರೂ. ಅಂತಾ ಹೇಳಿದೆ. ಹೌದು ನಿನ್ನ ಪಂಚಾಯತ್‌ನಲ್ಲಿ 10 ಸಾವಿರ ರೂ. ದುಡ್ಡು ಇದೆ ಹೇಗೆ ಕೆಲಸ ಮಾಡುತ್ತೀಯಾ ಅಂತ ಕೇಳಿದರು. 499ರಂತೆ ಅಂದಾಜು ಪತ್ರಿಕೆಗಳನ್ನು ತಯಾರಿಸಿ ಅದಕ್ಕೆ ಮಂಜೂರು ಕೊಟ್ಟು ಎಲ್ಲ ಕೆಲಸ ಮಾಡಿಸುತ್ತೇನೆ ಅಂತಾ ಹೇಳಿದಾಗ (good go ahead) ''ಗುಡ್ ಗೋ ಅಹೆಡ್'' ಅಂದರು.



ಇಂದು ಬೆಳಗಾವಿ ನಗರದಲ್ಲಿ ಜಗನ್ನಾಥ್ ಭವನದ ಉದ್ಘಾಟನೆ ನಿಮಿತ್ತ ಲೇಖನ

ಟೇಲರ್ ಹತ್ತಿರ ಒಬ್ಬ ಶರ್ಟ್ ಹೊಲಿಸಲು ಹೋದ, ನನ್ನ ಎದುರಿಗೆ ನೀನು ಕತ್ತರಿಸು ಹಾಗೂ ಹೊಲಿದು ಕೊಡು ಅಂತಾ ಕರಾರು ಹಾಕಿ ಬಟ್ಟೆಯನ್ನು ಮುಂದಿಟ್ಟು ಕುಳಿತೇ ಬಿಟ್ಟ, ಟೇಲರ ಬಟ್ಟೆ ಕತ್ತರಿಸಲು ಪ್ರಾರಂಭಿಸಿದ ಅಷ್ಟರಲ್ಲಿ ಟೇಲರನ ಪುಟ್ಟ ಮಗನೊಬ್ಬ ಗಲಾಟೆ ಮಾಡುತ್ತಾ ಒಳಗೆ ಬಂದ. ಆಗ ಟೇಲರ ಮಗನಿಗೆ ಬೆದರಿಸಿ, ಬೈದು, ತನ್ನ ಬೂಟನ್ನು ಆತನ ಹತ್ತಿರ ತೂರಿದ. ಆ ಹುಡುಗ ಬೂಟನ್ನು ತೆಗೆದು ಕೊಂಡು ಹೊರಗಡೆ ಓಡಿ ಹೋದ. ಈ ಟೇಲರ್ ಆ ಬೂಟಿನ ಒಳಗಡೆ ಬಟ್ಟೆ ಸೇರಿಸಿದ್ದ ಮುಂದೆ ಕುಳಿತ ಆಸಾಮಿಗೆ ಟೇಲರ್ ಬಟ್ಟೆ ಕದ್ದದ್ದು ಗೊತ್ತೇ ಆಗಲಿಲ್ಲ ಅಂತಾ ಜಗನ್ನಾಥರಾಯರು ಹೇಳಿದಾಗ ತುಂಬಾ ಹೊತ್ತು ನಾವು ನಕ್ಕುನಕ್ಕು ಸುಸ್ತಾದೆವು.

ಒಬ್ಬ ಹನುಮಂತ ದೇವರ ಪೂಜಾರಿ ಪ್ರತಿ ಶನಿವಾರಕ್ಕೊಮ್ಮೆ ಭಕ್ತರು ವಿಶೇಷ ಪೂಜೆ, ಅಭಿಷೇಕ, ಎಲೆಪೂಜೆ, ಮುಂತಾದ ಶೃಂಗಾರ ವಸ್ತುಗಳನ್ನು ನೀಡುತ್ತಿದ್ದರು. ಅದರಲ್ಲಿ ಒಂದು ಬೆಳ್ಳಿ ಬಟ್ಟಲಿನಲ್ಲಿ ಸುಗಂಧ ದ್ರವ್ಯ ದೇವರಿಗೆ ಹಚ್ಚಲು ಕೊಡುತ್ತಿದ್ದರು. ಪೂಜಾರಿ ಒಂದು ಸಲ ದ್ರವ್ಯ ದೇವರಿಗೆ ಹಚ್ಚಿ ತನ್ನ ಕೈ ವಾಸನೆ ನೋಡಿದಾಗ, ತುಂಬಾ ಸುವಾಸನೆ ಬಂದಾಗ ಪೂಜಾರಿಗೂ ಆಸೆ ಹುಟ್ಟಿ, ದೇವರಿಗೆ ಹೆಚ್ಚು ತನಗೆ ಕಡಿಮೆ ಮಾಡುತ್ತ, ತನಗೆ ಹೆಚ್ಚು ದೇವರಿಗೆ ಕಡಿಮೆ ಅಂತಾ ಮಾಡಿ, ಕೊನೆಗೆ ಸುಗಂಧ ದ್ರವ್ಯದ ವಾಸನೆಯನ್ನು ಮಾತ್ರ ದೇವರಿಗೆ ತೋರಿಸಿ ತನ್ನ ಮನೆಗೆ ಸುಗಂಧ ದ್ರವ್ಯ ತರತೊಡಗಿದ ಅವಕಾಶ ಸಿಕ್ಕಾಗ ಮನುಷ್ಯ ಭ್ರಷ್ಟ ನಾಗುತ್ತಾನೆ ಎಂಬ ಸತ್ಯವನ್ನು ಬಹಳ ವಿನೋದ ಪೂರ್ವಕವಾಗಿ ಹೇಳಿದ್ದು ಮರೆಯಲಾಗದು.


ಅಧಿಕಾರ ಸಣ್ಣದು ದೊಡ್ಡದು ಅಂತಾ ಎಣಿಸಬಾರದಪ್ಪ ಜನ ಅಧಿಕಾರ ಕೊಟ್ಟಾಗ ನೀನು ಪ್ರಾಮಾಣಿಕವಾಗಿ ನಡೆದರೆ, ಜನ ಒಂದಿಲ್ಲ ಒಂದು ದಿವಸ ನಿನ್ನನ್ನು ಕೈ ಹಿಡಿದು ಹೂವಿನ ಹಾಸಿಗೆಯ ಮೇಲೆ ನಡೆಸುತ್ತಾರೆ ಎಂದು ಹೇಳಿದ್ದು ಜೀವನದಲ್ಲಿ ಮರೆಯಲಿಕ್ಕಾಗದು. ಸರ್ಕಾರ ದಿಂದ ಪ್ರಧಾನರಿಗೆ ತಿಂಗಳಿಗೆ 300 ರೂ.ಗೌರವ ಧನ ಬರುತ್ತಿತ್ತು. ಅದು ಕೂಡಾ ನಾನು ಅಡಿಹುಡಿ ಎಂಬ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ಕಡಿಮೆ ಇದ್ದಾಗ ಒಬ್ಬ ನಿರುದ್ಯೋಗಿ ಪದವೀಧರನಿಗೆ 300 ರೂ ಆತನಿಗೆ ನೀಡಿ ಶಾಲೆಗೆ ಕಳಸುತ್ತಿದ್ದೆ.

ಜಗನ್ನಾಥರಾಯರ ಆಶೀರ್ವಾದ ಹಾಗೂ ಮಾರ್ಗದರ್ಶನ ನನಗೆ ಎಷ್ಟು ಶಕ್ತಿ ಕೊಟ್ಟಿದೆ ಎಂದರೇ ನಾನು 7 ಬಾರಿ ವಿಧಾನಸಭೆ ಚುನಾವಣೆ ಸ್ಪರ್ಧೆ ಮಾಡಿದೆ. 2008ರಲ್ಲಿ 20ಸಾವಿರ ಮತಗಳಿಂದ ಗೆದ್ದೆ. ಅನೇಕ ಬಾರಿ ಸೋತೆ (ಅದಕ್ಕೆ ಕಾರಣಗಳು ಎಲ್ಲರಿಗೂ ಗೊತ್ತು.) ಜಗನ್ನಾಥ ರಾಯರ ವ್ಯಕ್ತಿತ್ವ ಅವರ ಮಾರ್ಗದರ್ಶನ ದಿಂದ ನಾನು ಭಯ, ನಿರಾಶೆ, ಯಾವುದಕ್ಕೂ ಬಲಿ ಯಾಗಲಿಲ್ಲ. (ಪ್ರವಾಸದಲ್ಲಿ ಅವರ ಜೊತೆಗಿದ್ದ ಇನ್ನೊಬ್ಬ ಹಿರಿಯ ಶ್ರೀನಿವಾಸ ಸರಳಾಯರು ನನಗೆ ಸಿಕ್ಕಾಗ ಏನಪ್ಪ ಜಗನ್ನಾಥರಾಯರು ಎಲ್ಲ ಸಭೆಯಲ್ಲೂ ನಿನ್ನ ಜೊತೆಗೆ ನಡೆಸಿದ್ದ ಸಂಭಾಷಣೆಯನ್ನು ಉಲ್ಲೇಖಿಸಿದರು ಎಂಬ ಮಾಹಿತಿ ಕೊಟ್ಟರು.)

ಶ್ರೀಕಾಂತ ಕುಲಕರ್ಣಿ , ಮಾಜಿ ಶಾಸಕರು ಜಮಖಂಡಿ

ಕಿರುಸುದ್ದಿ

ರಾಷ್ಟ್ರೀಯ ಲೋಕ್ ಅದಾಲತ್



•**ಮುಂಡರಗಿ:** ಪಟ್ಟಣದ ದಿವಾಣಿ ನ್ಯಾಯಾಧೀಶ ನ್ಯಾಯಾಲಯದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಗದಗ ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜು.11ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದ್ದು, ವ್ಯಾಜ್ಯಪೂರ್ವ ಪ್ರಕರಣಗಳು ಮತ್ತು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ದಿವಾಣಿ ನ್ಯಾಯಾಧೀಶ ಬಸವರಾಜ ತಿಳಿಸಿದರು.ಪಟ್ಟಣದ ದಿವಾಣಿ ನ್ಯಾಯಾಧೀಶ ನ್ಯಾಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ನ್ಯಾಯಾಲಯಗಳಲ್ಲಿ ಚಾಲ್ತಿ ಇರುವ ಪ್ರಕರಣಗಳಲ್ಲಿ ಹಾಗೂ ಇನ್ನೂ ನ್ಯಾಯಾಲಯಕ್ಕೆ ದಾಖಲಿಸದೇ ಇರುವ ಪ್ರಕರಣಗಳನ್ನು ವ್ಯಾಜ್ಯಪೂರ್ವ ಪ್ರಕರಣಗಳೆಂದು ಪರಿಗಣಿಸಿ ತಕ್ಷಣ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶ ಎಂದರು.

ಲೋಕ್ ಅದಾಲತ್‌ನಲ್ಲಿ ವ್ಯಾಜ್ಯ ಪೂರ್ವ ಪ್ರಕರಣಗಳಾದ ಚೆಕ್ಕು ಅಮಾನ್ಯ, ಬ್ಯಾಂಕ್ ವಸೂಲಾತಿ, ಉದ್ಯೋಗಿಗಳ ಪುನರ್ ಸ್ಥಾಪಿಸಲ್ಪಡುವ, ವಿದ್ಯುತ್ ಹಾಗೂ ನೀರಿನ ಶುಲ್ಕಗಳು ಇತರೆ ಹಾಗೂ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳಾದ ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣ, ಕಾರ್ಮಿಕ ವಿವಾದಗಳು, ವೈವಾಹಿಕ ಪ್ರಕರಣ ಸೇರಿ ಇನ್ನಿತರ ಪ್ರಕರಣಗಳ ಕುರಿತು ರಾಜೀ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು. ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯದ ಶುಲ್ಕವನ್ನು ಪೂರ್ಣ ಮರುಪಾವತಿಸಲಾಗುವುದು ಎಂದರು.

ಸಾವಯವ ಕೃಷಿ ಅಗತ್ಯ

•**ನರಗುಂದ:** ಪ್ರಸ್ತುತ ದಿನಗಳಲ್ಲಿ ರೈತರು ವ್ಯವಸಾಯದಲ್ಲಿ ಕಡ್ಡಾಯವಾಗಿ ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ. ಸಾವಯವ ಕೃಷಿ ಮಾಡದೇ ಇದ್ದಲ್ಲಿ ಕೃಷಿ ಕ್ಷೇತ್ರ ಉಳಿಯುವುದು ಕಷ್ಟವಾಗುತ್ತದೆ ಎಂದು ಆತ್ಮ ಯೋಜನೆಯ ಸಹಾಯಕ ತಾಂತ್ರಿಕ ಅಧಿಕಾರಿ ಶಿವಾಜಿ ಸಾಠೆ ಹೇಳಿದರು.

ತಾಲೂಕಿನ ಸಂಕದಾಳ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾದ ಖೇತ್ ಬಚಾವೋ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರೈತರು ಸಾಧ್ಯವಾದಷ್ಟು ಸಾವಯವ ಕೃಷಿಯನ್ನೇ ಮಾಡಬೇಕು. ಇದರಿಂದ ನಮ್ಮ ಜಮೀನಿನ ಆರೋಗ್ಯದ ಜೊತೆಗೆ ನಮ್ಮ ಆರೋಗ್ಯವು ಸುಧಾರಿಸುವುದು. ಮುಂದಿನ ಪೀಳಿಗೆಗೆ ಉತ್ತಮ ಫಲವತ್ತತೆಯುಳ್ಳ ಭೂಮಿಯನ್ನು ನೀಡಿದಂತಾಗುತ್ತದೆ. ಈ ದೆಸೆಯಲ್ಲಿ ನಾವೆಲ್ಲರೂ ಗೋ ಆಧಾರಿತ ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಬೇಕು ಎಂದರು.

ರಾಸಾಯನಿಕ ಕಳೆನಾಶಕ ಮತ್ತು ಪಿಡಿ ನಾಶಕಗಳ ಬಳಕೆಯಿಂದಾಗಿ ನಮ್ಮ ಭೂಮಿಯ ಫಲವತ್ತತೆಯು ಹಾನಿಗೊಳಗಾಗಿದ್ದು, ಅದನ್ನು ಸುಧಾರಿಸುವುದು ಅವಶ್ಯಕವಾಗಿದೆ ಮತ್ತು ಅಗತ್ಯಕ್ಕೆ ಅನುಗುಣವಾಗಿ ಮಾತ್ರ ಸಮತೋಲಿತ ರಸಗೊಬ್ಬರಗಳನ್ನು ಬಳಸಬೇಕು ಮತ್ತು ಕೃಷಿಯ ಜೊತೆ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಮಾಡುವ ಮೂಲಕ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಕದಾಳ ಗ್ರಾಮದ ರೈತರು, ಕೃಷಿ ಇಲಾಖೆಯ ಸಿಬ್ಬಂದಿ ಮಲ್ಲನಗೌಡ ಚನ್ನಪ್ಪಗೌಡ್ರ, ಇತರರಿದ್ದರು. ಆತ್ಮಾ ಯೋಜನೆಯ ಪ್ರವೀಣ ಪಾಟೀಲ ವಂದಿಸಿದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	5889-7743
ಅಜವಾನ	10869-10999
ಅಲಸಂದಿ	4599-6069
ಕಡಲೆ	1044-6087
ಉದ್ದು	1612-3612
ಹೆಸರು	2114-9500
ಹುರಳಿ	3719-4617
ಜೋಳ	2024-4861
ಗೋವಿನಜೋಳ	1019-2071
ಕುಸುಬಿ	1509-5135
ಸೂರ್ಯಕಾಂತಿ	6282-7107
ತೊಗರಿ	4344-5644
ಗೋಧಿ	2099-5502
ಹತ್ತಿ	7250-7250



ಗದಗ: ಹೆಲ್ಮೆಟ್ ಧರಿಸದ ವಾಹನ ಸವಾರರಿಗೆ ಅರಿವು ಮೂಡಿಸುವ ಉದ್ದೇಶದಿಂದ ನಗರದ ಸಂಚಾರಿ ಪೊಲೀಸ್ ಠಾಣೆ ವತಿಯಿಂದ ವಿನೂತನ ಹಾಗೂ ವಿಭಿನ್ನ ಜಾಗೃತಿ ಅಭಿಯಾನ ಜರುಗಿತು. ಪೊಲೀಸ್ ಸಿಬ್ಬಂ ಯಮಧರ್ಮರಾಜ, ಚಿತ್ರಗುಪ್ತ ಹಾಗೂ ಯಮಕಿಂಕರರ ಪಾತ್ರಗಳ ಮೂಲಕ ಸಾರ್ವಜನಿಕರಲ್ಲಿ ಸಂಚಾರ ಸುರಕ್ಷತೆ ಕುರಿತು ಜಾಗೃತಿ ಮೂಡಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ ಅವರು ಈ ವಿಶೇಷ ಅಭಿಯಾನಕ್ಕೆ ಚಾಲನೆ ನೀಡಿದರು.

ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯ

•**ಗಜೇಂದ್ರಗಡ:** ಜಯ ಕರ್ನಾಟಕ ಜನಪರ ವೇದಿಕೆಯಿಂದ ನಗರದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಾದ ಅಕ್ರಮ ಗರುಸು ಸಾಗಾಣಿಕೆ, ಅಕ್ರಮ ಪಡಿತರ ಚೀಟಿ ಅಕ್ಕಿ ಕಳ್ಳ ಸಾಗಾಣಿಕೆ, ಇದನ್ನೆಲ್ಲ ಸಂಪೂರ್ಣ ಬಂದು ಮಾಡಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಗಜೇಂದ್ರಗಡ ತಹಶೀಲ್ದಾರ್‌ಗೆ ಮನವಿಯನ್ನು ನೀಡಿದರು.

ತಾಲೂಕು ಅಧ್ಯಕ್ಷ ಕಳಕಪ್ಪ ಪೋತಾ ಮಾತನಾಡಿ, ತಾಲೂಕಿನಲ್ಲಿ ಸುಮಾರು ವರ್ಷಗಳಿಂದ ಅಕ್ರಮ ಚಟುವಟಿಕೆಗಳಾದ ಅಕ್ರಮ ಮರಳು ಸಾಗಾಣೆ ಮತ್ತು ಅಕ್ರಮ ಪಡಿತರ ಅಕ್ಕಿ ಕಳ್ಳ ಸಾಗಾಣಿಕೆ ನಡೆಯುತ್ತದೆ. ಅತೀ ವೇಗದಲ್ಲಿ ಬೆಳೆಯುತ್ತಿದೆ. ಈ ಎಲ್ಲಾ ಚಟುವಟಿಕೆಗಳನ್ನು ನೋಡಿ ತಾಲೂಕು ಆಡಳಿತ ಸುಮ್ಮನೆ ಕುಳಿತಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ತಾಲೂಕು ಆಡಳಿತ ಅಧಿಕಾರಿಗಳು ತಾವು ಸುಮ್ಮನೆ ಏಕೆ ಕುಳಿತುಕೊಂಡಿದ್ದೀರಿ ಎಂದು ಸಾರ್ವಜನಿಕರು ಪ್ರಶ್ನೆ ಮಾಡುತ್ತಿದ್ದಾರೆ. ಅದಕ್ಕೆ ತಾಲೂಕಾ ಆಡಳಿತ ಪೊಲೀಸ್ ಇಲಾಖೆಯು ಜಾಣ ಕುರಡು ವರ್ತನೆಯು ತೋರಿತ್ತಿರುವುದು ಖಂಡನೀಯ. ತಾಲೂಕಿನಲ್ಲಿ ಕಾನೂನನ್ನು ಗಾಳಿಗೆ ತೂರಿ ಈ ಚಟುವಟಿಕೆಗಳು ನಡೆಯುತ್ತವೆಯೋ ಅಥವಾ ಕಾನೂನು ಬದ್ಧವಾಗಿ ನಡೆಯುತ್ತವೆ ಎಂಬುದನ್ನು ತಾಲೂಕ ಆಡಳಿತ ಸ್ಪಷ್ಟಿಕರಣ ನೀಡಬೇಕು ಎಂದರು. ಕೆ.ಎಂ. ನಂದನಜವಳೇಕರ, ಬ್ರಹ್ಮಾನಂದ ಪತ್ತಾರ, ಉಮೇಶ ಕಲಮಶೆಟ್ಟಿ, ಶಂಕರ ಕಲಬುರಗಿ, ಚಂದ್ರು ಕೊಡಗಲಿ, ಕಾಸಿಂಸಾಬ್ ಮುಚ್ಚಾಲಿ, ಚಂದ್ರಪ್ಪ ಚಿನ್ನೂರ, ಮಂಜುನಾಥ ಗಾಯಕವಾಡ, ಕಳಕಪ್ಪ ಹಾಳಕೇರಿ, ಶ್ರೀಕಾಂತ ಪಾತ್ರೂಟ, ಸುರೇಶ್ ಉಪ್ಪಾರ, ಶಿವಪ್ಪ ಕಲ್ಗುಡಿ ಸೇರಿದಂತೆ ಅನೇಕರು ಇದ್ದರು.



ಗಜೇಂದ್ರಗಡ: ಜಯ ಕರ್ನಾಟಕ ಜನಪರ ವೇದಿಕೆಯಿಂದ ನಗರದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಾದ ಅಕ್ರಮ ಗರುಸು ಸಾಗಾಣಿಕೆ, ಅಕ್ರಮ ಪಡಿತರ ಚೀಟಿ ಅಕ್ಕಿ ಕಳ್ಳ ಸಾಗಾಣಿಕೆ, ಇದನ್ನೆಲ್ಲ ಸಂಪೂರ್ಣ ಬಂದು ಮಾಡಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಗಜೇಂದ್ರಗಡ ತಹಶೀಲ್ದಾರ್‌ಗೆ ಮನವಿಯನ್ನು ನೀಡಿದರು.

ವಾರದಲ್ಲಿ 5 ದಿನ ಮುಚ್ಚುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಉಪಕೇಂದ್ರ



▸ **ಶಿವಲಿಂಗಯ್ಯ ಹೊತಗಿಮಠ**

ದಿಗಂತ ವಿಶೇಷ

•**ಲಕ್ಷ್ಮೇಶ್ವರ:** ಪಟ್ಟಣದ ಹಳ್ಳದಕೇರಿಯಲ್ಲಿ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಉಪಕೇಂದ್ರ (ಸಿ) ಆಯುಷ್ಮಾನ ಕೇಂದ್ರವು ಸದ್ಯ ಚೌಕಾಬಾರ್ ಆಟ ಹಾಗೂ ಸಿಗರೇಟ್ ಸೇದುವ ಹಾಗೂ ಬೀಡಿ ಎಲೆ ಅಡಿಕೆ ಗುಟ್ಕಾ ಹಾಕಿಕೊಂಡು ಉಗುಳುವ ಕೇಂದ್ರವಾಗಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿ ನಿರ್ಮಿಸಿದ ಕೇಂದ್ರ ಕೆಲವು ಜನರಿಗೆ ಚೌಕಾ ಬಾರ್ ಆಟದ ಕೇಂದ್ರವಾಗಿದೆ. ಕಾರಣ ಇಲ್ಲಿ ಓರ್ವ ಮಹಿಳಾ ಆರೋಗ್ಯ ಕೇಂದ್ರ ಅಧಿಕಾರಿ ಹಾಗೂ ಓರ್ವ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಇದ್ದು ಅವರು ಕಳೆದ ನಾಲ್ಕು ತಿಂಗಳುಗಳಿಂದ 4 ದಿನ ಗ್ರಾಮೀಣ ಭಾಗಗಳಲ್ಲಿ ಕಾರ್ಯ ನಿರ್ವಹಿಸಿ ವಾರಕ್ಕೆ ಎರಡು ದಿನ ಇಲ್ಲೇ ಕಾರ್ಯ ನಿರ್ವಹಿಸುತ್ತಾರೆ. ಉಳಿದದಿನ ಭಾನುವಾರ ಸೇರಿ 5 ದಿನಗಳು ಕೇಂದ್ರ ಮುಚ್ಚಿರುವುದರಿಂದ ಆರೋಗ್ಯ ಕೇಂದ್ರವು ಚೌಕಾಬಾರ್ ಕೇಂದ್ರವಾಗಿ ಮಾರ್ಪಾಡಾಗಿದೆ. ಈ ಬಗ್ಗೆ ಸಿಬ್ಬಂದಿ, ಅಕ್ಕಪಕ್ಕದ ನಿವಾಸಿಗಳು ಹೇಳಿದರೂ ಕ್ಯಾರೇ ಅನ್ನದ ಚೌಕಾಬಾರ್ ಆಟ ಆಡುತ್ತಾರೆ ಎಂಬ ಆರೋಪ ಸ್ಥಳೀಯರಿಂದ ಕೇಳಿಬರುತ್ತಿದ್ದು, ಉಪಕೇಂದ್ರ ಹತ್ತಿರ ಪೊಲೀಸ್ ವಸತಿ ಗ್ರಹಗಳು ಇದ್ದು ಪೊಲೀಸ್ ಇಲಾಖೆಯು ಇತ್ತ ಗಮನ ಹರಿಸಬೇಕು ಎಂಬುದು ಅಲ್ಲಿನ ಸಾರ್ವಜನಿಕ ಒತ್ತಾಯವಾಗಿದೆ.

ಅಧಿಕಾರಿಗಳು ಗಮನಹರಿಸಲಿ

ಈ ಭಾಗದ ವಿವಿಧ ವಾರ್ಡ್‌ಗಳ ರೋಗಿಗಳಿಗೆ ಆರೋಗ್ಯ ಕೇಂದ್ರ ಅನುಕೂಲವಾಗಿದೆ. ಸಣ್ಣಪುಟ್ಟ ರೋಗಗಳಾದ ನೆಗಡಿ ಕೆಮ್ಮು ಜ್ವರ, ಇತರ ನೋವುಗಳಿಗೆ ಹಾಗೂ ಸಣ್ಣಪುಟ್ಟ ಮಕ್ಕಳಿಗೆ ಚುಚ್ಚು ಮದ್ದು, ಗರ್ಭಿಣಿಯರಿಗೆ, ವೃದ್ಧರಿಗೆ, ಬಾಣಂತಿಯರ ತಪಾಸಣೆ ಮಾಡಲಾಗುತ್ತಿದ್ದು, ಅಸಾಂಕ್ರಾಮಿಕ ರೋಗಗಳಾದ ಕ್ಯಾನ್ಸರ್, ಬಿಪಿ ಶುಗರ್ ರೋಗಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕೇಂದ್ರದ ಜೊತೆಗೆ ತಪಾಸಣೆ ಮಾಡಲಾಗುತ್ತದೆ. ಒಂದು ಮಹಿಳಾ ವಸತಿಗ್ರಹ ಹಾಗೂ ಒಂದು ಕ್ಲಿನಿಕ್ ಕೊಠಡಿಯಿದ್ದು ಮಹಿಳಾ ಸಿಬ್ಬಂದಿಗೆ ವಸತಿ ಇರಲು ಸಮಸ್ಯೆಯಾಗುತ್ತಿದೆ. ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಉಪಕೇಂದ್ರದ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕೇಂದ್ರ ಬಂದ್ ವೇಳೆ ಅಸ್ವಚ್ಛತೆ

ಆರೋಗ್ಯ ಉಪಕೇಂದ್ರ ಮಹಿಳಾ ಸಿಬ್ಬಂದಿ ಇರುತ್ತಾರೆ. ಅಲ್ಲಿ ಕೇಂದ್ರ ಬಂದ್ ಇದ್ದಾಗ ಕಟ್ಟೆಯ ಮೇಲೆ ಸಿಗರೇಟ್ ಸೇದುವುದು, ಚೌಕಾ ಬಾರ್ ಆಟ ಹಾಗೂ ಕೆಲವು ಜನ ಅಲ್ಲೆ ಕುಡಿಯುವುದರಿಂದ ಕೇಂದ್ರವು ಅಸ್ವಚ್ಛತೆಯಿಂದ ಕೂಡಿದ್ದು ಸಂಬಂಧಪಟ್ಟ ಇಲಾಖೆ ಇತ್ತ ಗಮನ ಹರಿಸಿ ಕ್ರಮ ಕೈಗೊಳ್ಳಬೇಕು ಎಂದು ಸಮಗ್ರ ರೈತಪರ ಸಂಘಟನೆಗಳ ಒಕ್ಕೂಟದ ತಾಲೂಕು ಅಧ್ಯಕ್ಷ ಮಂಜುನಾಥ ಮಾಗಡಿ ಆಗ್ರಹಿಸಿದ್ದಾರೆ.

> ಆ ಭಾಗದ ಸಮುದಾಯದವರ ಹಿರಿಯರನ್ನು ಕರೆಸಿ ಸಭೆ ಮಾಡಿ ಈ ಬಗ್ಗೆ ತಿಳಿಸಲಾಗುವುದು. ಭದ್ರತೆಗಾಗಿ ಸಿಸಿ ಕ್ಯಾಮೆರಾ, ಸಿಬ್ಬಂದಿ ನೇಮಿಸಲು ಕ್ರಮ ಕೈಗೊಳ್ಳಲಾಗುವುದು. ಚೌಕಾಬಾರ್ ಆಡುವವರ ಬಗ್ಗೆ ಪೊಲೀಸ್ ಇಲಾಖೆಯ ಗಮನಕ್ಕೆ ತರಲಾಗುವುದು.
>
> ■ ಡಾ. ಸುಭಾಸ ದಾಯಗೊಂಡ, ತಾಲೂಕು ವೈದ್ಯಾಧಿಕಾರಿ

ವಿವಿಧ ಕಾರ್ಯಕ್ರಮ ನಾಳೆ: ಹಡಪದ

•**ಮುಂಡರಗಿ:** ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘ ಬೆಂಗಳೂರು, ರಾಜ್ಯ ಹಡಪದ ನೌಕರರ ಸಂಘ ಬೆಂಗಳೂರು, ರಾಜ್ಯದ ಎಲ್ಲ ಜಿಲ್ಲಾಧ್ಯಕ್ಷರು, ಜಿಲ್ಲಾ ಪ್ರತಿನಿಧಿಗಳು, ತಾಲೂಕು, ಹೋಬಳಿ ಸಂಘಗಳು ಮತ್ತು ಮಹಿಳಾ ಸಂಘಗಳ ಸಹಯೋಗದಲ್ಲಿ ಜೂ.22 ರಂದು ತಂಗಡಗಿಯಲ್ಲಿ ಶ್ರೀ ಹಡಪದ ಅಪ್ಪಣ್ಣ ಸಮಾಜದ ಪ್ರಥಮ ಜಗದ್ಗುರುಗಳಾದ ಲಿಂ.ಬಸವ ಪ್ರಿಯ ಅಪ್ಪಣ್ಣ ಸ್ವಾಮೀಜಿಯ 18ನೇ ಪುಣ್ಯಸ್ಮರಣೋತ್ಸವ ಹಾಗೂ ಜ. ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿಯ 18ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ ಎಂದು ಕರ್ನಾಟಕ ರಾಜ್ಯ ಹಡಪದ ಅಪ್ಪಣ್ಣ ಸಮಾಜದ ರಾಜ್ಯಾಧ್ಯಕ್ಷ ದೇವು ಹಡಪದ ಹೇಳಿದರು.

ಅವರು ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಬೆಳಗ್ಗೆ 7 ಗಂಟೆಗೆ ಸಹಜ ಶಿವಯೋಗ, ಲಿಂಗ ದೀಕ್ಷೆ ಕಾರ್ಯಕ್ರಮ. ನಂತರ ಪ್ರಥಮ ಜಗದ್ಗುರುಗಳ ಕರ್ತೃಗದ್ದುಗೆ ಅಡಿಗಲ್ಲು ಸಮಾರಂಭ, ಸಮಾಜದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿಜಮುಕ್ತೆ ಲಿಂಗಮ್ಮ ತಾಯಿಯ ನೂತನ ಭಾವಚಿತ್ರ ಅನಾವರಣ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಮುಂಡರಗಿ ತಾಲೂಕು ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ವೀರಣ್ಣ ಹಡಪದ ಮಾತನಾಡಿ, ಈ ಕಾರ್ಯಕ್ರಮದ ಸಾನ್ನಿಧ್ಯವನ್ನು ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟ ಜಗದ್ಗುರುಗಳಾದ ಚಿತ್ರದುರ್ಗದ ಶಿವಮೂರ್ತಿ ಮುರುಘಾ ಶರಣರು, ಇಲಕಲ್ಲಿನ ಗುರು ಮಹಾಂತ ಸ್ವಾಮೀಜಿ, ಕಾಗಿನೆಲೆಯ ನಿರಂಜನಾನಂದಪುರಿ ಸ್ವಾಮಿಜಿ, ಹೊಸದುರ್ಗದ ಶಾಂತವೀರ ಸ್ವಾಮೀಜಿ, ಚಿತ್ರದುರ್ಗದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮಾಧಾರ ಚೆನ್ನಯ್ಯ ಸ್ವಾಮೀಜಿ ಸೇರಿದಂತೆ ನಾಡಿನ ಅನೇಕ ಸ್ವಾಮೀಜಿಗಳು ಸಾನಿಧ್ಯ ವಹಿಸಿಕೊಳ್ಳಲಿದ್ದಾರೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸಲಿದ್ದಾರೆ. ವಿಜಯಪುರ ಸಂಸದ ರಮೇಶ್ ಜಿಗಜಿಣಗಿ ಭಾವಚಿತ್ರ ಅನಾವರಣ ಮಾಡಲಿದ್ದಾರೆ. ಮುದ್ದೇಬಿಹಾಳ ಶಾಸಕ ಸಿ.ಎಸ್. ನಾಡಗೌಡ ಅಪ್ಪಾಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಶಾಸಕರಾದ ವಿಜಯಾನಂದ ಕಾಶಪ್ಪನವರ, ಭೀಮನಗೌಡ ಪಾಟೀಲ, ಯಶವಂತ ರಾಯಣಗೌಡ ಪಾಟೀಲ, ಬಸನಗೌಡ ಪಾಟೀಲ್ ಯತ್ನಾಳ, ಮಾನಪ್ಪ ವಜ್ಜಲ್, ಹಂಪನಗೌಡ ಬಾದರ್ಲಿ, ಆರ್. ಬಸನಗೌಡ ತುರುವಿಹಾಳ, ಹನುಮಂತ ನಿರಾಣಿ, ಬಸನಗೌಡ ಬಾದರ್ಲಿ, ಎ.ಎಸ್.ಪಾಟೀಲ ನಡಹಳ್ಳಿ, ದೊಡ್ಡನಗೌಡ ಪಾಟೀಲ, ಪ್ರತಾಪಗೌಡ ಪಾಟೀಲ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದರು.

ತಾಲೂಕು ಹಡಪದ ಸಮಾಜದ ಮಾಜಿ ಅಧ್ಯಕ್ಷ ದೇವರಾಜ ಹಡಪದ, ಪ್ರಕಾಶ ಹಡಪದ, ಮಂಜಣ್ಣ ಹಡಪದ, ಶೇಖಣ್ಣ ಹಡಪದ, ತಿಪ್ಪಣ್ಣ ಹರ್ಲಾಪೂರ. ವಿಶ್ವನಾಥ ಅಬ್ಬಿಗೇರಿ, ಮುತ್ತಣ್ಣ ಹಡಪದ, ವೀರಣ್ಣ ಹಡಪದ, ಬಸವರಾಜ ಹಡಪದ ಇತರರಿದ್ದರು.



ನಿಲ್ದಾಣದಲ್ಲಿ ಬಸ್ ತಡೆದು ವಿದ್ಯಾರ್ಥಿಗಳ ಪ್ರತಿಭಟನೆ

•**ಶಿರಹಟ್ಟಿ:** ಶಾಲೆಯ ಸಮಯಕ್ಕೆ ಸರಿಯಾಗಿ ಬಸ್ ಬಿಡುವಂತೆ ಸಾಕಷ್ಟು ಬಾರಿ ಮನವಿ ಮಾಡಿದರೂ ಸಾರಿಗೆ ಇಲಾಖೆಯ ಅಧಿಕಾರಿಗಳು ಸ್ಪಂದನೆ ಮಾಡುತ್ತಿಲ್ಲವೆಂದು ಆರೋಪಿಸಿ ವಿದ್ಯಾರ್ಥಿಗಳು ಬಸ್ ಸಂಚಾರ ತಡೆದು ದಿಢೀರ್ ಪ್ರತಿಭಟನೆ ಮಾಡಿದ ಘಟನೆ ಸ್ಥಳೀಯ ಬಸ್ ನಿಲ್ದಾಣದಲ್ಲಿ ನಡೆಯಿತು.

ಶಾಲೆಯ ಸಮಯಕ್ಕೆ ಬಸ್ ಬಿಡುವಂತೆ ತಾಲೂಕಿನ ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಿದ್ದರೂ ಅಧಿಕಾರಿಗಳು ಮಾತ್ರ ಕ್ರಮ ಕೈಗೊಳ್ಳುತ್ತಿಲ್ಲ. ಕುಸಲಾಪೂರ, ಮಾಚೇನಹಳ್ಳಿ, ತೆಗ್ಗಿನ ಭಾವನೂರು ಸೇರಿದಂತೆ ಈ ಭಾಗದ ವಿದ್ಯಾರ್ಥಿಗಳು ಹಲವಾರು ಬಾರಿ ಡಿಪೋ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದ್ದಾರೆ. ಆದರೆ ಈ ಕುರಿತು ನಾವು ಪ್ರತಿಭಟನೆ ಮಾಡಿದಾಗೆಲ್ಲಾ ಭರವಸೆ ಇಲ್ಲವೇ ಕೇವಲ ಎರಡು ದಿನಗಳವರೆಗೆ ಮಾತ್ರ ಬಸ್ ಓಡಿಸಿ ನಂತರ ಅದೇ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರಿಯಾದ ಸಮಯಕ್ಕೆ ಬಸ್ ಬಿಡುವವರೆಗೂ ನಾವು ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದರು. ನಂತರ ಸಾರಿಗೆ ಇಲಾಖೆಯ ಅಧಿಕಾರಿಗಳು ಮೂರು ದಿನಗಳ ಕಾಲಾವಕಾಶದಲ್ಲಿ ಕೊಡಿ ನಿಮ್ಮ ಸಮಸ್ಯೆ ಖಂಡಿತಾ ಬಗೆ ಹರಿಸಲಾಗುತ್ತದೆ ಎಂದು ಭರವಸೆ ನೀಡಿದ ಮೇಲೆ ಪ್ರತಿಭಟನೆ ಹಿಂಪಡೆದರು.

- ತಿಂಗಳಲ್ಲಿ ಬಹುತೇಕ ದಿನ ಕೇವಲ ಬಸ್ ಬಿಡುವಂತೆ ಆಗ್ರಹಿಸಿ ಪ್ರತಿಭಟನೆ ಮಾಡುವುದರಲ್ಲಿಯೇ ಹೆಚ್ಚು ಸಮಯ ವ್ಯರ್ಥ
- ಮುಂಜಾನೆ ಸಮಯದಲ್ಲಿ ಬಸ್‌ಗಳು ತಡವಾಗಿ ಬರುತ್ತಿರುವುದರಿಂದ ಶಾಲೆಯಲ್ಲಿ ಮೊದಲೆರಡು ತರಗತಿಗಳಿಗೆ ಹಾಜರಾಗಲು ಅಸಾಧ್ಯ
- ಇದರಿಂದಾಗಿ ಶಾಲೆಯಲ್ಲಿ ತಡವಾಗಿ ಬಂದ ವಿದ್ಯಾರ್ಥಿಗಳೆಂದು ತರಗತಿಯಲ್ಲಿ ಸಹಪಾಠಿಗಳ ಎದುರು ಡೆಸ್ಕ್ ಮೇಲೆ ನಿಲ್ಲುವ ಶಿಕ್ಷೆ
- ಶಾಲೆ ಬಿಟ್ಟ ನಂತರವೂ ಬಸ್ ಇಲ್ಲದೆ ಕತ್ತಲೆಯಾದ ನಂತರ ಊರು ಸೇರುವ ಅನಿವಾರ್ಯತೆ ಬಂದೊದಗಿದೆ ಎಂಬುದು ವಿದ್ಯಾರ್ಥಿಗಳ ಅಳಲು



ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆ: ಸೀತಲ ಓಲೇಕಾರ

•**ಗಜೇಂದ್ರಗಡ:** ನಗರದ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷ ಸೀತಲ ಓಲೇಕಾರ ಉದ್ಘಾಟಿಸಿ, ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಬಾಲ್ಯದಿಂದಲೇ ಯೋಗಾಭ್ಯಾಸ ರೂಢಿಸಿಕೊಳ್ಳುವುದರಿಂದ ಮಕ್ಕಳಲ್ಲಿ ಉತ್ತಮ ಆರೋಗ್ಯ, ಏಕಾಗ್ರತೆ ಮತ್ತು ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಯೋಗದ ಮಹತ್ವ ಹಾಗೂ ಆರೋಗ್ಯಕರ ಜೀವನಶೈಲಿಯಲ್ಲಿ ಅದರ ಪಾತ್ರವನ್ನು ಮಕ್ಕಳಿಗೆ ತಿಳಿ ಹೇಳಿದರು.

ಸಂಸ್ಥೆಯ ಕಾರ್ಯದರ್ಶಿ ಎನ್.ಎಂ. ಮುದಗಲ ಮಾತನಾಡಿ, ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಗೆ ಯೋಗಾಭ್ಯಾಸ ಅಗತ್ಯವೆಂದು ಹೇಳಿದರು. ಪ್ರತಿದಿನ ಯೋಗಾಭ್ಯಾಸ ಮಾಡುವ ಮೂಲಕ ಏಕಾಗ್ರತೆ, ಶಿಸ್ತು ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ ಎಂದರು.

ಶಿಕ್ಷಕ ಕಿರಣ ನಿಡಗುಂದಿ ಅವರು ಶಾಲೆಯ ಮಕ್ಕಳಿಗೆ ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳ ಅಭ್ಯಾಸ ಮಾಡಿಸಿದರು. ಮಕ್ಕಳು ಉತ್ಸಾಹದಿಂದ ಯೋಗಾಭ್ಯಾಸದಲ್ಲಿ ಭಾಗವಹಿಸಿದರು. ಶಾಲೆಯ ಶಿಕ್ಷಕಿಯರಾದ ನಸರೀನ ಮುಧೋಳ, ತವಸೀನಬಾನು ಕರ್ನಾಚಿ, ಕೀರ್ತನಾ ಬಂಡಿಹಾಳ ಸಿಬ್ಬಂದಿ ಸಂಗಮೇಶ ರೇವಡಿ, ರವಿ ನಿಡಗುಂದಿ, ಶಾಂತಮ್ಮ ಮುದಟಗಿಮಠ, ಶಾಂತಾ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



ಪದಾಧಿಕಾರಿಗಳ ವಿಸರ್ಜನೆ ಮಾಡಿ ಜಿಲ್ಲಾ ವಕ್ಫ್ ಕಾರ್ಯಾಲಯ ಆದೇಶ

•**ಮುಂಡರಗಿ:** ಪಟ್ಟಣದ ಅಂಜುಮನ್ -ಎ-ಇಸ್ಲಾಂ ಕಮಿಟಿಯ ಪ್ರಸ್ತ ಪದಾಧಿಕಾರಿಗಳನ್ನು ವಿಸರ್ಜನೆ ಮಾಡಿ ಜಿಲ್ಲಾ ವಕ್ಫ್ ಕಾರ್ಯಾಲಯ ಆದೇಶಿಸಿದೆ ಎಂದು ಮುಂಡರಗಿ ಅಂಜುಮನ್ ಇಸ್ಲಾಂ ಕಮಿಟಿ ಮಾಜಿ ಅಧ್ಯಕ್ಷ ನಬೀಸಾಬ ಕೆಲೂರ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕ್ಫ್ ಆದೇಶ ಪ್ರತಿ ಪ್ರದರ್ಶಿಸಿ ವಿವರಿಸಿದರು. ಜಿಲ್ಲಾ ವಕ್ಫ್ ಮಂಡಳಿ ಆದೇಶದ ಮೇರೆಗೆ ಈಗಿರುವ ಪದಾಧಿಕಾರಿಗಳು ಯಾವುದೇ ಅಧಿಕಾರ ಹೊಂದಿರುವುದಿಲ್ಲ, ಸಂಸ್ಥೆಗೆ ಸೇರಿದ ಕಚೇರಿ, ಕಟ್ಟಡಗಳು ಮತ್ತು ಎಲ್ಲಾ ಸ್ಥಿರ ಆಸ್ತಿಗಳ ಭೌತಿಕ ಹಾಗೂ ಆಡಳಿತಾತ್ಮಕ ಜವಾಬ್ದಾರಿಯನ್ನು ಜಿಲ್ಲಾ ವಕ್ಫ್ ಅಧಿಕಾರಿ ಅಥವಾ ಅವರ ಅಧಿಕೃತ ಪ್ರತಿನಿಧಿಗೆ ಹಸ್ತಾಂತರಿಸಬೇಕು. ನಗದು ಬಾಕಿ, ಬ್ಯಾಂಕ್ ಬ್ಯಾಲೆನ್ಸ್, ಸೇಫ್ ಗಳು, ಪೀಠೋಪಕರಣಗಳು ಮತ್ತು ಇತರೆ ಎಲ್ಲ ಬೆಲೆಬಾಳುವ ವಸ್ತುಗಳ ಸಂಪೂರ್ಣ ದಾಸ್ತಾನು ವಿವರಣೆಯನ್ನು ಒದಗಿಸಬೇಕು ಎಂದು ತಿಳಿಸಿದೆ. ಹಿಂದಿನ ಎರಡು ಅವಧಿಯಲ್ಲಿ ಕಮಿಟಿ ಒಳ್ಳೆಯ ಅಭಿವೃದ್ಧಿ ಕೆಲಸ ಮಾಡಿತ್ತು. ವಿವಿಧ ವಾಣಿಜ್ಯ ಮಳಿಗೆ, ಶಾದಿ ಮಹಲ್ ಕೆಲಸಗಳನ್ನು ಸಮಾಜದವರ ಸಹಾಯ ಸಹಕಾರದಿಂದ ಅಭಿವೃದ್ಧಿಗೊಳಿಸಿ ಆದಾಯ ಬರುವಂತೆ ಶ್ರಮಿಸಲಾಗಿತ್ತು. ಈಗ ಹಳೆ ಪದಾಧಿಕಾರಿಗಳು ಅಧಿಕಾರದಿಂದ ನಿರ್ಗಮಿಸಿದ ಮೇಲೆ ಮತ್ತೆ ಸಮಾಜದವರು ಒಟ್ಟಾಗಿ ಸಭೆ ಕರೆದು ಮುಂದೆ ಒಳ್ಳೆಯ ಕೆಲಸ ಮಾಡುವಂತಹ ಹೊಸ ಕಮಿಟಿ ರಚಿಸಲಾಗುವುದು, ಎಲ್ಲ ಕಾರ್ಯವೂ ಕಾನೂನು ರೀತಿಯಲ್ಲಿ ನಡೆಸಲಾಗುವದು ಇದಕ್ಕೆ ಸಮಾಜದವರ ಸಹಕಾರ ಇರುತ್ತದೆ ಎಂದರು. ಅಂಜುಮನ್ ಇಸ್ಲಾಂ ಕಮೀಟಿ ಮಾಜಿ ಅಧ್ಯಕ್ಷ ದುದುಸಾಬ ಕಾತರಕಿ, ಎಂ.ಎಚ್.ತಳಗಡೆ, ಕಾಶೀಸಾಬ ನೂರ್ಪಡಿ, ರಾಜಾಸಾಬ ಬೆಟಗೇರಿ, ನೂರಹ್ಮದ್ ಉಸ್ತಾದ ಸುಬಾನಸಾಬ ಜವಳಿ, ಶಿರಾಜ ಅಹ್ಮದ್ ಅಚ್ಚಳ್ಳಿ, ರಿಯಾಜ ನಾಲಬಂದ ಇತರರು ಉಪಸ್ಥಿತರಿದ್ದರು.



ಸಾವಯವ ಗೊಬ್ಬರ ಬಳಕೆಯಿಂದ ಭೂಮಿ ಫಲವತ್ತತೆ ಹೆಚ್ಚಳ

•**ರೋಣ:** ರಾಸಾಯನಿಕ ಗೊಬ್ಬರವನ್ನು ಬಳಕೆ ಮಾಡುತ್ತಿರುವುದರಿಂದ ಭೂಮಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದ್ದು, ರೈತರು ಹೆಚ್ಚಿನ ರೀತಿಯಲ್ಲಿ ಸಾವಯವ ಗೊಬ್ಬರ ಬಳಕೆಯತ್ತ ಮುಖ ಮಾಡಬೇಕು ಎಂದು ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಹೇಳಿದರು.

ಅವರು ಸಮೀಪದ ಮಾರನಬಸರಿ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘದ ಆವರಣದಲ್ಲಿ ಕೃಷಿ ಇಲಾಖೆ ಗದಗ, ರೋಣ ಹಾಗೂ ಹುಲಕೋಟಿ ಕೃಷಿ ವಿಜ್ಞಾನ ಕೇಂದ್ರ ಸಹಭಾಗಿತ್ವದಲ್ಲಿ ಜರುಗಿದ ಖೇತ್ ಬಚಾವೋ ಅಭಿಯಾನ ಅರಿವು ಮೂಡಿಸುವ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರ ಬಳಕೆ ಮಾಡುವ ರೈತರ ಸಂಖ್ಯೆ ಹೆಚ್ಚಾಗ ತೊಡಗಿದೆ. ರಾಸಾಯನಿಕ ಗೊಬ್ಬರದಿಂದ ಆಹಾರ ಉತ್ಪಾದನೆಯಿಂದ ಮನುಷ್ಯರಿಗೆ ಅನೇಕ ಸಮಸ್ಯೆಗಳು ಉದ್ಭವಿಸುವ ಜೊತೆಗೆ ಭೂಮಿಯ ಫಲವತ್ತತೆ ಕೂಡ ಕಡಿಮೆಯಾಗುತ್ತದೆ ಎಂದರು.



ರೈತರು ಬಿತ್ತನೆ ಮಾಡುವ ಮೊದಲು ತಮ್ಮ ಜಮೀನಿನಲ್ಲಿರುವ ಮಣ್ಣನ್ನು ಪರೀಕ್ಷಿಸಬೇಕು. ಈಗ ಮುಂಗಾರು ಬೆಳೆಗಳನ್ನು ಬಿತ್ತನೆ ಮಾಡಿದ್ದೀರಿ. ಸ್ವಲ್ಪ ಮಟ್ಟಿಗೆ ಮಳೆಯಾಗಿಲ್ಲ,ಈಗ ಹೆಸರು ಬೆಳೆಗೆ ಎಡೆ ಹೊಡೆಯುವ ಸಮಯ. ಆದರೆ ಈಗ ಎಡೆ ಹೊಡದರೆ ಭೂಮಿಯಲ್ಲಿರುವ ತೇವಾಂಶ ಕಡಿಮೆಯಾಗಿ ಇಳುವರಿ ಕಡಿಮೆಯಾಗಬಹುದು. ಬಿತ್ತುವ ಮೊದಲು ಬೀಜೋಪಚಾರ ಅವಶ್ಯಕವಾಗಿ ಮಾಡಿ ಎಂದರು.

ಜಯಪ್ರಕಾಶ ಪಾಟೀಲ ಮಾತನಾಡಿ, ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಳ್ಳಿ. ಇದ್ದ ನೀರನ್ನು ಮಿತವಾಗಿ ಬಳಸಿ. ಯಾವ ಬೆಳೆಯನ್ನು ಬೆಳೆಯಬಹುದು ಎಂಬುದನ್ನು ಕೃಷಿ ಅಧಿಕಾರಿಗಳಿಂದ ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳಿ ಎಂದರು. ಅಧ್ಯಕ್ಷತೆಯನ್ನು ಕೃ.ಪ.ಸ.ಸಂಘದ ಅಧ್ಯಕ್ಷ ಅಂದಾನಗೌಡ ಪಾಟೀಲ ವಹಿಸಿದ್ದರು. ಪ್ರವೀಣ ಕಡಿಕಟ್ಟಿ,ಪ್ರಕಾಶ ಪಾಟೀಲ, ಬಸವರಾಜ ಮಾಳೀದ, ಶೇಖರಗೌಡ ಪಾಟೀಲ, ಶರಣಪ್ಪ ಕುರಿ, ಮರ್ತುಜಸಾಬ ಮೋತೆಖಾನ್, ಶಂಭುಗೌಡ ಪಾಟೀಲ, ಅಂದಪ್ಪ ಮರಡಿ, ಪರಸಪ್ಪ ಹುಯಿಗೋಳ, ಶ್ರೀಕಾಂತ ಕುಲಕರ್ಣಿ, ಶರಣಪ್ಪ ಮ್ಯಾಗೇರಿ, ಬಾಳು ಮಾಳಗಿ, ಖಾದಿರಸಾಬ ಕಳಕಾಪೂರ, ಅಂದಾನಯ್ಯ ಶಾಂತಗೇರಮಠ, ಗೌಡಪ್ಪ ಪಾಟೀಲ, ಶರಣಪ್ಪಗೌಡ ಪಾಟೀಲ, ಶರಣಯ್ಯ ಹಿರೇಮಠ ಸೇರಿದಂತೆ ನರೇಗಲ್ಲ,ರೋಣ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು, ಸಿಬ್ಬಂದಿ, ಕೃಷಿ ಪತ್ತಿನ ಸಹಕಾರಿ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ನಿಗದಿತ ಅವಧಿಯಲ್ಲಿ ಸೌಲಭ್ಯ ತಲುಪಿಸಿ

•**ಗದಗ:** ಸರ್ಕಾರದಿಂದ ಜಾರಿಯಾಗಿರುವ ಪಂಚಗ್ಯಾರಂಟಿ ಯೋಜನೆಗಳು ಬಡಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಉದ್ದೇಶ ಹೊಂದಿದ್ದು ಈ ಯೋಜನೆಗಳ ಅನುಷ್ಠಾನವು ಬಡಜನರ ಸೇವೆಗೆ ಒದಗಿಸಿದ ಬಹುದೊಡ್ಡ ಅವಕಾಶವಾಗಿದೆ ಎಂದು ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇತ್ತೀಚೆಗೆ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಬಡವರಿಗೆ ಗ್ಯಾರಂಟಿ ಯೋಜನೆಯ ಸೌಲಭ್ಯ ತಲುಪಿಸುವಲ್ಲಿ ವಿಳಂಬವಾಗಬಾರದು. ಸೌಲಭ್ಯಗಳನ್ನು ನಿಗದಿತ ಅವಧಿಯಲ್ಲಿಯೇ ತಲುಪಿಸುವಂತಾಗಬೇಕು. ಪಂಚಗ್ಯಾರಂಟಿ ಯೋಜನೆಗಳ ಅನುಷ್ಠಾನ ಶೇಕಡಾ ನೂರರಷ್ಟು ಪ್ರಗತಿ ಸಾಧಿಸಬೇಕು ಎಂದರು. ರಸ್ತೆ ಅಕ್ಕಪಕ್ಕದಲ್ಲಿನ ವಿದ್ಯುತ್ ಕಂಬಗಳು ದುರಸ್ತಿಯಾದಾಗ ಅಥವಾ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾದಾಗ ಸಾರ್ವಜನಿಕರು ಹೆಸ್ಕಾಂ ಕಚೇರಿಯವರನ್ನು ಸಂಪರ್ಕಿಸಿದಾಗ ಹೆಸ್ಕಾಂನ ಲೈನ್‌ಮನ್‌ಗಳು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದರು. ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯ ಕೃಷ್ಣಗೌಡ ಪಾಟೀಲ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ನೀಲಮ್ಮ ಬೋಳನವರ, ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಸದಸ್ಯ ಶಂಭು ಕಾಳೆ, ಮೀನಾಕ್ಷಿ ಬೆನಕಣ್ಣವರ, ದಯಾನಂದ ಪವಾರ, ಸಂಗು ಕರಕಲಮಟ್ಟಿ, ನಿಂಗಪ್ಪ ದೇಸಾಯಿ, ಸಂಗಮೇಶ ಹಾದಿಮನಿ, ರಮೇಶ ಹೊನ್ನಿನಾಯ್ಕರ ಇತರರಿದ್ದರು.



ದೀರ್ಘಾಯುಷ್ಯಕ್ಕೆ ಪ್ರತಿಯೊಬ್ಬರೂ ನಿತ್ಯ ಯೋಗಾಭ್ಯಾಸ ಮಾಡಲಿ

•**ಗದಗ:** ಯೋಗ ಎಂಬುದು ಕೇವಲ ದೈಹಿಕ ಕಸರತ್ತು ಅಥವಾ ವ್ಯಾಯಾಮವಲ್ಲ, ಅದೊಂದು ಮಹಾನ್ ವಿಜ್ಞಾನ ಹಾಗೂ ಶಾಸ್ತ್ರವಾಗಿದೆ. ಆರೋಗ್ಯ ರಕ್ಷಣೆ ಮತ್ತು ದೀರ್ಘಾಯುಷ್ಯಕ್ಕೆ ಪ್ರತಿಯೊಬ್ಬರೂ ನಿತ್ಯ ಯೋಗಾಭ್ಯಾಸ ಮಾಡುವುದು ಅತ್ಯಗತ್ಯ ಎಂದು ವಿಧಾನ ಪರಿಷತ್ ಶಾಸಕ ಎಸ್.ವಿ. ಸಂಕನೂರು ತಿಳಿಸಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಜಿಲ್ಲೆಯ ವಿವಿಧ ಇಲಾಖೆಗಳು ಮತ್ತು ಸರ್ವಯೋಗ ಸಂಸ್ಥೆಗಳ ಇವರುಗಳ ಸಹಯೋಗದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ 2026 ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಕುರಿತು ಆಟೋ ಮೂಲಕ ಜನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಮುನ್ಸಿಪಲ್ ಕಾಲೇಜು ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಜಾಥಾ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.



ಜಿಲ್ಲಾ ಆಯುಷ ಇಲಾಖೆಯ ಅಧಿಕಾರಿ ಡಾ.ಜುಬೇದಬೇಗಂ ತಿಗಳೇರ, ಆಯುಷ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ಸಂಜೀವ ನಾರಪ್ಪನವರ, ಬ್ರಹ್ಮಕುಮಾರಿ ಅಕ್ಕನವರು, ಆಯುಷ ವೈದ್ಯಾಧಿಕಾರಿಗಳ ಸಂಘದ ಕಾರ್ಯದರ್ಶಿ ಡಾ. ಬಿ.ಎಂ ಲೋಕಪುರಿ, ಡಾ.ಎಂ.ಎಂ ಹಾದಿಮನಿ, ಡಾ. ಸಾಯಿಪ್ರಕಾಶ, ಆಡಳಿತಾಧಿಕಾರಿ ಸುಧಾ ಜಾಲಿಹಾಳ, ಆಯುರ್ವೇದ ಕಾಲೇಜು ಡಾ. ಕೊಟ್ರು ಶೆಟ್ರು, ಆರೋಗ್ಯ ಇಲಾಖೆಯ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್. ಡಿ. ಬೆನ್ನೂರ ಇದ್ದರು. ಮುನ್ಸಿಪಲ್ ಕಾಲೇಜು ಆವರಣದಿಂದ ಪ್ರಾರಂಭವಾಗಿ ಗಾಂಧಿ ಸರ್ಕಲ್ ಮಾರ್ಗವಾಗಿ ರೋಟರಿ ಸರ್ಕಲ್, ಹಳೆ ಬಸ್ ನಿಲ್ದಾಣ, ಟಾಂಗಾ ಕೂಟ, ಮಹೇಂದ್ರಕರ ಸರ್ಕಲ್, ಶಹಪೂರ ಪೇಟೆ, ಗಾಂಧಿ ಸರ್ಕಲ್, ಮುನ್ಸಿಪಲ್ ಕಾಲೇಜು ಆವರಣದವರೆಗೆ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ 2026 ಕುರಿತು ಜಾಗೃತಿ ಮೂಡಿಸಿದ ಈ ಜಾಥಾವು ನಗರದ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿತು.

ಸರ್ಕಾರಿ ಜಾಗವನ್ನೂ ಬಿಡದ ಅಕ್ರಮ ಗಣಿ ದಂಧೆಕೋರರು

ನಗರಸಭೆ ಜಾಗದಲ್ಲೇ ಭಾರೀ ಅಕ್ರಮ ಗಣಿಗಾರಿಕೆ ಪತ್ತೆ!

▸ ರುದ್ರಗೌಡ ಪಾಟೀಲ

◆ **ಗದಗ:** ಅಕ್ರಮ ಮಣ್ಣು ಗಣಿಗಾರಿಕೆ ದಂಧೆ ಜಿಲ್ಲಾದ್ಯಂತ ದಿನದಿಂದ ದಿನಕ್ಕೆ ವ್ಯಾಪಕವಾಕವಾಗಿ ಹರಡುತ್ತಿದೆ. ಪರಿಣಾಮ ಸರ್ಕಾರಿ ಜಮೀನನ್ನೂ ಬಿಡದ ಮಟ್ಟಿಗೆ ಅಕ್ರಮ ಗಣಿ ದಂಧೆಕೋರರು ಮುಂದಾಗಿದ್ದಾರೆ.

ಇಲ್ಲಿನ ಪಾಪನಾಶಿ ಬಳಿ ನಗರಸಭೆಯ ಮಾಲೀಕತ್ವದ ಜಾಗದಲ್ಲಿಯೇ ಭಾರೀ ಪ್ರಮಾಣದಲ್ಲಿ ಅಕ್ರಮ ಮಣ್ಣು ಗಣಿಗಾರಿಕೆ ನಡೆಸಿರುವುದು ಪತ್ತೆಯಾಗಿದ್ದು, ಸ್ಥಳ ಪರಿಶೀಲನೆಗೆ ತೆರಳಿದ್ದ ನಗರಸಭೆ ಪೌರಾಯುಕ್ತರೇ ಈ ದೃಶ್ಯ ಕಂಡು ಬೆರಗಾಗಿದ್ದಾರೆ.

ಅವಳಿ ನಗರದಲ್ಲಿ ನೀರಿನ ಕೊರತೆ ಉಂಟಾದ ಸಂದರ್ಭದಲ್ಲಿ ಪರ್ಯಾಯ ನೀರಿನ ಮೂಲಗಳ ಕುರಿತು ಪರಿಶೀಲನೆ ನಡೆಸುವ ಉದ್ದೇಶದಿಂದ ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ ಹಾಗೂ ಸಿಬ್ಬಂದಿ ಪಾಪನಾಶಿ ಸಮೀಪದ ಸರ್ವೇ ನಂ.723/27ರ ಜಾಗಕ್ಕೆ ಭೇಟಿ ನೀಡಿದ್ದರು. ನಗರಸಭೆಯು ನೀರಿನ ಸದ್ಬಳಕೆ ಹಾಗೂ ಭವಿಷ್ಯದ ಯೋಜನೆಗಳ ಹಿನ್ನೆಲೆಯಲ್ಲಿ ಈ ಜಮೀನನ್ನು ಖರೀದಿಸಿದ್ದು, ಅಲ್ಲಿರುವ ಬೃಹತ್ ಕಲ್ಲು ಕ್ವಾರಿಯಲ್ಲಿ ನೀರು ಸಂಗ್ರಹಿಸಿ, ಅಗತ್ಯ ಸಂದರ್ಭದಲ್ಲಿ ಲಿಫ್ಟ್ ಮೂಲಕ ನಗರಕ್ಕೆ ನೀರು ಪೂರೈಸುವ ಸಾಧ್ಯತೆ ಕುರಿತು ಅಧ್ಯಯನ ನಡೆಸಲಾಗುತ್ತಿತ್ತು.

ನಗರಸಭೆಯ ಮಾಲೀಕತ್ವದ ಜಾಗದ ವ್ಯಾಪ್ತಿಯಲ್ಲಿಯೇ ಹಾಗೂ ಕ್ವಾರಿಗೆ ಹೊಂದಿಕೊಂಡಂತೆ ಆಳವಾಗಿ ಮಣ್ಣು ತೆಗೆದು ಅಕ್ರಮ ಗಣಿಗಾರಿಕೆ ನಡೆಸಿರುವುದು ಬೆಳಕಿಗೆ ಬಂದಿದೆ. ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಅಗೆದು ಮಣ್ಣು ಸಾಗಿಸಿರುವುದು ಕಂಡು ಬಂದಿದ್ದು, ಹಲವು ದಿನಗಳಿಂದ ಅವ್ಯಾಹತವಾಗಿ ಈ ದಂಧೆ ನಡೆಯುತ್ತಿರುವ ಶಂಕೆ ವ್ಯಕ್ತವಾಗಿದೆ.



> ಗದಗ-ಬೆಟಗೇರಿ ನಗರಸಭೆಗೆ ಸೇರಿದ ಪಾಪನಾಶಿ ಸಮೀಪದ ಸರ್ವೇ ನಂ.723/27ರ ಜಾಗದಲ್ಲಿ 50 ಅಡಿಗಳಷ್ಟು 10ಕ್ಕೂ ಹೆಚ್ಚು ಅಡಿ ಆಳದಷ್ಟು ಜಾಗದಲ್ಲಿ ಅಕ್ರಮ ಮಣ್ಣು ಗಣಿಗಾರಿಕೆ ನಡೆಸಿರುವುದು ಸ್ಪಷ್ಟವಾಗಿದ್ದು, ಈ ಕುರಿತು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.
>
> ■ **ರಾಜಾರಾಮ ಪವಾರ,** ನಗರಸಭೆ ಪೌರಾಯುಕ್ತ

ಪಾಪನಾಶಿ ಸಮೀಪದ ಸರ್ವೇ ನಂ.723/27ರ ಜಾಗದಲ್ಲಿ 50 ಅಡಿ ಜಾಗದಲ್ಲಿ 10ಕ್ಕೂ ಹೆಚ್ಚು ಅಡಿ ಆಳದಲ್ಲಿ ಅಕ್ರಮ ಗಣಿಗಾರಿಕೆ ನಡೆಸುವ ಮೂಲಕ ಅಪಾರ ಪ್ರಮಾಣದಲ್ಲಿ ಮಣ್ಣು ಸಾಗಾಟ ಮಾಡಲಾಗಿದೆ. ಅಕ್ರಮ ಮಣ್ಣು ಗಣಿ ಚಟುವಟಿಕೆ ಕಂಡು ಬೆಚ್ಚಿಬಿದ್ದ ಪೌರಾಯುಕ್ತರು ತಕ್ಷಣವೇ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ವಿಷಯ ತಂದಿದ್ದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದೂರು ಸಲ್ಲಿಸಿದ್ದಾರೆ.

ದೂರು ಸ್ವೀಕರಿಸಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ನಾಗಭೂಷಣ ಹಾಗೂ ಕಿರಿಯ ಭೂ ವಿಜ್ಞಾನಿ ಸಾವಿತ್ರಿ ಅವರು ಪೊಲೀಸರ ಭದ್ರತೆಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಕ್ರಮ ಗಣಿಗಾರಿಕೆಗೆ ಬಳಸಲಾಗುತ್ತಿದ್ದ ಒಂದು ಹಿಟ್ಯಾಚಿ ಯಂತ್ರ ಹಾಗೂ ಒಂದು ಟಿಪ್ಪರ್ ವಾಹನವನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಶ್ರೀಕಾಂತ ಅಂಗಡಿ ಎಂಬಾತ ಅಕ್ರಮ ಮಣ್ಣು ಗಣಿಗಾರಿಕೆ ನಡೆಸಿರುವ ಆರೋಪ ಎದುರಿಸುತ್ತಿದ್ದು, ಆತನ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರ ಹಾಗೂ ನಗರಸಭೆಯ ಆಸ್ತಿಗೆ ಹಾನಿ ಉಂಟುಮಾಡಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಇದೇ ವೇಳೆ, ಜಿಲ್ಲೆಯ ವಿವಿಧ ಭಾಗಗಳಲ್ಲಿ ಅಕ್ರಮ ಮಣ್ಣು ಗಣಿಗಾರಿಕೆ ಪ್ರಕರಣಗಳು ಪದೇ ಪದೆ ಬೆಳಕಿಗೆ ಬರುತ್ತಿದ್ದರೂ, ಬಹುತೇಕ ಪ್ರಕರಣಗಳಲ್ಲಿ ಕೇವಲ ನೋಟಿಸ್, ದಂಡ ಅಥವಾ ಪ್ರಾಥಮಿಕ ಕ್ರಮಗಳಿಗೆ ಮಾತ್ರ ಸೀಮಿತವಾಗಿರುವ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

ದಿಗಂತ ವಿಶೇಷ

ರೈತನಿಗೆ ಅಂದು ಜಾನುವಾರು, ಇಂದು ಸೈಕಲ್ ಎಡೆಕುಂಟೆ ಆಸರೆ!

▸ ಪುಷ್ಪವತಿ ಜಿಎಂ ಬಸಯ್ಯ

◆ **ಕುರುಗೋಡು:** ಜಮೀನಿನಲ್ಲಿ ಬೆಳೆದ ಕಳೆ ನಿರ್ವಹಣೆಗೆ ಜಾನುವಾರುಗಳ ಬದಲಿಗೆ ಅನ್ನದಾತ ಸೈಕಲ್ ಎಡೆಕುಂಟೆ ಮೊರೆ ಹೋಗಿದ್ದಾನೆ.

ಮಳೆ ಕೊರತೆ ಒಂದೆಡೆಯಾದರೆ, ಇನ್ನೊಂದೆಡೆ ಕಳೆ ರೈತರನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಈ ಕಳೆಗೆ ಎಡೆಕುಂಟೆಯೇ ರಾಮಬಾಣವಾಗಿದ್ದರೂ ಜಾನುವಾರುಗಳು ಬೆಲೆ ಗಗನಕ್ಕೇರಿದ್ದರಿಂದ ಅತ್ಯಂತ ಕಡಿಮೆ ಖರ್ಚಿನಲ್ಲಿ ಸಿದ್ಧಗೊಂಡಿರುವ ಸೈಕಲ್ ಎಡೆ ಹೊಡೆಯುವ ಯಂತ್ರ ಬಳಸಿ ಕಳೆ ನಿವಾರಣೆಗೆ ರೈತರು ಮುಂದಾಗಿದ್ದಾರೆ.

ಇಲ್ಲಿನ ಎಚ್.ವೀರಾಪುರ ಗ್ರಾಮದ ವ್ಯಾಪ್ತಿಯಲ್ಲಿನ ಬಹುತೇಕ ರೈತರು ಸೈಕಲ್ ಎಡೆ ಹೊಡೆಯುವ ಯಂತ್ರದಿಂದಲೇ ಭೂಮಿ ಸ್ವಚ್ಛಗೊಳಿಸಿದ್ದಾರೆ.

ದುಬಾರಿಯಾಗಿರುವ ಜಾನುವಾರುಗಳನ್ನು ಕೊಂಡುಕೊಳ್ಳಲು ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ಸುಲಭವಾಗಿ ದೊರೆಯುವ ಸೈಕಲ್ ಎಡೆ ಹೊಡೆಯುವ ಯಂತ್ರ ರೈತರ ಸ್ನೇಹಿಯಾಗಿದೆ.

ಎಚ್.ವಿರಾಪುರ ಗ್ರಾಮದ ಬಹುತೇಕ ಜನರು ಬೇರೆ ಜಿಲ್ಲೆ ಹಾಗೂ ರಾಜ್ಯಗಳಿಗೆ ದುಡಿಯಲು ಗುಳೆ ಹೋಗಿದ್ದಾರೆ. ಹೀಗಾಗಿ ಕಾರ್ಮಿಕರ ಕೊರತೆಯೂ ಇದೆ. ಇದೇ ಸಂದರ್ಭದಲ್ಲಿ ಸೈಕಲ್ ಎಡೆ ಹೊಡೆಯುವ ಯಂತ್ರ ರೈತರಿಗೆ ವರವಾಗಿ ಪರಿಣಮಿಸಿದೆ.

> ಐದು ಎಕರೆ ಜೋಳದ ಜಮೀನಿನಲ್ಲಿ ಸೈಕಲ್ ಕುಂಟೆ ಬಳಸುವ ಮೂಲಕ ಆರ್ಥಿಕ ದೃಷ್ಟಿಯಿಂದ ಹಾಗೂ ಕೂಲಿ ಕಾರ್ಮಿಕರ ಅವಲಂಬನೆ ಕಡಿಮೆ ಮಾಡಲು ಸೈಕಲ್ ಕುಂಟೆ ಬಳುಸುತ್ತಿದ್ದೇನೆ.
>
> ■ **ರಾಜು. ಎಚ್,** ವೀರಾಪುರ ಗ್ರಾಮದ ರೈತ

ಈ ಸೈಕಲ್ ಎಡೆಕುಂಟೆಯಿಂದ ಆ ಕೆಲಸ ಮಾಡಿಕೊಳ್ಳಬಹುದಾಗಿದೆ. ಈ ಸೈಕಲ್ ಎಡೆ ಕುಂಟೆಗೆ ಸರಳ ಮತ್ತು ಸುಲಭ ವಿಧಾನವಾಗಿದೆ. ಈ ಯಂತ್ರಕ್ಕೆ ಡಿಸೆಲ್, ಬ್ಯಾಟರಿ ಅವಶ್ಯಕತೆಯಿಲ್ಲ, ಮುಂಗಾರು ಬೆಳೆಗಳಾದ ಹೆಸರು, ತೊಗರಿ ಇತ್ಯಾದಿ ಬೆಳೆಗಳಲ್ಲಿ ಕಸ ತೆಗೆಯಲು ಸಕಾಲಕ್ಕೆ ಬಳಕೆ ಮುಂದಾಗಿದ್ದಾರೆ.

ಪ್ರತಿ ಕೂಲಿಯಾಳುವಿಗೆ ಸುಮಾರು ಕನಿಷ್ಠ 250 ರಿಂದ 300 ರೂ. ನೀಡಬೇಕು. ಬಾಡಿಗೆ ಎತ್ತಗಳಿಗೆ 1200 ರಿಂದ 1600 ರೂ.ವರೆಗೆ ನೀಡಬೇಕಿತ್ತು. ಸೈಕಲ್ ಎಡೆ ಹೊಡೆಯುವ ಯಂತ್ರದಿಂದಾಗಿ ಈ ಭಾರ ಕಡಿಮೆಯಾಗಿದೆ. ಬಹುತೇಕ ಸಣ್ಣ- ಮಧ್ಯಮ ರೈತರಿಗೆ ಅನುಕೂಲವಾಗಿದೆ ಎಂದು ರೈತ ಪೀರಾ ಸಾಮು ತಿಳಿಸಿದ್ದಾರೆ.



ಕಿರುಸುದ್ದಿ

ಶಿಥಿಲ ಶಾಲಾ ಕಟ್ಟಡ ಮೇಲ್ಛಾವಣಿ ಕುಸಿತ



◆ **ವಿಜಯಪುರ:** ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ ಹೊಂದಿಕೊಂಡಿದ್ದ ಶಿಥಿಲಗೊಂಡಿದ್ದ ಕಟ್ಟಡದ ಕ್ಲಾಸ್ ರೂಮ್‌ನ ಮೇಲ್ಛಾವಣಿ ಶುಕ್ರವಾರ ರಾತ್ರಿ ಕುಸಿದು ಬಿದ್ದು ಗ್ರಾಮದಲ್ಲಿ ಆತಂಕ ಮೂಡಿಸುವಂತೆ ಮಾಡಿದೆ. ಇಲ್ಲಿನ ಸರ್ಕಾರಿ ಶಾಲೆಗೆ ಹೊಂದಿಕೊಂಡಿದ್ದ ಶಿಥಿಲ ಕಟ್ಟಡದ ಸುತ್ತ ವಿದ್ಯಾರ್ಥಿಗಳು ತೆರಳದಂತೆ ಬೇಲಿ ಹಾಕಲಾಗಿತ್ತು. ಈ ಕಟ್ಟಡದಲ್ಲಿ ಶಾಲಾ ತರಗತಿಗಳು ನಡೆಯುತ್ತಿರಲಿಲ್ಲ. ಈ ಕಟ್ಟಡದ ಮೇಲ್ಛಾವಣಿ ಏಕಾಏಕಿ ಕಿತ್ತು ಬಿದಿದ್ದು, ಯಾವುದೇ ರೀತಿಯ ಹಾನಿಯಾಗಿಲ್ಲ. ಈ ಸುದ್ದಿ ತಿಳಿದ ಗ್ರಾಮೀಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಸ್ಥಳಕ್ಕೆ ಭೇಟಿ ನೀಡಿ, ಮುನ್ನೆಚ್ಚರಿಕೆ ನಿಟ್ಟಿನಲ್ಲಿ ಈ ಶಿಥಿಲ ಕಟ್ಟಡವನ್ನು ಜೆಸಿಬಿ ಮೂಲಕ ತೆರವುಗೊಳಿಸಿದ್ದಾರೆ. ಈ ಬಗ್ಗೆ ಯಾವುದೇ ರೀತಿಯ ಆತಂಕ ಪಡುವ ಅವಶ್ಯಕತೆಯಿಲ್ಲ ಎಂದು ಅವರು ತಿಳಿಸಿದ್ದಾರೆ.

ಅಡ್ಡ ಮತದಾನಕ್ಕೆ ಹೈಕಮಾಂಡ್ ಕಠಿಣ ಕ್ರಮ: ಸಚಿವ ಜೋಶಿ

◆ **ಹುಬ್ಬಳ್ಳಿ:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿರುವುದು ದುರ್ದೈವ ಸಂಗತಿ. ದುಡ್ಡಿನ ಆಮಿಷಕ್ಕೆ ಈ ರೀತಿ ಮಾಡಿದ್ದಾರೆ. ಇದಕ್ಕೆ ಮುಂದೆ ಪಶ್ಚಾತ್ತಾಪ ಅನುಭವಿಸಬೇಕಾಗುತ್ತದೆ. ಹೈಕಮಾಂಡ್ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಈ ಬಗ್ಗೆ ರಾಜ್ಯಾಧ್ಯಕ್ಷರು ಉತ್ತರ ನೀಡಿದ್ದು, ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂದು ತಿಳಿಯಲು ಕಮಿಟಿಯನ್ನು ಸಹ ರಚಿಸಿದ್ದಾರೆ. ಕೇಂದ್ರದ ನಾಯಕರು ಈ ಬಗ್ಗೆ ಗಮನಿಸುತ್ತಿದ್ದಾರೆ ಎಂದರು.



ಪಕ್ಷದಿಂದ ಆಯ್ಕೆಯಾದವರೂ ಪಕ್ಷಕ್ಕೆ ನಿಷ್ಠೆಯಿಂದ ಇರಬೇಕು. ನಮಗೆ ಮತ ಹಾಕಬೇಕು ಎಂದು ಹೇಳುವ ಅವಶ್ಯಕತೆ ಇಲ್ಲ. ಹಣದ ಆಸೆ ಹಾಗೂ ಆಮಿಷಕ್ಕೆ ಒಳಪಟ್ಟಿರುವುದು ತಪ್ಪು ಎಂದರು.

ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಹಾಗೂ ಮಹಾರಾಷ್ಟ್ರದಲ್ಲಿ ಶಿವಸೇನೆ ಪಕ್ಷಗಳ ಕುಟುಂಬ ರಾಜಕಾರಣ ಹಾಗೂ ಆ ಪಕ್ಷಗಳಲ್ಲಿ ಭವಿಷ್ಯವಿಲ್ಲದ ಕಾರಣ ಅಲ್ಲಿಯ ಶಾಸಕರು, ಸಂಸದರು ಆ ಪಕ್ಷಗಳ ಬಿಟ್ಟು ಬಿಜೆಪಿಗೆ ಬರುತ್ತಿದ್ದಾರೆ ಎಂದು ಹೇಳಿದರು.

ಪಶ್ಚಿಮ ಬಂಗಾಲಯದಲ್ಲಿ ಭ್ರಷ್ಟಾಚಾರ, ಮಹಿಳೆಯರ ಮೇಲೆ ಅತ್ಯಾಚಾರ, ಜನರ ಸುಲಿಗೆ ಹಾಗೂ ಕುಟುಂಬ ರಾಜಕಾರಣದಿಂದ ಜನರು ಬೇಸತ್ತಿದ್ದರು. ಇಷ್ಟಾದರೂ ಮಮತಾ ಬ್ಯಾನರ್ಜಿ ಅವರು ಸಮರ್ಥನೆ ಮಾಡಿಕೊಳ್ಳುತ್ತಿದ್ದರು. ಅಲ್ಲಿಯ ಜನರು ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆ ಶಾಸಕರು ಹಾಗೂ ಸಂಸದರು ಪಕ್ಷ ಬಿಡುತ್ತಿದ್ದಾರೆ ಎಂದು ತಿಳಿಸಿದರು.

ನೂರು ವರ್ಷ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಯಾವುದೇ ನೋಂದಣಿ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಸಚಿವ ಪ್ರಿಯಾಂಕಾ ಖರ್ಗೆ ಅವರು ಹಳೇಯ ರೇಡಿಯೋ ತರ ಇದ್ದಾರೆ. ಹೇಳಿದ್ದನ್ನೆ ಹೇಳುತ್ತಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡುವುದು ಅಪ್ರಸ್ತುತ. ಈಗಾಗಲೇ ಸಂಘದ ಹಿರಿಯರು ಅದಕ್ಕೆ ಉತ್ತರ ನೀಡಿದ್ದಾರೆ ಎಂದು ಹೇಳಿದರು.

ಆರ್‌ಎಸ್‌ಎಸ್‌ಗೆ ಬೈದರೆ ಮುಖ್ಯಮಂತ್ರಿ ಆಗುತ್ತೇವೆ ಎಂಬ ಭ್ರಮೆಯಲ್ಲಿ ಕೆಲವರು ಇದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿದ್ದಾರೆ ಎಂಬ ಕಾರಣಕ್ಕೆ ಪ್ರಿಯಾಂಕ್ ಖರ್ಗೆಗೆ ಸಚಿವರಾಗಿದ್ದಾರೆ. ಅವರ ಹೇಳಿಕೆಗೆ ಮಹತ್ವ ಕೊಡಬೇಕಿಲ್ಲ ಎಂದರು.

ಬೆಂಗಳೂರು ಅದೋಗತಿಗೆ ತಂದು ಅವರು ಸಿಎಂ ಆಗಿದ್ದಾರೆ. ಮುಂದೆ ರಾಜ್ಯವೂ ಅದೇ ಸ್ಥಿತಿಗೆ ಬರಲಿದೆ. ರಾಜ್ಯ ಭ್ರಷ್ಟಾಚಾರ ಸರ್ಕಾರವಾಗಿದೆ. ಸ್ವತಃ ಆ ಪಕ್ಷದ ಶಾಸಕರೇ ಆರೋಪ ಮಾಡಿದ್ದಾರೆ. ದೇಶದಲ್ಲಿ ಈ ಬಾರಿ ಶೇ.40ರಷ್ಟು ಮಳೆ ಕೊರತೆ ಆಗುವ ಸಾಧ್ಯತೆ ಇದೆ. ರಾಜ್ಯದಲ್ಲಿಯೂ ಕುಡಿಯುವ ನೀರಿನ ಸಮಸ್ಯೆ, ಬೆಳೆ ಹಾನಿ ಆಗಲಿದೆ. ಈ ಬಗ್ಗೆ ರಾಜ್ಯ ಸರ್ಕಾರ 15 ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು. ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಬೇಕು. ಇಲ್ಲದಿದ್ರೆ ಪಕ್ಷದಿಂದ ಹೋರಾಟ ಮಾಡಲಾಗುವುದು. ಸರ್ಕಾರದ ಬಗ್ಗೆ ಮೃದು ಧೋರಣೆ ಇಲ್ಲ ಎಂದು ಹೇಳಿದರು.

ಡ್ರಗ್ ಪೆಡ್ಲರ್ ಶಂಕೆ | ಯುವಕನ ಮೇಲೆ ಹಲ್ಲೆ

ಹಲವರ ಬಂಧನ: ಹಿಂದು ಸಂಘಟನೆಗಳ ಆಕ್ರೋಶ



◆ **ಹುಬ್ಬಳ್ಳಿ:** ಅನ್ಯಕೋಮಿನ ಯುವ ಜೋಡಿಯೊಂದು ಊಟಕ್ಕೆಂದು ಹೋಟೆಲ್‌ಗೆ ಹೋದಾಗ ಹಿಂದು ಸಂಘಟನೆ ಕಾರ್ಯಕರ್ತರು ಯುವಕನ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಗ್ರಾಮೀಣ ಪೊಲೀಸರು ಕೆಲವರನ್ನು ಬಂಧಿಸಿದ್ದಾರೆ.

ಕ್ರಿಶ್ಚಿಯನ್ ಯುವಕ ಡ್ರಗ್ ಪೆಡ್ಲರ್ ಆಗಿದ್ದು, ಹಿಂದು ಯುವತಿಯರಿಗೆ ಡ್ರಗ್ಸ್ ನೀಡುತ್ತಿರುವ ಹಿನ್ನೆಲೆ ಆತನನ್ನು ಹಿಡಿದ ಕಾರಣಕ್ಕೆ ಗ್ರಾಮೀಣ ಪೊಲೀಸರು ಇಲ್ಲ ಸಲ್ಲದ ಆರೋಪ ಮಾಡಿ ಬಂಧಿಸಿದ್ದಾರೆ ಎಂದು ಶ್ರೀರಾಮ ಸೇನೆಯ ಕಾರ್ಯಕರ್ತರು ಪ್ರಮೋದ ಮುತಾಲಿಕ್ ನೇತೃತ್ವದಲ್ಲಿ ಗ್ರಾಮೀಣ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಘಟನೆ ಹಿನ್ನೆಲೆ?: ಅನ್ಯಕೋಮಿನ ಯುವ ಜೋಡಿಯೊಂದು ನಗರದ ಹೊರವಲಯದ ಹೋಟೆಲ್‌ಗೆ ಊಟಕ್ಕೆ ಹೋದಾಗ ಹಿಂದೂ ಸಂಘಟನೆ ಹೆಸರಲ್ಲಿ 8-10 ಜನರ ಗುಂಪೊಂದು ಬಾಸೆಲ್ ಮಿಷನ್ ಕಾಂಪೌಂಡ್ ನಿವಾಸಿ ಶರವೀನ ಜೋಗುಳದ ಎಂಬುವನ ಮೇಲೆ ಹಲ್ಲೆ ನಡೆಸಿದ್ದರು.

> ಯುವಕ ಮೇಲೆ ಹಲ್ಲೆ ಪ್ರಕರಣ ಇಬ್ಬರನ್ನು ಬಂಧಿಸಲಾಗಿದ್ದು, ಉಳಿದವರಿಗೆ ಶೋಧ ಕಾರ್ಯ ನಡೆದಿದೆ. ಶ್ರೀರಾಮ ಸೇನೆ ಅವರು ದೂರು ನೀಡಿದರೆ ಆ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು.
>
> ■ **ಗುಂಜನ್ ಆರ್ಯಾ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ನಂತರ ಬೈಕ್‌ನಲ್ಲಿ ಕುಳ್ಳಿರಿಸಿಕೊಂಡು ಸಿದ್ಧಾರೂಢ ಮಠ ಹತ್ತಿರದ ಬಾರ್‌ವೊಂದರ ಶೆಡ್‌ನಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿದ್ದಲ್ಲದೇ, 5ಲಕ್ಷ ರೂ. ಕೊಡಬೇಕು. ಇಲ್ಲದಿದ್ದರೆ ನಿಮ್ಮ ಮಗನನ್ನು ಬಿಡುವುದಿಲ್ಲವೆಂದು ಯುವಕನ ತಾಯಿಗೆ ಬೆದರಿಕೆ ಹಾಕಿದ್ದಾರೆ ಎಂದು ಯುವಕ ಕುಟುಂಬಸ್ಥರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಶ್ರೀರಾಮ ಸೇನೆಯ ಸುನೀಲ ಚಿಲ್ಲಾಳ, ಮಂಜು ಕಾಟಕರ ಸೇರಿ ಹಲವರ ವಿರುದ್ಧ ದೂರು ದಾಖಲಾಗಿದೆ. ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಗಾಯಾಳು ಶರವೀನ ಚಿಕಿತ್ಸೆ ಪಡೆಯುತ್ತಿದ್ದು, ಜಿಲ್ಲಾ ಎಸ್‌ಪಿ ಆರ್ಯ ಗುಂಜನ್, ಡಿವೈಎಸ್‌ಪಿ ವಿನೋದ ಮುಕ್ತೇದಾರ, ಇನ್ಸಪೆಕ್ಟರ್ ಮುರುಗೇಶ ಚನ್ನಣ್ಣವರ ಆಸ್ಪತ್ರೆಗೆ ಭೇಟಿ ಕೊಟ್ಟು ಯುವಕನಿಂದ ಮಾಹಿತಿ ಪಡೆದುಕೊಂಡು, ತನಿಖೆ ನಡೆಸುತ್ತಿದ್ದಾರೆ.

ಸುಳ್ಳು ಆರೋಪ

ಹಿಂದು ಯುವತಿಯರಿಗೆ ಡ್ರಗ್ಸ್ ನೀಡುತ್ತಿದ್ದ ಡ್ರಗ್ ಪೆಡ್ಲರ್ ನನ್ನು ಹಿಡಿದ ಕಾರಣ ಹಿಂದೂ ಕಾರ್ಯಕರ್ತರ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿ ಬಂಧಿಸಿರುವುದನ್ನು ಖಂಡಿಸಿ ಶ್ರೀರಾಮ ಸೇನೆಯ ಕಾರ್ಯಕರ್ತರು ಗ್ರಾಮೀಣ ಪೊಲೀಸ್ ಠಾಣೆ ಎದುರು ಪ್ರತಿಭಟನೆ ಮಾಡಿದರು. ಡಗ್ ಪೆಡ್ಲರ್‌ಗೆ ಸಹಕಾರ ನೀಡುತ್ತಿದ್ದು, ಅಮಾಯಕ ಹಿಂದು ಕಾರ್ಯಕರ್ತರ ಬಂಧಿಸಲಾಗಿದೆ. ಅವರನ್ನು ತಕ್ಷಣ ಬಿಡುಗಡೆ ಮಾಡಿ ಡ್ರಗ್ ಪೆಡ್ಲರ್ ವಿರದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಈ ಪ್ರಕರಣವನ್ನು ನಿಷ್ಪಕ್ಷಪಾತ ತನಿಖೆ ನಡೆಸಿ ನಿರಪರಾಧಿಗಳಿಗೆ ನ್ಯಾಯ ದೊರಕಿಸಬೇಕು ಎಂದು ಪೊಲೀಸರಿಗೆ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್, ಅಣ್ಣಪ್ಪ ದಿವಟಗಿ, ಶ್ರೀಧರ್ ಕಲಬುರಗಿ, ಬಸು ದುರ್ಗದ, ವಿಶ್ವನಾಥ ಭೂದುರ, ಮಾಂತೇಶ ತೊಂಗಳಿ, ರಘು ಯಲ್ಲಕ್ಕನವರ್, ಬಸು ಗೌಡರ ಇದ್ದರು.

ಶಾಸನ ನಿರ್ಲಕ್ಷಿತವಲ್ಲ: ಡಾ.ಲಕ್ಷ್ಮೀಶ್

◆ **ಶಿರಸಿ:** ಸ್ವರ್ಣವಲ್ಲೀ ಮಠಕ್ಕೆ ಸಂಬಂಧಿಸಿದ ಉಜ್ಜಯಿನಿಯ ಅರಸನ ದಾನ ಶಾಸನದ ಕುರಿತು ಇತಿಹಾಸ ಸಂಶೋಧಕರಾದ ಡಾ.ಲಕ್ಷ್ಮೀಶ್ ಹೆಗಡೆ ಸೋಂದಾ ಅವರು ಮಹತ್ವದ ಸ್ಪಷ್ಟನೆ ನೀಡಿದ್ದಾರೆ.

ನಿನ್ನೆ ಪ್ರಕಟವಾದ ವರದಿಯ ಹಿನ್ನೆಲೆಯಲ್ಲಿ ಮಾತನಾಡಿರುವ ಅವರು, ಈ ಶಾಸನದ ಇತ್ತೀಚಿನ ವಿಮರ್ಶೆಗಳಿಂದಾಗಿ ಅದರ ಕಾಲಮಾನದಲ್ಲಿ ಕೇವಲ ಸ್ವಲ್ಪ ವ್ಯತ್ಯಾಸ ಬಂದಿದೆಯೇ ಹೊರತು, ಅದು ಯಾವುದೇ ಕಾರಣಕ್ಕೂ ನಿರ್ಲಕ್ಷಿತ ಶಾಸನವಲ್ಲ ಎಂದು ತಿಳಿಸಿದ್ದಾರೆ.

ಈ ಪ್ರಮುಖ ಶಾಸನವನ್ನು ಈಗಾಗಲೇ ಹಿರಿಯ ಇತಿಹಾಸಕಾರರಾದ ಡಾ.ಎ.ಕೆ. ಶಾಸ್ತ್ರಿಯವರು ಪ್ರಕಟಿಸಿದ್ದಾರೆ. ಜೊತೆಗೆ ತಾವೂ ಕೂಡ ತಮ್ಮ ಪಿಎಚ್‌ಡಿ ಪ್ರಬಂಧದಲ್ಲಿ ಇದನ್ನು ಉಲ್ಲೇಖಿಸಿರುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ. ಮಠದ ಇತಿಹಾಸದಲ್ಲಿ ಅನೇಕ ಕಡೆಗಳಲ್ಲಿ ಇದರ ಉಲ್ಲೇಖವಿದ್ದು, ಇದನ್ನು ಸತ್ಯ ಶಾಸನವೆಂದೇ ಒಪ್ಪಿಕೊಳ್ಳಲಾಗಿದೆ. ಇದರ ಆಧಾರದ ಮೇಲೆಯೇ ಶ್ರೀಮಠದ ಇತಿಹಾಸವನ್ನು ಕಾಶಿಯಿಂದ ಆರಂಭಿಸಿ, ಕ್ರಿ.ಶ. 9ನೇ ಶತಮಾನದಿಂದಲೇ ಮಠದ ಪರಂಪರೆಯನ್ನು ದಾಖಲಿಸುತ್ತಾ ಬರಲಾಗಿದೆ.

ಪ್ರಸ್ತುತ ನಡೆಯುತ್ತಿರುವ ಕಾಲಮಾನದ ವಿಮರ್ಶೆಯನ್ನು ಸಂಶೋಧನಾ ದೃಷ್ಟಿಯಿಂದ ಸ್ವಾಗತಿಸೋಣ. ಆದರೆ, ಶಾಸನ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು ಎಂಬ ವಾದವನ್ನು ಒಪ್ಪಲು ಸಾಧ್ಯವಿಲ್ಲ, ಈ ಶಾಸನವು ಮಠದ ಇತಿಹಾಸಕ್ಕೆ ಎಂದಿಗೂ ಪ್ರಮುಖ ಆಧಾರವಾಗಿ ಉಳಿಯಲಿದೆ. ಪ್ರಸ್ತುತ ತಾವು ಬರೆಯುತ್ತಿರುವ ಮಠದ ಪರಿಷ್ಕೃತ ಇತಿಹಾಸ ಗ್ರಂಥದಲ್ಲಿಯೂ ಈ ಶಾಸನದ ಸಂಗತಿಯನ್ನು ವಿಸ್ತೃತವಾಗಿ ವಿವರಿಸಲಾಗುತ್ತಿದೆ ಎಂದು ಡಾ.ಲಕ್ಷ್ಮೀಶ್ ಹೆಗಡೆ ಸೋಂದಾ ಅವರು ಸ್ಪಷ್ಟಪಡಿಸಿದ್ದಾರೆ.

ಕುಮಟಾಕ್ಕೆ ವಿಸ್ತರಿಸಿದ ಕಾಚಿಗುಡ-ಮುರುಡೇಶ್ವರ ರೈಲು ಸೇವೆ

◆ **ಕುಮಟಾ:** ಕರಾವಳಿ ಭಾಗದ ರೈಲು ಸಂಪರ್ಕಕ್ಕೆ ಮತ್ತೊಂದು ಮಹತ್ವದ ಸೇರ್ಪಡೆಯಾಗಿ ಕಾಚಿಗುಡ-ಮುರುಡೇಶ್ವರ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ಕುಮಟಾ ನಿಲ್ದಾಣದವರೆಗೆ ವಿಸ್ತರಿಸಲಾಗಿದ್ದು, ಶನಿವಾರ ನಡೆದ ಸಮಾರಂಭದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹಸಿರು ನಿಶಾನೆ ತೋರಿಸುವ ಮೂಲಕ ಸೇವೆಗೆ ಚಾಲನೆ ನೀಡಿದರು.

ರೈಲ್ವೆ ಸೇವಾ ಸಮಿತಿ ಹಾಗೂ ರಾಜಸ್ಥಾನಿ ಸೇವಾ ಸಮಿತಿ ವತಿಯಿಂದ ಸಂಸದರು ಹಾಗೂ ಶಾಸಕರನ್ನು ಸನ್ಮಾನಿಸಲಾಯಿತು. ಶಾಸಕ ದಿನಕರ ಶೆಟ್ಟಿ, ಕೊಂಕಣ ರೈಲ್ವೆ ನಿಗಮದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಸಂತೋಷಕುಮಾರ್ ಜಾ, ಉಪವಿಭಾಗಾಧಿಕಾರಿ ಪಿ. ಶ್ರವಣಕುಮಾರ್, ಪ್ರಾದೇಶಿಕ ರೈಲ್ವೆ ವ್ಯವಸ್ಥಾಪಕಿ ಆಶಾ ಶೆಟ್ಟಿ, ಜಿಲ್ಲಾ ರೈಲ್ವೆ ಸೇವಾ ಸಮಿತಿಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ನೂತನ ಪದಾಧಿಕಾರಿಗಳ ಪದಗ್ರಹಣ

ಶಿರಸಿ: ಇಲ್ಲಿನ ಲಯನ್ಸ್ ಕ್ಲಬ್ ಹಾಗೂ ಲಿಯೋ ಕ್ಲಬ್‌ಗಳ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಜೂನ್ 21ರ ಭಾನುವಾರ ಸಂಜೆ 6.30ಕ್ಕೆ ಲಯನ್ಸ್ ಭವನದಲ್ಲಿ ಜರುಗಲಿದೆ. ಲಯನ್ಸ್ ಕ್ಲಬ್ ನೂತನ ಅಧ್ಯಕ್ಷರಾಗಿ ಎಂ.ಜೆ.ಎಫ್. ಲಯನ್ ಮನೋಹರ್ ಮಲ್ಮನೆ, ಕಾರ್ಯದರ್ಶಿಯಾಗಿ ಲಯನ್ ಬಸವರಾಜ ಚಕ್ರಸಾಲಿ, ಖಜಾಂಚಿಯಾಗಿ ಲಯನ್ ಶಂಕರ್ ಹೆಗಡೆ ಭದ್ರನ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಲಿಯೋ ಕ್ಲಬ್‌ನ ಅಧ್ಯಕ್ಷರಾಗಿ ಲಿಯೋ ಅಂಶಿಕಾ ಹೆಗಡೆ, ಕಾರ್ಯದರ್ಶಿಯಾಗಿ ಲಿಯೋ ಧರಣಿ ನಾಯ್ಕ, ಖಜಾಂಚಿಯಾಗಿ ಲಿಯೋ ಸಮರ್ಥ ಹೆಗಡೆ ಹಾಗೂ ಶ್ರೀನಿಕೇತನ ಶಾಲೆಯ ಲಿಯೋ ಕ್ಲಬ್‌ನ ಅಧ್ಯಕ್ಷರಾಗಿ ಲಿಯೋ ಅದಿತ್ ಹೆಗಡೆ, ಕಾರ್ಯದರ್ಶಿಯಾಗಿ ಕೃತಾ ಭಟ್, ಖಜಾಂಚಿಯಾಗಿ ಲಿಯೋ ವೈಷ್ಣವಿ ಹೆಗಡೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಲಯನ್ಸ್ 317ಬಿ ಜಿಲ್ಲೆಯ ಸೆಕೆಂಡ್ ವೈಸ್ ಗವರ್ನರ್ ಎಂ.ಜೆ.ಎಫ್. ಲಯನ್ ಗಿರೀಶ ಕುಚಿನಾಡ್ ಮುದ್ಗಲ್ (ಕೊಪ್ಪಳ) ಪ್ರಮಾಣ ವಚನ ಬೋಧಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿದ್ಯುತ್ ಖಾಸಗೀಕರಣ ವಿರೋಧಿಸಿ ನಾಳೆ ಬೃಹತ್ ಪ್ರತಿಭಟನೆ

ಶಿರಸಿ: ರಾಜ್ಯ ಸರ್ಕಾರದ ವಿದ್ಯುತ್ ಖಾಸಗೀಕರಣ ನೀತಿಯಿಂದ ಗ್ರಾಹಕರಿಗೆ ಹೊರೆಯಾಗುವುದಲ್ಲದೆ, ಲಕ್ಷಾಂತರ ವಿದ್ಯುತ್ ಗುತ್ತಿಗೆದಾರರು ಹಾಗೂ ಕಾರ್ಮಿಕರು ಬೀದಿಪಾಲಾಗಲಿದ್ದಾರೆ. ಆದ್ದರಿಂದ ಸರ್ಕಾರ ಈ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಶಿರಸಿ ಘಟಕ ಆಗ್ರಹಿಸಿದೆ.
ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಕಾರ್ಯದರ್ಶಿ ರಾಘವೇಂದ್ರ ನಾಯ್ಕ ಮಾತನಾಡಿ, ಬೆಸ್ಕಾಂ, ಮೆಸ್ಕಾಂ, ಚೆಸ್ಕಾಂ ಹೆಸ್ಕಾಂ ವ್ಯಾಪ್ತಿಯಲ್ಲಿ 'ದಿ ಟಾಟಾ ಪವರ್ ಕಂಪನಿ ಲಿಮಿಟೆಡ್' ಸಲ್ಲಿಸಿರುವ ವಿತರಣಾ ಪರವಾನಿಗೆ ಅರ್ಜಿಗೆ ಈಗಾಗಲೇ ಇಮೇಲ್ ಹಾಗೂ ಪತ್ರದ ಮೂಲಕ ಆಕ್ಷೇಪಣೆ ಸಲ್ಲಿಸಲಾಗಿದೆ ಎಂದರು.
ಖಾಸಗಿ ಕಂಪನಿಗಳು ಕೇವಲ ಲಾಭದಾಯಕ ನಗರ ಪ್ರದೇಶಗಳತ್ತ ಗಮನ ಹರಿಸುವುದರಿಂದ ಗ್ರಾಮೀಣ ಭಾಗಗಳು ನಿರ್ಲಕ್ಷ್ಯಕ್ಕೆ ಒಳಗಾಗಲಿವೆ ಮತ್ತು ವಿದ್ಯುತ್ ದರಗಳು ಗಗನಕ್ಕೇರಲಿವೆ. ಈಗಾಗಲೇ ಶಿರಸಿ, ಕಾರವಾರ, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾವಿ ನಗರಗಳಲ್ಲಿ ಪರವಾನಿಗೆಗಾಗಿ ಅರ್ಜಿ ಸಲ್ಲಿಕೆಯಾಗಿದ್ದು, ಖಾಸಗೀಕರಣದಿಂದ ಉದ್ಯೋಗ ಭದ್ರತೆಗೆ ಧಕ್ಕೆಯಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.
ಈ ನೀತಿಯನ್ನು ವಿರೋಧಿಸಿ ಜೂನ್ 22ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆ ನಡೆಯಲಿದ್ದು, ಜಿಲ್ಲೆಯಿಂದ ಸುಮಾರು 200 ಗುತ್ತಿಗೆದಾರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಉಪಾಧ್ಯಕ್ಷ ಸುಬ್ರಾಯ ನಾಯ್ಕ, ಖಜಾಂಚಿ ರವಿ ಭಟ್ಟ, ತಾಲೂಕು ಸಮಿತಿಯ ಅನೂಪ ನೇತ್ರೇಕರ ಹಾಗೂ ಶಿರಸಿ ತಾಲೂಕು ಸಮಿತಿ ಅಧ್ಯಕ್ಷ ನಾಗೇಶ ನಾಯ್ಕ ಉಪಸ್ಥಿತರಿದ್ದರು.



ಗೋಕರ್ಣ: ಇಲ್ಲಿನ ಭದ್ರಕಾಳಿ ಪ್ರೌಢಶಾಲೆಯಲ್ಲಿ ಶನಿವಾರ ಸಂಭ್ರಮ ಶನಿವಾರದ ಅಂಗವಾಗಿ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳೊಂದಿಗೆ ಸಂವಹನ ಕಾರ್ಯಕ್ರಮ ನಡೆಯಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60009	67600
ಬಿಳಿಗೋಟು	24000	34500
ಕೆಂಪುಗೋಟು	27258	36099
ಬೆಟ್ಟೆ	40199	45899
ರಾಶಿ	48099	52000
ಚಾಲಿ	44029	48239



ಶಿರಸಿ: ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಸರ್ಕಾರದ ವಿದ್ಯುತ್ ಖಾಸಗೀಕರಣ ನೀತಿ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಶಿರಸಿ ಘಟಕ ಒತ್ತಾಯಿಸಿದೆ.

ವಿಶಿಷ್ಟಚೇತನರಿಗೆ ಗೌರವಯುತ ಸ್ಥಾನ ನೀಡಿ

ಮುಂಡಗೋಡ: ಶಿಕ್ಷಣ ಇಲಾಖೆಯ ಆದೇಶದಂತೆ ಪಟ್ಟಣದ ಆದಿಜಾಂಬವ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಶನಿವಾರ ಸಂಭ್ರಮ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಆದಿಜಾಂಬವ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್. ಪಕ್ಕೀರಪ್ಪ ಮಾತನಾಡಿ, ವಿಶಿಷ್ಟಚೇತನ ವ್ಯಕ್ತಿಗಳಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನ ನೀಡಬೇಕು. ಅವರಿಗೆ ಸಾಧ್ಯವಾದಷ್ಟು ಸಹಾಯ, ಸಹಕಾರ ಹಾಗೂ ಪ್ರೋತ್ಸಾಹ ನೀಡುವ ಮೂಲಕ ಅವರ ಜೀವನವನ್ನು ಸಾರ್ಥಕಗೊಳಿಸಬೇಕು ಎಂದು ಹೇಳಿದರು. ಶಾಲೆಯ ಮುಖ್ಯ ಶಿಕ್ಷಕರಾದ ಎಸ್. ಡಿ. ಮುಡೆಣ್ಣವರ ಮಾತನಾಡಿ, ಅಂಗವೈಕಲ್ಯವು ಯಾವುದೇ ಶಾಪವಲ್ಲ. ಅದು ಹುಟ್ಟಿನಿಂದಲೂ ಬರಬಹುದು ಅಥವಾ ಅನಿರೀಕ್ಷಿತ ಘಟನೆಗಳಿಂದಲೂ ಉಂಟಾಗಬಹುದು. ಇಂತಹ ವ್ಯಕ್ತಿಗಳಿಗೆ ಸಮಾಜದ ಬೆಂಬಲ, ಪ್ರೋತ್ಸಾಹ ಮತ್ತು ಅವಕಾಶಗಳು ದೊರೆತಾಗ ಅವರು ಕೂಡ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಸಮಾಜಕ್ಕೆ ಮಾದರಿಯಾಗಬಹುದು ಎಂದು ಅಭಿಪ್ರಾಯಪಟ್ಟರು.ಈ ಸಂದರ್ಭದಲ್ಲಿ ಶಿಕ್ಷಕರಾದ ಎಸ್. ಸಿ. ಪಾಟೀಲ ಅವರು ವಿಶೇಷ ಚೇತನರ ಹಕ್ಕುಗಳು ಹಾಗೂ ಸಮಾಜದ ಜವಾಬ್ದಾರಿಗಳ ಕುರಿತು ಮಾತನಾಡಿದರು. ಪಿ.ಸಿ. ಐನಾಪುರ ಸ್ವಾಗತಿಸಿದರು. ಆರ್.ಎಸ್.ಅಕ್ಕಿವಳ್ಳಿ ನಿರೂಪಿಸಿದರು. ಎಂ.ಎಸ್.ಪಾಟೀಲ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಸಿಬ್ಬಂದಿ ಎಂ. ಕೆ. ಕೊಂಡೋಜಿ ಎಸ್.ಎಸ್. ಭದ್ರಶಟ್ಟಿ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಮುಂಡಗೋಡ: ಶಿಕ್ಷಣ ಇಲಾಖೆಯ ಆದೇಶದಂತೆ ಪಟ್ಟಣದ ಆದಿಜಾಂಬವ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಶನಿವಾರ ಸಂಭ್ರಮ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ

ಬೆಂಗಳೂರು-ಕಾರವಾರ ವಂದೇ ಭಾರತ್ ರೈಲು ವಿಸ್ತರಣೆಗೆ ಪ್ರಯತ್ನ

ಕಾರವಾರ: ಬೆಂಗಳೂರು–ಮಂಗಳೂರು ಉದ್ದೇಶಿತ ವಂದೇ ಭಾರತ್ ರೈಲನ್ನು ಕಾರವಾರದವರೆಗೂ ವಿಸ್ತರಣೆ ಮಾಡಲು ಕರಾವಳಿಯ ಎಲ್ಲಾ ಸಂಸದರು ಪ್ರಯತ್ನಪಡುತ್ತಿರುವುದಾಗಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಅವರು ಶನಿವಾರ ಕುಮಟಾ ರೈಲ್ವೆ ನಿಲ್ದಾಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಪ್ರಯಾಣಿಕರ ಸೌಲಭ್ಯಗಳ ಉದ್ಘಾಟನೆ ಮತ್ತು ಕುಮಟಾದಿಂದ ಕಾಚಿಗುಡಗೆ ವಿಸ್ತರಿಸಿರುವ ರೈಲಿಗೆ (ರೈಲು ಸಂಖ್ಯೆ: 12790/12789) ಹಸಿರು ನಿಶಾನೆ ತೋರಿಸಿ ಮಾತನಾಡಿದರು.



ಕುಮಟಾದಲ್ಲಿ ರೂ.2.4 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾದ ಪ್ಲಾಟ್ ಫಾರಂ, ರೂ.1.18 ಕೋಟಿ ರೂ. ವೆಚ್ಚದಲ್ಲಿ ಗೋಕರ್ಣದಲ್ಲಿ ನಿಲ್ದಾಣ ಮೇಲ್ದರ್ಜೆ, ಭಟ್ಕಳದಲ್ಲಿ ರೂ.53 ಲಕ್ಷ ರೂ.ವೆಚ್ಚದ ಕಾಮಗಾರಿ ಮತ್ತು ಮುರುಡೇಶ್ವರದಲ್ಲಿ ರೂ.10 ಲಕ್ಷ ರೂ. ವೆಚ್ಚದ ಕಾಮಗಾರಿ ಸೇರಿದಂತೆ ಒಟ್ಟು ರೂ. 10 ಕೋಟಿ ವೆಚ್ಚದ ಸಾರ್ವಜನಿಕ ಉಪಯೋಗದ ಕಾಮಗಾರಿಗಳನ್ನು ಇಂದು ಲೋಕಾರ್ಪಣೆ ಮಾಡಿದ್ದು, ಕೊಂಕಣ ರೈಲ್ವೆಯ ಮೂಲಭೂತ ಅಗತ್ಯತೆಗಳ ಸಮಗ್ರ ಅಭಿವೃದ್ಧಿಗೆ ರೂ.7000 ಕೋಟಿಗಳ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸಲಾಗಿದ್ದು, ಇದಕ್ಕೆ ಶೀಘ್ರದಲ್ಲಿ ಕ್ಯಾಬಿನೆಟ್ ಅನುಮೋದನೆ ದೊರೆಯಲಿದೆ ಎಂದರು.

ಅಂಕೋಲಾ ಹುಬ್ಬಳ್ಳಿ ರೈಲು ಮಾರ್ಗವನ್ನು ಆರಂಭಿಸಲು ಬದ್ಧವಾಗಿದ್ದು, ಕುಮಟಾ ಫ್ಲಾಟ್ ಫಾರ್ಮ್‌ದಲ್ಲಿ ಶೆಲ್ಟರ್ ನಿರ್ಮಾಣ ಮತ್ತು ಹೆಗಡೆ ಬಳಿ ಓವರ್ ಬ್ರಿಡ್ಜ್ ಮಾಡಲು ಎಸ್ಟಿಮೇಟ್ ಮಾಡಲು ಸೂಚಿಸಲಾಗಿದ್ದು, ಕೊಂಕಣ ರೈಲ್ವೆ ಕಾಮಗಾರಿಯಿಂದ ಸಂತ್ರಸ್ಥರವರಿಗೆ ಪರಿಹಾರ ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ. ಜಿಲ್ಲೆಯಲ್ಲಿ ರೈಲ್ವೆಗೆ ಸಂಬಂಧಿಸಿದ ಎಲ್ಲಾ ಪ್ರಮುಖ ಬೇಡಿಕೆಗಳು ಮತ್ತು ಅಗತ್ಯತೆಗಳನ್ನು ಪೂರ್ಣಗೊಳಿಸಲಾಗುವುದು ಎಂದರು.ಕೊಂಕಣ ರೈಲ್ವೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಕುಮಾರ್ ಝಾ, ಉಪ ವಿಭಾಗಾಧಿಕಾರಿ ಶ್ರವಣ ಕುಮಾರ್, ಕಾರವಾರ ಪ್ರಾದೇಶಿಕ ರೈಲ್ವೆ ವ್ಯವಸ್ಥಾಪಕಿ ಆಶಾ ಶೆಟ್ಟಿ, ಕೊಂಕಣ ರೈಲ್ವೆ ಮಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಸುಧಾ ಕೃಷ್ಣಮೂರ್ತಿ ಮತ್ತಿತರರು ಇದ್ದರು.ರೈಲು ಸಂಖ್ಯೆ 12790 / 12789 ಕಾಚೇಗುಡ –ಮುರುಡೇಶ್ವರ–ಕಾಚೇಗುಡ ದ್ವಿ–ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲನ್ನು ಕುಮಟಾದವರೆಗೆ ವಿಸ್ತರಿಸಿರುವುದರಿಂದ ಕರ್ನಾಟಕ ಮತ್ತು ತೆಲಂಗಾಣ ನಡುವಿನ ರೈಲು ಸಂಪರ್ಕವು ಗಣನೀಯವಾಗಿ ಸುಧಾರಿಸಲಿದೆ. ಈ ವಿಸ್ತರಿತ ಸೇವೆಯು ಕುಮಟಾ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಪ್ರಯಾಣಿಕರಿಗೆ ಪ್ರಮುಖ ಸ್ಥಳಗಳಿಗೆ ನೇರ ಸಂಪರ್ಕವನ್ನು ಕಲ್ಪಿಸಲಿದ್ದು, ದೈನಂದಿನ ಪ್ರಯಾಣಿಕರು, ವಿದ್ಯಾರ್ಥಿಗಳು, ಪ್ರವಾಸಿಗರು, ಉದ್ಯಮಿಗಳು ಮತ್ತು ಸ್ಥಳೀಯ ನಿವಾಸಿಗಳ ಸುಲಭ ಪ್ರಯಾಣಕ್ಕೆ ಅನುಕೂಲ ಮಾಡಿಕೊಡುತ್ತದೆ. ಹಾಗೂ ಈ ಪ್ರದೇಶದ ಆರ್ಥಿಕ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ನೀಡಲಿದೆ.

> **ಕುಮಟಾದಲ್ಲಿ ನಿರಂತರ ಹೋರಾಟದಿಂದ ಕೊಂಕಣ ರೈಲ್ವೆಯಲ್ಲಿ ಕುಮಟಾ ಭಾಗಕ್ಕೆ ಹೆಚ್ಚಿನ ಸೌಲಭ್ಯಗಳು ಸಿಗುವಂತಾಯಿತು. ರೈಲು ಹೊರಟಾಗ, ಮುಂದಿನ ನಿಲ್ದಾಣ ಎಷ್ಟು ಕಿಲೋ ಮೀಟರ್ ದೂರದಲ್ಲಿದೆ ಎಂಬ ಮಾಹಿತಿಯ ಸ್ಕ್ರೋಲಿಂಗ್ ಅನೌನ್ಸೆಂಟ್ ರೈಲಿನ ಒಳಗಡೆ ಬರುವಂತಾಗಬೇಕು, ರೈಲಿನ ಶೌಚಾಲಯಗಳಿಗೆ ಸ್ಲೈಡಿಂಗ್ ಬಾಗಿಲುಗಳನ್ನು ಅಳವಡಿಸಬೇಕು.**
> ■ ದಿನಕರ ಶೆಟ್ಟಿ, ಶಾಸಕ

ಆಸ್ಪತ್ರೆ ಮೇಲ್ದರ್ಜೆಗೇರಿಸಲು ಒತ್ತಾಯ

ಶಿರಸಿ: ಇಲ್ಲಿನ ತಾಲೂಕು ಸರ್ಕಾರಿ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಹಾಗೂ ಆಸ್ಪತ್ರೆಗೆ ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸುವಂತೆ ಕೋರಿ ಶಾಸಕ ಭೀಮಣ್ಣ ಟಿ. ನಾಯ್ಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಿರಸಿ ಮತ್ತು ಸುತ್ತಮುತ್ತಲಿನ ಭಾಗದ ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆಸ್ಪತ್ರೆಯ ಅಭಿವೃದ್ಧಿ ಎಷ್ಟು ಅಗತ್ಯ ಎಂಬುದನ್ನು ಸಚಿವರಿಗೆ ಮನವರಿಕೆ ಮಾಡಿಕೊಡಲಾಯಿತು. ಶಿರಸಿ ತಾಲೂಕು ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಯನ್ನಾಗಿ ಉನ್ನತೀಕರಿಸಿ, ಈ ಭಾಗದ ಜನರಿಗೆ ಸುಧಾರಿತ ವೈದ್ಯಕೀಯ ಚಿಕಿತ್ಸೆ ಸ್ಥಳೀಯವಾಗಿಯೇ ಸಿಗುವಂತೆ ಮಾಡಬೇಕು ಮತ್ತು ಆಧುನಿಕ ಚಿಕಿತ್ಸೆಗೆ ಅಗತ್ಯವಿರುವ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ಹಾಗೂ ಯಂತ್ರೋಪಕರಣಗಳನ್ನು ಆಸ್ಪತ್ರೆಗೆ ಶೀಘ್ರವಾಗಿ ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಅಲ್ಲದೆ ಆಸ್ಪತ್ರೆಯಲ್ಲಿ ಪ್ರಸ್ತುತ ಖಾಲಿಇರುವ ಮತ್ತು ಹೆಚ್ಚುವರಿಯಾಗಿ ಬೇಕಾಗುವ ವೈದ್ಯಕೀಯ, ನರ್ಸಿಂಗ್ ಹಾಗೂ ವೈದ್ಯಕೀಯೇತರ ಸಿಬ್ಬಂದಿಯನ್ನು ತಕ್ಷಣವೇ ನೇಮಕ ಮಾಡಿಕೊಳ್ಳುವಂತೆ ಶಾಸಕರು ಸಚಿವರಲ್ಲಿ ವಿನಂತಿಸಿದರು. ಇದೇ ವೇಳೆ ಭೀಮಣ್ಣ ನಾಯ್ಕ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಈ ಕುರಿತು ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಿತ್ವಿಕ್ ಪಾಂಡೆ ಹಾಗೂ ಇಲಾಖೆಯ ಆಯುಕ್ತ ಗುರುದತ್ತ ಹೆಗಡೆ ಅವರು ಉಪಸ್ಥಿತರಿದ್ದು, ವಿಷಯದ ಕುರಿತು ಸಚಿವರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.



ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ಕಾಗೇರಿ

ಕುಮಟಾ: ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯಿಂದ ಕೃಷಿ ಭೂಮಿಯ ಫಲವತ್ತತೆ ಕುಸಿಯುತ್ತಿದ್ದು, ರೈತರು ನೈಸರ್ಗಿಕ ಮತ್ತು ಸಾವಯವ ಕೃಷಿ ಪದ್ಧತಿಯತ್ತ ಹೆಚ್ಚಿನ ಒಲವು ತೋರಬೇಕು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ಅಂತ್ರವಳ್ಳಿಯ ಪ್ರಗತಿಪರ ರೈತ ಎನ್.ಡಿ. ಹೆಗಡೆ ಅವರ ತೋಟದಲ್ಲಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ಶನಿವಾರ ಆಯೋಜಿಸಿದ್ದ ನೈಸರ್ಗಿಕ ಕೃಷಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಕೃಷಿಯ ಪರಿಣಾಮವಾಗಿ ಆಹಾರದ ಗುಣಮಟ್ಟ ಕುಸಿಯುತ್ತಿದ್ದು, ಮಾನವ ಆರೋಗ್ಯದ ಮೇಲೂ ದುಷ್ಪರಿಣಾಮಗಳು ಉಂಟಾಗುತ್ತಿವೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಜೊತೆಗೆ ಭೂಮಿಯ ಫಲವತ್ತತೆಯನ್ನು ಕಾಪಾಡುವ ನೈಸರ್ಗಿಕ ಕೃಷಿ ಪದ್ಧತಿಯನ್ನು ರೈತರು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಸಕ ದಿನಕರ ಶೆಟ್ಟಿ ಮಾತನಾಡಿ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆ ಕೃಷಿ ಭೂಮಿಯ ಆರೋಗ್ಯವನ್ನು ಹಾಳು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಾತ್ಯಕ್ಷಿಕೆ ಮತ್ತು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಪ್ರಗತಿಪರ ರೈತ ಎನ್.ಡಿ. ಹೆಗಡೆ ಅವರು ತಮ್ಮ ತೋಟದಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡು ಇತರ ರೈತರಿಗೆ ಮಾದರಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಗತಿಪರ ರೈತ ಎನ್.ಡಿ. ಹೆಗಡೆ, ನಾಗರಾಜ ನಾಯ್ಕ ಕಾಗಲ್, ಎಲ್. ಆರ್. ಹೆಗಡೆ, ಬಾಬು ಗೌಡ, ಸಂತೋಷ ಹೆಗಡೆ, ವಿಷ್ಣು ಗೌಡ, ಲಕ್ಷ್ಮೀನಾರಾಯಣ ಹೆಗಡೆ ಸೇರಿದಂತೆ ಹತ್ತು ಮಂದಿ ರೈತರನ್ನು ಸನ್ಮಾನಿಸಲಾಯಿತು.ಬಿಜೆಪಿ ಜಿಲ್ಲಾಧ್ಯಕ್ಷ ಎನ್. ಎಸ್. ಹೆಗಡೆ, ಕುಮಟಾ ಮಂಡಲ ಅಧ್ಯಕ್ಷ ಜಿ.ಐ. ಹೆಗಡೆ, ಮುಖಂಡರಾದ ಗಜಾನನ ಪೈ, ಡಾ. ಜಿ.ಜಿ. ಹೆಗಡೆ, ಸದಾನಂದ ಭಟ್ಕರೆ, ರಾಧಾಕೃಷ್ಣ ಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು. ದಿನೇಶ ಗೌಡ ಕಾರ್ಯಕ್ರಮ ನಿರೂಪಿಸಿದರು.



ಒತ್ತಡ ನಿವಾರಣೆಗೆ ಯೋಗ ಸಹಕಾರಿ

ಅಂಕೋಲಾ: ಪತಂಜಲಿ ಯೋಗ ಸಮಿತಿ ಅಂಕೋಲಾ, ಪತಂಜಲಿ ಮಹಿಳಾ ಸಮಿತಿ, ಭಾರತ ಸ್ವಾಭಿಮಾನ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಪಟ್ಟಣದಲ್ಲಿ ಯೋಗ ನಡಿಗೆಯ ಮೂಲಕ ಯೋಗ ಜನಜಾಗೃತಿ ಜಾಥಾ ನಡೆಸಲಾಯಿತು.

ಉಪ ತಹಶೀಲ್ದಾರ ಗಿರೀಶ ಜಾಂಬವಳಿಕರ್, ಸಹಾಯಕ ಪೊಲೀಸ್ ಉಪ ನಿರೀಕ್ಷಕ ಶಬ್ಬೀರ ಕೋತ್ವಾಲ್ ಜಾಥಾಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ ಗಿರೀಶ ಜಾಂಬಾವಳಿಕರ್ ಮಾತನಾಡಿ, ಭಾರತೀಯ ಯೋಗ ಪದ್ಧತಿಯ ಪ್ರಯೋಜನ ಇಂದು ಇಡೀ ವಿಶ್ವಕ್ಕೇ ಗೊತ್ತಾಗಿದ್ದು ಯೋಗಾಭ್ಯಾಸಕ್ಕೆ ಎಲ್ಲ ಕಡೆಯಲ್ಲಿ ಮನ್ನಣೆ ದೊರಕಿದೆ, ಇಂದಿನ ಒತ್ತಡದ ಜೀವನಶೈಲಿಗೆ ಯೋಗ, ಧ್ಯಾನ ಪ್ರತಿದಿನ ಅಗತ್ಯ ಎಂದರು.

ಪತಂಜಲಿ ಯೋಗ ಸಮಿತಿಯ ತಾಲೂಕು ಪ್ರಭಾರಿ ವಿನಾಯಕ ಗುಡಿಗಾರ, ಯುವ ಪ್ರಭಾರಿ ಸತೀಶ ನಾಯ್ಕ, ಭಾರತ ಸ್ವಾಭಿಮಾನ ಟ್ರಸ್ಟಿನ ಡಾ.ವಿಜಯದೀಪ, ಮಹಿಳಾ ಪ್ರಭಾರಿ ನಿರುಪಮಾ ಶ್ಯಾಮಸುಂದರ ಗೌಡ, ಜಿಲ್ಲಾ ಸಂವಾದಿ ಪ್ರಭಾರಿ ರಾಧಿಕಾ ಆಚಾರಿ, ಕಿಸಾನ್ ಸೇವಾ ಸಮಿತಿಯ ಪ್ರಭಾರಿ ಅಭಯ ಮರಬಳ್ಳಿ, ಜಿಲ್ಲಾ ಸಾಮಾಜಿಕ ಮಾಧ್ಯಮಪ್ರಭಾರಿ ಸ್ಮಿತಾ ರಾಯಚೂರು, ಯೋಗ ಶಿಕ್ಷಕರುಗಳಾದ ಶೋಭಾ ಶೆಟ್ಟಿ, ಪ್ರಶಾಂತ ಶೆಟ್ಟಿ, ಸುರೇಶ ನಾಯ್ಕ ಯೋಗಬಂಧುಗಳು, ನರ್ಸಿಂಗ್ ಕಾಲೇಜು, ಜೈಹಿಂದ್ ಹೈಸ್ಕೂಲ್, ಸರ್ಕಾರಿ ಪ್ರಾಥಮಿಕ ಶಾಲೆ ನಂ.1 ಶಾಲೆಯ ವಿದ್ಯಾರ್ಥಿಗಳು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು ಪಾಲ್ಗೊಂಡಿದ್ದರು. ಶಿಕ್ಷಕ ಜಿ.ಆರ್.ತಾಂಡೇಲ ಪ್ರಾಸ್ತಾವಿಕ ಮಾತನಾಡಿದರು.ಪಟ್ಟಣದ ವಿವಿಧ ರಸ್ತೆಗಳಲ್ಲಿ ಜಾಥಾ ನಡೆಸಿ ಯೋಗದ ಮಹತ್ವದ ಕುರಿತಂತೆ ಜನಜಾಗೃತಿ ಮೂಡಿಸಲಾಯಿತು.



ವಿದ್ಯಾರ್ಥಿಗಳಿಗೆ ಶಾಲಾ ಕಿಟ್ ವಿತರಣೆ

ಮುಂಡಗೋಡ: ತಾಲೂಕಿನ ಕುರ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ ಬೆಂಗಳೂರು ಹಾಗೂ ಯೂಥ್ ಫಾರ್ ಸೇವಾ ಶಿರಸಿ ಇವರ ಸಹಯೋಗದಲ್ಲಿ ಉಚಿತ ಶಾಲಾ ಕಿಟ್ ವಿತರಣೆ ಕಾರ್ಯಕ್ರಮ ಶನಿವಾರ ನಡೆಯಿತು.

ಕಾರ್ಯಕ್ರಮವು ಶಾಲಾ ಮಕ್ಕಳ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಅತಿಥಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ್ ಕೊರ್ಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಊರ ಹಿರಿಯರಾದ ಶಿವಪ್ಪ ನಾಯ್ಕ್ ಹಾಗೂ ಯೂಥ್ ಫಾರ್ ಸೇವಾ ಉತ್ತರ ಕನ್ನಡ ಜಿಲ್ಲಾ ಸಂಯೋಜಕರಾದ ವಿಜೇತ್ ನಾಯ್ಕ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಶಿಕ್ಷಣದ ಮಹತ್ವ ಹಾಗೂ ಸಮಾಜ ಸೇವೆಯ ಅಗತ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಗಣೇಶ್ ನಾಯ್ಕ್, ರಘು ನಾಯ್ಕ್, ರಮೇಶ್ ದಳ್ವಿನಕೇರಿ,ಲಕ್ಷ್ಮಣ ದಳ್ವಿನಕೇರಿ ಹಾಗೂ ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ ಸಂಸ್ಥೆಯ ಸ್ವಯಂಸೇವಕರು ಅತಿಥಿಗಳಾಗಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ಪಟ್ಟಿ, ಪೆನ್ನು ಸೇರಿದಂತೆ ವಿವಿಧ ಶೈಕ್ಷಣಿಕ ಪರಿಕರಗಳನ್ನು ವಿತರಿಸಲಾಯಿತು. ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ ಸಂಸ್ಥೆಯ ವತಿಯಿಂದ ಮಕ್ಕಳಿಗೆ ಲಡ್ಡು ವಿತರಿಸಿ ಸಂಭ್ರಮಿಸಲಾಯಿತು.

ಸಮಾಜಮುಖಿಕಾರ್ಯದಮೂಲಕವಿದ್ಯಾರ್ಥಿಗಳಶಿಕ್ಷಣಕ್ಕೆಪ್ರೋತ್ಸಾಹನೀಡಿದ ದಾನಿಗಳನ್ನು ಶಾಲಾ ವತಿಯಿಂದ ಸನ್ಮಾನಿಸಿ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಬಳಿಕ ವಿಶೇಷ ಭೋಜನ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಪಾಲಕರು ಸಂತೋಷದಿಂದ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕಿ ಮಮತಾ ರಾಘವೇಂದ್ರ ಸ್ವಾಗತಿಸಿದರು. ಸಂಧ್ಯಾ ಭಂಡಾರಿ ವಂದಿಸಿದರು. ವಾಣಿ ಭಟ್ ಕಾರ್ಯಕ್ರಮ ನಿರೂಪಿಸಿದರು.ಶಾಲಾ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗುವ ಈ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿದ್ದು, ವಿದ್ಯಾರ್ಥಿಗಳು, ಪಾಲಕರು ಹಾಗೂ ಗ್ರಾಮಸ್ಥರಿಂದ ಮೆಚ್ಚುಗೆ ವ್ಯಕ್ತವಾಯಿತು.



ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ



ಕಾರವಾರ: ಪ್ರತಿದಿನ ಯೋಗ ಅಭ್ಯಾಸ ಮಾಡುವುದರಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಹಾಗೂ ಮುಖ್ಯವಾಗಿ ಸರ್ಕಾರಿ ಕಚೇರಿಗಳಲ್ಲಿ ನಿರಂತರವಾಗಿ ಒತ್ತಡದಲ್ಲಿ ಕೆಲಸ ಮಾಡುವ ಅಧಿಕಾರಿ, ಸಿಬ್ಬಂದಿಗಳು ಯೋಗ ಅಭ್ಯಾಸ ಮಾಡುವುದರಿಂದ ಒತ್ತಡ ಕಡಿಮೆ ಆಗುವುದರ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಜಿಪಂ ಉಪಕಾರ್ಯದರ್ಶಿ ಎಮ್.ಎಸ್.ಅಲ್ಲಾಬಕಷ್ ಹೇಳಿದರು.

ಅವರು ಶನಿವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ, ಆಯುಷ್ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಪ್ರದರ್ಶನ ಕಾರ್ಯಕ್ರಮ ಮತ್ತು ಕರ ಪತ್ರ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಯೋಗ ಎನ್ನುವುದು ಇತಿಹಾಸ ಕಾಲದಿಂದಲೂ ನಡೆದುಕೊಂಡು ಬಂದಿದೆ. ಯೋಗ ಮಾಡುವುದರಿಂದ ಸದೃಢ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಮುಂದಿನ ದಿನಗಳಲ್ಲಿ ಸಿಬ್ಬಂದಿ ವರ್ಗದವರಿಗೆ ಕಣ್ಣಿನ ಆರೋಗ್ಯ ಹಾಗೂ ಒತ್ತಡವನ್ನು ಕಡಿಮೆ ಮಾಡುವ ಯೋಗ ಅಭ್ಯಾಸದ ತರಬೇತಿ ನೀಡುವಂತೆ ಆಯುಷ್ ಇಲಾಖೆ ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಜಿಪಂ ಮುಖ್ಯ ಲೆಕ್ಕಾಧಿಕಾರಿ ಆನಂದಸಾ ಆಬೀಬ್, ಯೋಜನಾ ನಿರ್ದೇಶಕ ಕರೀಂ ಅಸಾದಿ, ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿ ಡಾ.ಪ್ರವೀಣ್ ಹಾಗೂ ಆಯುಷ್ ವೈದ್ಯಾಧಿಕಾರಿ ಡಾ.ಮಲ್ಲಿಕಾರ್ಜುನ್ ಹಿರೇಮಠ, ಮತ್ತಿತರರು ಉಪಸ್ಥಿತರಿದ್ದರು.

ಸಂತ್ರಸ್ತ ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ

ಭಟ್ಕಳ: ಇತ್ತೀಚಿನ ತಟ್ಟಿ ಹಕ್ಲು ಹೊಳೆಯಲ್ಲಿ ಚಿಪ್ಪೆಕಲ್ಲು ಸಂಗ್ರಹಿಸಲು ತೆರಳಿದ್ದ ವೇಳೆ ಸಂಭವಿಸಿದ ದುರಂತದಲ್ಲಿ 11 ಮಂದಿ ಮೃತಪಟ್ಟವರ ಕುಟುಂಬಗಳಿಗೆ ನೆರವಾಗುವ ಉದ್ದೇಶದಿಂದ ವಿಜಯ ಚಾರಿಟೇಬಲ್ ಟ್ರಸ್ಟ್ ವತಿಯಿಂದ ದಿನಸಿ ಸಾಮಗ್ರಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ತೀರ್ಥಹಳ್ಳಿಯ ನಿಟ್ಟೂರಿನ ಶ್ರೀ ನಾರಾಯಣಗುರು ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ರೇಣುಕಾನಂದ ಸ್ವಾಮೀಜಿಗಳು ಸಂತ್ರಸ್ತ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು. ಸಂಕಷ್ಟದ ಸಂದರ್ಭದಲ್ಲಿ ಸಮಾಜವು ನೋವಿನಲ್ಲಿರುವ ಕುಟುಂಬಗಳ ಬೆನ್ನಿಗೆ ನಿಲ್ಲಬೇಕು, ದುರ್ಘಟನೆಯಿಂದ ಜೀವನ ಸಂಕಷ್ಟಕ್ಕೆ ಸಿಲುಕಿರುವ ಕುಟುಂಬಗಳಿಗೆ ಅಗತ್ಯ ನೆರವು ನಿರಂತರವಾಗಿ ದೊರೆಯುವಂತೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಅವರು ಹೇಳಿದರು. ವಿಜಯ ಚಾರಿಟೇಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ದೀಪಾ ನಾಯ್ಕ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂತ್ರಸ್ತ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿ ಮಾನವೀಯ ಸ್ಪಂದನೆ ವ್ಯಕ್ತಪಡಿಸಲಾಯಿತು. ಈ ಸಂದರ್ಭದಲ್ಲಿ ಸತ್ಯಜಿತ್ ಸೂರತ್ಕಲ್, ಶ್ರೀಧರ್ ನಾಯ್ಕ, ಪದ್ಮ ನಾಯ್ಕ, ರಾಘವೇಂದ್ರ, ರಾಜು ನಾಯ್ಕ, ಸಂತೋಷ್ ನಾಯ್ಕ, ಮಂಜು ನಾಯ್ಕ, ಮೋಹನ ಸೇರಿದಂತೆ ಸಾರದಹೊಳೆ ನಾಮಧಾರಿ ಸಮಾಜದ ಅಧ್ಯಕ್ಷರು, ಪ್ರಮುಖರು ಹಾಗೂ ಸಮಾಜದ ಬಾಂಧವರಿದ್ದರು.



ನಾವೀನ್ಯ ವಿನ್ಯಾಸ ಚಿಂತನೆ ಕಾರ್ಯಾಗಾರ ತರಬೇತಿ

ಹಳಿಯಾಳ: ಕೆಎಲ್ಎಸ್ ವಿಡಿಐಟಿ ಹಳಿಯಾಳದ ಆಂತರಿಕ ಗುಣಮಟ್ಟ ಭರವಸೆ ಕೋಶ ಮತ್ತು ಐಐಎಸ್ಸಿ ಬೆಂಗಳೂರಿನ ವಿನ್ಯಾಸ ಶ್ರೇಷ್ಠತಾ ಕೇಂದ್ರ ಸಹಯೋಗದೊಂದಿಗೆ 2026ರ ಜೂನ್ 15 ರಿಂದ 19ರವರೆಗೆ ಐದು ದಿನಗಳ ಪ್ರಾಧ್ಯಾಪಕರಿಗಾಗಿ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು .



ಕರ್ನಾಟಕದಲ್ಲಿ ಪ್ರಥಮವಾಗಿ ಬೆಂಗಳೂರಿನಿಂದ ಹೊರಗೆ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಕೆಎಲ್ ಎಸ್ ವಿಡಿಐಟಿಯ ವಿವಿಧ ವಿಭಾಗಗಳ 40 ಪ್ರಾಧ್ಯಾಪಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಸ್ಯೆ ಗುರುತಿಸುವಿಕೆ, ಕಲ್ಪನೆ, ಮೂಲಮಾದರಿ, ಪರೀಕ್ಷೆ ಮತ್ತು ನವೀನ ಪರಿಹಾರ ಅಭಿವೃದ್ಧಿ ಸೇರಿದಂತೆ ವಿನ್ಯಾಸ ಚಿಂತನೆ ಪ್ರಕ್ರಿಯೆ ಕುರಿತು ತರಬೇತಿ ನೀಡಲಾಯಿತು.

ಐಐಎಸ್ಸಿ ಬೆಂಗಳೂರಿನ ವಿನ್ಯಾಸ ಶ್ರೇಷ್ಠತಾ ಕೇಂದ್ರದ ಹನ್ನಿ ಬಿದ್ವಾನ್ ಮತ್ತು ಬೆನೆಟ್ ಬೆನ್ನಿ ಥಾಮಸ್ ಅವರು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತರಬೇತಿ ನಡೆಸಿಕೊಟ್ಟರು.ಸಮಾರೋಪ ಸಮಾರಂಭದಲ್ಲಿ ಐಐಎಸ್ಸಿ ಬೆಂಗಳೂರಿನ ವಿನ್ಯಾಸ ಶ್ರೇಷ್ಠತಾ ಕೇಂದ್ರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕರ್ನಲ್ ಕೆ. ಜೋಶಿಲ್ ರಾಜ್ (ನಿವೃತ್ತ), ಅವರು ಮುಖ್ಯ ಅತಿಥಿಗಳಾಗಿ ಮತ್ತು ಡಾ. ಎಂ.ಬಿ.ಗುರುರಾಜ್, ಪ್ರಧಾನ ಸಲಹೆಗಾರ, ವಿನ್ಯಾಸ ಶ್ರೇಷ್ಠತಾ ಕೇಂದ್ರ, ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮ ಸಂಯೋಜಕಿ ಪ್ರೊ. ಲಕ್ಷ್ಮಿ ಜಿ. ಹಟ್ಟಿಹೊಳಿ, ಸಭಿಕರನ್ನು ಸ್ವಾಗತಿಸಿದರು. ಪ್ರಾಧ್ಯಾಪಕರು ತಮ್ಮ ಕಲಿಕೆಯ ಅನುಭವಗಳನ್ನು ಹಂಚಿಕೊಂಡರು ಮತ್ತು ಅಳವಡಿಸಿಕೊಂಡ ಪ್ರಾಯೋಗಿಕ ವಿಧಾನವನ್ನು ಶ್ಲಾಘಿಸಿದರು.ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಾ.ಎಂ.ಬಿ. ಗುರುರಾಜ್ ಅವರು ನಾವೀನ್ಯತೆ ಆಧಾರಿತ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು ಮತ್ತು ಭವಿಷ್ಯದ ಉದ್ಯಮ ಮತ್ತು ಸಮಾಜದ ಅಗತ್ಯಗಳನ್ನು ಪೂರೈಸಲು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಮತ್ತು ಸಮಸ್ಯೆ ಪರಿಹಾರ ಕೌಶಲ್ಯ ಬೆಳೆಸಲು ಪ್ರೋತ್ಸಾಹಿಸಿದರು. ಕರ್ನಲ್ ಕೆ. ಜೋಶಿಲ್ ರಾಜ್ ಅವರು ತಮ್ಮ ಭಾಷಣದಲ್ಲಿ ವಿನ್ಯಾಸ ಚಿಂತನೆಯು ಬಳಕೆದಾರ–ಕೇಂದ್ರಿತ ನಾವೀನ್ಯತೆಯ ಮೂಲಕ ನೈಜ–ಜಗತ್ತಿನ ಸವಾಲುಗಳನ್ನು ಪರಿಹರಿಸುವ ಶಕ್ತಿಶಾಲಿ ವಿಧಾನವಾಗಿದೆ ಎಂದು ಹೇಳಿದರು. ಬೋಧನೆ, ಸಂಶೋಧನೆ ಮತ್ತು ಸಾಂಸ್ಥಿಕ ಅಭಿವೃದ್ಧಿ ಉಪಕ್ರಮಗಳಲ್ಲಿ ವಿನ್ಯಾಸ ಚಿಂತನೆ ವಿಧಾನಗಳನ್ನು ಅಳವಡಿಸಿಕೊಳ್ಳಲು ಹೇಳಿದರು. ಪ್ರಮಾಣಪತ್ರ ವಿತರಿಸಲಾಯಿತು. ಅಧ್ಯಕ್ಷೀಯ ಭಾಷಣದಲ್ಲಿ, ಡಾ.ವಿ.ಎ. ಕುಲಕರ್ಣಿ, ಪ್ರಾಂಶುಪಾಲರು, ಪ್ರಾಧ್ಯಾಪಕರನ್ನು ಅಭಿನಂದಿಸಿದರು. ತರಬೇತಿಯಲ್ಲಿ ಪಡೆದ ಕೌಶಲ್ಯದಿಂದ ವಿದ್ಯಾರ್ಥಿಗಳಿಗೆ ಉಪಯೋಗವಾಗಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.ಪ್ರೊ. ರೋಹಿಣಿ ಕಲ್ಲೂರು ವಂದಿಸಿದರು.



ಸಿದ್ದಾಪುರ: ತಾಲೂಕಿನ ಸೋವಿನಕೊಪ್ಪ ಗ್ರಾಪಂ ವ್ಯಾಪ್ತಿಯ ಹಳ್ಳಿಬೈಲ ಸರ್ಕಾರಿ ಪ್ರೌಢಶಾಲೆಯಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿ ಬೇರೆ ಸ್ಥಳಗಳಿಗೆ ವರ್ಗಾವಣೆಗೊಂಡ ಮುಖ್ಯಾಧ್ಯಾಪಕರು, ಸಹಶಿಕ್ಷಕರು ಹಾಗೂ ಲಿಪಿಕ ನೌಕರರ ಬೀಳ್ಕೊಡುಗೆ ಸಮಾರಂಭದಲ್ಲಿ ಪ್ರೌಢಶಾಲೆಯ ಸಂಸ್ಥಾಪಕ ಅಧ್ಯಕ್ಷ ಸೀತಾರಾಮ ಭಟ್ಟ ಕೆರೆಹೊಂಡ ಮಾತನಾಡಿದರು.

ಕಿರುಸುದ್ದಿ

ಚಿನ್ನಾಭರಣ ಕಳುವು

◆ **ಹಾವೇರಿ:** ಮನೆಯ ಹಿಂದಿನ ಬಾಗಿಲು ದೂಡಿ ಒಳನುಗ್ಗಿರುವ ಕಳ್ಳರು ಕಬ್ಬಿಣದ ತಿಜೋರಿಯಲ್ಲಿಟ್ಟಿದ್ದ ಸುಮಾರು 6.90ಲಕ್ಷ ರೂ.ಮೌಲ್ಯದ ನಗದು, ಚಿನ್ನಾಭರಣವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಸವಣೂರು ತಾಲೂಕು ನಂದಿಹಳ್ಳಿ ಗ್ರಾಮದಲ್ಲಿ ನಡೆದಿದೆ. ನಂದಿಹಳ್ಳಿ ಗ್ರಾಮದ ಮಾದೇವಕ್ಕ ಕೋಂ.ಫಕ್ಕೀರಪ್ಪ ಸಾತಣ್ಣನವರ ಎಂಬುವವರಿಗೆ ಸೇರಿದ ಮನೆಯಲ್ಲಿ ಕಳ್ಳತನ ನಡೆದಿದೆ. ಕಳ್ಳರು ಜೂ.19ರಂದು ಹಗಲು ಹೊತ್ತಿನಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ಮನೆಯ ಹಿಂದಿನ ಬಾಗಿಲನ್ನು ದೂಕಿ ತೆಗೆದು, ಒಳ ನುಗ್ಗಿದ್ದಾರೆ. ಡಬ್ಬಿಯಲ್ಲಿಟ್ಟಿದ್ದ ತಿಜೋರಿಯ ಕೀಲಿ ತೆಗೆದುಕೊಂಡು ತಿಜೋರಿ ಲಾಕರ್ ತೆಗೆದು, ಅದರಲ್ಲಿದ್ದ 2.50ಲಕ್ಷ ಮೌಲ್ಯದ ಬಂಗಾರದ ಪದಕದ ಸರ, 25 ಸಾವಿರ ಬೆಲೆಬಾಳುವ ಬಂಗಾರದ ನೆತ್ತಿ ಹೂವು, 50 ಸಾವಿರ ಕಿಮ್ಮತ್ತಿನ ಬೆಂಡೋಲೆ, 40 ಸಾವಿರ ಮೌಲ್ಯದ ಉಂಗುರ, 25 ಸಾವಿರ ಮೌಲ್ಯದ ಬೆಳ್ಳಿ ಆಭರಣ, 3ಲಕ್ಷ ನಗದು ಹಣ ಸೇರಿದಂತೆ ಒಟ್ಟು 6.90ಲಕ್ಷ ರೂ. ಮೌಲ್ಯದ ಸ್ವತ್ತುಗಳನ್ನು ಕಳವು ಮಾಡಿಕೊಂಡು ಹೋಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣ ಕೊಡದಿದ್ದಕ್ಕೆ ಆತ್ಮಹತ್ಯೆ

◆ **ಹಾವೇರಿ:** ಮಗ ತಾಯಿಯನ್ನು ಹಣ ಕೇಳಿದ ತಕ್ಷಣ, ತಾಯಿ ದುಡ್ಡು ಕೊಡದೆ ಇರುವುದಕ್ಕೆ ಬೇಜಾರು ಮಾಡಿಕೊಂಡ ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ರಾಣೇಬೆನ್ನೂರ ತಾಲೂಕು ಹೊಸ ಹೂಲಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಹೊಸ ಹೂಲಿಹಳ್ಳಿ ಗ್ರಾಮದ ಭದ್ರಪ್ಪ ಈಶ್ವರಪ್ಪ ಅಂಗಡಿ (30) ಮೃತ ಯುವಕ. ಈತ ವೃತ್ತಿಯಲ್ಲಿ ಡ್ರೈವರ್ ಕೆಲಸ ಮಾಡಿಕೊಂಡಿದ್ದು, ಸರಿಯಾಗಿ ಕೆಲಸ ಮಾಡದೆ ತಾಯಿಯ ಬಳಿ ಆಗಾಗ ಹಣವನ್ನು ಕೇಳುತ್ತಿದ್ದ. ಪದೆ ಪದೇ ನಾನು ಹಣವನ್ನು ಎಲ್ಲಿಂದ ತರಲಿ ಎಂದು ಹೇಳಿದ್ದರಿಂದ ಮನಸ್ಸಿಗೆ ಬೇಜಾರ ಮಾಡಿಕೊಂಡು ಯುವಕ ಮನೆಯೊಳಗಿನ ಬೆಡ್‌ರೂಮಿನಲ್ಲಿ ತನ್ನಷ್ಟಕ್ಕೆ ತಾನೇ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತನ ತಾಯಿ ಮಿಠಾಯಿ ಅಂಗಡಿ ವ್ಯಾಪಾರಿ ಗೀತಮ್ಮ ಅಂಗಡಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಮಾಂಸ ಮಾರಾಟ: ದೂರು ದಾಖಲು

◆ **ಹಾವೇರಿ :** ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ಅಕ್ರಮ ಮಾಂಸ ಮಾರಾಟ ಮಾಡುತ್ತಿದ್ದ ಆರೋಪದಡಿ ಮೂರು ಜನರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬ್ಯಾಡಗಿ ಪಟ್ಟಣದ ಇಸ್ಲಾಂಪುರ ಓಣಿಯ ನಿವಾಸಿಗಳಾದ ತಬ್ರೇಜ್ ಮಹ್ಮದ್‌ಹನೀಫ ಬೆಳಗಾವ (45), ಗನಿಭಾಷಾ ಗಫಾರಸಾಬ ಬೇಪಾರಿ (62) ಹಾಗೂ ಜಬಿ ತಬ್ರೇಜ್ ಬೆಳಗಾವ (21) ಎಂಬುವವರ ವಿರುದ್ಧ ದೂರು ದಾಖಲಿಸಿದೆ. ಆರೋಪಿತರು ಕನವಳ್ಳಿ ಗ್ರಾಮದ ಖಾಸಗಿಯವರ ಜಾಗದಲ್ಲಿ ಹಾಕಲಾಗಿದ್ದ ತಗಡಿನ ಶೆಡ್‌ನಲ್ಲಿ ಅಕ್ರಮವಾಗಿ ದನದ ಮಾಂಸವನ್ನು ಮಾರಾಟ ಮಾಡುತ್ತಿರುವ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಸಿಕ್ಕಿರುವ ಹಿನ್ನೆಲೆ ದಾಳಿ ನಡೆಸಿದ್ದರು. ಪೊಲೀಸರ ದಾಳಿ ಕಾಲಕ್ಕೆ ಆರೋಪಿತರು ಮಾಲು ಸಮೇತ ಸಿಕ್ಕಿ ಬಿದ್ದಿದ್ದಾರೆ ಎಂದು ಪೊಲೀಸರು ದೂರಿನಲ್ಲಿ ತಿಳಿಸಿದ್ದು, ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಕಾಣೆ

◆ **ಹಾವೇರಿ:** ಹಾವೇರಿಗೆ ಬಟ್ಟೆ ಅಂಗಡಿಗೆ ಹೋಗಿ ಬರುವುದಾಗಿ ಹೇಳಿ ಹೋಗಿದ್ದ ಯುವಕ ವಾಪಾಸ್ ಮನೆಗೆ ಬಾರದೆ ಕಾಣೆಯಾಗಿರುವ ಘಟನೆ ತಾಲೂಕಿನ ಕುಳೇನೂರು ಗ್ರಾಮದಲ್ಲಿ ನಡೆದಿದೆ. ಕುಳೇನೂರ ಗ್ರಾಮದ ಮೃತ್ಯುಂಜಯ ಮಾಲತೇಶ ಯಳ್ಳೂರ (26) ಕಾಣೆಯಾದ ಯುವಕ. ಈತ ತನ್ನ ಮನಸ್ಸಿನಲ್ಲಿ ಯಾವುದೋ ಕಾರಣವನ್ನು ಇಟ್ಟುಕೊಂಡು ಮನೆಯಿಂದ ಹಾವೇರಿಗೆ ಬಟ್ಟೆ ಅಂಗಡಿಗೆ ಹೋಗುವುದಾಗಿ ತಿಳಿಸಿದ್ದು, ವಾಪಾಸ್ ಬಾರದೆ ಕಾಣೆಯಾಗಿದ್ದಾನೆ ಎಂದು ಸಂಬಂಧಿಕರಾದ ಗಣೇಶ ಹರಿಜನ ಎಂಬುವವರು ದೂರು ದಾಖಲಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕಿ ಕಾಣೆ: ದೂರು ದಾಖಲು

◆ **ಹಾವೇರಿ:** ಕಾಲೇಜಿಗೆ ಹೋಗಿ ಬರುವುದಾಗಿ ಮನೆಯಲ್ಲಿ ಹೇಳಿ ಹೋಗಿದ್ದ ಬಾಲಕಿಯೊಬ್ಬರು ವಾಪಾಸ್ ಮನೆಗೆ ಬಾರದೆ ಕಾಣೆಯಾಗಿರುವ ಘಟನೆ ರಟ್ಟಿಹಳ್ಳಿ ತಾಲೂಕು ಚಿಕ್ಕಯಡಚಿ ಗ್ರಾಮದಲ್ಲಿ ನಡೆದಿದೆ. ಚಿಕ್ಕಯಡಚಿ ಗ್ರಾಮದ ಅಪ್ರಾಪ್ತ ಬಾಲಕಿ ಕಾಲೇಜಿಗೆ ಹೋಗದೆ, ಮನೆಗೂ ಹೋಗದೆ ಕಾಣೆಯಾಗಿರಬಹುದು ಅಥವಾ ಯಾರೋ ಆಸೆ ಆಮಿಷವೊಡ್ಡಿ ಅಪಹರಿಸಿಕೊಂಡು ಹೋಗಿರಬಹುದು ಎಂದು ಶಂಕೆ ವ್ಯಕ್ತಪಡಿಸಿ ಬಾಲಕಿಯ ತಾಯಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಅಪಹರಣ, ಕಾಣೆಯಾದ ಬಾಲಕಿ 5.2 ಅಡಿ ಎತ್ತರ, ಕೋಲುಮುಖ, ಗೋಧಿಗೆಂಪು ಮೈ ಬಣ್ಣ, ದಪ್ಪನೆಯ ಮೂಗು, ತಲೆಯಲ್ಲಿ ಕಪ್ಪು ಕೂದಲು, ಸಾಧಾರಣ ಮೈ ಕಟ್ಟು ಹೊಂದಿದ್ದಾರೆ. ಪಿಂಕ್ ಕಲರ್ ಟಾಪ್, ಹಸಿರು ಕಲರ್‌ನ ಪ್ಯಾಂಟ್ ಧರಿಸಿದ್ದು, ಎಡಗೈ ಮುಂಗೈಯಲ್ಲಿ ಹೆಚ್ ಅಂತಾ ಹಚ್ಚೆ ಹಾಕಿಸಿಕೊಂಡಿರುವುದಾಗಿ ದೂರಿನಲ್ಲಿ ತಿಳಿಸಿದೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಶನಿವಾರ ಬಿಜೆಪಿ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿಯವರ 12 ವರ್ಷದ ಜನಪರ ಯೋಜನೆಗಳ ಪ್ರದರ್ಶಿನಿಯನ್ನು ಸಂಸದ ಬಸವರಾಜ ಬೊಮ್ಮಾಯಿ ವೀಕ್ಷಿಸಿದರು.

ಮಳೆಯ ಆಗಮನಕ್ಕೆ ಗ್ರಾಮಸ್ಥರಿಂದ ಗುರ್ಜಿ ಆಡುವ ಕಾರ್ಯಕ್ರಮಕ್ಕೆ ಚಾಲನೆ

◆ **ಶಿಗ್ಗಾವಿ :** ತಾಲೂಕಿನ ಸುರಪುರಗಟ್ಟಿ ಗ್ರಾಮದಲ್ಲಿ ಮಳೆರಾಯನ ಕೃಪೆಗಾಗಿ ಭೂದೇವಿ ಸೇವಾ ಸಮಿತಿ ವತಿಯಿಂದ ನಿರಂತರ 5 ದಿನಗಳ ಕಾಲ ಗ್ರಾಮದ ಜೋಗಮ್ಮಗಳು ಹಾಗೂ ಗೊರವಪ್ಪಜ್ಜನವರುಗಳಿಂದ ಗುರ್ಜಿ ಆಡುವ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು.

ನಂತರ 5 ದಿನಗಳ ಕಾಲ ಗ್ರಾಮದ ವಿವಿಧ ದೇವರುಗಳಿಗೆ 101 ಕೊಡಗಳ ನೀರಿನ ಅಭಿಷೇಕವನ್ನು ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಗ್ರಾಮದ ಮುಖಂಡ ವಲಮಪ್ಪ ಸೊರಟೂರ ಮಾತನಾಡಿ, ಈಗಾಗಲೇ ಮುಂಗಾರು ಪ್ರಾರಂಭವಾಗಿದೆ ರೈತರು ಬಿತ್ತನೆಯನ್ನು ಆರಂಭಿಸಿದ್ದಾರೆ ವರುಣ ದೇವ ಮುನಿಸಿಕೊಂಡಿದ್ದಾನೆ ಈಗ ಮಳೆರಾಯ ಬಾರದ ಹಿನ್ನೆಲೆಯಲ್ಲಿ ರೈತರು ಆತಂಕಕ್ಕೆ ಇಡಾಗಿದ್ದು ದೇವರ ಮೊರೆಯನ್ನ ಹೋಗು ಪರಿಸ್ಥಿತಿ ಬಂದಿದೆ ಎಂದರು.

ಈ ಸಂದರ್ಭದಲ್ಲಿ ಬೂದೇವಿ ಸೇವಾ ಸಮಿತಿಯ ಅಧ್ಯಕ್ಷ ಸುಭಾಷ ಸಂಕರಿಗಾರ್, ಸದಸ್ಯರಾದ ಸಿದ್ದಪ್ಪಾ ತೀರ್ಥ, ಹನುಮಂತಪ್ಪ ಸ್ವರಟೂರ, ಮಲ್ಲಪ್ಪ ನೀಲ್ಲುಗಿ, ಕರಿಬಸಪ್ಪ ಹಿರಗಮ್ಮನವರ, ಸಿದ್ದಪ್ಪ ಚಿಕ್ಕಬೆಂಡಿಗೇರಿ, ವಿರುಪಾಕ್ಷಪ್ಪ ತೀರ್ಥ ಸೇರಿದಂತೆ ಗ್ರಾಮದ ಮುಖಂಡರು ಭಕ್ತರು ಉಪಸ್ಥಿತರಿದ್ದರು.



ಶಿಗ್ಗಾವಿ: ತಾಲೂಕಿನ ಸುರಪುರಗಟ್ಟಿ ಗ್ರಾಮದಲ್ಲಿ ಮಳೆರಾಯನ ಕೃಪೆಗಾಗಿ 5 ದಿನಗಳ ಕಾಲ ಗ್ರಾಮದ ಜೋಗಮ್ಮಗಳು ಹಾಗೂ ಗೊರವಪಜ್ಜನವರುಗಳು ಗುರ್ಜಿ ಆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಡಿಸಿ ಡಾ. ವಿಜಯಮಹಾಂತೇಶ್‌ದಾನಮ್ಮನವರ ಸೂಚನೆ

ಪಾರದರ್ಶಕ ಪರೀಕ್ಷೆ ನಡೆಸಿ

◆ **ಹಾವೇರಿ:** ಜಿಲ್ಲೆಯಲ್ಲಿ ಭಾನುವಾರ ನಡೆಯಲಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ)ಯನ್ನು ಸುಸೂತ್ರವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ ಸೂಚಿಸಿದರು.

ಗಾಂಧಿಪುರ ಸರ್ಕಾರಿ ಪದವಿ ಕಾಲೇಜು ಗಾಂಧಿಪುರ ಹಾಗೂ ನಗರದ ಜಿ.ಎಚ್. ಕಾಲೇಜು ಪರೀಕ್ಷಾ ಕೇಂದ್ರಗಳಿಗೆ ಶನಿವಾರ ಭೇಟಿ ನೀಡಿ, ಅಗತ್ಯ ಪೂರ್ವ ಸಿದ್ದತೆಗಳನ್ನು ಪರಿಶೀಲಿಸಿದ ಅವರು ಪರೀಕ್ಷಾ ಕೊಠಡಿಗಳು, ಅಭ್ಯರ್ಥಿಗಳ ಆಸನ ವ್ಯವಸ್ಥೆ, ಸಿಸಿಟಿವಿ ಕ್ಯಾಮೆರಾಗಳ ಕಾರ್ಯನಿರ್ವಹಣೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ಲೋಪದೋಷಗಳಿಗೆ ಅವಕಾಶ ನೀಡಬಾರದು. ಪರೀಕ್ಷೆಯು ರಾಷ್ಟ್ರೀಯ ಮಟ್ಟದ ಮಹತ್ವದ ಪರೀಕ್ಷೆಯಾಗಿದ್ದು ಎಲ್ಲಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸುವುದರ ಜೊತೆಗೆ ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಬೇಕು ಎಂದು ತಿಳಿಸಿದರು.

ಅಭ್ಯರ್ಥಿಗಳ ಪರಿಶೀಲನೆ, ಪ್ರವೇಶ ದ್ವಾರಗಳ ನಿರ್ವಹಣೆ ಹಾಗೂ ಭದ್ರತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿಗಳು,



ಅಧಿಕಾರಿಗಳಿಗೆ ನಿರ್ದೇಶನ

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಶಾಂತಿ ಹಾಗೂ ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಿ, ಪರೀಕ್ಷಾ ಕೇಂದ್ರಗಳ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಪರೀಕ್ಷೆಯು ಯಾವುದೇ ಅಡಚಣೆ ಇಲ್ಲದೆ ಯಶಸ್ವಿಯಾಗಿ ನಡೆಯಲು ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆ ಹಾಗೂ

▸▸ ನೀಟ್ ಪರೀಕ್ಷೆ ಯಶಸ್ವಿಯಾಗಿ ನಡೆಸಲು ಸಮರ್ಪಕ ಸಿದ್ಧತೆ

ಪೊಲೀಸ್ ಇಲಾಖೆಯ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಲ್ಲಿ ಕೈಗೊಂಡಿರುವ ಸಿದ್ಧತೆಗಳ ಕುರಿತು ಜಿಲ್ಲಾಧಿಕಾರಿಗಳಿಗೆ ವಿವರ ನೀಡಿದರು. ಜಿಲ್ಲೆಯಲ್ಲಿನ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದ್ದು, ನೀಟ್ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ಸಮರ್ಪಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧ ವಂಟಗೋಡಿ ಹಾಗೂ ಇತರ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಉತ್ತಮ ಸೇವೆ ನೀಡಲು ಕಾಳಜಿ ವಹಿಸಿ

◆ **ಹಾನಗಲ್ಲ:** ಸಮಸ್ಯೆ, ಸವಾಲುಗಳು ಹೆಚ್ಚಿವೆ. ಜನರ ನಿರೀಕ್ಷೆಗಳು ಏರುತ್ತಿವೆ. ಇಂಥ ಸಂದರ್ಭದಲ್ಲಿಸಮುದಾಯದಸಹಭಾಗಿತ್ವದಲ್ಲಿ ಉತ್ತಮ ಆಡಳಿತ ನೀಡುವಲ್ಲಿ ಅಧಿಕಾರಿಗಳು ಗಮನ ನೀಡಬೇಕಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಶನಿವಾರ ಇಲ್ಲಿನ ಪುರಸಭೆಯ ಸಭಾಭವನದಲ್ಲಿ ನಡೆದ ಪೌರಾಡಳಿತ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಅಧಿಕಾರ ಎನ್ನುವುದು ಹುದ್ದೆಯಲ್ಲ, ಸೇವೆಗೆ ಲಭಿಸಿರುವ ಅವಕಾಶ. ಜನರ ವಿಶ್ವಾಸವೇ ಆಡಳಿತದ ನಿಜವಾದ ಬಲ. ನಾಗರಿಕರ ಸಹಭಾಗಿತ್ವದಿಂದ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯವಾಗಲಿದೆ. ಕುಡಿಯುವ ನೀರು ಪೂರೈಕೆ, ಬೀದಿದೀಪ ಅಳವಡಿಕೆ, ನಗರದ ನೈರ್ಮಲ್ಯಕ್ಕೆ ಅಚ್ಚುಕಟ್ಟು ಆರ್ಥಿಕ ನಿರ್ವಹಣೆಯ ಅಗತ್ಯವಿದೆ. ನಿಯಮಿತವಾಗಿ ತೆರಿಗೆ ಭರಿಸುವಂತೆ ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.

ಮುಖ್ಯಾಧಿಕಾರಿ ವೈ.ಕೆ.ಜಗದೀಶ ಮಾತನಾಡಿ, ನಾಗರಿಕ ಸ್ನೇಹಿ ಆಡಳಿತದ ದೃಷ್ಟಿಯಿಂದ ಉತ್ತಮ ಸೇವೆ ನೀಡಲು ಕಾಳಜಿ ವಹಿಸಲಾಗಿದೆ. ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವುಮೂಡಿಸುವಕಾರ್ಯಮಾಡಲಾಗುತ್ತಿದೆ. ಎಲ್ಲವೂ ಪುರಸಭೆಯಿಂದ ಮಾತ್ರ ಸಾಧ್ಯವಿಲ್ಲ. ಹಾಗಾಗಿ ಜನರ ಸಹಭಾಗಿತ್ವದ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ಹೇಳಿದ ಅವರು

> ಹಾನಗಲ್ಲ ನಗರದ ಆನಿಕೆರೆಗೆ ಮಳಗಿ ಧರ್ಮಾ ಜಲಾಶಯದಿಂದ ಪೈಪ್ ಲೈನ್ ಮೂಲಕ ನೀರು ತರುವ ಮಹತ್ವಾಕಾಂಕ್ಷೆಯ ಕಾಮಗಾರಿ ಶೇ. 60ರಷ್ಟು ಪೂರ್ಣಗೊಂಡಿದೆ. ವಿವಿಧ ಬಡಾವಣೆಗಳಲ್ಲಿ ರಸ್ತೆ ನಿರ್ಮಾಣ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲು ಗಮನ ನೀಡಲಾಗಿದೆ.
> ■ ಶ್ರೀನಿವಾಸ ಮಾನೆ, ಶಾಸಕ

ಕಸ ವಿಲೇವಾರಿಗೆ ಮತ್ತೆ 2 ಹೊಸ ಟ್ರ್ಯಾಕ್ಟರ್ ಖರೀದಿಸಲಾಗುತ್ತಿದೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವೀರಪ್ಪ ಬೈಲವಾಳ, ಪುರಸಭೆ ಮಾಜಿ ಅಧ್ಯಕ್ಷರಾದ ಯಲ್ಲಪ್ಪ ಕಿತ್ತೂರ, ರಾಧಿಕಾ ದೇಶಪಾಂಡೆ, ನಾಗಪ್ಪ ಸವದತ್ತಿ, ಪರಶುರಾಮ ಖಂಡೂನವರ, ವೀಣಾ ಗುಡಿ, ಖುರ್ಷಿದ್ ಅಹ್ಮದ್ ಹುಲ್ಲತ್ತಿ, ನಗರ ಕಾಂಗ್ರೆಸ್ ಅಧ್ಯಕ್ಷ ಶಕೀಲ್ ಬಾಳೂರ, ಬಿಇಒ ಆರ್.ವಿ.ಚಿನ್ನಿಕಟ್ಟಿ, ಮೆಹಬೂಬ ಕಲಾಲ, ಬಾಬಾಜಾನ ಕೊಂಡವಾಡೆ, ಗನಿ ಪಾಳಾ, ಶಂಶಿಯಾ ಬಾಳೂರ, ಗೌಸ್ ಮೊದೀನ್ ಶಾಂಡೂರ, ಸುರೇಶ ನಾಗಣ್ಣನವರ, ಮುಖ್ಯಾಧಿಕಾರಿ ವೈ.ಕೆ.ಜಗದೀಶ ಸೇರಿದಂತೆ ಇನ್ನಿತರರು ಇದ್ದರು.

ಯೋಜನಾಧಿಕಾರಿ ಶಿವಾನಂದ ಕ್ಯಾಲಕೊಂಡ ನಿರೂಪಿಸಿದರು.



ಹಾನಗಲ್ಲಗೆ ಸೂರೀಶ್ವರ ಮಹಾರಾಜರು ಭೇಟಿ

◆ **ಹಾನಗಲ್ಲ:** ಭಾರತ ದೇಶ, ಸನಾತನ ಹಿಂದೂ ಧರ್ಮದ ಸಾಂಸ್ಕೃತಿಕ ಪಾರಂಪರಿಕ ದೇಶವಾಗಿದ್ದು, ಅದರಲ್ಲಿ ಜೈನ ಧರ್ಮವು ಒಂದಾಗಿದೆ ಎಂದು ಪದ್ಮಶ್ರೀ ಪ್ರಶಸ್ತಿ ಮುಡಿಗೇರಿಸಿಕೊಂಡ ಗಚ್ಛಾಧಿಪತಿ ಆಚಾರ್ಯ ಭಗವಂತಪದ್ಮ ಶ್ರೀಮದ್ವಿಜಯ ನಿತ್ಯಾನಂದ ಸೂರೀಶ್ವರ ಮಹಾರಾಜರು ಹೇಳಿದರು.

ಶುಕ್ರವಾರ ಹಾನಗಲ್ ಪಟ್ಟಣಕ್ಕೆ ಆಗಮಿಸಿ ಭಕ್ತರನ್ನು ಆಶೀರ್ವದಿಸಿದರು. 9 ನೇ ವರ್ಷದಲ್ಲಿ ತಮ್ಮ ಕುಟುಂಬದೊಂದಿಗೆ ಜೈನ ಸನ್ಯಾಸವನ್ನು ಸ್ವೀಕರಿಸಿದ ಮದ್ವಿಜಯ ನಿತ್ಯಾನಂದ ಸೂರಿಶ್ವರ ಮಹಾರಾಜರು 19 ವರ್ಷದ ನಂತರ ಜುಲೈ 23ರಂದು ಬೆಂಗಳೂರಿನಲ್ಲಿ ಚತುರ್ಮಾಸದ ಪ್ರವೇಶ ಉತ್ಸವಕ್ಕೆ ಪಾಲ್ಗೊಳ್ಳಲು ದೇಶದ ನಾಲ್ಕು ದಿಕ್ಕುಗಳೊಂದಿಗೆ ಪಾದಯಾತ್ರೆಯೊಂದಿಗೆ ರಾಜಸ್ಥಾನ ಗುಜರಾತ, ಮಹಾರಾಷ್ಟ್ರ, ಕರ್ನಾಟಕ ಪ್ರವೇಶಿಸಿ ಹುಬ್ಬಳ್ಳಿ ಮೂಲಕ ನಿಟಗಿನಕೊಪ್ಪ ಗ್ರಾಮದಲ್ಲಿ ವಾಸ್ತವ್ಯ ಮುಗಿಸಿ ಶುಕ್ರವಾರ ಸಂಜೆ ಹಾನಗಲ್ ಪ್ರವಾಸಿ ಮಂದಿರಕ್ಕೆ ಆಗಮಿಸಿ ವಿಶ್ರಾಂತಿ ಪಡೆದು ನಂತರ ಶನಿವಾರ ಬೆಳಗ್ಗೆ ಗೊಂದಿ, ಆನವಟ್ಟಿ, ಶಿವಮೊಗ್ಗ ಮುಖಾಂತರ ಬೆಂಗಳೂರು ತಲುಪಲಿದ್ದಾರೆ ಎಂದು ಅವರ ಶಿಷ್ಯವೃಂದ ಹೊಸದಿಗಂತ ಪತ್ರಿಕೆಯೊಂದಿಗೆ ಹಂಚಿಕೊಂಡರು.

ಪ್ರಾಣ ಪ್ರತಿಷ್ಠಾಪನೆ, ಜೀರ್ಣೋದ್ಧಾರ ಜೊತೆಗೆ ಗುರುಕುಲ, ಹಲವಾರು ವಿದ್ಯಾಲಯಗಳು, ಕಾಲೇಜುಗಳು ಸ್ಥಾಪನೆಗೊಂಡಿವೆ ಅನೇಕ ಜನಕಲ್ಯಾಣ, ಸಮಾಜ ಸೇವೆ, ಇನ್ನೂ ಹತ್ತು ಹಲವಾರು ನಿಸ್ವಾರ್ಥ ಸೇವೆ ಗುರುತಿಸಿ ಇತ್ತೀಚೆಗೆ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿದ್ದ ಗುರುಗಳನ್ನ ಹಾನಗಲ್ಲ ಪಟ್ಟಣದ ಜನತೆ ಸ್ವಾಗತಿಸಿ ಆಶಿರ್ವಾದ ಪಡೆದುಕೊಂಡು ನಂತರ ಅವರನ್ನು ಬಿಳ್ಕೊಟ್ಟರು

ಈ ಸಂಧರ್ಭದಲ್ಲಿ ಹೇಮಂತ್ ಮನೋಯೂತ್, ಕೇವಲ್ ಚಂದ್ ಸೋಳೊಂಕೆ, ಸಿ.ಎ.ಭರತ ಭಂಡಾರಿ, ರಮೇಶ ನಹರ,ನರೇಶ ಸೋಳೊಂಕೆ, ಆದರ್ಶ ಶೆಟ್ಟಿ, ಆರ್.ಬಿ.ಪಾಟೀಲ, ಅಣ್ಣಪ್ಪ ಚಾಕಾಪುರ, ಅನಂತ ಚೇತನ ನಿಂಗೋಜಿ, ಭರಮಣ್ಣಾ ಶಿರ್ಶಿ, ಮಲ್ಲಿಕಾರ್ಜುನ ಬಿ.ಎಸ್. ಇತರರಿದ್ದರು.



ಮೋದಿ 12 ವರ್ಷದ ಆಡಳಿತ ಮಹತ್ವ ಅಧ್ಯಾಯ

◆ **ಹಾವೇರಿ:** ಕಳೆದ 12ವರ್ಷಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದಮೇಲೆ ಭಾರತಕ್ಕೆ ಶುಕ್ರದೆಸೆ ಶುರುವಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಯುಪಿಎ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಭಾರತ ದೇಶಕ್ಕೆ ಗ್ರಹಣ ಹಿಡಿದಿತ್ತು. 2047ಕ್ಕೆ ವಿಕಸಿತ ಭಾರತ, ಆತ್ಮನಿರ್ಭರ ಭಾರತವನ್ನಾಗಿಸುವುದೇ ಮೋದಿಜೀಯವರ ಧ್ಯೇಯವಾಗಿದೆ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಶನಿವಾರ ಬಿಜೆಪಿ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿಯವರ 12 ವರ್ಷದ ಜನಪರ ಯೋಜನೆಗಳ ಪ್ರದರ್ಶಿನಿ ಉದ್ಘಾಟಿಸಿ, ವೀಕ್ಷಿಸಿ, ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ಸ್ವಾತಂತ್ರ್ಯ ನಂತರ ಅತಿ ಹೆಚ್ಚು ಅವಧಿಗೆ ಪ್ರಧಾನಿಯಾಗಿ ನರೇಂದ್ರ ಮೋದಿ ಸೇವೆ ಸಲ್ಲಿಸಿ ಜವಾಹರಲಾಲ್ ನೆಹರೂ ದಾಖಲೆ ಮುರಿದಿದ್ದಾರೆ. ಭಾರತವನ್ನು ವಿಕಸಿತ ಭಾರತ ಮಾಡಿ, ಬಡವರ ಬದುಕನ್ನು ಉತ್ತಮಗೊಳಿಸಿದ್ದಾರೆ. ಯುವಕರಿಗೆ, ಮಹಿಳೆಯರಿಗೆ, ಆತ್ಮವಿಶ್ವಾಸ ಬರುವಂತೆ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಪಿಎಂ ಆವಾಸ್ ಯೋಜನೆಯಡಿ 4 ಕೋಟಿಗಿಂತ ಹೆಚ್ಚು ವಸತಿ ಮನೆ ನಿರ್ಮಿಸಿದ್ದಾರೆ. ಜನಧನ್ ಖಾತೆ, ಉಜ್ವಲ್ ಯೋಜನೆ, ಜಲ್‌ಜೀವನ್ ಮಿಶನ್, ಹರ್‌ಘರ್ ಗಂಗೆ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ದೇಶವನ್ನು ಸದೃಢಗೊಳಿಸಿದ್ದಾರೆ ಎಂದರು.



2047ಕ್ಕೆ ವಿಕಸಿತ ಭಾರತ, ಆತ್ಮನಿರ್ಭರ ಭಾರತದೊಂದಿಗೆ ಪ್ರಥಮ ಸ್ಥಾನದಲ್ಲಿರಬೇಕೆಂಬುದು ಪ್ರಧಾನಿ ನರೇಂದ್ರ ಮೋದಿಯವರ ಆಶಯವಾಗಿದೆ. ದೇಶದ ಜನತೆ ಏಕತೆ, ಐಕ್ಯತೆ, ಸಮಗ್ರತೆ ಒಗ್ಗಟ್ಟಿನ ಮೂಲಕ ಮೋದಿಯವರನ್ನು 2029ರ ಚುನಾವಣೆಯಲ್ಲೂ ಬೆಂಬಲಿಸೋಣ ಎಂದು ಹೇಳಿದರು. ಬಿಜೆಪಿ ಜಿಲ್ಲಾಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ ಮಾತನಾಡಿದರು. ಮಾಜಿ ಜಿಲ್ಲಾಧ್ಯಕ್ಷ ಸಿದ್ದರಾಜ ಕಲಕೋಟಿ, ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ, ಡಿ.ಎಸ್. ಮಾಳಗಿ, ಕಿರಣಕುಮಾರ ಕೋಣನವರ, ಕಿರಣ ಕೊಳ್ಳಿ, ಸಂತೋಷ ಆಲದಕಟ್ಟಿ, ನಂಜುಂಡೇಶ ಕಳ್ಳೇರ, ನೀಲಪ್ಪ ಚಾವಡಿ, ರೋಹಿಣಿ ಪಾಟೀಲ, ರಾಮು ಮಾಳಗಿ, ನಾಗೇಂದ್ರ ಕಟಕೋಳ, ಜಗದೀಶ ಮಲಗೋಡ, ಸುರೇಶ ಹೊಸಮನಿ, ಮೃತ್ಯುಂಜಯ ಮುಷ್ಠಿ ಸೇರಿದಂತೆ ಪಕ್ಷದ ಅನೇಕ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು.

ಯಶಸ್ವಿ ಬದುಕಿಗೆ ಪಠ್ಯೇತರ ಚಟುವಟಿಕೆಗಳು ಪೂರಕ: ಕುಲಕರ್ಣಿ

◆ **ಹಾವೇರಿ:** ವಿದ್ಯಾರ್ಥಿಗಳ ಓದು ಕೇವಲ ಪಠ್ಯಕ್ರಮಕ್ಕೆ ಸೀಮಿತವಾಗದೇ ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗವಹಿಸಿದಾಗ ಉಜ್ವಲ ಭವಿಷ್ಯ ನಿರ್ಮಾಣವಾಗುತ್ತದೆ ಎಂದು ಹಿರಿಯ ಸಾಹಿತಿ ಡಾ.ಸತೀಶ ಕುಲಕರ್ಣಿ ಅಭಿಪ್ರಾಯಪಟ್ಟರು.

ನಗರದ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದಲ್ಲಿ ಜರುಗಿದ 2025-26ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಜೀವನದಲ್ಲಿ ಅನೇಕ ತಿರುವುಗಳು ಸಹಜವಾಗಿ ಬರುತ್ತವೆ. ವಿದ್ಯಾರ್ಥಿಗಳು ಅವುಗಳನ್ನು ಸವಾಲಾಗಿ ಸ್ವೀಕರಿಸಿ ಸಾಧನೆಯ ಮೆಟ್ಟಿಲುಗಳನ್ನು ಪರಿಶ್ರಮ, ಶ್ರದ್ಧೆ, ಕ್ರಿಯಾಶೀಲತೆಯ ಮೂಲಕ ಹತ್ತಬೇಕಾಗುತ್ತದೆ. ಕೇವಲ ಅಂಕಪಟ್ಟಿಗೆ ಅಂಟಿಕೊಳ್ಳದೇ ಉತ್ತಮ ಪ್ರಜೆಗಳಾಗಿ ನಿರ್ಮಾಣವಾಗುವತ್ತ ಯುವಕರು ಚಿತ್ತ ಹರಿಸಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಎಂ.ಸಿ. ಕೊಳ್ಳಿ ಮಾತನಾಡಿದರು. ವೇದಿಕೆಯಲ್ಲಿ ಕಾಲೇಜು ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಜೆ.ಎಸ್. ಅರಣಿ, ಎಸ್.ಎಂ. ಹುರಳಿಕುಪ್ಪಿ, ಕ್ರೀಡಾ ವಿಭಾಗದ ಕಾರ್ಯಾಧ್ಯಕ್ಷ ಡಾ.ಎಸ್. ಆರ್. ನಾಯಕ, ಐಕ್ಯುಎಸಿ ಸಂಯೋಜಕಿ ಪ್ರೊ.ರೂಪಾ ಕೋರೆ, ದೈಹಿಕ



ಶಿಕ್ಷಣ ನಿರ್ದೇಶಕಿ ಪೂಜಾ ಎಂ., ವಿದ್ಯಾರ್ಥಿ ಪ್ರತಿನಿಧಿಗಳಾದ ರೂಪಾ ಹಾನಗಲ್ಲ ಉಪಸ್ಥಿತರಿದ್ದರು.ರೇಣುಕ ಮತ್ತು ಕಿರಣ ಪ್ರಾರ್ಥಿಸಿದರು. ಪ್ರಾಚಾರ್ಯ ಪ್ರೊ. ಎಂ.ಎಂ. ಹೊಳ್ಳಿಯವರ ಸ್ವಾಗತಿಸಿದರು. ಸಾಂಸ್ಕೃತಿಕ ವೇದಿಕೆಯ ಸಂಚಾಲಕಿ ಡಾ.ಎಂ.ಪಿ. ಕಣವಿ ವಾರ್ಷಿಕ ವರದಿ ವಾಚನ ಮಾಡಿದರು. ಪ್ರೊ. ಸುಮಂಗಲ ಜೆ.ಎಂ. ಕ್ರೀಡಾ ವರದಿ ಮಂಡಿಸಿದರು. ಪ್ರೊ. ಶ್ರೀದೇವಿ ದೊಡ್ಡಮನಿ ನಿರ್ವಹಿಸಿದರು. ಸಹನಾ ಮೆಣಸಿನಕಾಯಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಾಲೇಜು ಹಳೆಯ ವಿದ್ಯಾರ್ಥಿ ಸಂಘದ ಪ್ರತಿನಿಧಿಗಳು, ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದೇಶಪ್ರೇಮಿ ಪ್ರಧಾನಿ ಸಿಕ್ಕಿರುವುದು ಭಾರತದ ಭಾಗ್ಯ

◆ **ಹಾವೇರಿ:** ಪ್ರಧಾನಿ ನರೇಂದ್ರ ಮೋದಿಯವರು 2047ಕ್ಕೆ ವಿಕಸಿತ ಭಾರತ, ಆತ್ಮನಿರ್ಭರ ಭಾರತ ಕಲ್ಪನೆಯೊಂದಿಗೆ ಭಾರತವನ್ನು ಮುನ್ನಡೆಸುತ್ತಿದ್ದಾರೆ. ದೇಶವನ್ನು ಸದೃಢವಾಗಿ ಮುನ್ನಡೆಸುವ ದೇಶಪ್ರೇಮಿ ಪ್ರಧಾನಿ ನಮಗೆ ಸಿಕ್ಕಿರುವುದು ಭಾರತದ ಭಾಗ್ಯ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ಅತಿ ಹೆಚ್ಚು ಅವಧಿಗೆ ಪ್ರಧಾನಿಯಾಗಿ ನರೇಂದ್ರ ಮೋದಿ ಸೇವೆ ಸಲ್ಲಿಸಿ ಜವಾಹರಲಾಲ್ ನೆಹರೂ ದಾಖಲೆ ಮುರಿದಿದ್ದಾರೆ. ಭಾರತವನ್ನು ವಿಕಸಿತ ಭಾರತ ಮಾಡಿ ಬಡವರ ಬದುಕನ್ನು ಉತ್ತಮಗೊಳಿಸಿದ್ದಾರೆ ಎಂದು ಹೇಳಿದರು.**ಉದ್ಯೋಗ ಸೃಷ್ಟಿ:**ದೇಶದಲ್ಲಿ ಉದ್ಯೋಗ ಸೃಷ್ಟಿಯ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಹಲವಾರು ರೀತಿಯಲ್ಲಿ ಉದ್ಯೋಗ ಸೃಷ್ಟಿ ಮಾಡಿದ್ದಾರೆ. ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗಕ್ಕೆ ಪ್ರೋತ್ಸಾಹ ನೀಡುವ ಯೋಜನೆಗೆ 70ಲಕ್ಷ ಜನರಿಗೆ ಉದ್ಯೋಗ ನೀಡುವ ಯೋಜನೆಗೆ ಚಾಲನೆ ನೀಡಿದ್ದಾರೆ. ಇಎಸ್‌ಐ, ಪಿಎಫ್ ಮೂಲಕ ಪ್ರತಿ ವರ್ಷ ಹೊಸ ನೇಮಕಗೊಂಡವರ ಮಾಹಿತಿ ದೊರೆಯುತ್ತದೆ. ಖಾಸಗಿ ಕಂಪನಿಗಳಲ್ಲಿ, ಉತ್ಪಾದನಾ ವಲಯದಲ್ಲಿ ನಿರಂತರ ಉದ್ಯೋಗ ಸೃಷ್ಟಿಯಾಗುತ್ತಿವೆ ಎಂದರು.

ಕೇಂದ್ರ ಸರ್ಕಾರದ ಸಾಧನೆಯ ಕುರಿತು ಕಾಂಗ್ರೆಸ್ ಮಾಡಿರುವ ಆರೋಪದ ಕುರಿತು ಕೇಳಿದ ಪ್ರತಿಕ್ರಿಯಿಸಿದ ಅವರು, ನಮ್ಮ ಸಂಕಲ್ಪ ಸಮರ್ಪಣಾ ಭಾವನೆಯಿಂದ ಕೆಲಸ ಮಾಡಿರುವುದಕ್ಕಾಗಿ ಸಾಧನೆಯಾಗಿ ಅಂಕಿ ಸಂಖ್ಯೆ ಇದೆ. ಸುಮ್ಮನೆ ಅಂಕಿ ಸಂಖ್ಯೆ ಬರಲ್ಲ, ಕಾಂಗ್ರೆಸ್‌ಗೆ ಯಾವುದೇ ನೈತಿಕತೆ ಇಲ್ಲ, ಹಲವಾರು ರಾಜ್ಯಗಳಲ್ಲಿ ಹಲವಾರು ಪ್ರಕರಣಗಳ ಆಗಿವೆ. ಯುಪಿಎ ಸರ್ಕಾರ ಇದ್ದಾಗ ಮೆಡಿಕಲ್ ಸೀಟ್‌ಗೆ ರಾಜ್ಯಗಳಲ್ಲಿ ಪರೀಕ್ಷೆ ನಡೆಯುತ್ತಿತ್ತು. ನಮ್ಮ ರಾಜ್ಯದಲ್ಲಿಯೇ ಈ ಥರಾ ಪೇಪರ್ ಲೀಕ್ ಆಗಿ ಎರಡು ಮೂರು ಬಾರಿ ಮರು ಪರೀಕ್ಷೆಯಾಗಿದೆ. ಉತ್ತರಪ್ರದೇಶದಲ್ಲಿ ದೊಡ್ಡಪ್ರಮಾಣದಲ್ಲಿ ಆಗಿದೆ. ಈಗ ಕೆಲವರು ಈ ವ್ಯವಸ್ಥೆಯೊಳಗೆ ಹೊಕ್ಕು ಮಾಡಿರುವುದು. ಮತ್ತೆ ಈಗಿನ ಡಿಜಿಟಲ್‌ನ ವ್ಯವಸ್ಥೆಯಲ್ಲಿ ಹೆಚ್ಚು ಪ್ರಚಾರ ಆಯಿತು ಸಂಪೂರ್ಣ ನಿಯಂತ್ರಣ ಮಾಡುತ್ತೇವೆ. ಇದರಲ್ಲಿ ರಾಜಕಾರಣ ಮಾಡುವ ಅವಶ್ಯಕತೆ ಇಲ್ಲ, ಇದನ್ನು ಸರಿಪಡಿಸುವುದು ನಮ್ಮೆಲ್ಲರ ಜವಾಬ್ದಾರಿ ಇದೆ. ಪ್ರಜಾಪ್ರಭುತ್ವದಲ್ಲಿ ಬಹಳಷ್ಟು ಒತ್ತಡ ಇರುತ್ತದೆ. ನೀಟ್ ಅನ್ನುವುದು ಒಂದು ಸ್ವತಂತ್ರ ವ್ಯವಸ್ಥೆ ಅದಕ್ಕೆ ಅಧಿಕಾರ ನೀಡಿದೆ. ಅವರ ಮೇಲೆ ಕ್ರಮ ಆಗಿದೆ. ಹಲವಾರು ಜನರ ಮೇಲೆ ಕ್ರಮ ಆಗಿದೆ. ಅದನ್ನು ಸರಿಪಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ಪಾರದರ್ಶಕವಾಗಿ ಕೆಲಸ ನಿರ್ವಹಿಸಿ: ಡಿಸಿ

◆ **ಹಾವೇರಿ:** ಸಾರ್ವಜನಿಕರಿಂದ ದೂರು ಬರದಂತೆ ಪಾರದರ್ಶಕವಾಗಿ, ಚುರುಕಾಗಿ ಕೆಲಸ ಮಾಡಿ ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅಧಿನಿಯಮ-2013ರನ್ವಯ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಗಳಡಿ ವಿವಿಧ ಅಭಿವೃದ್ಧಿ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾರ್ವಜನಿಕರಿಗೆ ಉತ್ತಮ ಆಡಳಿತ ನೀಡುವಂತೆ ಸಿಎಂ ಬಹಳ ಕಟ್ಟುನಿಟ್ಟಾಗಿ ಸೂಚನೆ ನೀಡಿದ್ದಾರೆ. ಹಾಗಾಗಿ ಕಚೇರಿಗೆ ಬರುವ ಸಾರ್ವಜನಿಕರ ಕುಂದು-ಕೊರತೆಯನ್ನು ಆಲಿಸಿ, ಕಾನೂನುಬದ್ಧವಾಗಿದ್ದರೆ ಮಾಡಿಕೊಡಿ, ಮಾಡಲು ಬರುವುದಿಲ್ಲವಾದಲ್ಲಿ ಅವರಿಗೆ ಮತದಟ್ಟಾಗುವಂತೆ ತಿಳಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಯಾವುದೇ ಕಾರಣಕ್ಕೂ ಸಾರ್ವಜನಿಕರು ಕಚೇರಿಗೆ ಅಲೆದಾಡುವಂತೆ ಆಗಬಾರದು. ನೈಜತೆ ಪರಿಶೀಲಿಸಬೇಕು. ಅವರಿಗೂ ಕಾನೂನಿನ ಅರಿವು ಮೂಡಿದರೆ ಅವರು ಸಹ ತಿಳಿದುಕೊಳ್ಳುತ್ತಾರೆ. ಜನರಿಗೆ ನಂಬಿಕೆ ಬರುವಂತೆ ಆಡಳಿತವನ್ನು ಬಹಳ ಚುರುಕಾಗಿ ನಡೆಸಬೇಕು ಎಂದು ಅಧಿಕಾರಿಗೆ ಸೂಚನೆ ನೀಡಿದರು.

ಅಧಿಕಾರಿ ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಆನ್ ಲೈನ್ ರಜಿಸ್ಟ್ರೇಷನ್ ಮಾಡಬೇಕು. ಕೇಂದ್ರ ಸ್ಥಾನದಲ್ಲಿ ವಾಸವಿರಬೇಕು. ಈ ಕುರಿತು ಸಿಎಂ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಜಿಲ್ಲೆಯಲ್ಲಿ ಅನಧಿಕೃತವಾಗಿ ನಡೆಯುವ ಖಾಗಿ ಹಣಕಾಸು ಸಂಸ್ಥೆಗಳ ಮೇಲೆ ತಹಶೀಲ್ದಾರಗಳು ಹಾಗೂ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ನಿಗಾವಹಿಸಬೇಕು. ಸಂಸ್ಥೆಯ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆಯೋ ಇಲ್ಲವೋ ಎಂದು ಪರಿಶೀಲಿಸಬೇಕು. ಕೋಟ್ಯಾಂತರ ಮೊತ್ತದ ಹಗರಣಗಳು ನಡೆಯುತ್ತಿವೆ. ಜಿಲ್ಲೆಯಲ್ಲಿ ಇಂತಹ ಖಾಸಗಿ ಸಂಸ್ಥೆಗಳ ಹಗರಣಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಸ್.ಸಿ.ಎಸ್.ಪಿ. ಮತ್ತು ಟಿಎಸ್‌ಪಿ ಯೋಜನೆಗಳನ್ನು ಆಯಾ ಇಲಾಖೆಗಳು ಅತ್ಯಂತ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಗಳು ತಲುಪಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ ಮಾತನಾಡಿ, ಎಸ್.ಸಿ.ಎಸ್.ಪಿ. ಮತ್ತು ಟಿಎಸ್‌ಪಿ ಯೋಜನೆಯಡಿ ವಿವಿಧ ಇಲಾಖೆಗಳಿಗೆ ರೂ.23.81 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.11.16 ಲಕ್ಷ ವೆಚ್ಚ ಮಾಡಲಾಗಿದೆ ಹಾಗೂ ಶೇ.46.89ರಷ್ಟು ಸಾಧನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಉಪ ವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರಗಳು, ಸ್ಥಳೀಯ ನಗರ ಸಂಸ್ಥೆಗಳ ಮುಖ್ಯಾಧಿಕಾರಿಗಳು, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಇತರರು ಉಪಸ್ಥಿತರಿದ್ದರು.

ಹವಾಮಾನ ಆಧಾರಿತ ಕೃಷಿಗೆ ಸಲಹೆ

◆ **ಹಾವೇರಿ:** ಹನುಮನಮಟ್ಟಿ ಐ.ಸಿ.ಎ.ಆರ್ -ಕೃಷಿ ವಿಜ್ಞಾನ ಕೇಂದ್ರ ಹಾಗೂ ಹಾವೇರಿ ಕೃಷಿ ಇಲಾಖೆ ಸಯೋಗದಲ್ಲಿ ಹಾವೇರಿ ಜಿಲ್ಲೆಯ ರೈತರಿಗೆ ಹವಾಮಾನ ಆಧಾರಿತ ಕೃಷಿ ಸಲಹೆಗಳನ್ನು ನೀಡಲಾಗಿದೆ.ಹವಾಮಾನ ಮುನ್ಸೂಚನೆಯನ್ನು ಬೆಂಗಳೂರು ಭಾರತದ ಹವಾಮಾನ ಇಲಾಖೆ, ಹಾವೇರಿ ಜಿಲ್ಲೆಗೆ ನೀಡಿದ ಮುನ್ಸೂಚನೆಯಂತೆ, ಸಾಮಾನ್ಯವಾಗಿ ಮೋಡದ ಆಕಾಶವಿರಲಿದ್ದು, ಮುಂದಿನ ಐದು ದಿನಗಳವರೆಗೆ ಜಿಲ್ಲೆಯಾದ್ಯಂತ ಅಲ್ಲಲ್ಲಿ ಹಗುರವಾದ ಮಳೆಯಾಗುವ ಮುನ್ಸೂಚನೆ ಇದೆ. ಗರಿಷ್ಠ ತಾಪಮಾನ ಮುಂದಿನ ಐದು ದಿನಗಳಲ್ಲಿ 30ಡಿಗ್ರಿಯಿಂದ ಕನಿಷ್ಠ ತಾಪಮಾನ 20.6 ಡಿಗ್ರಿ ಮತ್ತು ಸರಾಸರಿ ಗಾಳಿಯ ವೇಗ ಪ್ರತಿ ಗಂಟೆಗೆ 15.8ರಿಂದ 21.9 ಕೀ.ಮೀ ಇರುವ ಮುನ್ಸೂಚನೆ ಇದೆ.ಈ ಹವಾಮಾನ ಮುನ್ಸೂಚನೆಯನ್ನು ಪರಿಗಣಿಸಿ, ರೈತರು ಈ ಕೆಳಕಂಡಕೃಷಿಚಟುವಟಿಕೆಗಳನ್ನುಅನುಸರಿಸಲು ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಹಾಗೂ ಜಂಟಿ ಕೃಷಿ ನಿರ್ದೇಶಕರು ರೈತರಿಗೆ ಸಲಹೆ ನೀಡಿದ್ದಾರೆ.ಕಳೆದ ಒಂದು ವಾರದಿಂದ ಮಳೆಯ ಕೊರತೆಯಾಗಿದ್ದು ಕಂಡು ಬಂದಿದೆ.

ಮಳೆ ಕೊರತೆಯಿದ್ದರೆ: ಸಾರಜನಕ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಿ, ಸೋಯಾಬೀನ್ + ತೊಗರಿ (4:2) ಅಂತರ ಬೆಳೆ ಪದ್ಧತಿ ಅನುಸರಿಸಿ, 2% ಪೊಟ್ಯಾಶಿಯಂ ನೈಟ್ರೇಟ್ ಅಥವಾ 1% ಯೂರಿಯಾ ಎಲೆ ಸಿಂಪಡಣೆ ಮಾಡಿ ಮತ್ತು ಮಣ್ಣಿನ ತೇವಾಂಶ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು. ಕಡಿಮೆ ಮಳೆಯ ಮುನ್ಸೂಚನೆ ಇರುವುದರಿಂದ ಈಗಾಗಲೇ ಬಿತ್ತದ ಬೆಳೆಗಳಿಗೆ ನೀರಿನ ಲಭ್ಯತೆ ಇದ್ದಲ್ಲಿ ತೆಳುವಾಗಿ ನೀರು ಕೊಡುವುದು ಸೂಕ್ತವಾಗಿದೆ. ನಾಟಿ ಮಾಡಿದ ಕಬ್ಬಿಗೆ ಬೆಳವಣಿಗೆ ಹಂತದಲ್ಲಿ (101-270 ದಿನಗಳವರೆಗೆ) 7 ದಿನಕ್ಕೊಮ್ಮೆ ನೀರುಕೊಡುವುದು. ಕಬ್ಬು ನಾಟಿಮಾಡಿದ 50, 65, 80 ಮತ್ತು 95 ನೆಯ ದಿನದಂದು ಬೋದುಗಳಲ್ಲಿ ಕುಂಟೆ ಹಾಯಿಸಬೇಕು, ಕಬ್ಬಿನಲ್ಲಿ ಹನಿ ನೀರಾವರಿ ಅಳವಡಿಸುವುದರಿಂದ ಶೇ. 40 ರಷ್ಟು ನೀರನ್ನು ಉಳಿತಾಯ ಮಾಡಬಹುದು. ಮೆಣಸಿನಕಾಯಿ,ಟೊಮ್ಯಾಟೋ, ಬದನೆ ಬಿತ್ತನೆ ಮಾಡಿದ ರೈತರು ತರಕಾರಿ ಬೆಳೆಗಳಿಗೆ ಮಣ್ಣಿನ ತೇವಾಂಶ ನೋಡಿಕೊಂಡು ಅವಶ್ಯವೆನಿಸಿದರೆ ತೆಳುವಾಗಿ ನೀರು ಕೊಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಶಾಲೆಯ ಮಾನ್ಯತೆ ರದ್ದು

ಬೆಳಗಾವಿ: ಬೆಳಗಾವಿ ನಗರದ ಅಜಾದ್ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಕ್ಸಲಂಟ ಉರ್ದು ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆಯು (1 ರಿಂದ 5ನೇ ತರಗತಿ) ಮಾನ್ಯತೆ ಇಲ್ಲದೇ ಹಾಗೂ 6 ಮತ್ತು 7ನೇ ತರಗತಿಗಳನ್ನು ಅನುಮತಿ ಇಲ್ಲದೇ ನಡೆಸಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಸದರಿ ಶಾಲೆಯ ನೋಂದಣಿಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 34 (2) ಎ ಅಡಿಯಲ್ಲಿ ರದ್ದುಪಡಿಸಲು ಹಾಗೂ ಸೆಕ್ಷನ್ 39(2) ರ ಅಡಿಯಲ್ಲಿ ಮಾನ್ಯತೆಯನ್ನು ಹಿಂಪಡೆಯಲು ಹಾಗೂ ಡೈಸ್ ಕೋಡನ್ನು ರದ್ದು ಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಬಗ್ಗೆ ಈಗಾಗಲೇ ಸಂಬಂಧ ಪಟ್ಟ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಶಾಲೆಗೆ ಶೈಕ್ಷಣಿಕ 2026-27ನೇ ಸಾಲಿಗೆ ಮಕ್ಕಳನ್ನು ದಾಖಲಿಸಬಾರದು ಎಂದು ಈ ಮೂಲಕ ಪೋಷಕರಿಗೆ ಮತ್ತು ಸಾರ್ವಜನಿಕರಿಗೆ ಸೂಚಿಸಲಾಗಿದೆ. ಒಂದು ವೇಳೆ ಪೋಷಕರು ಮತ್ತು ಸಾರ್ವಜನಿಕರು ಈ ಎಚ್ಚರಿಕೆಯನ್ನು ಮೀರಿ ಮಕ್ಕಳನ್ನು ದಾಖಲಿಸಿದ್ದಲ್ಲಿ ಮುಂದೆ ಆಗುವ ಶೈಕ್ಷಣಿಕ ತೊಂದರೆಗಳಿಗೆ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ ಎಂದು ನಗರ ವಲಯ ಬೆಳಗಾವಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವೈ.ಜೆ. ಭಜಂತ್ರಿ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಕಾರ ಸಮ್ಮಾನ್ ಯೋಜನೆ: ಅರ್ಜಿ ಆಹ್ವಾನ

ಬೆಳಗಾವಿ: ಪ್ರಸಕ್ತ ಸಾಲಿಗೆ ನೇಕಾರ ಸಮ್ಮಾನ ಯೋಜನೆಯಡಿ ಕೈಮಗ್ಗ, ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳ ನೇಕಾರರು ಹಾಗೂ ಕೂಲಿ ನೇಕಾರರಿಗೆ ರೂ.5,000 ಗಳ ವಾರ್ಷಿಕ ಆರ್ಥಿಕ ನೆರವನ್ನು ಡಿ.ಬಿ.ಟಿ ಮೂಲಕ ನೀಡಲು ನೇಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಕೈಮಗ್ಗ ನೇಕಾರಿಕೆ ವೃತ್ತಿ, ವಿದ್ಯುತ್ ಮಗ್ಗ ಘಟಕದ ಆರ್.ಆರ್.ನಂ ಸಂಖ್ಯೆ ಯಿಂದ ಯಾವುದೇ ಅರ್ಜಿಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳ ಮಾಲಿಕರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ಜುಲೈ 1 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ, ಬೆಳಗಾವಿ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಹಿಳೆ ಕಾಣೆ


ಬೆಳಗಾವಿ: ಬೆಳಗಾವಿ ನಗರದ ಸಾಯಿ ಕಾಲೋನಿ, ಅನಗೋಳ ಪ್ರದೇಶದ ನಿವಾಸಿಯಾಗಿರುವ ಮಾಲತಿ ಗಂಗಾಧರ ಕೊರವಿ (44) ಅವರು ಕಾಣೆಯಾಗಿರುವ ಕುರಿತು ತಿಲಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೇ 22ರಂದು ಮಧ್ಯಾಹ್ನ 1ರಿಂದ 2 ಗಂಟೆಯ ನಡುವಿನ ಅವಧಿಯಲ್ಲಿ ಮಾಲತಿ ಅವರು ಮನೆಯಿಂದ ಯಾರಿಗೂ ತಿಳಿಸದೆ ಹೊರಗೆ ಹೋಗಿದ್ದು, ಬಳಿಕ ಮನೆಗೆ ಮರಳಿಲ್ಲ ಎಂದು ಕುಟುಂಬಸ್ಥರು ಪೊಲೀಸರಿಗೆ ದೂರು ನೀಡಿದ್ದಾರೆ. ಎಲ್ಲೆಡೆ ಹುಡುಕಾಟ ನಡೆಸಿದರೂ ಅವರ ಸುಳಿವು ಸಿಕ್ಕಿಲ್ಲ ಎಂದು ತಿಳಿದುಬಂದಿದೆ. ಮಹಿಳೆಯ ಬಗ್ಗೆ ಯಾವುದೇ ಮಾಹಿತಿ ದೊರೆತಲ್ಲಿ ಸಮೀಪದ ಪೊಲೀಸ್ ಠಾಣೆ ಅಥವಾ ತಿಲಕವಾಡಿ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಠಾಣಾಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.



ನಿಧನ ಸುದ್ದಿ

ಚಂದ್ರಶೇಖರ ಕಂಬಳಿ

ಮುರಗೋಡ: ಗ್ರಾಮದೇವಿ ಓಣಿಯ ನಿವಾಸಿಯಾದ ಚಂದ್ರಶೇಖರ ಭೀಮಪ್ಪ ಕಂಬಳಿ (ಸಿಂಗಾಡಿ)(65) ಶುಕ್ರವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಒರ್ವ ಪುತ್ರ, ಒರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬಸಲಿಂಗಪ್ಪಾ ಫೀವಾರಿ

ಮೂಡಲಗಿ: ಬೆಳಗಾವಿ ಜಿಲ್ಲಾ ಖಜಾನೆ ಕಚೇರಿಯ ನಿವೃತ ಸಿಬ್ಬಂದಿ ಬೆಳಗಾವಿಯ ಹನುಮಾನ ನಗರ ನಿವಾಸಿ ಕೆಂಪಣ್ಣಾ ಬಸಲಿಂಗಪ್ಪಾ ಫೀವಾರಿ (80) ಶುಕ್ರವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ. ಒಬ್ಬ ಪುತ್ರ ಒರ್ವ ಪುತ್ರಿ ಹಾಗೂ ಅಪಾರ ಬಂದು ಬಳಗವನ್ನು ಬಿಟ್ಟು ಅಗಲಿದ್ದಾರೆ.





ರಾಯಬಾಗ: ಕನ್ನಡ ಕಡ್ಡಾಯದ ವಿರುದ್ಧ ಎಮ್‌ಇಎಸ್ ನಾಯಕರು ಮಾಡಲಿರುವ ಪ್ರತಿಭಟನೆಗೆ ಜಿಲ್ಲಾಧಿಕಾರಿಯವರು ಅನುಮತಿ ನಿರಾಕರಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕಾ ಅಧ್ಯಕ್ಷ ಅಶೋಕ ಅಂಗಡಿ ನೇತೃತ್ವದಲ್ಲಿ ಕರವೇ ಕಾರ್ಯಕರ್ತರು ತಹಶೀಲ್ದಾರರ ಮುಖಾಂತರ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದರು.

ಎಮ್‌ಇಎಸ್‌ಗೆ ಅನುಮತಿ ನೀಡದಿರಿ

ರಾಯಬಾಗ: ಎಮ್‌ಇಎಸ್ ನಾಯಕರು ಕನ್ನಡ ಕಡ್ಡಾಯದ ವಿರುದ್ಧ ಜೂ.22ರಂದು ಮಾಡಲಿರುವ ಪ್ರತಿಭಟನೆಗೆ ಜಿಲ್ಲಾಧಿಕಾರಿಯವರು ಅನುಮತಿ ನಿರಾಕರಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕಾ ಅಧ್ಯಕ್ಷ ಅಶೋಕ ಅಂಗಡಿ ನೇತೃತ್ವದಲ್ಲಿ ಕರವೇ ಕಾರ್ಯಕರ್ತರು ತಹಶೀಲ್ದಾರರ ಮುಖಾಂತರ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದರು. ಕಳೆದ ಐದು ವರ್ಷಗಳಿಂದ ಗಡಿಭಾಗ ಬೆಳಗಾವಿಯಲ್ಲಿ ಭಾಷಾ ರಾಜಕಾರಣ ಮಾಡಿ ಮುಗ್ಧ ಮರಾಠಿಗರನ್ನು ಪ್ರಚೋದಿಸಿ ಅವರನ್ನು ಕರ್ನಾಟಕ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಲು ನಿರ್ಧರಿಸಿರುವ ಎಮ್‌ಇಎಸ್ ನಾಯಕರನ್ನು ಮುಂಜಾಗ್ರತವಾಗಿ ಬಂಧಿಸಬೇಕು. ಇದನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದರು. ಒತ್ತಡಕ್ಕೆ ಮಣಿದು ಎಮ್‌ಇಎಸ್ ಗೆ ಕನ್ನಡ ಕಡ್ಡಾಯದ ವಿರುದ್ಧ ಅನುಮತಿ ನೀಡಿದರೆ ಪ್ರತಿಯಾಗಿ ಅಂದೇ ಕರವೇ ಬೆಳಗಾವಿಯಲ್ಲಿ ಕನ್ನಡವೇ ಸಾರ್ವಭೌಮ ಎಂದು ಕನ್ನಡ ಸ್ವಾಭಿಮಾನಿ ರ್ಯಾಲಿ ನಡೆಸಲಿದೆ. ರ್ಯಾಲಿಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಕರವೇ ಕಾರ್ಯಕರ್ತರು ಬೆಳಗಾವಿಗೆ ಆಗಮಿಸುತ್ತಾರೆಂದು ಈ ಮೂಲಕ ತಿಳಿಸುತ್ತಿದ್ದೇವೆ. ಮನವಿ ಸ್ವೀಕರಿಸಿದ ತಹಶೀಲ್ದಾರರು ಸದರೀ ಮನವಿಯನ್ನು ಜಿಲ್ಲಾಧಿಕಾರಿಯವರಿಗೆ ಕಳುಹಿಸುವುದಾಗಿ ತಿಳಿಸಿದರು. ಮನವಿ ಸಲ್ಲಿಸುವಾಗ ರಾಜು ಕುಲಗುಡೆ, ಆನಂದ ಹುದ್ದಾರ, ರಮೇಶ ಜಾಧವ, ಕಿರಣ ನಾವಿ, ಉಮೇಶ ಕಾಂಬಳೆ, ಮಹೇಶ ಕೊರವಿ, ವಿಶಾಲ ಶಾರಬಿದ್ರೆ, ಸುಪ್ರೀತ ಗಣಿ, ಮಣಿಕಂಠ ನಾವಿ ಉಪಸ್ಥಿತರಿದ್ದರು.



ಯರಗಟ್ಟಿ: ಮೊಹರಂ ಹಬ್ಬದ ಹಿನ್ನೆಲೆ ಪೊಲೀಸ್ ಠಾಣೆಯಲ್ಲಿ ನಡೆದ ಶಾಂತಿ ಸಭೆ ಉದ್ದೇಶಿಸಿ ಸಿಪಿಐ ಐ ಎಂ. ಮಠಪತಿ ಮಾತನಾಡಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ

ಲೋಪಗಳಿಗೆ ಆಸ್ಪದ ಬೇಡ

ಬೆಳಗಾವಿ: ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದಲ್ಲಿ ಯಾವುದೇ ಲೋಪಗಳಿಗೆ ಆಸ್ಪದ ನೀಡದೆ ಪಾರದರ್ಶಕತೆಯಿಂದ ಕೈಗೊಳ್ಳುವಂತೆ ಕಾರ್ಯದರ್ಶಿಗಳು ಸಹಕಾರ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಸಂಜಯ ಶೆಟ್ಟಣ್ಣವರ ಅವರು ಸೂಚಿಸಿದರು.

ಶನಿವಾರ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಜರುಗಿದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಶೀಲನೆ ಪ್ರಕ್ರಿಯೆ ರಾಜ್ಯಾದ್ಯಂತ ಪ್ರಾರಂಭವಾಗಿದ್ದು, ಬೆಳಗಾವಿ ಜಿಲ್ಲೆಯಲ್ಲಿ ಜೂ.30 ರಿಂದ ಆ.7 ರವರೆಗೆ ಜರುಗಲಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗಳು ಪರಿಷ್ಕರಣೆ ಕಾರ್ಯದಲ್ಲಿ ಅತೀ ಜಾಗರೂಕತೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸಬೇಕು ಎಂದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಶೀಲನಾ ಕಾರ್ಯದಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡಬಾರದು. ಈ ಕಾರ್ಯದಲ್ಲಿ ಯಾವೊಬ್ಬ ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟು ಹೋಗದಂತೆ ನಿಗಾವಹಿಸಿ ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು.

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿ ಮತದಾರರ ಪಟ್ಟಿಗಳ ವಿಶೇಷಸಮಗ್ರ ಪರಿಷ್ಕರಣೆಯಲ್ಲಿ ಜಿಲ್ಲೆಯು ಮ್ಯಾಪಿಂಗ್ ಕಾರ್ಯದಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದರು.

ಜಿಲ್ಲೆಯ 18 ವಿಧಾನ ಸಭಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡಲಾಗಿದ್ದು, 41,22, 869 ಮತದಾರರ ಪೈಕಿ 38,22,990 ಮತದಾರರ



ಜಿಲ್ಲೆಗೆ ದೊಡ್ಡ ಕೈಗಾರಿಕೆಗಳು ಬರಲು ಆಸಕ್ತಿ ಹೊಂದಿದ್ದು, ಕೈಗಾರಿಕೆಗಳಿಗೆ ಬೇಕಾದಂತಹ ಭೂಮಿ ಹಾಗೂ ಇನ್ನಿತರ ಅಗತ್ಯ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಬೇಕು. ಜಿಲ್ಲೆಯಲ್ಲಿ ಬೃಹತ ಉದ್ದಿಮೆಗಳು ಪ್ರಾರಂಭಿಸುವ ಕುರಿತಹ ಸಲ್ಲಿಸಲಾದ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ ಎಂಬುದರ ಕುರಿತು ವರದಿ ಸಲ್ಲಿಸಿ.

■ ಸಂಜಯ ಶೆಟ್ಟಣ್ಣವರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಮಳೆ ವಿಳಂಬ-ಅಗತ್ಯ ಮುನ್ನೆಚ್ಚರಿಕೆಗೆ ನಿರ್ದೇಶನ

ಪ್ರಸಕ್ತ ಸಾಲಿನ ಮುಂಗಾರು ತಡವಾಗಿದ್ದು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವವಾಗದಂತೆ ಕ್ರಮ ವಹಿಸಬೇಕು. ಜೊತೆಗೆ ಬಿತ್ತನೆ ಹಂಗಾಮು ಪ್ರಾರಂಭವಾಗಿದ್ದು ರೈತರಿಗೆ ಬೇಕಾದಂತಹ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆ ಆಗದಂತೆ ನಿಗಾವಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಸಂಜಯ ಶೆಟ್ಟಣ್ಣವರ ಅವರು ಸೂಚಿಸಿದರು.

ಶೇ.93ರಷ್ಟು ಸಾಧನೆ

ಜಿಲ್ಲೆಯ 18 ವಿಧಾನ ಸಭಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡಲಾಗಿದ್ದು, 41,22,869 ಮತದಾರರ ಪೈಕಿ 38,22,990 ಮತದಾರರ ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದ್ದು ಮ್ಯಾಪಿಂಗ್ ಕಾರ್ಯದಲ್ಲಿ ಜಿಲ್ಲೆಯಲ್ಲಿ ಪ್ರತಿಶತ 93 ರಷ್ಟು ಸಾಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದ್ದು ಜಿಲ್ಲೆಯಲ್ಲಿ ಪ್ರತಿಶತ 93 ರಷ್ಟು ಸಾಧಿಸಲಾಗಿದೆ.

ಜಿಲ್ಲೆಯಲ್ಲಿ ಬೃಹತ ಕೈಗಾರಿಕೆಗಳ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಿದ ವಿವಿಧ ಕೈಗಾರಿಕೋದ್ಯಮಗಳ ಪ್ರತಿನಿಧಿಗಳೊಂದಿಗೆ ಪ್ರಸ್ತಾವನೆಯ ಸ್ಥಿತಿಗತಿಗಳ ಕುರಿತು ಚರ್ಚಿಸಿ ವರದಿ ನೀಡಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ಸಭೆಯಲ್ಲಿ ಪೊಲೀಸ್ ಆಯುಕ್ತ ಭೋರಸೆ ಗುಲಾಬ ರಾವ್ ಭೂಷಣ, ಜಿಪಂ ಸಿಇಒ ರಾಹುಲ ಶಿಂಧೆ, ಪ್ರಶಿಕ್ಷಣಾರ್ಥಿ ಐಎಎಸ್ ಅಧಿಕಾರಿ ರೋಹಿತ ಸಿಂಗ್, ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನ ಕೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಬೃಹತ್ ಪ್ರತಿಭಟನೆಯ ಎಚ್ಚರಿಕೆ

ರಾಯಬಾಗ: ತಾಲೂಕಾಡಳಿತ ವಿವಿಧ ಸಮಸ್ಯೆಗಳನ್ನು ತಕ್ಷಣ ಈಡೇರಿಸಬೇಕೆಂದು ಆಗ್ರಹಿಸಿ ಶೀಘ್ರದಲ್ಲಿ ಭಾರತೀಯ ಕಿಸಾನ ಸಂಘದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಂಘದ ತಾಲೂಕಾ ಅಧ್ಯಕ್ಷ ಮಹೇಶಗೌಡ ಪಾಟೀಲ ಎಚ್ಚರಿಸಿದ್ದಾರೆ.

ಪಟ್ಟಣದ ದತ್ತ ಮಂದಿರದಲ್ಲಿ ಭಾರತೀಯ ಕಿಸಾನ ಸಂಘದ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ರಸ್ತೆ ಬದಿಯಲ್ಲಿ ಗಿಡಗಂಟಿಗಳನ್ನು ಪಿಡಬ್ಲೂಡಿ ಅಧಿಕಾರಿಗಳು ಕಡಿಸಿಲ್ಲ. ಅಲ್ಲದೇ ತಗ್ಗು ಗುಂಡಿಗಳನ್ನು ಮುಚ್ಚಿಸಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಹೀಗೆ ಹತ್ತು ಹಲವು ಸಮಸ್ಯೆಗಳನ್ನು ತಕ್ಷಣ ಈ ಡೇರಿಸಬೇಕೆಂದು ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟು ಸ್ವಾಮಿಜಿ, ಜಯಪಾಲ ನಾಗನೂರ, ಡಾ.ಪ್ರಕಾಶ ಸಗರೆ, ಭಗವಂತ ಸೂರಣ್ಣವರ, ಕಲ್ಲಪ್ಪ ಹಾರೂಗೇರಿ, ಸುರೇಶ ಮೆಣಸಿನಕಾಯಿ, ಭರಮಾ ಮಾಚನೂರ, ಸಂತೋಷ ಮನ್ನಿಕೇರಿ, ಗೋಪಾಲ ಕೋಚೇರಿ, ಶಂಕರ ಗಡಕರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.





ಕೊಕಟನೂರ: ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜ್‌ನಲ್ಲಿ ಗ್ರಾಮ ಪಂಚಾಯತಿ ಹಾಗೂ ಪೊಲೀಸ್ ಠಾಣೆ ಐಗಳಿ ಸಂಯುಕ್ತಾಶ್ರಯದಲ್ಲಿ ವ್ಯಸನ ಮುಕ್ತ ಭಾರತ ಅಭಿಯಾನ ಸಪ್ತಾಹ ಕಾರ್ಯಕ್ರಮ ನಡೆಯಿತು. ಸುರೇಶ್ ಜಿ ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಚಂದ್ರಕಾಂತ್ ಧೂಳಿ ಶೆಟ್ಟಿ ಉಪನ್ಯಾಸ ನೀಡಿದರು. ಪ್ರೊಬೆಷನರಿ ಪಿಎಸ್‌ಐ ಆರಿಫ್, ಎಎಸ್‌ಐ ಭಾಗೋಜಿ, ಗ್ರಂಥಪಾಲಕ ಈರಯ್ಯ ಕಾಡದೇವರ ಮಠ, ವಿಆರ್‌ಡಬ್ಲೂ ಎಂ.ಎಂ. ಅಲಗೂರ್ ಸೇರಿದಂತೆ ಮತ್ತಿತರರು ಇದ್ದರು.

ಉರ್ದು ವಿಭಾಗದ ಪೂರ್ವ ಪ್ರಾಥಮಿಕ ತರಗತಿಗಳಿಗೆ ಚಾಲನೆ



ರಾಯಬಾಗ: ಕರ್ನಾಟಕ ಸರ್ಕಾರದ ಪಿಎಂ ಯೋಜನೆಯಡಿ ಉರ್ದು ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ವಿಭಾಗ (ಎಲ್‌ಕೆಜಿ ಮತ್ತು ಯುಕೆಜಿ)ಗೆ ಶಾಸಕ ಡಿ.ಎಂ.ಐಹೊಳೆ ಚಾಲನೆ ನೀಡಿದರು.

ಅಧ್ಯಕ್ಷರಾದ ಮೌಲನ ಅಜೀಮ್, ಸದಸ್ಯರಾದ ಅಸ್ಲಮ್ ಮುಲ್ಲಾ, ಇರ್ಷಾದ್ ಮೊಮೀನ್, ಶಶಿಉಲ್ಲಾ, ಇಮ್ರಾನ್ ಡಾಂಗೆ ಹಾಗೂ ಮಹೇಶ್ ಕರಮಡಿ, ದತ್ತ ಜಾದವ್ , ಮಜ್ಜಿದ್ ಡಾಂಗೆ, ಅನಿಲ ಕೊರವಿ,ರಿತೇಶ್ ಆವಳೆ, ಮಹೇಶ ಕುಲಗುಡೆ, ಶಿವು ಕೋಳಿ,ಬಿ.ಎಂ ಮಾಳಿ, ಉಮರ್ ಖಾನ್, ಎನ್ ವಿ, ಮಠದಕರ, ಬಿ.ಎಸ್. ಮುತ್ತೂರ, ಎಂ ಬಿ ಪಟ್ಟಣ, ಎಂ.ಬಿ ಹಡಾಡಿ, ಸುನಿತಾ ಪಾಟೀಲ್ ಹಾಗೂ ಇತರರು ಇದ್ದರು.

ಶಾಂತಿ ರೀತಿಯಿಂದ ಮೊಹರಂ ಆಚರಿಸಿ: ಮಠಪತಿ

ಯರಗಟ್ಟಿ: ಹಿಂದೂ ಮುಸ್ಲಿಂ ಬಾಂಧವರ ಭಾವೈಕ್ಯ ಸಾರುವ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿ ರೀತಿಯಿಂದ ಆಚರಿಸ ಬೇಕು ಎಂದು ಸಿಪಿಐ ಐ ಎಂ. ಮಠಪತಿ ಹೇಳಿದರು.

ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಯಲ್ಲಿ ನಡೆದ ಶಾಂತಿ ಸಭೆ ಉದ್ದೇಶಿಸಿ ಮಾತನಾ ಡಿದರು.

ಈ ವೇಳೆ ಇಮಾಮಸಾಬ ಹುಸೇನನಾಯ್ಕರ, ವಿಠ್ಠಲಗೌಡ ದೇವರಡ್ಡಿ, ಭಾಸ್ಕರ ಹಿರೇಮೆತ್ರಿ, ಮಲಿಕಸಾಬ ಬಾಗವಾನ, ಮುದಕಪ್ಪ ತಡಸಲೂರ, ಮದಾರಸಾಬ ಚಾಂಖಾನ್ನವರ, ಫಿರೋಜ ಖಾದ್ರಿ, ರಫೀಕ ಡಿಕೆ, ಅಮೀರ ದೇವಡಿ, ದೂದನಾನಾ ಪತ್ತುನಾಯ್ಕರ, ಶಿವಾನಂದ ಬಳಿಗಾರ, ಕೆ. ಎಫ್. ನಾದಾಫ, ಸಲಿಂಬೇಗ ಜಮಾದಾರ, ನಜೀರ ನದಾಫ, ಪಿಎಸ್‌ಐ ಎಲ್.ಬಿ. ಮಾಳಿ, ಪ್ರೊಫೆಸರ್ ಮಾರುತಿ ಲಮಾಣಿ, ಎಎಸ್‌ಐ ಬಿ ಎಸ್ ರಂಗಣ್ಣವರ, ಪಿಸಿಗಳಾದ ಎಂ. ಬಿ. ಸಣ್ಣನಾಯ್ಕ, ರಮೇಶ ತೇಲಿ, ವೈ. ಎನ್. ಮೇಟ್ಯಾಲ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಹಿರಿಯರು ಇದ್ದರು.

ಅಂಗನವಾಡಿ ಕಾರ್ಯಕರ್ತೆಯರ ಕಾರ್ಯ ಶ್ಲಾಘನೀಯ

ಚನ್ನಮ್ಮನ ಕಿತ್ತೂರ: ಸರ್ಕಾರದ ಯೋಜನೆಗಳನ್ನು ಹೆಣ್ಣು ಮಕ್ಕಳಿಗೆ ತಲುಪಿಸುವ ಮೂಲಕ ಅವರನ್ನು ರಾಷ್ಟ ನಿರ್ಮಾಣ ಕಾರ್ಯದಲ್ಲಿ ಮುಂಚೂಣಿಯಲ್ಲಿ ತರುವಲ್ಲಿ ಅಂಗನವಾಡಿಯಕಾರ್ಯಕರ್ತೆಯರ ಕಾರ್ಯ ಶ್ಲಾಘನೀಯ ಎಂದು ಇಟಗಿ ಜನತಾ ಶಿಕ್ಷಣ ಪ್ರಸಾರ ಸಮಿತಿಯ ಬಿ.ಎಂ.ಸಾಣಿಕೊಪ್ಪ, ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಆರ್. ಬಿ. ಹುಣಶೀಕಟ್ಟಿ ಹೇಳಿದರು.

ಅವರು ಸಮೀಪದ ಇಟಗಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆಯ ವತಿಯಿಂದ ವಲಯ ಮಟ್ಟದ ಬೇಟಿ ಬಚಾವೊ ಬೇಟಿ ಪಡಾವೊ ಕಾರ್ಯಕ್ರಮದಲ್ಲಿ ಮಾತನಾಡಿ, ಉನ್ನತಸಂಸ್ಕೃತಿಯನ್ನು ಹೊಂದಿದಂತ ಭಾರತದಲ್ಲಿ ಇಂದಿಗೂ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು.



ಇಟಗಿ ವಲಯದ ಮೇಲ್ವಿಚಾರಕಿ ಜಯಶ್ರೀ ಕಾಮೋಜಿ ಮಾತನಾಡಿ, ಗ್ರಾಮೀಣ ಭಾಗದ ಕಟ್ಟಕಡೆಯ ಮಹಿಳೆಗೂ ಸರ್ಕಾರ ಹಲವು ಮಹತ್ತರ ಯೋಜನೆಗಳನ್ನು ಹಾಗೂ ಆರೋಗ್ಯ ಮತ್ತು ಕಾನೂನಿನ ಕುರಿತು ಜಾಗೃತಿ ಮೂಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ವಿದ್ಯಾರ್ಥಿನಿಯರಾದ ವರ್ಷಾ ಬೀರಣ್ಣವರ, ತನುಶ್ರೀ ಹಂಜಿ ಮಾತನಾಡಿದರು. ಶಿಕ್ಷಕ ವಿವೇಕ ಕುರಗುಂದ, ಶಿಕ್ಷಕಿ ಜಯರಾಬಿ ಕಿತ್ತೂರ, ಸವಿತಾ ಪಟ್ಟೇದ, ಗಿರಿಜಾ ಮಾಸನವರ, ಗೀತಾ ಹಂಜಿ, ಜಯಶ್ರೀ ಮಾರ್ಗನಕೊಪ್ಪ, ನಾಗವ್ವ ಯರಗಟ್ಟಿ, ಸಾವಕ್ಕ ಪಟ್ಟೇದ, ಶ್ರೀದೇವಿ ಕಳ್ಳಿ, ನಾಗಮ್ಮ ತಳವಾರ ಹಾಗೂ ಇತರರು ಇದ್ದರು.

ಇಂದು ಸತ್ಸಂಗ ಕಾರ್ಯಕ್ರಮ

ಗೋಕಾಕ: ನಗರದ ಶ್ರೀ ಬಸವಾನಂದ ವಚನಾಮೃತ ಸತ್ಸಂಗ ಬಳಗದ ಸಹಯೋಗದಲ್ಲಿ ಶ್ರೀ ಬಸವಾನಂದ ಗುರುಗಳ 75 ವರ್ಷದ ಜನ್ಮದಿನದ ಪ್ರಯುಕ್ತ 'ಒಳಗೂ ಬಯಲು, ಹೊರಗೂ ಬಯಲು, ಒಳಹೊರಗೊಂದಾದ ಬಯಲು, ಆಧ್ಯಾತ್ಮಿಕ ವಿಷಯದ ಕುರಿತು ತಕ್ಷಣವೇ ಸಾಕ್ಷಾತ್ಕಾರ ಎಂಬ ವಿಶೇಷ ಸತ್ಸಂಗ ಕಾರ್ಯಕ್ರಮ ಜೂ. 21ರಂದು ನಗರದ ಜ್ಞಾನ ಮಂದಿರದಲ್ಲಿ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ವಿಶೇಷ ಮುಖ್ಯ ತಿಥಿಗಳಾಗಿ ಖ್ಯಾತ ಚಲನಚಿತ್ರ ಹಿರಿಯ ನಟರಾದ ಶ್ರೀಧರ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅಲ್ಲದೆ ಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕರಾದ ರವೀಂದ್ರ ಸೋರಗಾಂವಿ ಅವರ ಬೆಂಗಳೂರು ತಂಡದಿಂದ ಸಂಗೀತ ಸುಮಧುರ ಸಂಗೀತ ಸೇವೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಧ್ಯಾತ್ಮಿಕ ಪ್ರವಚನಕಾರರಾದ ಬಸವಾನಂದ ಗುರುಗಳು ವಹಿಸಲಿದ್ದು, ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಅಕ್ಕಿ, ಹಳಿಯಾಳದ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕ ಅಧ್ಯಕ್ಷರಾದ ಸುಮಂಗಲ ಅಂಗಡಿ, ಮಾದಾರ ಚೆನ್ನಯ್ಯ ಸೇವಾ ಸಮಿತಿ ರಾಜ್ಯ ಉಪಾಧ್ಯಕ್ಷ ಅರುಣ ದುರ್ಯೋಧನ ಐಹೊಳೆ, ಚಿಕ್ಕೋಡಿಯ ನಿವೃತ್ತ ಉಪನ್ಯಾಸಕ ಎನ್.ವ್ಹಿ. ಸಿರಗಾಂವಕರ್, ಗೋಕಾಕದ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹಾಂತೇಶ ತಾಂವಶಿ, ಸಿರಿಗನ್ನಡ ಮಹಿಳಾ ವೇದಿಕೆ ರಾಜ್ಯಾಧ್ಯಕ್ಷರಾದ ರಜನಿ ನೀರಗ್ಯಾಳ ಸೇರಿದಂತೆ ಅನೇಕ ಉಪಸ್ಥಿತರಿರುವರು.

ಜು.22ರಿಂದ 28ರವರೆಗೆ ಸಂತಸದ ಕಾರ್ಯಕ್ರಮ

ಯರಗಟ್ಟಿ: ಬಸವೇಶ್ವರ ಅರ್ಬನ್ ಬ್ಯಾಂಕ್ ಹಾಗೂ ಶ್ರೀ ರವಿಶಂಕರ ಗುರುದೇವ ಸಂಸ್ಥೆಯ ದಿ ಆರ್ಟ್ ಆಫ್ ಲಿವಿಂಗ್ ಇವರ ಸಹಯೋಗದಲ್ಲಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ಜು 22 ರಿಂದ ಜು 28ರ ವರೆಗೆ ಬೆಳಿಗ್ಗೆ 6 ಗಂಟೆಯಿಂದ 8ಗಂಟೆಯ ವರೆಗೆ ಡಾ. ಬಿ. ಎಂ. ಪಾಟೀಲರಿಂದ ಸಂತಸದ ಕಾರ್ಯಕ್ರಮ ಹಾಗೂ ಸುದರ್ಶನ ಕ್ರಿಯಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಂಘದ ಸದಸ್ಯರಿಗೆ, ಠೇವುದಾರರಿಗೆ, ಮಹಿಳೆಯರಿಗೆ, ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಯಾವುದೇ ತರಹದ ಸೇವಾ ಶುಲ್ಕವಿರುವುದಿಲ್ಲ. ಹಾಗೂ ಇತರೆ ಆಸಕ್ತರಿಗೆ ಯಾವುದೇ ಸೇವಾ ಶುಲ್ಕ ಭರಿಸಬೇಕು ಎಂದು ಸಂಸ್ಥೆಯ ಅಧ್ಯಕ್ಷ ಮಹಾಬಳೇಶ್ವರ ಹಾದಿಮನಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಅಗ್ನಿ ಶಾಮಕದಳದಿಂದ ಜಾಗೃತಿ



ಹಲ್ಯಾಳ: ಸ್ಥಳೀಯ ಶ್ರೀ ಗುರುಸಿದ್ದೇಶ್ವರ ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಅಗ್ನಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅಗ್ನಿ ಶಾಮಕದಳದ ಸಿಬ್ಬಂದಿ ವಿಶೇಷ ಜಾಗೃತಿ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಅಗ್ನಿ ಅನಾಹುತ ಉಂಟಾದಾಗ ಗಾಬರಿಗೊಳ್ಳದೆ ಸುರಕ್ಷಿತವಾಗಿ ಹೊರಬರುವ ವಿಧಾನ, ಅಗ್ನಿ ನಂದಕಗಳ ಬಳಕೆ, ತುರ್ತು ಪರಿಸ್ಥಿತಿಯಲ್ಲಿ ನೆರವು ಪಡೆಯುವ ಕ್ರಮ ಹಾಗೂ ಜೀವ ರಕ್ಷಣೆಯ ಬಗ್ಗೆ ಮಾಹಿತಿ ನೀಡಲಾಯಿತು. ಅಲ್ಲದೇ ಬೆಂಕಿ ಅವಘಡಗಳನ್ನು ತಡೆಗಟ್ಟಲು ಶಾಲೆ ಹಾಗೂ ಮನೆಗಳಲ್ಲಿ ಅನುಸರಿಸಬೇಕಾದ ಸುರಕ್ಷತಾ ನಿಯಮಗಳ ಕುರಿತು ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಯೊಂದಿಗೆ ತಿಳಿಸಲಾಯಿತು.

ಅಗ್ನಿಶಾಮಕ ಠಾಣಾ ಅಧಿಕಾರಿ ಗೋಪಾಲ ಮಗದುಮ್, ಸಹದೇವ ಶಿಂಧೆ, ಮಲ್ಲನಗೌಡ ನಾಯಿಕ, ಅಪ್ಪಾಸಾಹೇಬ ಹೋನಕಾಂಡೆ, ವಿವೇಕ ನಾಯಿಕ, ಬಹುಸಾಹೇಬ ಪಾಟೀಲ,ಮುರಗೇಶ ಗುಮಚಿ,ಆನಂದ ಅವಟಿ,ವಿನಾಯಕ ಆಸಂಗಿ ಕಿರಣಕುಮಾರ ಉಳ್ಳಾಗಡ್ಡಿ ಮತ್ತು ಇತರರಿದ್ದರು.

ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ

ಹಿರೇಬಾಗೇವಾಡಿ: ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ಹಿರೇಬಾಗೇವಾಡಿ ಪಟ್ಟಣದಲ್ಲಿ ಶನಿವಾರ ಇಲ್ಲಿಯ ಪೊಲೀಸ್ ಠಾಣೆಯ ಸಿಬ್ಬಂದಿ ವತಿಯಿಂದ ಬೈಕ್ ರ್ಯಾಲಿ ಮೂಲಕ ಜಾಗೃತಿ ಮೂಡಿಸಲಾಯಿತು.

ಇಲ್ಲಿಯ ಬಸವನಗರದ ಪೆಟ್ರೋಲ್ ಪಂಪ್ ದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರ್ಯಾಲಿ ಬಸವೇಶ್ವರ ವೃತ್ತದಲ್ಲಿ ಸಂಪನ್ನಗೊಂಡಿತು.

ದ್ವಿಚಕ್ರವಾಹನ ಸವಾರರನ್ನು ತಡೆದು ಗುಲಾಬಿ ಹೂವು ನೀಡಿ ಹೆಲ್ಮೆಟ್ ಧರಿಸುವುದರ ಮಹತ್ವ ತಿಳಿಸಲಾಯಿತು. ಜೊತೆಗೆ ಸ್ವಯಂ ಪ್ರೇರಿತವಾಗಿ ಹೆಲ್ಮೆಟ್ ಧರಿಸಿ ಸಂಚರಿಸುವ ವಾಹನ ಸವಾರರನ್ನು ಪ್ರಶಂಸನಾ ಪತ್ರ, ಸಿಹಿ ಮತ್ತು ಗೌರವ ಸೆಲ್ಯೂಟ್ ನೀಡಿ ಗೌರವಿಸಲಾಯಿತು.

ಅಪಘಾತಗಳು ಹೆಚ್ಚು ಸಂಭವಿಸುವ ಬಡೆಕೊಳ್ಳ ಮಠ ಕ್ರಾಸ್ ಮತ್ತು ಸುವರ್ಣಸೌಧದ ಬಳಿಯ ಹೆದ್ದಾರಿಯಲ್ಲಿ ವಾಹನ ಸವಾರರಿಗೆ ಜಾಗೃತಿ ಮೂಡಿಸಲಾಯಿತು.

ಬೆಳಗಾವಿ ಗ್ರಾಮೀಣ ಎಸಿಪಿ ಗಂಗಾಧರ ಬಿ.ಎಂ , ಸಿಪಿಐ ಸುಂದರೇಶ ಹೊಳೆಣ್ಣವರ, ಪಿಎಸ್‌ಐಗಳಾದ ಅವಿನಾಶ ಯಾರಗೊಪ್ಪ, ಬಿ.ಕೆ. ಮಿಟಗಾರ ಹಾಗೂ ಪೊಲೀಸ್ ಠಾಣೆಯ ಸರ್ವ ಸಿಬ್ಬಂದಿ ಉಪಸ್ಥಿತರಿದ್ದರು.



ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಬೆಳಗಾವಿ ಜಿಲ್ಲಾ ಆಯುಷ ಇಲಾಖೆ ವತಿಯಿಂದ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಜೂನ್ 21 ರಂದು ಬೆಳಿಗ್ಗೆ 6 ಗಂಟೆಗೆ ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಘನ ಉಪಸ್ಥಿತಿವಹಿಸುವರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬೆಳಗಾವಿ ಗ್ರಾಮೀಣ (ವಿಧಾನಸಭೆ) ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು. ಟಿ. ಖಾದರ ಮುಖ್ಯ ಅತಿಥಿಯಾಗಿ ಆಗಮಿಸುವರು.

ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ನವದೆಹಲಿ-2 ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಬರಮಗೌಡ ಕಾಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಅಧ್ಯಕ್ಷ ಬರಮಣ್ಣ ಉಪ್ಪಾರ ವಿಶೇಷ ಆಮಂತ್ರಿತರಾಗಿ ಆಗಮಿಸುವರು.

> ▶▶ ಜೂ. 21 ರಂದು ಬೆಳಿಗ್ಗೆ 6 ಗಂಟೆಗೆ ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಯೋಗ ದಿನ

ರಾಜ್ಯಸಭೆ ಸಂಸದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಬೆಳಗಾವಿ ಲೋಕಸಭಾ ಸಂಸದ ಜಗದೀಶ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಗೌರವಾನ್ವಿತ ಅತಿಥಿಗಳಾಗಿ ಆಗಮಿಸುವರು. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಕ್ಯಾಂಪಸ್ ಸಂದರ್ಶನದಲಿ 480 ವಿದ್ಯಾರ್ಥಿಗಳು ಆಯ್ಕೆ



ಅಥಣಿ: ಪಟ್ಟಣದ ಶಂಕರ ನಗರದ ಶ್ರೀ ಸಾಯಿ ಜ್ಯೋತಿ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಬೆಂಗಳೂರಿನ ಖ್ಯಾತ ಅಪೋಲೊ ಹಾಸ್ಪಿಟಲ್ ಸಹಯೋಗದೊಂದಿಗೆ ಬೃಹತ್ ಕ್ಯಾಂಪಸ್ ಸಂದರ್ಶನ ನಡೆಯಿತು. ಈ ಸಂದರ್ಶನದಲ್ಲಿ ಪ್ಯಾರಾಮೆಡಿಕಲ್ ಹಾಗೂ ನರ್ಸಿಂಗ್ ವಿಭಾಗದ ಸುಮಾರು 480 ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದು ಕಠಿಣ ಆಯ್ಕೆ ಪ್ರಕ್ರಿಯೆಯ ನಂತರ ಅಥಣಿಯ ಶ್ರೀ ಸಾಯಿ ಜ್ಯೋತಿ ಪ್ಯಾರಾಮೆಡಿಕಲ್ ಕಾಲೇಜು ಹಾಗೂ ಅಂಕಲಿಯ ಶ್ರೀ ಸಾಯಿ ಪ್ಯಾರಾಮೆಡಿಕಲ್ ಕಾಲೇಜಿನ ಒಟ್ಟು 42 ವಿದ್ಯಾರ್ಥಿಗಳು ಅಪೊಲೊ ಹಾಸ್ಪಿಟಲ್‌ಗೆ ಆಯ್ಕೆಯಾಗಿದ್ದಾರೆ. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಮಹೇಶ ರೆಂಡಾಳೆ,ಸಿಬ್ಬಂದಿಗಳಾದ ಚಿದಾನಂದ ಕೊಳಂಬಿ,ಅಭಿಜಿತ ಗಾಯಕ್ವಾಡ,ಅಜಾರು ಜಮಾದಾರ,ಸುಹಾಸಿನಿ ಲಟ್ಟಿ,ಐಶ್ವರ್ಯ ಬಿರುನಗಿ,ಅಪೋಲೋ ಹಾಸ್ಪಿಟಲ್ ಸಿಬ್ಬಾದಿಯಾದ ಸುನೀಲ ಬಂಡಾರೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರಥಮ ಪುಣ್ಯಸ್ಮರಣೆ ನಾಳೆ

ಚಿಕ್ಕೋಡಿ: ತಾಲೂಕಿನ ಮಜಲಟ್ಟಿ ಗ್ರಾಮದ ಸದ್ಗುರು ಕಲೇಶ್ವರ ಅಲ್ಲಮಪ್ರಭು ಮಂದಿರದಲ್ಲಿ ಜೂ.22ರಂದು ಲಿಂ.ಸದ್ಗುರು ಬಸವಪ್ರಭು ಮಹಾರಾಜ ಪ್ರಥಮ ಪುಣ್ಯ ಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9 ಗಂಟೆಗೆ ವಾದ್ಯ ಹಾಗೂ ಕುಂಭಮೇಳದೊಂದಿಗೆ ಗ್ರಾಮದ ಬೀದಿಗಳಲ್ಲಿ ಸದ್ಗುರುಗಳ ಭಾವಚಿತ್ರದ ಮೆರವಣಿಗೆ ನಡೆಯುವುದು. 11ಗಂಟೆಗೆ ಮಹಾತ್ಮರಿಂದ ಆಶೀರ್ವಚನ ನಿಡಸೋಶಿಯ ದುರದುಂಡೀಶ್ವರಮಠದ ಡಾ.ಶಿವಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಚಿಕ್ಕೋಡಿ ಸಂಪಾದನ ಚರಮೂರ್ತಿಮಠದ ಸಂಪಾದನ ಸ್ವಾಮೀಜಿ ನೇತೃತ್ವ ವಹಿಸುವರು. ಚೈತನ್ಯ ಮಹಾರಾಜರು ನಿರಂಜನ ಮಠ ಡವಳಿ, ಅದಿತ್ಯನಾಥ ಮಹಾರಾಜರು ಮೌಜೆ ವಡಗಾಂವ, ಸಾವಿತ್ರಮ್ಮಾ ಬಿ ಪಾಟೀಲ ಗೌರವ ಉಪಸ್ಥಿತರಿರುವರು. ಸದ್ಗುರುಗಳ ಶಿಷ್ಯ ಬಳಗ ಕರ್ನಾಟಕ, ಮಹಾರಾಷ್ಟ್ರದ ಸದ್ಗುರುಗಳ ಶಿಷ್ಯ ಬಳಗ ಸದ್ಗುರು ಪ್ರಥಮ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ವಿವಿಧ ಗ್ರಾಮದ ಭಜನಾ ಕಲಾವಿದರು ಭಜನಾಸೇವೆ ನಡೆಸಿಕೊಡುವರೆಂದು ಸಂಘಟಕರಾದ ಶರತ ಬಿ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

11 ತಿಂಗಳ ಕಂದನಿಗೆ ತುರ್ತು ಶಸ್ತ್ರಚಿಕಿತ್ಸೆ: ನೆರವಿಗೆ ಮೊರೆ

ಬೆಳಗಾವಿ: ಹುಟ್ಟುತ್ತಲೇ ಅನ್ನನಾಳದ ಸಮಸ್ಯೆಯಿಂದ ಬಳಲುತ್ತಿದ್ದ ಹನ್ನೊಂದು ತಿಂಗಳ ಗಂಡು ಮಗುವಿನ ಆರೋಗ್ಯ ಸ್ಥಿತಿ ಮತ್ತೆ ಗಂಭೀರವಾಗಿದ್ದು, ತುರ್ತು ಶಸ್ತ್ರಚಿಕಿತ್ಸೆ ಅಗತ್ಯವಾಗಿದೆ. ಉಸಿರಾಟದ ತೊಂದರೆಯಿಂದ ಆಸ್ಪತ್ರೆಗೆ ದಾಖಲಾಗಿರುವ ಮಗುವಿನ ಚಿಕಿತ್ಸೆಗೆ ಅಗತ್ಯವಿರುವ ಸಂಪೂರ್ಣ ವೆಚ್ಚ ಭರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಪೋಷಕರು ಸಹೃದಯ ದಾನಿಗಳ ನೆರವಿಗಾಗಿ ಮನವಿ ಮಾಡಿದ್ದಾರೆ.ಬೆಳಗಾವಿಯ ಬಡ ಮಧ್ಯಮ ವರ್ಗದ ಕುಟುಂಬದ ಸಲ್ಮಾನ್ ಅಬ್ದುಲ್ ಅಹ್ಮದ್ ಶಾಹ್ ಅವರ ಪುತ್ರ ಪ್ರಸ್ತುತ ಬೆಳಗಾವಿಯ ಕೆಎಲ್ ಇ ಪ್ರಭಾಕರ್ ಕೋರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಹುಟ್ಟಿದ ಕೆಲವೇ ದಿನಗಳಲ್ಲಿ ಅನ್ನನಾಳದ ಸಮಸ್ಯೆಗೆ ಮೊದಲ ಬಾರಿಗೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಈ ಕಂದನಿಗೆ ಇದೀಗ ಅದೇ ಸಮಸ್ಯೆ ಮತ್ತೆ ಉಲ್ಬಣಗೊಂಡಿದ್ದು, ವೈದ್ಯರು ಮತ್ತೊಮ್ಮೆ ತುರ್ತು ಶಸ್ತ್ರಚಿಕಿತ್ಸೆ ಅಗತ್ಯವಿದೆ ಎಂದು ತಿಳಿಸಿದ್ದಾರೆ. ಕರ್ನಾಟಕ ಸರ್ಕಾರದ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ 50 ಸಾವಿರ ರೂಪಾಯಿಗಳ ಪೂರ್ವಾನುಮೋದನೆ ದೊರೆತಿದೆ. ಆದಾಗ್ಯೂ, ಕನ್ಸಲ್ಟೆಂಟ್ ಪೀಡಿಯಾಟ್ರಿಕ್ ಸರ್ಜನ್ ಡಾ. ಸ್ವಪ್ನಿಲ್ ಎ. ಪ್ರಭುಶೆಟ್ಟಿ ಅವರ ನೇತೃತ್ವದಲ್ಲಿ ನಡೆಯಲಿರುವ ಶಸ್ತ್ರಚಿಕಿತ್ಸೆ ಮತ್ತು ಮುಂದಿನ ಚಿಕಿತ್ಸಾ ವೆಚ್ಚಗಳಿಗೆ ಇನ್ನೂ ಸುಮಾರು 50 ಸಾವಿರ ರೂಪಾಯಿಗಳ ಅಗತ್ಯವಿದೆ ಎಂದು ಕುಟುಂಬದವರು ತಿಳಿಸಿದ್ದಾರೆ. ಮಗುವಿನ ಜೀವ ಉಳಿಸಲು ಅಗತ್ಯವಿರುವ ಹಣವನ್ನು ಸಂಗ್ರಹಿಸುವ ಉದ್ದೇಶದಿಂದ ತಂದೆ ಸಲ್ಮಾನ್ ಅವರು ದಾನಿಗಳು ಹಾಗೂ ಸಾರ್ವಜನಿಕರಲ್ಲಿ ಆರ್ಥಿಕ ನೆರವಿಗಾಗಿ ಮನವಿ ಮಾಡಿದ್ದಾರೆ. ನೆರವು ನೀಡಲು ಇಚ್ಛಿಸುವವರು ಮೊಬೈಲ್ ಸಂಖ್ಯೆ 9538927053 ಅನ್ನು ಸಂಪರ್ಕಿಸಿ ಆನ್‌ಲೈನ್ ಮೂಲಕ ಸಹಾಯಧನ ಕಳುಹಿಸಬಹುದಾಗಿದೆ.

ಎಂಇಎಸ್ ಪ್ರತಿಭಟನೆಗೆ ಅವಕಾಶ ನೀಡದಂತೆ ಕರವೇ ಆಗ್ರಹ

ಖಾನಾಪುರ: ಕರ್ನಾಟಕದಲ್ಲಿ ಕನ್ನಡ ಭಾಷೆಯ ಅನುಷ್ಠಾನ ವಿರೋಧಿಸಿ ನಾಡದ್ರೋಹಿ ಎಂಇಎಸ್ ಜೂ.22ರಂದು ಆಯೋಜಿಸಿರುವ ಪ್ರತಿಭಟನೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು ಎಂದು ಕರವೇ ತಾಲೂಕು ಘಟಕದ ಅಧ್ಯಕ್ಷ ವಿಠ್ಠಲ ಹಿಂಡಲಕರ ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ. ಶನಿವಾರ ಪಟ್ಟಣದಲ್ಲಿ ತಹಶೀಲ್ದಾರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ''ಕನ್ನಡದ ಅನ್ನವನ್ನು ಉಂಡು ಕನ್ನಡಕ್ಕೆ ದ್ರೋಹ ಬಗೆಯುತ್ತಿರುವ ಎಂಇಎಸ್ ಸಂಘಟನೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಕರವೇ ಕಳೆದ ಹಲವು ದಿನಗಳಿಂದ ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತ ಬಂದಿದೆ. ಸರ್ಕಾರ ಎಂಇಎಸ್ ನಿಷೇಧಿಸದಿದ್ದರೆ ಇಂದು ಅವರು ಕನ್ನಡದ ವಿರುದ್ಧ ಧ್ವನಿ ಎತ್ತುವ ದಿನಗಳು ಬರುತ್ತಿರಲಿಲ್ಲ. ಇನ್ನಾದರೂ ಸರ್ಕಾರ ಬೆಳಗಾವಿ ಜಿಲ್ಲೆಯಲ್ಲಿ ಎಂಇಎಸ್ ಸಂಘಟನೆಯನ್ನು ನಿಷೇಧಿಸುವ ಕುರಿತು ಗಂಭೀರ ಚಿಂತನೆ ನಡೆಸಬೇಕು'' ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಕರವೇ ಕಾರ್ಯಕರ್ತರು ಇದ್ದರು.

ಜೂ.30ರಂದು ಸಂದರ್ಶನ

ಬೆಳಗಾವಿ: ನಗರದ ಕಾ.ರಾ.ವಿ ಆಸ್ಪತ್ರೆಯಲ್ಲಿನ ಅವಶ್ಯಕವಿರುವ 7 ತಜ್ಞ ವೈದ್ಯರುಗಳನ್ನು ಮೆರಿಟ್ ಕಮ್ ರೋಸ್ಟರ್ ಮೂಲಕ ಗುತ್ತಿಗೆ ಆಧಾರದ ಮೇಲೆ (ಅಂಶಕಾಲಿಕ ನೇಮಕಾತಿ) ನೇರ ಸಂದರ್ಶನದ ಮೂಲಕ ನೇಮಕ ಮಾಡಿಕೊಳ್ಳಲಾಗುವುದು.ಜೂನ್ 30 ರಂದು ಬೆಳಿಗ್ಗೆ 10.30 ರಿಂದ ಸಂಜೆ 4ಗಂಟೆಯವರಗೆ ಬೆಳಗಾವಿಯ ಕಾ.ರಾ.ವಿ ಆಸ್ಪತ್ರೆಯಲ್ಲಿ ನೇರ ಸಂದರ್ಶನ ನಡೆಯಲಿದ್ದು, ಆಸಕ್ತ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ ಎಂದು ಕಾ.ರಾ.ವಿ ಆಸ್ಪತ್ರೆ ವೈದ್ಯಕೀಯ ಅಧಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೋಕಾಕ: ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಪದವಿ ಪೂರ್ವ ಮಹಾವಿದ್ಯಾಲಯದ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು. ಮೆಳವಂಕಿ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಮೀನಾಕ್ಷಿ ಖಣದಾಳಿ ಸೇರಿದಂತೆ ಮತ್ತಿತರರು ಇದ್ದರು.

ಶುದ್ಧ ಕುಡಿಯುವ ನೀರಿನ ಘಟಕಗಳ ಉದ್ಘಾಟನೆ

ಚಿಕ್ಕೋಡಿ: ಶುದ್ಧ ಕುಡಿಯುವ ನೀರು ಲಭ್ಯವಿದ್ದಲ್ಲಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಮಕ್ಕಳಿಗೆ ಸಾಧ್ಯವಿದೆ. ಶಾಲಾ ಕಾಲೇಜುಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಹೆಚ್ಚಬೇಕಿದೆ ಎಂದು ಚಿಕ್ಕೋಡಿ ಪಟ್ಟಣದ ಸಿಟಿಇ ಸಂಸ್ಥೆಯ ಉಪಾಧ್ಯಕ್ಷ ವಿಜಯ ಮಾಂಜರೇಕರ ಹೇಳಿದರು.ಪಟ್ಟಣದ ಸಿಟಿಇ ಸಂಸ್ಥೆಯ ಡಿ.ಕೆ. ಶಹಾ ಕನ್ನಡ ಮತ್ತು ಮರಾಠಿ ಪ್ರಾಥಮಿಕ ಶಾಲೆ ಮತ್ತು ಆರ್.ಎಂ. ಬಾಲಿಕಾ ಪ್ರೌಢ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಶುದ್ಧ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ದೊರೆಯಬೇಕಿದೆ. ಪಠ್ಯದೊಂದಿಗೆ ಆಟಗಳಲ್ಲಿಯೂ ಮಕ್ಕಳು ಭಾಗವಹಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿ ಹೆಚ್ಚಿ ಪದವಿ ಪಡೆದುಕೊಂಡ ಸ್ವಾತಿ ಜೋಶಿ, ರಾಷ್ಟ್ರ ಮಟ್ಟದಲ್ಲಿ ಗೋಲ್ಡನ್ ವಿರೋ ಪ್ರಶಸ್ತಿ ಪಡೆದ ಶ್ರಾವಣ ಅಜ್ಜನಕಟ್ಟಿ, ನಿವೃತ್ತ ಶಿಕ್ಷಕ ಹೆಚ್ ಎಸ್ ಕುಲಕರ್ಣಿ ಅವರನ್ನು ಸಂಸ್ಥೆಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಿಟಿಇ ಸಂಸ್ಥೆಯ ಅಧ್ಯಕ್ಷ ಸ ಬಿ ಕುಲಕರ್ಣಿ, ನಿರ್ದೇಶಕರಾದ ಅರುಣ ಕುಲಕರ್ಣಿ, ಸತೀಶ ಕುಲಕರ್ಣಿ, ಓಂಕಾರ ಕುಲಕರ್ಣಿ, ಆಡಳಿತಾಧಿಕಾರಿ ಮಿಥುನ ದೇಶಪಾಂಡೆ, ಶೋಭಾ ಮಾಂಜರೇಕರ, ಸಂಕೇತ ಮಾಂಜರೇಕರ, ಗೌರಿ ಮಾಂಜರೇಕರ ಇತರರು ಇದ್ದರು.



ಚಿಕ್ಕೋಡಿ: ಪಟ್ಟಣದ ಸಿಟಿಇ ಸಂಸ್ಥೆಯ ಡಿ.ಕೆ. ಶಹಾ ಕನ್ನಡ ಮತ್ತು ಮರಾಠಿ ಪ್ರಾಥಮಿಕ ಶಾಲೆ ಮತ್ತು ಆರ್.ಎಂ. ಬಾಲಿಕಾ ಪ್ರೌಢ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಶುಕ್ರವಾರ ಗಣ್ಯರು ಉದ್ಘಾಟಿಸಿದರು.

ಸಂಗಳ ಪಿಕೆಪಿಎಸ್ ವಿರುದ್ಧ ಮೌಖಿಕ ದೂರು ಸಲ್ಲಿಸಿದ ಗ್ರಾಮಸ್ಥರು

ತೂಕದಲ್ಲಿ ಗೋಲಮಾಲ್!

ಸುರೇಬಾನ: ವ್ಯಾಪ್ತಿಯ ಸಮೀಪದ ಸಂಗಳ ಪಿಕೆಪಿಎಸ್ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಅಕ್ಕಿಯನ್ನು ಕಡಿಮೆ ತೂಕದಲ್ಲಿ ವಿತರಿಸಲಾಗುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಮೌಖಿಕ ದೂರು ನೀಡಿದ ಘಟನೆ ಶನಿವಾರ ನಡೆದಿದೆ.

ಗ್ರಾಮಸ್ಥರ ಆರೋಪದ ಪ್ರಕಾರ, ಸರ್ಕಾರ ನಿಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆ ತೂಕದ ಅಕ್ಕಿಯನ್ನು ಫಲಾನುಭವಿಗಳಿಗೆ ವಿತರಿಸಲಾಗುತ್ತಿದ್ದು, ಈ ಕುರಿತು ಸಿಬ್ಬಂದಿಯ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದರಿಂದ ಅಸಮಾಧಾನಗೊಂಡ ಸಾರ್ವಜನಿಕರು ಇಲಾಖೆಯ ಅಧಿಕಾರಿಗಳಿಗೆ ಮೌಖಿಕ ದೂರು ಸಲ್ಲಿಸಿದರು.

ದೂರಿನ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ರಾಮದುರ್ಗ ಆಹಾರ ಇಲಾಖೆ ಅಧಿಕಾರಿಗಳು ನ್ಯಾಯಬೆಲೆ ಅಂಗಡಿಯಲ್ಲಿ ಪರಿಶೀಲನೆ ನಡೆಸಿದರು.

ಪಡಿತರ ವಿತರಣೆಯ ದಾಖಲೆಗಳು, ತೂಕದ ಯಂತ್ರ ಹಾಗೂ ದಾಸ್ತಾನು ವಿವರಗಳನ್ನು ಪರಿಶೀಲಿಸಿದ ಅಧಿಕಾರಿಗಳು ಸಿಬ್ಬಂದಿ ಹಾಗೂ ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಿ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೆ ಯಾವುದೇ ಅನುಮಾನಗಳು ಅಥವಾ ಸಮಸ್ಯೆಗಳಿದ್ದಲ್ಲಿ ಇಲಾಖೆಗೆ ನೇರವಾಗಿ ಮಾಹಿತಿ ನೀಡುವಂತೆ ತಿಳಿಸಿದರು. ಅಲ್ಲದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ವಿತರಣೆಯನ್ನು ಪಾರದರ್ಶಕವಾಗಿ ನಡೆಸಬೇಕು ಹಾಗೂ ಫಲಾನುಭವಿಗಳಿಗೆ ಸರ್ಕಾರ ನಿಗದಿಪಡಿಸಿದ ಪ್ರಮಾಣದಂತೆ ಆಹಾರ ಧಾನ್ಯಗಳನ್ನು ವಿತರಿಸಬೇಕು ಎಂದು ರಾಮದುರ್ಗ ಫುಡ್ ಶಿರಸ್ತೆದಾರ ಈಶ್ವರ ಮಾರ್ತಂಡನವರ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



> ಪರಿಶೀಲನೆಯ ಬಳಿಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ನ್ಯಾಯಬೆಲೆ ಅಂಗಡಿಗಳ ಕಾರ್ಯವೈಖರಿಯಲ್ಲಿ ಪಾರದರ್ಶಕತೆ ಮತ್ತು ಸಾರ್ವಜನಿಕರ ವಿಶ್ವಾಸ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ.
> ■ **ಸಂಜೀವ ಹಮ್ಮನವರ,** ನಿರೀಕ್ಷಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ರಾಮದುರ್ಗ.

> ತೂಕದಲ್ಲಿ ಲೋಪದೋಷಗಳು ಆಗಿವೆ ಎಂಬ ಆರೋಪವಿದೆ. ತೂಕದಲ್ಲಿ ವ್ಯತ್ಯಾಸವಾಗಿದ್ದರೆ, ಅದನ್ನು ಆಯಾ ಫಲಾನುಭವಿಗಳಿಗೆ ಮರಳಿ ವಿತರಿಸುತ್ತೇವೆ.
> ■ **ಬಸನಗೌಡ.ಆರ್.ಪಾಟೀಲ, ಅಧ್ಯಕ್ಷರು ಪಿಕೆಪಿಎಸ್ ಸೊಸೈಟಿ, ಸಂಗಳ.**

ಗ್ರಾಮಸ್ಥರು ಸಹ ವದಂತಿಗಳಿಗೆ ಕಿವಿಗೊಡದೆ, ತೂಕದ ಬಗ್ಗೆ ಅನುಮಾನವಿದ್ದಲ್ಲಿ ಸ್ಥಳದಲ್ಲಿಯೇ ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದು ಅಧಿಕಾರಿಗಳು ಬುದ್ಧಿವಾದ ಹೇಳಿದರು.

ಈ ವೇಳೆ ಆನಂದ ಕುದರಿ, ಯಲ್ಲಪ್ಪ ಹಂಪಿಹೊಳಿ, ಶೇಖಪ್ಪ ಯಡಹಳ್ಳಿ, ಚನ್ನಪ್ಪಗೌಡ ಪಾಟೀಲ, ಮಲ್ಲನಗೌಡ ಪಾಟೀಲ, ಬಸವರಾಜ ಬಳಗಾನೂರ, ಚಂದ್ರಯ್ಯ ಕಪ್ಪಸಗಟ್ಟಿ, ಅಬ್ದುಲ್ ಅತ್ತಾರ, ಮಲ್ಲಪ್ಪ ಹೂಲಿ, ರಾಚಪ್ಪ ಅವರಾದಿ ಮತ್ತಿತರರು ಇದ್ದರು.

ವಿದ್ಯುತ್ ನಿಗಮ ಖಾಸಗೀಕರಣ ತಪ್ಪಿಸಲು ಪ್ರಯತ್ನಿಸುವೆ: ವೈದ್ಯ

ಸವದತ್ತಿ: ರಾಜ್ಯದಲ್ಲಿ ವಿದ್ಯುತ್ ಖಾಸಗಿಕರಣ ಪ್ರಕ್ರಿಯೆಯನ್ನು ಕೈಬಿಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕ ಘಟಕ ಸವದತ್ತಿ ಮತ್ತು ಹೆಸ್ಕಾಂ ಇಲಾಖೆಯ ನೌಕರರು ಪ್ರತಿಭಟನೆ ನಡೆಸಿದರು. ಇಲಾಖೆಯ ಕಾರ್ಯಾಲಯದಿಂದ ಪ್ರತಿಭಟನಾ ಮೆರವಣಿಗೆ ಪ್ರಾರಂಭವಾಗಿ ಎಸ್ ಎಲ್ ಓ ಕ್ರಾಸ್ ಮುಖಾಂತರ ತಹಶೀಲ್ದಾರ್ ಕಚೇರಿಗೆ ತೆರಳಿತು

ಮನವಿ ಸಲ್ಲಿಸುವ ಸಂದರ್ಭದಲ್ಲಿ ಶಾಸಕ ವಿಶ್ವಾಸ ವೈದ್ಯರವರು ಆಗಮಿಸಿ ಪ್ರತಿಭಟನೆಗೆ ಸ್ಪಂದಿಸಿದರು. ಮುಖ್ಯಮಂತ್ರಿಗಳಿಗೆ ತಿಳಿಸಿ ಈ ವಿದ್ಯುತ್ ನಿಗಮವನ್ನು ಸರ್ಕಾರದ ಸೌಮ್ಯತ್ವದಲ್ಲಿ ಉಳಿಯುವಂತೆ ಮಾಡಲು ಶ್ರಮಿಸುವುದಾಗಿ ತಿಳಿಸಿದರು.

ಇದಕ್ಕೂ ಪೂರ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಮುಖಂಡರಾದ ಸುರೇಶ ಸಂಪಗಾಂವಿ ಮಾತನಾಡಿ, ವಿದ್ಯುತ್ ನಿಗಮವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಖಾಸಗೀಕರಣ ಮಾಡುತ್ತಿವೆ. ಇದರಿಂದ ಇಲಾಖೆಯ ನೌಕರಿಗಷ್ಟೇ ಅಲ್ಲದೇ ರೈತರಿಗೆ ಹಾಗೂ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗಲಿದೆ ಎಂದರು. ವಿದ್ಯುತ್ ಪ್ರಸರಣ ನಿಗಮವನ್ನು ಖಾಸಗೀಕರಣ ಮಾಡುವ ವಿಚಾರ ಮುಂದುವರೆದರೆ ನಾವು ಉಗ್ರವಾದ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಸಿದರು

ಕರ್ನಾಟಕ ರಕ್ಷಣಾ ವೇದಿಕೆಯ ಮುಖಂಡರಾದ ಮಹದೇವ್ ಕಿಚಡಿ, ನ್ಯಾಯವಾದಿ ಎಂ.ಎನ್. ಮುತ್ತಿನ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಸ್ಥಳೀಯ ವಿವಿಧ ಸಂಘಟನೆಗಳ ಮುಖಂಡರು ಹಾಗೂ ರೈತ ಸಂಘಟನೆಗಳ ಮುಖಂಡರು ಮತ್ತು ವಿದ್ಯುತ್ ಪ್ರಸರಣ ನಿಗಮದ ಸಿಬ್ಬಂದಿಗಳು ಪಾಲ್ಗೊಂಡಿದ್ದರು.



ಮಾದಕ ವ್ಯಸನ ಮುಕ್ತ ಭಾರತಕ್ಕೆ ಎಲ್ಲರೂ ಶ್ರಮಿಸೋಣ:ರಾಜೀವ

ಮೂಡಲಗಿ: ಮಾದಕ ವಸ್ತುಗಳ ದಾಸರಾಗಿ ಅದನ್ನು ಪಡೆದುಕೊಳ್ಳಲು ತಮ್ಮಲ್ಲಿ ಹಣ ಇಲ್ಲದೇ ಇದ್ದಾಗ ಹಣಕ್ಕಾಗಿ ಕೊಲೆ ಸುಲಿಗೆ ದರೋಡೆ ಕಳ್ಳತನ ಅತ್ಯಾಚಾರದಂತಹ ಪ್ರವೃತ್ತಿಗಳಲ್ಲಿ ತೊಡಗುತ್ತಿರುವುದು ವಿಷಾದನೀಯ ಇಂತಹ ಮಾದಕ ವ್ಯಸನದಿಂದ ದೂರ ಇರಬೇಕು ಎಂದು ಮೂಡಲಗಿ ಪೊಲೀಸ್ ಠಾಣೆ ಪ್ರೊಬೆಸನರಿ ಪಿಎಸ್ಐ ರಾಜೀವ ಪೂಜೇರಿ ಹೇಳಿದರು.

ಪಟ್ಟಣದ ಆರ್‌ಡಿಎಸ್ ವಿಜ್ಞಾನ, ವಾಣಿಜ್ಯ, ಕಲಾ, ಪಿಯು ಕಾಲೇಜು ಮತ್ತು ಮೂಡಲಗಿ ಪೋಲಿಸ್ ಠಾಣೆ ವತಿಯಿಂದ ಆಯೋಜಿಸಿದ ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳಾದ ಡ್ರಗ್ಸ್, ಗಾಂಜಾ, ಅಫೀಮ್, ಸಿಗರೇಟು, ತಂಬಾಕು ಬಳಿಕೆಯಿಂದ ನಮ್ಮ ಆರೋಗ್ಯ ಹಾಳಾಗುವುದಲ್ಲದೇ ನಾವೂ ಇರುವ ಪರಿಸರವು ಸಹ ಕಲುಷಿತಗೊಳ್ಳುತ್ತದೆ ನಮ್ಮ ಭಾರತವನ್ನು ಮಾದಕ ವ್ಯಸನ ಮುಕ್ತ ಗೋಳಿಸುವ ಶಪಥವನ್ನು ಮಾಡುವಂತೆ ಹೇಳಿದರು.

ಎಎಸ್ಐ ಐ. ಜೆ. ವಾಳಿಕೆ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಾದಕ ವ್ಯಸನ ಮುಕ್ತಗೊಳಿಸುವ ಪ್ರತಿಜ್ಞೆಯನ್ನು ಬೋಧಿಸಲಾಯಿತು.ಕಾಲೇಜು ಪ್ರಾಚಾರ್ಯ ಶಿವಾನಂದ ಸತ್ತಿಗೇರಿ ಅಧ್ಯಕ್ಷತೆ ವಹಿಸಿದ್ದರು.

ಪೊಲೀಸ್ ಪೇದೆ ಎಸ್.ಬಿ. ಕಬ್ಬೂರ ಉಪನ್ಯಾಸಕರಾದ ಎಂ.ಬಿ.ಸಿದ್ನಾಳ, ವೆಂಕಟೇಶ ಹೆಳವರ, ಗಂಗಪ್ಪ ಕಡಪಟ್ಟಿ, ಆನಂದ ಮುಗಳಿ,ಸುಶ್ಮಿತಾ ಕುಂಬಾರ, ರವಿ ಕಟಗೇರಿ, ಬಸವರಾಜು ಭದ್ರಶೆಟ್ಟಿ, ರಾಘವೇಂದ್ರ, ಡಜಾಜ ರಾಜು ಹಾದಿಮನಿ ಹಾಜರಿದ್ದರು ಉಪನ್ಯಾಸಕರಾದ ಎಸ್.ಎನ್. ಕುಂಬಾರ ಸ್ವಾಗತಿಸಿ ನಿರೂಪಿಸಿದರು.



ಬೇಟಿ ಬಚಾವ್ರೋ, ಬೇಟಿ ಪಢಾವ್ರೋ ಕಾರ್ಯಕ್ರಮ

ಖಾನಾಪುರ: ತಾಲೂಕಿನ ಇಟಗಿ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ 253ರಲ್ಲಿ ಈಚೆಗೆ ಇಟಗಿ ವಲಯ ಮಟ್ಟದ ಬೇಟಿ ಬಚಾವ್ರೋ, ಬೇಟಿ ಪಢಾವ್ರೋ ಕಾರ್ಯಕ್ರಮ ಜರುಗಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆಯಡಿ ಜರುಗಿದ ಕಾರ್ಯಕ್ರಮವನ್ನು ಇಟಗಿಯ ಬಿ.ಎಂ ಸಾಣಿಕೊಪ್ಪ ಪದವಿ ಕಾಲೇಜಿನ ಪ್ರಾಚಾರ್ಯ ಆರ್.ಬಿ ಹುಣಶೀಕಟ್ಟಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ''ಸರ್ಕಾರದ ಯೋಜನೆಗಳನ್ನು ಅರ್ಹ ಹೆಣ್ಣುಮಕ್ಕಳಿಗೆ ತಲುಪಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಕಾರ್ಯ ಶ್ಲಾಘನೀಯ'' ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಇಟಗಿ ವಲಯ ಮೇಲ್ವಿಚಾರಕಿ ಜಯಶ್ರೀ ಕಾಮೋಜಿ ಮಾತನಾಡಿ, ''ಗ್ರಾಮೀಣ ಭಾಗದ ಕಟ್ಟಕಡೆಯ ಮಹಿಳೆಗೂ ಸರ್ಕಾರದ ಯೋಜನೆಗಳನ್ನು ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ'' ಎಂದರು. ವಿದ್ಯಾರ್ಥಿನಿಯರಾದ ವರ್ಷಾ ಬೀರಣ್ಣವರ, ತನುಶ್ರೀ ಹಂಜಿ ಮಾತನಾಡಿ ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವದ ಬಗ್ಗೆ ವಿವರಿಸಿದರು.ಕಾರ್ಯಕ್ರಮದ ಅಂಗವಾಗಿ ಅಂಗನವಾಡಿ ಕೇಂದ್ರದ ಆವರಣದಲ್ಲಿ ಸಸಿ ನೆಡಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕ ವಿವೇಕ ಕುರಗುಂದ, ಜಯರಾಬಿ ಕಿತ್ತೂರ, ಸವಿತಾ ಪಟ್ಟೇದ, ಗಿರಿಜಾ ಮಾಸನವರ, ಗೀತಾ ಹಂಜಿ, ಜಯಶ್ರೀ ಮಾರ್ಗನಕೊಪ್ಪ, ನಾಗವ್ವ ಯರಗಟ್ಟಿ, ಸಾವಕ್ಕ ಪಟ್ಟೇದ,

ಶ್ರೀದೇವಿ ಕಳ್ಳಿ, ನಾಗಮ್ಮ ತಳವಾರ ಸೇರಿದಂತೆ ಆಶಾ ಮತ್ತು ಅಂಗನವಾಡಿಯ ಕಾರ್ಯಕರ್ತೆಯರು, ವಿದ್ಯಾರ್ಥಿಗಳು ಇದ್ದರು.



ವಿದ್ಯುತ್ ಖಾಸಗೀಕರಣಗೊಳಿಸುವ ಪ್ರಕ್ರಿಯೆ ಕೈ ಬಿಡುವಂತೆ ಮನವಿ

ಚನ್ನಮ್ಮನ ಕಿತ್ತೂರು: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುವ ಸೇನೆಯ ಸಹಯೋಗದಲ್ಲಿ ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣಗೊಳಿಸುವ ಪ್ರಕ್ರಿಯೇಯನ್ನು ಕೈ ಬಿಡುವಂತೆ ಮುಖ್ಯಮಂತ್ರಿಗಳಿಗೆ ತಹಶೀಲ್ದಾರ ಕಲಗೌಡ ಪಾಟೀಲ ಇವರ ಮೂಲಕ ಮನವಿಯನ್ನು ಸಲ್ಲಿಸಿದರು.

ತಹಶೀಲ್ದಾರ ಕಚೇರಿಯಲ್ಲಿ ರೈತ ಸಂಘಟನೆಯವರು ಸಲ್ಲಿಸಿದ ಮನವಿಯಲ್ಲಿ ಸರಕಾರವು ರಾಜ್ಯದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳಿಗೆ ವಹಿಸಲು ಮುಂದಾಗಿರುವದು ರೈತರಲ್ಲಿ, ಕಾರ್ಮಿಕರಲ್ಲಿ, ವಿದ್ಯುತ್ ಗ್ರಾಹಕರಲ್ಲಿ ತೀವ್ರ ಆತಂಕ ಮೂಡಿಸಿದೆ ವಿದ್ಯುತ್ ಎಲ್ಲರಿಗೂ ಅವಶ್ಯಕವಾಗಿದ್ದು ಖಾಸಗಿರಕಣಗೊಳಿಸುವದರಿಂದ ಗ್ರಾಮೀಣ ಪ್ರದೇಶಗಳ ರೈತರಿಗೆ ನೀಡಲಾಗುತ್ತಿರುವ ಸಬ್ಸಿಡಿ ಹಾಗೂ ವಿವಿಧ ಸೌಲಭ್ಯಗಳಿಂದ ವಂಚಿತವಾಗುವ ಸಾಧ್ಯತೆ ಹಾಗೂ ದರ ಏರಿಕೆಯ ಹೊರೆಯಿಂದ ಸಾಮನ್ಯ ಜನರ ಮೇಲೆ ಆರ್ಥಿಕ ಹೊರೆ ಹಾಗೂ ಹೆಸ್ಕಾಂ, ಬೆಸ್ಕಾಂ ಸೇರಿದಂತೆ ಎಲ್ಲ ವಿದ್ಯುತ್ ವಿತರಣಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ, ಗುತ್ತಿಗೆ ಕಾರ್ಮಿಕರ ಉದ್ಯೋಗ ಭದ್ರತೆಯ ಮೇಲೂ ಪರಿಣಾಮವಾಗಬಹುದು ಆದ್ದರಿಂದ ಸರಕಾರವು ಇವುಗಳನ್ನು ಗಮನದಲ್ಲಿರಿಸಿಕೊಂಡು ಖಾಸಗಿಕರಣ ನಿರ್ಧಾರವನ್ನು ಹಿಂಪಡೆಯಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.



ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಕಾರ್ಯದರ್ಶಿ ಕಿಶನ್ ನಂದಿ, ಮಹಿಳಾ ಜಿಲ್ಲಾಧ್ಯಕ್ಷೆ ಅಸ್ಮಾ ಜೂಟದಾರ, ಮೋಲಾಲಿ ಮಕಾಂದರ, ರಾಜಶೇಖರ ಅಂಗಡಿ, ರಾಜೇಸಾಬ ಜೂಟದಾರ, ಅಮೀರಹಮ್ಮಜಾ ಸೇರಿದಂತೆ ಹಲವಾರು ರೈತರು ಉಪಸ್ಥಿತರಿದ್ದರು.

ಪಿ ಎಸ್ ಆಯ್ ಭರತ ಎಸ್ ನೇತೃತ್ವದಲ್ಲಿ ಪೋಲಿಸ್ ಸಿಬ್ಬಂದಿಗಳು ಸೂಕ್ತ ಭದ್ರತೆ ಒದಗಿಸಿದ್ದರು.

74ರ ಇಳಿ ವಯಸ್ಸಿನಲ್ಲಿಯೂ ಜಲಯೋಗ!

▸ **ಶಿವಾನಂದ ಪೂಜಾರಿ**

ಅಥಣಿ : ದೈಹಿಕ ಮತ್ತು ಮಾನಸಿಕ ಸದೃಢತೆಗಾಗಿ ಯೋಗಾಸನ ಉತ್ತಮ ಸಾಧನವಾಗಿದ್ದು,ಇದು ಕೇವಲ ಜೂನ್ 21 ವಿಶ್ವ ಯೋಗ ದಿನಾಚರಣೆಗೆ ಸೀಮಿತವಾಗದೆ, ನಿತ್ಯ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು. ಈ ನಿಟ್ಟಿನಲ್ಲಿ ನೆಲದ ಮೇಲೆ ಕುಳಿತುಕೊಂಡು ವಿವಿಧ ಭಂಗಿಗಳಲ್ಲಿ ಆಸನ ಮಾಡುವ ಯೋಗ ಸಾಧಕರನ್ನ ನೋಡಿದ್ದೀರಿ. ಆದರೆ, ನೀರಿನಲ್ಲಿ ತೇಲುವ ಮೂಲಕ ವಿವಿಧ ಯೋಗಾಸನ ಭಂಗಿಗಳನ್ನು ಪ್ರದರ್ಶಿಸುವ ಅಪರೂಪದ ಸಾಧಕರೊಬ್ಬರೂ ಗಡಿನಾಡು ಅಥಣಿಯಲ್ಲಿದ್ದಾರೆ.

74 ರ ಹದಿಹರೆಯದ ವಿಲಾಸರಾವ್ ಕುಲಕರ್ಣಿ ಅಥಣಿ ಪಟ್ಟಣದ ನಿವಾಸಿಯಾಗಿದ್ದು, ಕಳೆದ 15 ವರ್ಷಗಳಿಂದ ನಿರಂತರ ಜಲಯೋಗ ರೂಡಿಸಿಕೊಂಡಿದ್ದಾರೆ. ಬ್ರಹ್ಮಚರ್ಯ ಪಾಲಿಸಿಕೊಂಡು ಬಂದಿರುವ ಇವರು ಸದಾ ನವಲವಿಕೆ, ಚುರುಕುತನ ಹಾಗೂ ಆರೋಗ್ಯಕರ ಜೀವನ ಶೈಲಿಯಿಂದ ಜನಪ್ರಿಯರಾಗಿದ್ದಾರೆ. ಪ್ರತಿನಿತ್ಯ ಜಲ ಯೋಗ ಸಾಧನೆಯ ಮೂಲಕ ಇವರ ಫಿಟ್ನೆಸ್ ಸಾಕಷ್ಟು ಯುವಕರಿಗೆ ಸ್ಫೂರ್ತಿದಾಯಕ. ತಂದೆ ಗೋವಿಂದರಾವ್ ಮಾಸ್ತರ್ ಇವರಿಂದ ಬಂದ ಬಳುವಳಿಯಾಗಿ ಬಂದಿರುವ ಈಜುಗಾರಿಕೆ, ಜಲಯೋಗ ಅಭ್ಯಾಸ ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಣೆಗೆ ಇಂದಿಗೂ ಸಹಕಾರಿಯಾಗಿದೆ. ಚಳಿಗಾಲ, ಮಳೆಗಾಲ ಹಾಗೂ ಬೇಸಿಗೆಕಾಲ ಲೆಕ್ಕಿಸದೆ ವರ್ಷದ 12 ತಿಂಗಳು ನಿತ್ಯ ಒಂದು ಗಂಟೆ ಕಾಲ ಬಾವಿಯಲ್ಲಿ ಜಲಯೋಗ ಅಭ್ಯಾಸದಲ್ಲಿ ನಿರತರಾಗಿರುತ್ತಾರೆ. 74 ರ ಹರೆಯದಲ್ಲಿಯೂ ಸಹ ವಣಿವರಿಯದೇ ಗಂಟೆಗಳ ಕಾಲ ಇಲ್ಲಿನ ಅಥಣಿ ಪಟ್ಟಣ ಹಾಗೂ ಸುತ್ತಮುತ್ತಲಿನ ಎಲ್ಲಾ ಬಾವಿಯಲ್ಲಿ ಮನಮೋಹಕ



> ಮಳೆಗಾಲ ಮತ್ತು ಚಳಿಗಾಲದಲ್ಲಿ ಜಲ ಯೋಗ ಮತ್ತು ಈಜಲು ಯಾವುದೇ ತೊಂದರೆ ಇಲ್ಲ. ಬೇಸಿಗೆಯ ಕಾಲದಲ್ಲಿ ಅನೇಕ ಭಾವಿಗಳು ಬತ್ತುವುದರಿಂದ ಸಮಸ್ಯೆಯಾಗುತ್ತದೆ. ಸರ್ಕಾರ ಮತ್ತು ಜನಪ್ರತಿನಿಧಿಗಳು ತಾಲೂಕಿನ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಈಜು ಕೊಳವನ್ನು ನಿರ್ಮಿಸಬೇಕು.
> ■ **ವಿಲಾಸರಾವ್ ಕುಲಕರ್ಣಿ,** ಜಲಯೋಗ ಸಾಧಕ, ಅಥಣಿ.

ಪದ್ಮಾಸನ, ಶವಾಸನ, ಸಮುದ್ರೋಲ್ಲಂಘಾಸನ, ಹೀಗೆ ಇನ್ನೂ ಅನೇಕ ಯೋಗಾಸನಗಳ ಭಂಗಿಗಳನ್ನು ನೀರಿನಲ್ಲಿ ಮಾಡುತ್ತಾರೆ.

ಅಪರೂಪದ ಸಾಧನೆ ಗಮನಿಸಿ ತಾಲೂಕು ಆಡಳಿತ ಗಣರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನಿಸಿ ಜಲಯೋಗ ಸಾಧಕ ಎಂದು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದೆ. ಇವರ ವ್ಯಕ್ತಿತ್ವ ಮತ್ತು ಅಪರೂಪದ ಸಾಧನೆಯ ಕುರಿತು ಪಟ್ಟಣದ ವೈದ್ಯರಾದ ಡಾ. ರಮೇಶ್ ಗುಳ್ಳ ಅವರು ವಿಶ್ವ ಜಲಯೋಗ ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಜಲಯೋಗದ ಕುರಿತು ವಿಶ್ವದಲ್ಲಿಯೇ ಪ್ರಥಮ ಪುಸ್ತಕ ಪ್ರಕಟವಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆ.

ಮದ್ಯವರ್ಜನ ಶಿಬಿರಗಳಿಂದ ಆರೋಗ್ಯ ರಕ್ಷಣೆ

ಬೆಳಗಾವಿ: ಕೆಟ್ಟ ಸ್ನೇಹಿತರ ಸಂಗವೇ ಕುಡಿತದ ಚಟಕ್ಕೆ ಮುಖ್ಯ ಕಾರಣ, ಕುಡಿತ ಬಿಡಿಸುವುದರೊಟ್ಟಿಗೆ ವ್ಯಸನಿಜಗಳನ್ನು ಮಾನಸಿಕವಾಗಿ ಶಕ್ತಿವಂತರಜನ್ನಾಗಿ ಮಾಡುವುದು ಶಿಬಿರದ ಉದ್ದೇಶವಾಗಿದೆ. ಹೀಗಾಗಿ ಆರೋಗ್ಯ ರಕ್ಷಣೆಗೆ ಮದ್ಯವರ್ಜನ ಶಿಬಿರಗಳ ಸಂಖ್ಯೆ ಹೆಚ್ಚಿಸಿಕೊಳ್ಳಬೇಕು ಎಂದು ಅಧ್ಯಕ್ಷತೆಯ ವಹಿಸಿ, ನ್ಯಾಯವಾದಿ ಜಿ. ಆರ್. ಸೋನೆರ ಹೇಳಿದರು.

ಶನಿವಾರ ಬೆಳಗಾವಿ ತಾಲೂಕಿನ ಸುಳೇಭಾವಿ ಗ್ರಾಮದ ಶಾಖಾಂಬರಿ ದೇವಸ್ತಾನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ, ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ವತಿಯಿಂದ 2071ನೇ ಮದ್ಯವರ್ಜನ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕುಡಿತ ಇಂದು ಸಮಾಜಕ್ಕಂಟಿದ ವ್ಯಸನವಾಗಿದೆ. ಮಾದಕ ವಸ್ತು, ತಂಬಾಕು, ಮದ್ಯಸೇವನೆ ಇಂದು ಯುವ ಜನಾಂಗವನ್ನು ದೊಡ್ಡ ಸಂಖ್ಯೆಯಲ್ಲಿ ಅಧಃಪತನಕ್ಕೀಡು ಮಾಡುತ್ತಿದೆ. ದುಡಿಜಮೆಯ ಹೆಚ್ಚಿನ ಪಾಲನ್ನು ದುಶ್ಚಟಗಳಿಗೆ ವ್ಯಯಿಸುತ್ತಿದ್ದಾರೆ. ಕುಡಿತ ಇಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ.



ದೇವಸ್ಥಾನ ಟ್ರಸ್ಟ್ ಜೀರ್ಣೋದ್ಧಾರ ಸಮಿತಿಯವರಾದ, ದೇವಪ್ಪ ಬಂಗನ್ನವರ ಮಾತನಾಡಿ, ಇಂದಿನ ಯುವಕರು ದುಶ್ಚಟಕ್ಕೆ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದು, ಕುಟುಂಬದ ನೆಮ್ಮದಿ ಜೊತೆಗೆ ಆರ್ಥಿಕವಾಗಿ ದಿವಾಳಿಯಾಗಿ ಸಮಾಜದಲ್ಲಿ ದುಷ್ಟರಾಗಿ ಕಾಣುತ್ತಿದ್ದು ಶಿಬಿರದಲ್ಲಿ ಭಾಗವಹಿಸಿ ಹೊಸ ಜೀವನ ಕೊಂಡುಕೊಳ್ಳಬೇಕು ಎಂದರು.ಜಿಲ್ಲಾ ನಿರ್ದೇಶಕರಾದ ಸತೀಶ ನಾಯ್ಕ ಮಾತನಾಡಿ, ಸಮಾಜದಲ್ಲಿ ಯುವಕರು ದುಶ್ಚಟಕ್ಕೆ ದಾಸರಾಗಿ ಕುಟುಂಬದ ನೆಮ್ಮದಿ, ವೈಯಕ್ತಿಕ ಜೀವನವನ್ನು ಹಾಳು ಮಾಡಿಕೊಂಡಿದ್ದು, ಅವರ ಕುಟುಂಬ ನೆಮ್ಮದಿಯ ಜೀವನ ನಡೆಸುವುದಕ್ಕೆ ಈ ಮದ್ಯವರ್ಜನ ಶಿಬಿರ ಬಹಳ ಅನುಕೂಲವಾಗಿದ್ದು ಭಾಗವಹಿಸಿದ ಶಿಬಿರಾರ್ಥಿಗಳು ಒಳ್ಳೆಯ ರೀತಿಯಾಗಿ ಜೀವನ ನಡೆಸಲು ಈ ಶಿಬಿರವನ್ನು ಉಪಯುಕ್ತ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಶಂಕರಗೌಡ ಪಾಟೀಲ, ಬಸವರಾಜ ಸೊಪ್ಪಿಮಠ, ಆನಂದ ಶೆಟ್ಟಿ , ಭಾವಕ್ಕಣ್ಣ ಭರಮಾ ಬಂಗ್ಯಾಗೋಳ , ಲಕ್ಷ್ಮಣ ಮಂಡು, ಅಡೆವಪ್ಪ ನಾಗರಾಳಿ, ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಸಚಿನ ಮಂಡು ,ತಾಲೂಕಿನ ಯೋಜನಾಧಿಕಾರಿಯ ಸುಭಾಷ ಪಿ ಸಿ, ಗೀತಾ ಜ್ಞಾನವಿಕಾಸ ಸಮನ್ವಯ ಅಧಿಕಾರಿ ನಿರ್ವಹಿಸಿದರು, ದಯಾನಂದ ಮೇಲ್ವಿಚಾರಕರು ಸ್ವಾಗತಿಸಿ ವಂದಿಸಿದರು.

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಜಮಖಂಡಿ: ನಗರದ 110 ಕೆವಿ ವಿದ್ಯುತ್ ವಿತರಣಾ ಕೇಂದ್ರದ ತುರ್ತು ನಿರ್ವಹಣೆಯನ್ನು ಜೂ.21ರಂದು ಭಾನುವಾರ ಹಮ್ಮಿಕೊಂಡಿದ್ದು, ಅಂದು 110ಕೆವಿ ಶೀರೋಳ ಪ್ರಭುಲಿಂಗೇಶ್ವರ ಶುಗರ್ಸ ಲಿಮಿಟೆಡ್ ಮಾರ್ಗ, 33 ಕೆವಿ ವಿತರಣಾ ಮಾರ್ಗ ಮಧುರಖಂಡಿ–ಹಿಪ್ಪರಗಿ ಮತ್ತು ವಾಟರ್ ಸಪ್ಲಾಯ್. 11 ಕೆವಿ ವಿತರಣಾ ಮಾರ್ಗ ಎಪಿಎಂಸಿ, ಕೆಎಚ್‌ಬಿ, ಹುನ್ನೂರ, ಮಧುರಖಂಡಿ, ಬಸವೇಶ್ವರ, ರಾಮತೀರ್ಥ, ಜಮಖಂಡಿ, ಹುಲ್ಯಾಳ ಐಪಿ, ಹಂಚಿನಾಳ ಆರ.ಸಿ, ಆಲಗೂರ ಎನ್‌ಜೆವೈ ಐಪಿ, ಕರೆಮ್ಮದೇವಿ. ಜಕನೂರ ವಾಟರ್ ಸಪ್ಲಾಯ ಮಧುರಖಂಡಿ ? ಹಿಪ್ಪರಗಿ, ಜಮಖಂಡಿ:–ಕುಂಬಾರ ಕೆರೆ, ಬಸವೇಶ್ವರ ಸರ್ಕಲ್, ಅಂಬೇಡ್ಕರ ಸರ್ಕಲ್, ರುದ್ರಸ್ವಾಮಿ ಪೇಠ, ನೂರಾನಿ ಕಾಲೂನಿ, ಕೊರ್ಟ ರೋಡ್, ಶಿವಾಜಿ ಸರ್ಕಲ್, ಪೇಂಡಾರ ಗಲ್ಲಿ, ಕತಾಟೆ ಪ್ಲಾಟ, ಕಡಕೋಳ ರೋಡ್, ಅರ್ಬನ ಬ್ಯಾಂಕ, ಎಪಿಎಂಸಿ ದೇಸಾಯಿ ಸರ್ಕಲ, ಮಾಳಿ ಪೇಟ್ರೋಲ್ ಪಂಪ, ಮಾಹಾಂತೇಶ ನಗರ, ತೇಲಿ ಲೇಔಟ, ಮೈಗೂರ ರೋಡ, ಪ್ರಭಾತ ನಗರ, ಮಿನಿ ವಿಧಾನಸೌದ, ಬಿಎಲ್‌ಡಿಇ ಕಾಲೇಜ ರೋಡ, ರಾಮೇಶ್ವರ ಕಾಲೋನಿ ಆದರ್ಶ ನಗರ. ಬಸವೇಶ್ವರ ಅಶೋಕ ಸರ್ಕಲ್, ಬಾರಾಮಾಮಗಲ್ಲಿ, ಉಮಾರಾಮೇಶ್ವರ ರೋಡ್, ಕೆಎಚ್‌ಬಿ:–ಪಾಟೀಲ ಲೇಔಟ, ಬೃಂದಾವನ ಲೇಔಟ, ಪ್ರಗತಿ ಲೇಔಟ, ಸಿದ್ದಾರ್ಥ ನಗರ. ಹನುಮಾನ ನಗರ, ಬಿ.ಎಡ್‌ಕಾಲೇಜ, ಜಡ್ಜ ಕಾಲೂನಿ, ಡಾಲರ್ಸ ಕಾಲೂನಿ, ಕೆಎಚ್‌ಬಿ ಕಾಲೂನಿ. ರಾಮಬಾಗ, ವಿಜಯ ನಗರ, ಕಡಿ ಲೇಔಟ, ಎಪಿಜೆ ಕಲಾಂ ಕಾಲೋನಿ, ಇಂಡಸ್ಟ್ರೀಯಲ್ ಎರಿಯಾ, ಎಲ್.ಐ.ಸಿ ಕಾಲೂನಿ,ಪ್ರಶಾಂತ ನಗರ, ಭೂಮಿಕಾ ನಗರ ಲಕ್ಷ್ಮೀ ನಗರ: ಲಕ್ಷ್ಮೀ ನಗರ, ಪ್ರಗತಿ ನಗರ ಶಾಂತಿನಗರ, ರೆಹಮತ ನಗರ, ಬಸವ ನಗರ, ದಾನಮ್ಮದೇವಿ ಬಡಾವಣೆ, ರಾಮತೀರ್ಥ:–ಶಿಕ್ಕಲಗಾರ ಕಾಲೂನಿ, ಹನುಮಾನ ರೋಡ, ಬಾಕ್ಸಿ ಗಲ್ಲಿ, ವರ್ತಕ ಗಲ್ಲಿ, ಅವಟಿ ಗಲ್ಲಿ, ಕುಂಬಾರ ಓಣಿ, ಆಝಾದ ನಗರ, ಹುಲ್ಯಾಳ ಗಲ್ಲಿ, ಹೆಸ್ಕಾಂ ಆಫೀಸ್, ಚೌಡಯ್ಯ ನಗರ, ಸಿದ್ದಮುತ್ಯಾನ ಗುಡಿ, ಮಾರ್ಕೆಟಗಲ್ಲಿ, ಸುರ್ವಾರಘೇಟರ. ಹುನ್ನೂರ: ಕಡಪಟ್ಟಿ, ಗಾಂಧಿ ನಗರ, ಸಿದ್ರಾಮೇಶ್ವರ ಕಾಲನಿ, ಹುಲಿ ಕಡಿ. ಹಂಚಿನಾಳ ಐಪಿ, ಹಂಚಿನಾಳ ಆರ್.ಸಿ, ಆಲಗೂರ–1, ಈ ಬಾಗದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ ಎಂದು ಹೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಯೋಗ ದಿನ ಇಂದು

ಬಾದಾಮಿ: ಜೂ.21ರಂದು ಭಾನುವಾರ ಬೆಳಗ್ಗೆ 6ರಿಂದ 8 ಗಂಟೆಯ ಒಳಗೆ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ಎಲ್ಲ ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಸಿಬ್ಬಂದಿ, ಎಸ್‌ಡಿಎಂಸಿ ಪದಾಧಿಕಾರಿಗಳು, ಊರಿನ ಗಣ್ಯರ ಸಹಕಾರದಿಂದ ಕಡ್ಡಾಯವಾಗಿ ಆಚರಣೆ ಮಾಡಿ ವರದಿ ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಹಾಗೂ ತಾಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್. ಹಳಗೇರಿ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬಾದಾಮಿ: ಹಾಲುಮತ ನೌಕರರ ಸಂಘ ಹಾಗೂ ಕರ್ನಾಟಕ ಪ್ರದೇಶ ಕುರುಬರ ಸಂಘ ಮತ್ತು ಬೀರಲಿಂಗೇಶ್ವರ ಸೇವಾ ಸಮಿತಿ ಹಾಗೂ ಸಮಾಜದ ಎಲ್ಲಾ ಸಂಘಟನೆಗಳ ಸಹಯೋಗದೊಂದಿಗೆ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕುಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜೂ.28ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ನಗರದ ಕಾಲೇಜು ರಸ್ತೆಯ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದು, ಪ್ರತಿಭಾ ಪುರಸ್ಕಾರಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2025–26ನೇ ಸಾಲಿನಲ್ಲಿ ಎಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.90 ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.85ರಷ್ಟು ಅಂಕ ಪಡೆದ ಕುರುಬ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುತ್ತಿದ್ದು, ಅರ್ಹರು ಅಗತ್ಯ ದಾಖಲೆಗಳಾದ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಅಥವಾ ಶಾಲಾ ವರ್ಗಾವಣೆ ಪತ್ರ, ವಿದ್ಯಾರ್ಥಿ ಆಧಾರ್ ಕಾರ್ಡ್ ಹೊಂದಿರಬೇಕು ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ನಿವಾಸಿಯಾಗಿರಬೇಕು. ಅರ್ಹರು ಜೂ.25 ರೊಳಗೆ ಅರ್ಜಿಗಳನ್ನು ಬಾದಾಮಿಯಲ್ಲಿ ವೈ.ಜಿ.ಗಡಾದ 7483876743, ಗುಳೇದಗುಡ್ಡದ ಬಸವರಾಜ ಅಡ್ಡಿ 9591452177, ಆನಂದ ಗೌಡರ 9900250355, ಕುಳಗೇರಿ ಭಾಗದವರು ಎಚ್.ಎಂ.ಯತ್ನಟ್ಟಿ 6361579976, ಕೆರೂರು ಭಾಗದವರು ಆರ್.ಬಿ.ಬಿಲ್ಲೂರ 810569745, 9880093664 ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ನಾಮದೇವ ಪವಾರ ನಿಧನ



ಬೀಳಗಿ: ತುಮಕೂರ ಜಿಲ್ಲೆಯ ಕೊರಟಗೆರೆ ತಾಲೂಕಿನ ತುಂಬುಗಾನಹಳ್ಳಿ ಸಮೀಪದ 12ನೇ ಕೆಎಸ್‌ಆರ್‌ಪಿ ಘಟಕದಲ್ಲಿ ಎಆರ್‌ಎಸ್‌ಐ ಆಗಿ ಸೇವೆ ಸಲ್ಲಿಸುತ್ತಿದ್ದ ತಾಲೂಕಿನ ಅರಕೇರಿ ತಾಂಡಾದ ನಾಮದೇವ ಗಿರಿಯಪ್ಪ ಪವಾರ (54) ನಿಧನ ಹೊಂದಿದ್ದಾರೆ. ಮೃತರಿಗೆ ಬಾಗಲಕೋಟೆ ಟೌನ್ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೆಬಲ್ ಶೋಭಾ ನಾಮದೇವ ಪವಾರ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ.



ಬಾದಾಮಿ: ಪಟ್ಟಣದ ನಿವೃತ್ತ ನೌಕರ ಬಸವರಾಜ ಕೊಣ್ಣೂರ ಅವರು 104ನೇ ಬಾರಿಗೆ ರಕ್ತದಾನ ಮಾಡಿ ಮಾನವೀಯತೆ ಮೆರೆದರು. ಎಸ್.ವಿ.ಪಿ.ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಗಿರೀಶ ದಾನಪ್ಪಗೌಡರ ಪ್ರಮಾಣಪತ್ರ ವಿತರಿಸಿದರು.

ಪಿಕೆಪಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಕಲಾದಗಿ: ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿಯ ತೆರವಾದ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಎರಡೂ ಸ್ಥಾನಗಳು ಅವಿರೋಧವಾಗಿ ಆಯ್ಕೆಯಾದವು. ನಿಕಟಪೂರ್ವ ಅಧ್ಯಕ್ಷ ಮಂಜುನಾಥ ಬಿಲಕೇರಿ, ಉಪಾಧ್ಯಕ್ಷ ರಾಜೇಶ ಕಾಮನ್ನವರ ಕಳೆದ ತಿಂಗಳು ತಮ್ಮ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದ್ದರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಚುನಾವಣಾ ನಿಯಮದಂತೆ ಆಯ್ಕೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಬಸವರಾಜ ಮುಂಡಿಕಟಗಿ, ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಪ್ಪ ಪರಚನಗೌಡರ ಉಮೇದುವಾರಿಕೆ ಸಲ್ಲಿಸಿದ್ದರು. ಇವರ ವಿರುದ್ಧ ಯಾವುದೇ ನಾಮಪತ್ರಗಳು ಸಲ್ಲಿಕೆಯಾಗದ ಕಾರಣ ಅಧ್ಯಕ್ಷ ಸ್ಥಾನಕ್ಕೆ ಬಸವರಾಜ ಮುಂಡಿಕಟಗಿ, ಉಪಾಧ್ಯಕ್ಷಸ್ಥಾನಕ್ಕೆ ಮಲ್ಲಪ್ಪ ಪರಚನಗೌಡರ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾ ರಿಟರ್ನಿಂಗ್ ಅಧಿಕಾರಿ ಮಂಜುಳಾ ಛಲವಾದಿ ಘೋಷಣೆ ಮಾಡಿದರು.

ಪಿಕೆಪಿಎಸ್ ಸದಸ್ಯರಾದ ಮಂಜುನಾಥ ಗಾಣಿಗೇರ, ಆನಂದ ಅರಕೇರಿ, ಮಹಾದೇವಿ ಶೆಟ್ಟೆಪ್ಪನವರ, ಬಸವ್ವ ಬೀರಪ್ಪ ಶಿವನಿಚ್ಚಿ, ಸದಾಶಿವ ಸಣ್ಣಕ್ಕಿ, ಮಳಿಯಪ್ಪ ಆಡಗಲ್, ಬಸಪ್ಪ ಶಿವನಿಚ್ಚಿ, ಮೆಹಬೂಬ ನದಾಫ್ ಇನ್ನಿತರರು ಇದ್ದರು. ಮುಖಂಡರುಗಳಾದ ಚಿಶೆಟ್ಟೆಪ್ಪ ಅಂಗಡಿ, ಎಚ್.ಪಿ.ಪೂಜಾರ, ಲಕ್ಷ್ಮಣ ಶಿರಬೂರ, ಜಗದೀಶ್ ಬಿಲಕೇರಿ, ರಾಜೇಶ ಪೂಜಾರಿ, ಸುಭಾಸ್ ಜಕ್ಕನ್ನವರ್, ಕೆ.ಎಲ್.ಬಿಲಕೇರಿ, ಯಲ್ಲಪ್ಪ ಕರಡಿಗುಡ್ಡ, ಈರಣ್ಣ ಅಂಗಡಿ, ಶಾಸನಗೌಡ ಪಾಟೀಲ, ನಂದೀಶ ಹಿರೇಮಠ, ಡಾ.ಅಡಿಯಪ್ಪ ಹಲಗಲಿ ಇನ್ನಿತರರು ಇದ್ದರು.



ಕಲಾದಗಿ: ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿಯ ತೆರವಾದ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಎರಡೂ ಸ್ಥಾನಗಳು ಅವಿರೋಧವಾಗಿ ಆಯ್ಕೆಯಾದವು.

ನಬಾರ್ಡ್, ಡಿಎಲ್‌ಬಿಸಿ, ರೈಲ್ವೆ ಯೋಜನೆಗಳ ಪ್ರಗತಿ ಪರಿಶೀಲನೆ

ಆದ್ಯತಾ ವಲಯಗಳಿಗೆ ಒತ್ತು ಕೊಡಿ

ಬಾಗಲಕೋಟೆ: ಸರಕಾರದ ವಿವಿಧ ಯೋಜನೆಗಳಡಿ ನೀಡಲಾಗುತ್ತಿರುವ ಸಾಲ ವಿತರಣೆಯಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಶು ಸಂಗೋಪನಾ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ವಿಶಾಲ್.ಆರ್ ಬ್ಯಾಂಕರ್ಸಗಳಿಗೆ ಸೂಚನೆ ನೀಡಿದರು.



ಜಿಲ್ಲಾ ಪಂಚಾಯತಿ ಸಭಾಭವನದಲ್ಲಿ ನಬಾರ್ಡ, ಡಿಎಲ್‌ಬಿಸಿ ಹಾಗೂ ರೈಲ್ವೆ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಮಾಜಿಕ ಭದ್ರತೆಗೆ ಒಳಪಡುವ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ವಹಿಸಬೇಕು. ಸಾಲ ವಿತರಣೆಯಲ್ಲಿ ಆದ್ಯತಾ ವಲಯಗಳಿಗೆ ಹೆಚ್ಚು ಒತ್ತು ನೀಡಬೇಕು. ಕ್ರೆಡಿಟ್ ಕಿಸಾನ ಸಾಲಗಳ ಬಗ್ಗೆ ಅರಿವು ಮೂಡಿಸಿ ಹೆಚ್ಚಿನ ಪ್ರಮಾಣದಲ್ಲಿ ಸಾಲ ವಿತರಣೆಯಾಗಿ ಅವರ ಆರ್ಥಿಕ ಮಟ್ಟದ ಸುಧಾರಣೆಯಾದಲ್ಲಿ ಸರಕಾರ ಯೋಜನೆಗಳಿಗೆ ಬೆಲೆ ಬರುತ್ತದೆ ಎಂದರು.

ನಂತರ ವಿವಿಧ ಯೋಜನೆಗಳ ಸಾಲ ವಿತರಣೆ, ಸ್ವಯಂ ಉದ್ಯೋಗ ಯೋಜನೆಗಳಿಗೆ ಬ್ಯಾಂಕುಗಳ ಸಹಕಾರ ಹಾಗೂ ಆದ್ಯತಾ ವಲಯದ ಸಾಲಗಳ ಪ್ರಗತಿ ಕುರಿತು ಚರ್ಚೆ ನಡೆಸಿದ ಡಾ.ವಿಶಾಲ್ ಅವರು ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಹಾಗೂ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ ಹೆಚ್ಚಿನ ಪ್ರಮಾಣದಲ್ಲಿ ನೋಂದಣಿಗೆ ಕ್ರಮವಹಿಸಬೇಕು. ಪ್ರತಿಯೊಂದು ಬ್ಯಾಂಕ್‌ಗಳು ಗುರಿ ಇಟ್ಟುಕೊಂಡು ನೋಂದಣಿಗೆ ಕ್ರಮವಹಿಸಲು ಸೂಚಿಸಿದರು.

ನಬಾರ್ಡ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ (ಆರ್.ಐ.ಡಿ.ಎಫ್), ಎನ್ ಐಡಿಎ ಹಾಗೂ ಇಎಪಿ ಯೋಜನೆಗಳಡಿ ಕೈಗೆತ್ತಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಅವರು ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ತಿಳಿಸಿದ ಅವರು ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಯೋಜನೆ ಪ್ರಗತಿ, ಅನುದಾನ ಬಳಕೆ, ಕಾಮಗಾರಿಗಳ ಅನುಷ್ಠಾನದ ಹಂತ ಹಾಗೂ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದುಕೊಂಡರು.

ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಬಾಗಲಕೋಟೆ ಕುಡಚಿ ಮಾರ್ಗ ನಿರ್ಮಾಣಕ್ಕೆ ಭೂಸ್ವಾಧೀನ, ಪ್ರಗತಿಯಲ್ಲಿರುವ ಕಾಮಗಾರಿಗಳ ಕುರಿತು ಚರ್ಚಿಸಿದ ಕಾರ್ಯದರ್ಶಿಗಳು ಬಾಗಲಕೋಟೆ ಮತ್ತು ಜಮಖಂಡಿ ವಿಭಾಗದ ಉಪವಿಭಾಗಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ವಿವಿಧ ಇಲಾಖೆಗಳ ಸಮನ್ವಯ ಸಾಧಿಸಿ ಬಾಕಿ ಇರುವ ಭೂಸ್ವಾಧೀನಕ್ಕೆ ಉಂಟಾಗಿರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ, ಜಿಲ್ಲಾ ಅಗ್ರಣೀಯ ಬ್ಯಾಂಕ್ ವ್ಯವಸ್ಥಾಪಕ ರಾಜಕುಮಾರ ಹೂಗಾರ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ಜಂಟಿ ತೋಟಗಾರಿಕೆ ನಿರ್ದೇಶಕ ರವೀಂದ್ರ ಹಕಾಟಿ, ಪಶು ಇಲಾಖೆಯ ಉಪನಿರ್ದೇಶಕ ಎಸ್.ಎಚ್.ಕರಡಿಗುಡ್ಡ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ, ಗ್ರಾಮೀಣ ಕುಡಿಯುವ ನೀರಿಯ ಯೋಜನೆಯ ಮುಖ್ಯ ಅಭಿಯಂತರ ಆಕಾಶ ವಂದೆ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

50 ಸಾವಿರ ಸಸಿ ನೆಡುವ ಕಾರ್ಯಕ್ಕೆ ಚಾಲನೆ

ಬೀಳಗಿ: ತಾಲೂಕಿನ ಐತಿಹಾಸಿಕ ತಾಣವಾಗಿ ಪರಿಣಮಿಸಿರುವ ಚಿಕ್ಕಸಂಗಮ ಸಮಗ್ರ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಮೊದಲ ಹಂತವಾಗಿ 160 ಎಕರೆ ಪರಿಸರ ಪ್ರದೇಶದಲ್ಲಿ ಬೃಹತ್ ಪ್ರಮಾಣದ ಸಸಿ ನೆಡುವ ಕಾರ್ಯಕ್ಕೆ ಬೀಳಗಿ ಶಾಸಕ ಜೆ.ಟಿ.ಪಾಟೀಲ ಶನಿವಾರ ಚಾಲನೆ ನೀಡಿದರು.

ಜಿಲ್ಲಾಡಳಿತ, ಅರಣ್ಯ ಹಾಗೂ ಆಹಾರ ಇಲಾಖೆಸಹಯೋಗದಲ್ಲಿಹಮ್ಮಿಕೊಂಡಬೃಹತ್ ಪ್ರಮಾಣದ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಚಿಕ್ಕಸಂಗಮ ಪ್ರದೇಶವನ್ನು ಪರಿಸರ ಸ್ನೇಹಿ ಪ್ರವಾಸಿ ತಾಣವನ್ನಾಗಿ ರೂಪಿಸುವ ಉದ್ದೇಶದಿಂದ ಸಸಿ ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಭಾಗವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವ ನಿಟ್ಟಿನಲ್ಲಿ ಸಾಕಷ್ಟು ಸಸಿಗಳನ್ನು ನೆಟ್ಟು ಪ್ರವಾಸಿಗರಿಗೆ ಆಕರ್ಷಕ ನೆಲೆಯಾಗಿ ಕಾಡಿದ ಪರಿಸರ ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದರು.

ಪರಿಸರಸಂರಕ್ಷಣೆಗೆಆಹಾರಇಲಾಖೆಯಿಂದ 10 ಲಕ್ಷ ರೂ.ಗಳ ಅನುದಾನ ನೀಡಲು ಸ್ಥಳದಲ್ಲಿಯೇ ಜಂಟಿ ಆಹಾರ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಅವರಿಗೆ ತಿಳಿಸಿದರು. ಬೀಳಗಿ ಮತಕ್ಷೇತ್ರದ ಪ್ರವಾಸೋದ್ಯಮ ಅಭಿವೃದ್ಧಿಗೆ ಮುಂದಾಗಿದ್ದು 25 ಕೋಟಿ ರೂ.ಗಳ ವೆಚ್ಚದ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಮಾಡಲಾಗಿದೆ. ಚಿಕ್ಕಸಂಗಮದಿಂದ ಆಲಮಟ್ಟಿವರೆಗೆ ಬೋಟಿಂಗ್ ವ್ಯವಸ್ಥೆ, ಜಲ ಕ್ರೀಡೆಗಳು ಹಾಗೂ ಹೆರಿಟೇಜ್ ಭಾಗದಲ್ಲಿ ಪಿಪಿ ಮಾದರಿಯಲ್ಲಿ ಜಂಗಲ್ ರೆಸಾರ್ಟ್ ನಿರ್ಮಿಸಲು ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಪಡೆಯಲಾಗಿದೆ. ಇದರಿಂದ ಪ್ರವಾಸಿಗರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ಟೆಲ್ಲ ಆರ್., ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಸ್.ಗೊರವರ, ಬೀಳಗಿ ತಹಸೀಲ್ದಾರ್ ವಿನೋದ ಹತ್ತಳ್ಳಿ, ಆರ್‌ಎಫ್‌ಒ ಒಗಳದ ಅಮೃತ ಗಂಡೋಶಿ, ರಾಜಶೇಖರ ಪಾಟೀಲ, ಬಿ.ಜಿ.ಕಮತರ, ಅಶೋಕ ರಾಠೋಡ, ಎಸ್‌ಪಿಎಸ್ ಸೆಲ್ವರಾಜ ನಾಯ್ಕರ, ಪ್ರದೀಪ ರಾಠೋಡ ಸೇರಿದಂತೆ ಊರಿನಪ್ರಮುಖರಾದಹನುಮಂತಕಾಖಂಡಕಿ, ಶ್ರೀಶೈಲ ಕೊಣ್ಣೂರ, ಯಮನಪ್ಪ ರೊಳ್ಳಿ, ಜಿಪಂ ಕೆಡಿಪಿ ಸದಸ್ಯ ಜಿ.ಆರ್.ಪಾಟೀಲ, ಚಿದಾನಂದ ನಂದ್ಯಾಳ, ವಿಠಲ ಕಮ್ಮಾರ ಉಪಸ್ಥಿತರಿದ್ದರು.



ವೈದ್ಯಕೀಯ ಕ್ಷೇತ್ರದಲ್ಲಿ ಫಿಜಿಯೋಥೆರಪಿ ಚಿಕಿತ್ಸೆ ಅಗತ್ಯ

ಬಾಗಲಕೋಟೆ: ವೈದ್ಯಕೀಯ ಕ್ಷೇತ್ರದಲ್ಲಿ ಫಿಜಿಯೋಥೆರಪಿ ಅಗತ್ಯದ ಚಿಕಿತ್ಸೆಯಾಗಿದೆ. ಫಿಜಿಯೋಥೆರಪಿ ವಿಷಯ ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಸಾಕಷ್ಟು ಬೆಳವಣಿಗೆ ಹೊಂದಿದೆ. ಈ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಪರಿಶ್ರಮ ಮತ್ತು ಕೌಶಲ್ಯದ ಅಗತ್ಯವಿದೆ ಎಂದು ಅಲೈಡ್ ಹೆಲ್ತ್ ಕೇರ್ ಕೌನ್ಸಿಲ್ ಚೇರಮನ್ ಮತ್ತು ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಡಾ.ಇಫ್ತಿಕರ್ ಫರೀದ್ ಯುವ ಪದವೀಧರರಿಗೆ ಕಿವಿಮಾತು ಹೇಳಿದರು.

ನಗರದ ಬಿವಿವಿ ಸಂಘದ ಫಿಜಿಯೋಥೆರಪಿ ಕಾಲೇಜಿನ 3ನೇ ಪದವಿ ಪ್ರದಾನ ಸಮಾರಂಭದಲ್ಲಿ ಪದವೀಧರರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಫಿಜಿಯೋಥೆರಪಿ ಶಿಕ್ಷಣ ಪೂರ್ಣಗೊಳಿಸಿದರೂ ಸಂಶೋಧನಾ ಸಮ್ಮೇಳನಗಳಲ್ಲಿ ಭಾಗವಹಿಸಿ ಪರಿಣತಿಹೊಂದಿ. ಬಾಗಲಕೋಟೆಯಂತಹ ಸಣ್ಣ ಜಿಲ್ಲೆಯಲ್ಲಿ ವಿವಿಧ ಪ್ರಕಾರದ ಅತ್ಯುತ್ತಮ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಿರುವ ಡಾ.ವೀರಣ್ಣ ಚರಂತಿಮಠ ಅವರು ಜಿಲ್ಲೆ ಮಾತ್ರವಲ್ಲದೆ ಇಡೀ ರಾಜ್ಯದಲ್ಲೇ ಶೈಕ್ಷಣಿಕ ಕ್ರಾಂತಿಗೆ ಕಾರಣರಾಗಿರುವರು ಎಂದರು.

ಅಧ್ಯಕ್ಷತೆ ವಹಿಸಿದ ಬಿವಿವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಂ.ಸಜ್ಜನ (ಬೇವೂರ) ಅವರು ಬಿವಿವಿ ಸಂಘದ ಇಂದಿನ ಈ ಯಶೋಗಾಥೆಯ ಹಿಂದೆ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅವರ ಪರಿಶ್ರಮವಿದೆ. ಅವರು ಸ್ಥಾಪಿಸಿದ ಅತ್ಯುತ್ತಮ ಶಿಕ್ಷಣ ಸಂಸ್ಥೆಯಲ್ಲಿ ಪದವಿ ಪಡೆದು ವೃತ್ತಿಬದುಕನ್ನು ಆರಂಭಿಸುತ್ತಿರುವಿರಿ. ಉತ್ತಮ ಸನ್ನಡತೆ ಮೈಗೂಡಿಸಿಕೊಂಡು ಸಮಾಜಕ್ಕೆ ನಿಮ್ಮ ಕೊಡುಗೆ ನೀಡಿ ಎಂದು ಹೇಳಿ ಯುವಪದವೀಧರರ ಭವಿಷ್ಯ ಉಜ್ವಲವಾಗಲೆಂದು ಶುಭಹಾರೈಸಿದರು.

ಪ್ರಾಚಾರ್ಯ ಡಾ.ಮಹಾಂತೇಶ ಬಿರಡಿ ಸ್ವಾಗತಿಸಿದರು. ಡಾ.ಶ್ರೇಯಾ ಸೌಕಾರ್ ಮತ್ತು ಡಾ.ಶ್ರದ್ಧಾ ರಂಗದಾಳ ಅತಿಥಿಗಳನ್ನು ಪರಿಚಯಿಸಿದರು. ಡಾ.ಸುಚಿತ್ರಾ ದಿವಾನಮಲ್ ವೈದ್ಯಕೀಯ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಮತ್ತು ಡಾ.ಕರ್ನಾಲಿ ನಾಯಕ್ ವಂದಿಸಿದರು. ಡಾ.ಕಿರಣ ಮತ್ತು ಡಾ.ಸ್ವಾತಿ ನಿರೂಪಿಸಿದರು.

ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮು ಕೋರಾ, ಪ್ರಾಚಾರ್ಯ ಡಾ.ಮಹಾಂತೇಶ ಬಿರಡಿ ಮತ್ತು ಉಪಪ್ರಾಚಾರ್ಯೆ ಡಾ.ಸುಚಿತ್ರಾ ದಿವಾನಮಲ್ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.



ನೀಟ್-2026 ಮರುಪರೀಕ್ಷೆ: ಜಿಲ್ಲಾಧಿಕಾರಿ ಭೇಟಿ, ಪರಿಶೀಲನೆ

ಬಾಗಲಕೋಟೆ: ಜಿಲ್ಲೆಯಲ್ಲಿ ಜೂ.21ರಂದು ನಡೆಯುತ್ತಿರುವ ನೀಟ್-2026 ಮರು ಪರೀಕ್ಷೆಯನ್ನು ಸುಗಮ ಹಾಗೂ ಪಾರದರ್ಶಕವಾಗಿ ನಡೆಸುವ ನಿಟ್ಟಿನಲ್ಲಿ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಬಾಗಲಕೋಟೆ ನಗರದ ಬವಿವ ಸಂಘದ ಪಾಲಿಟೆಕ್ನಿಕ್ ಕಾಲೇಜ, ಸೈನ್ಸ್ ಕಾಲೇಜ, ಕಾಮರ್ಸ ಕಾಲೇಜ, ಸರಕಾರಿ ಪದವಿ ಪೂರ್ವ ಕಾಲೇಜ ಹೈಸ್ಕೂಲ ವಿಭಾಗ, ನವನಗರದ ಆದರ್ಶ ವಿದ್ಯಾಲಯ, ಸ್ಥಾಪಿಸಲಾದ ನೀಟ್ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಭದ್ರತಾ ವ್ಯವಸ್ಥೆ, ಅಭ್ಯರ್ಥಿಗಳ ಪ್ರವೇಶ, ಆಸನಗಳ ವ್ಯವಸ್ಥೆ, ಸಿಸಿಟಿವಿ ನಿಗಾ, ಕುಡಿಯುವ ನೀರು, ವಿದ್ಯುತ್ ಪೂರೈಕೆ, ಶೌಚಾಲಯ ಸೇರಿದಂತೆ ಮೂಲಸೌಕರ್ಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಪರೀಕ್ಷಾ ಕೇಂದ್ರಗಳಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಪರೀಕ್ಷಾ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮಕೈಗೊಳ್ಳಲು ತಿಳಿಸಿದರು. ನೀಟ್ ಮರು ಪರೀಕ್ಷೆಗೆ11 ಪರೀಕ್ಷಾಕೇಂದ್ರಗಳಿದ್ದು, ಪ್ರತಿಯೊಂದು ಕೇಂದ್ರಗಳಿಗೆ 10 ಜನ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಗೌಪ್ಯ ಸಾಮಗ್ರಿಗಳನ್ನು ಸುರಕ್ಷಿತವಾಗಿ ನಿರ್ವಹಿಸಲು ಬ್ಯಾಂಕಿನ ಸ್ಟ್ರಾಂಗ್ ರೂಮ್‌ಗೆ ಓರ್ವ ಎ.ಎಸ್.ಐ ಮತ್ತು 4 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದೆ. ಪರೀಕ್ಷೆಗಳು ಮಧ್ಯಾಹ್ನ 2 ರಿಂದ ಸಂಜೆ 5.15 ಗಂಟೆಯವರೆಗೆ ನಡೆಯಲಿದ್ದು, ಪರೀಕ್ಷಾ ಅಭ್ಯರ್ಥಿಗಳ ಪ್ರಿಸ್ಕಿಂಗ್ ಕಾರ್ಯ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆವರೆಗೆ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಪ್ರಭಾಕರ ಪಾಟೀಲ ಸೇರಿದಂತೆ ಇತರರು ಇದ್ದರು.

ಮುಖ್ಯಾಧಿಕಾರಿಯಾಗಿ ಅಧಿಕಾರ ಸ್ವೀಕಾರ



ಬಾದಾಮಿ: ನಗರೋತ್ಥಾನ ಅನುದಾನ ಸದ್ಬಳಕೆ ಮಾಡಿಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ. ರಸ್ತೆಗಳ ದುರಸ್ತಿಗೆ ಮೊದಲ ಆದ್ಯತೆ ನೀಡಿ, ಸ್ವಚ್ಛ ಸುಂದರ ನಗರ ನಿರ್ಮಾಣವೇ ನನ್ನ ಗುರಿಯಾಗಿದೆ ಎಂದು ನೂತನ ಪುರಸಭೆ ಮುಖ್ಯಾಧಿಕಾರಿ ಕೆ.ಎಚ್.ಮುಜಾವರ ಹೇಳಿದರು. ನೂತನ ಬಾದಾಮಿ ಪುರಸಭೆ ಮುಖ್ಯಾಧಿಕಾರಿಯಾಗಿ ಕೆ.ಎಚ್.ಮುಜಾವರ ಹಾಗೂ ನಿರ್ಗಮಿತ ಮುಖ್ಯಾಧಿಕಾರಿ ಬಂದೆನವಾಜ ಡಾಂಗೆ ಅವರಿಂದ ಅಧಿಕಾರ ಹಸ್ತಾಂತರ ಮಾಡಿಕೊಂಡು ಮಾತನಾಡಿದರು. ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ನಿರ್ಗಮಿತ ಮುಖ್ಯಾಧಿಕಾರಿ ಬಂದೆನವಾಜ ಡಾಂಗೆ ಅವರಿಗೆ ಬೇರೆ ಕಡೆಗೆ ವರ್ಗಾವಣೆಯಾದ ಪ್ರಯುಕ್ತ ನೂತನ ಮುಖ್ಯಾಧಿಕಾರಿ ಮುಜಾವರ ಅವರಿಗೆ ಪುಸ್ತಕ ನೀಡಿ ಪುರಸಭೆ ಸಿಬ್ಬಂದಿಗಳು ಸ್ವಾಗತಿಸಿದರು. ಸಿಬ್ಬಂದಿ ಉಪಸ್ಥಿತರಿದ್ದರು.

ಇಂದು ಗುರುವಂದನಾ ಕಾರ್ಯಕ್ರಮ

ಅಮೀನಗಡ: ಇಲ್ಲಿನ ಸಂಗಮೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ 1981–82ನೇ ಸಾಲಿನ ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳಿಂದ ಜೂ.21ರಂದು ಭಾನುವಾರ ಬೆಳಗ್ಗೆ 10:30ಕ್ಕೆ ಸಂಗಮೇಶ್ವರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಸ್ನೇಹ ಸಮ್ಮೇಳನ ಮತ್ತು ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಮೀನಗಡ–ಯರಿಗೋನಾಳದ ಪ್ರಭುಶಂಕರೇಶ್ವರ ಗದ್ದಿಗೆಮಠ ಹಾಗೂ ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶಂಕರರಾಜೇಂದ್ರ ಸ್ವಾಮಿಗಳು ಪಾವನ ಸಾನ್ನಿಧ್ಯ ವಹಿಸಲಿದ್ದಾರೆ. ಅಮೀನಗಡ ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಚೇರಮನ್ ಐ.ಎಸ್.ಅಂಗಡಾಳ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಮೀನಗಡ ಸಂಗಮೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಚೇರಮನ್ ಸಿ.ಡಿ.ಇಲಕಲ್ಲ ಜ್ಯೋತಿ ಬೆಳಗಿಸಲಿದ್ದಾರೆ. ಸಂ.ಪ.ಪೂ ಪ್ರೌಢಶಾಲಾ ವಿಭಾಗದ ಉಪಪ್ರಾಚಾರ್ಯ ಆರ್.ಜಿ.ಸನ್ನಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಮೀನಗಡ ಸಂಗಮೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಚೇರಮನ್ ಡಾ.ಎಂ.ವಿ.ಹಾದಿಮನಿ ಹಾಗೂ ಸಂಗಮೇಶ್ವರ ಇಂಗ್ಲಿಷ್ ಮೀಡಿಯಂ ಸ್ಕೂಲ್ ಕಾಲೇಜಿನ ಚೇರಮನ್ ಆರ್.ಕೆ.ಗೌಡರ ಆಗಮಿಸಲಿದ್ದಾರೆ. ಅತಿಥಿಗಳಾಗಿ ನಿವೃತ್ತ ಉಪನ್ಯಾಸಕ ಪಿ.ಡಿ.ಸಜ್ಜನ ಮತ್ತು ನಿವೃತ್ತ ಶಿಕ್ಷಕ ಎಸ್.ಎಸ್.ಶಿರೋಳ ಉಪಸ್ಥಿತರಿರಲಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಯೋಗ ತರಬೇತಿ

ಬೀಳಗಿ: ಬಾಲ್ಯದಿಂದಲೇ ಯೋಗಾಭ್ಯಾಸ ರೂಢಿಸಿಕೊಳ್ಳುವುದರಿಂದ ಏಕಾಗ್ರತೆ, ಶಿಸ್ತು, ದೈಹಿಕ ಸದೃಢತೆ ವೃದ್ಧಿಯಾಗುವುದರಿಂದ ದೈಹಿಕ ಶಿಕ್ಷಕ, ಯೋಗಪಟು ಕರಿಯಪ್ಪ ದೊಡ್ಡಿಹಾಳ ವಿದ್ಯಾರ್ಥಿಗಳಿಗೆ ವಿವಿಧ ಯೋಗಾಸನದ ಭಂಗಿ ಮತ್ತು ಪ್ರಾಣಾಯಾಮದ ಕುರಿತು ಪ್ರಾತ್ಯಕ್ಷಿಕೆ ನೀಡುತ್ತ ಯೋಗಾಭ್ಯಾಸ ಮಾಡಿಸುತ್ತಿರುವರು.



ವೃತ್ತಿಯಲ್ಲಿ ದೈಹಿಕ ಶಿಕ್ಷಕರಾಗಿರುವ ಕೆ.ಟಿ.ದೊಡ್ಡಾಳ ಬಿಪಿ.ಇಡಿ ಪದವಿ ಜೊತೆಗೆ ಸಿವೈಎಸ್ ಯೋಗ ಪದವಿ ಪಡೆದಿದ್ದು, ಯೋಗದ ಬಗ್ಗೆ ಆಳವಾದ ಅಧ್ಯಯನ ಮಾಡಿರುವರು. ಯೋಗ ಶಿಬಿರಗಳನ್ನು ಸರ್ಕಾರಿ ಶಾಲೆಯ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಉಚಿತವಾಗಿ ಹೇಳಿಕೊಡುತ್ತಿರುವರು.

ಅರಕೇರಿ ಗ್ರಾಮದ ಎಂ.ಎಂ.ಸಾವಕಾರ ಸರ್ಕಾರಿ ಪ್ರೌಢ ಶಾಲೆಯಲ್ಲಿ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿರುವ 7 ದಿನಗಳ ಉಚಿತ ಯೋಗ ಶಿಬಿರ ಆಯೋಜಿಸಿ ಆರೋಗ್ಯದ ಕುರಿತು ಜಾಗೃತಿ ಮೂಡಿಸುತ್ತಿರುವರು. ಪ್ರತಿದಿನ ಬೆಳಗ್ಗೆ 5.30ರಿಂದ 7ಗಂಟೆಯವರೆಗೆ ಆರೋಗ್ಯಕರ ವಯಸ್ಸಿಗೆ ಯೋಗ ಎಂಬ ಧ್ಯೇಯದೊಂದಿಗೆ ನಡೆಯುತ್ತಿರುವ ವಿಶೇಷ ಶಿಬಿರದಲ್ಲಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸೇರಿದಂತೆ ಪ್ರತಿದಿನ 220ಕ್ಕೂ ಹೆಚ್ಚು ಶಿಬಿರಾರ್ಥಿಗಳು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಕರಿಯಪ್ಪ ದೊಡ್ಡಾಳ ಶಿಬಿರಾರ್ಥಿಗಳಿಗೆ ಸೂರ್ಯ ನಮಸ್ಕಾರ, ತ್ರಿಕೋನಾಸನ, ವೃಕ್ಷಾಸನ, ಅರ್ಧ ಹಾಲಾಸನ, ಸರ್ವಾಂಗಾಸನ, ಭುಜಂಗಾಸನ ಸೇರಿದಂತೆ 20ಕ್ಕೂ ಹೆಚ್ಚು ಪ್ರಮುಖ ಆಸನಗಳನ್ನು ಪ್ರಾಯೋಗಿಕವಾಗಿ ಹೇಳಿಕೊಡುತ್ತಿದ್ದಾರೆ. ಶಿಕ್ಷಕ ಕರಿಯಪ್ಪ ದೊಡ್ಡಾಳ ಈ ಮೊದಲು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗುಂಡೂರ ಗ್ರಾಮದಲ್ಲಿ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ವೃತ್ತಿಯ ಜೊತೆಗೆ ಹಲವಾರು ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಶಿಕ್ಷಕ ಕೆ.ಟಿ.ದೊಡ್ಡಾಳ ಅವರಿಂದ ಯೋಗ ಕಲಿತ ವಿದ್ಯಾರ್ಥಿಗಳು ವಿಭಾಗ ಮತ್ತು ರಾಜಮಟ್ಟದಲ್ಲಿ ಸಾಧನೆ ಮಾಡಿದ್ದು, ಶ್ರೀಯುತರ ಸಾಧನೆ ಗುರ್ತಿಸಿ ಶಿಕ್ಷಣ ಇಲಾಖೆ ತಾಲೂಕು ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಿದೆ. ವಿವಿಧ ಸಂಘ–ಸಂಸ್ಥೆಗಳು 30ಕ್ಕೂ ಹೆಚ್ಚು ಪ್ರಶಸ್ತಿ ನೀಡಿ ಗೌರವಿಸಿವೆ.

ಯೋಗದಲ್ಲಿ ನೇಕಾರ ಹುಡುಗಿ ಸಾಧನೆ

ಮಲ್ಲಿಕಾರ್ಜುನ ತುಂಗಳ

ರಬಕವಿ–ಬನಹಟ್ಟಿ: ನೇಕಾರ ಕುಟುಂಬದ ಗ್ರಾಮೀಣ ಭಾಗದ ಈ ಬಾಲಕಿ, ರಾಷ್ಟ್ರಮಟ್ಟದ ಸ್ಪರ್ಧೆಗೆ ಸಜ್ಜಾಗಿದ್ದಾಳೆ. ನಿರಂತರ ಅಭ್ಯಾಸ ಮಾಡಿದ್ದರ ಫಲವಾಗಿ ರಾಜ್ಯಮಟ್ಟದಲ್ಲಿ ಪೈಪೋಟಿ ಮಾಡುತ್ತಿದ್ದ ಈ ಬಾಲೆ ರಾಷ್ಟ್ರಮಟ್ಟಕ್ಕೆ ಪೈಪೋಟಿ ನೀಡಲು ಸಿದ್ಧಳಾಗಿದ್ದಾಳೆ.

> ಓದಿನೊಂದಿಗೆ ಯೋಗದಲ್ಲಿಯೂ ಸಾಧನೆಗೈಯುತ್ತಿರುವ ವಿದ್ಯಾರ್ಥಿ ಶ್ರಾವಣಿ ಭದ್ರನ್ನವರ ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವದು ಹೆಮ್ಮೆಯೆನಿಸುತ್ತಿದೆ.
> ■ ಪ್ರೊ.ಬಿ.ಕೆ.ಕೊಣ್ಣೂರ, ಪ್ರಾಚಾರ್ಯರು, ಕೆಸಿಎಸ್ ಕಾಲೇಜು

ಬಾಗಲಕೋಟೆ ಜಿಲ್ಲೆ ರಬಕವಿ–ಬನಹಟ್ಟಿ ತಾಲೂಕಿನ ಶ್ರಾವಣಿ ತಮ್ಮಣ್ಣಪ್ಪ ಭದ್ರನ್ನವರ 15 ವರ್ಷ ವಯೋಮಿತಿಯಲ್ಲಿ ಸ್ಪರ್ಧೆಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾಳೆ.

ಯುಕೆಜಿಯಿಂದಲೇ ರನ್ನ ಬೆಳಗಲಿಯ ಜ್ಞಾನ ಗುರುಕುಲದಲ್ಲಿ ತನ್ನ ತಾಯಿ ಶೀತಲ್ ರ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ಕಲಿಯುತ್ತಾ ಪ್ರಸ್ತುತ ಯಲ್ಲಟ್ಟಿಯ ಕೊಣ್ಣೂರ ಆಂಗ್ಲಮಾಧ್ಯಮ ಶಾಲೆಯಲ್ಲಿ 9ನೇ ವರ್ಗ ಕಲಿಯುತ್ತಿದ್ದಾಳೆ. ಅಲ್ಲಿನ ಗುರುಗಳಾದ ಮಲ್ಲಿಕಾರ್ಜುನ ಬಚಡಿ ಮಾರ್ಗದರ್ಶನದಿಂದ ಜಿಲ್ಲಾ ಹಾಗೂ ರಾಜ್ಯಮಟ್ಟದ ಪದಕಗಳನ್ನು ಪಡೆದು ಇದೀಗ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವದು ವಿಶೇಷ. ಕೊಣ್ಣೂರ ಶಾಲೆಯಲ್ಲಿ ಊಟದ ವಿರಾಮ ಹಾಗೂ ಶಾಲೆ ಬಿಟ್ಟ ನಂತರ ಒಂದು ಗಂಟೆ ಯೋಗದ ಅಭ್ಯಾಸದಲ್ಲಿ ನಿರತಳಾಗುತ್ತಿದ್ದಳು. ಕಲಿಕೆಯ ಆಸಕ್ತಿಯಿಂದ ಬಹುಬೇಗ ಯೋಗದಲ್ಲಿ ಹಿಡಿತ ಕಂಡುಕೊಂಡಳು ಅದರ ಫಲವೇ ಇಂದು ಸಾಧನೆಗೈಯಲು ಸಾಧ್ಯವಾಗಿದೆ.



ರಾಜ್ಯ ಹಾಗೂ ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಅತ್ಯಂತ ಕಠಿಣ ಆಸನಗಳನ್ನು ಮಾಡಬೇಕಾಗುತ್ತದೆ. ಅದನ್ನು ಕಡಿಮೆ ಎಂದರೂ 10 ಸೆಕೆಂಡುಗಳ ಕಾಲ ಉಸಿರು ಬಿಗಿ ಹಿಡಿದು ಮಾಡಬೇಕು. ಬೆರಳು, ಕೈ–ಕಾಲುಗಳು ಸ್ವಲ್ಪ ಓರೆಕೋರೆಯಾದರೂ ಅಂಕ ಕಡಿತಗೊಳ್ಳುತ್ತದೆ. ಇಷ್ಟೆಲ್ಲಾ ಸವಾಲುಗಳನ್ನು ಎದುರಿಸುವಂತೆ ಈತಳಿಗೆ ತರಬೇತಿ ನೀಡಲಾಗಿದೆ. ಶ್ರಾವಣಿ ಯೋಗದೊಂದಿಗೆ ಹಾಡು, ಕ್ರೀಡೆ, ಓಟದ ಸ್ಪರ್ಧೆಯೊಂದಿಗೆ ಓದಿನಲ್ಲಿಯೂ ಮುಂಚೂಣಿಯಲ್ಲಿದ್ದಾಳೆ. ಕರ್ನಾಟಕದಿಂದ ಪ್ರತಿನಿಧಿಸಿರುವ ಯೋಗಪಟು ಬನಹಟ್ಟಿಯ ಶ್ರಾವಣಿ ತಮ್ಮಣ್ಣಪ್ಪ ಭದ್ರನ್ನವರ ಬರುವ ಜೂ.26ರಿಂದ 28ವರೆಗೆ ಉತ್ತರಾಖಂಡದಲ್ಲಿ ಜರುಗುವ ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಚಾಂಪಿಯನ್ ಷಿಪ್–2026ರಲ್ಲಿ ಪಾಲ್ಗೊಳ್ಳಲಿದ್ದಾಳೆ.

ವಿದ್ಯುತ್ ವ್ಯತ್ಯಯ ಇಂದು

ಬಾಗಲಕೋಟೆ: ಬಾಗಲಕೋಟೆ ವಿಭಾಗ ವ್ಯಾಪ್ತಿಯ 110 ಕೆವಿ ವಿದ್ಯುತ್ ಕೇಂದ್ರಗಳ 1ನೇ ತ್ರೈಮಾಸಿಕ ನಿರ್ವಹಣಾ ಕಾಯದ ನಿಮಿತ್ತ ಜೂ.21ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಹುನಗುಂದ, ಅಚನೂರ, ಇಲಕಲ್ಲ, ಕಂದಗಲ್ಲ, ಕೂಡಲ ಸಂಗಮದ 110 ಕೆವಿ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. ಹುನಗುಂದ 110 ಕೆವಿ ವಿದ್ಯುತ್ ವಿತರಣಾ ಕೇಂದಿಂದ ಹೊರಡುವ ವಿ.ಜೆ.ಎಸ್.ಡಬ್ಲ್ಯೂ ಲೈನ್, 110 ಕೆವಿ ಕೂಡಲ ಸಂಗಮ ಲೈನ್, 33 ಕೆವಿ ಕರಡಿ, ಅಮೀನಗಡ, 33 ಕೆವಿ ಮೈತ್ರಾ ಅದ್ವೈತ ಸೋಲಾರ ಲಿಮಿಟೆಡ್, ಎಫ್–1 ಎನ್.ಜೆ.ವಾಯ್, ಕಡಿವಾಳ, ಎಫ್–2 ಎನ್‌ಜೆವೈ ಚಿತ್ತವಾಡಗಿ, ಎಫ್–3 ಟೌನ್, ಎಫ್–4 ಎಸ್.ವಿ.ಎಂ, ನಾಗೂರ, ಇದ್ದಲಗಿ, ಇಂಡ್ಸ್ಟ್ರೀಸ್, ವಾಟರ ಸಪ್ಲಾಯ್, ಅಮರಾವತಿ ಮತ್ತು ಧನ್ನೂರ ಎನ್ ಜೆವಯ್. ಅಚನೂರ 110 ಕೆವಿ ವಿದ್ಯುತ್ ವ್ಯಾಪ್ತಿಯ ಬೆಣ್ಣೂರ ಐಪಿ, ಮುಗಳೊಳ್ಳಿ ಎನ್‌ಜೆವಾಯ್, ಮುಗಳೊಳ್ಳಿ ಐಪಿ, ಹಳ್ಳೂರ ಐಪಿ, ಹಳ್ಳೂರ ಎನ್‌ಜೆ.ವಾಯ್, ಅಚನೂರ ಎನ್‌ಜೆವಾಯ್, ಸಂಗಾಪೂರ ಐಪಿ, ಕಡ್ಲಿಮಟ್ಟಿ ಐಪಿ. ಇಲಕಲ್ಲ 110 ಕೆವಿ ಮಾರ್ಗದ 110 ಕೆವಿ ಅವಡಾ ಸೋಲಾರ ಎನರ್ಜಿ ಪ್ರೈವೇಟ್ ಲಿಮಿಟೆಡ್, 33 ಕೆವಿ ಪೇಸ್ ಪಾವರ್ ಲಿಮಿಟೆಡ್, 33 ಕೆವಿ ಗುಡೂರ, ಬಂಡರಗಲ್ಲ, ಇಲಕಲ್ಲ, ವಜ್ಜಲ್, ಗುಗ್ಗಲಮರಿ ಎನ್‌ಜೆವೈ ಫಾಯರ್ ಸ್ಟೇಶನ್, ಹೊಸೂರ, ಹನುಮನಾಳ, ದುರ್ಗಾ, ಉಪನಾಳ, ಬಳಕುಂದಿ, ಜೈನ್, ಕಂದಗಲ್ಲ 33 ಕೆವಿ ಕೇಂದ್ರ ವ್ಯಾಪ್ತಿಯ ಮಾರಟಗೇರಿ, ಸೋಮಲಾಪೂರ ಎನ್‌ಜೆವಾಯ್, ಕಂದಗಲ್ಲ, ಹಿರೇಓತಗೇರಿ ಎನ್ ಜೆವಾಯ್, ಗೋನಾಳ ಹಾಗೂ ಕೃಷ್ಣಾಪುರ ಎನ್‌ಜೆವಾಯ್, ಕೂಡಲಸಂಗಮ ಕೆಂಗಲ್ ಎಫ್–2, ಎಫ್–3 ಎನ್‌ಜೆವಾಯ್, ಎಫ್–4 ಕಟಗೂರ, ಬೊಮ್ಮನಗಿ, ಮ್ಯಾಗೇರಿ, ಡೋಮನಾಳ, ಸಂಗಮ, ಗಂಜಿಹಾಳ, ಮೇದನಾಪೂರ, ವರಗಾದಿನ್ನಿ ಮತ್ತು ಬಿಸಲದಿನ್ನಿ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕಿರುಸುದ್ದಿ



ಕೊಲ್ಹಾರ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಶನಿವಾರ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರ ನೇತೃತ್ವದಲ್ಲಿ ಪಟ್ಟಣದ ವಿಶ್ವಭಾರತಿ ವಿದ್ಯಾವರ್ಧಕ ಸಂಘದ ಯಲ್ಲಮ್ಮ ದೇವಿ ಸಿಬಿಎಸ್‌ಇ ಶಾಲಾ ಆವರಣದಲ್ಲಿ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಯೋಗ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಯೋಗ ತರಬೇತಿ ನೀಡಿದರು. ಸಿ.ಎಂ.ಗಣಕುಮಾರ, ಚನ್ನಪ್ಪ ಗಿಡ್ಡಪ್ಪಗೋಳ ಹಾಗೂ ಮಕ್ಕಳು ಭಾಗವಹಿಸಿದ್ದರು.

ಉಪನಯನ ಇಂದು

ಮುದ್ದೇಬಿಹಾಳ: ನಗರದ ಹೊರ ವಲಯದ ಹುಡಲಗೇರಿ ರಸ್ತೆಯಲ್ಲಿ ಇರುವ ಪಾರ್ಶ್ವನಾಥ ತೀರ್ಥಂಕರ ಹಾಗೂ ಪದ್ಮಾವತಿ ದೇವಾಲಯದಲ್ಲಿ ಜೂ.21ರಂದು ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ಉಚಿತ ಸಾಮೂಹಿಕ ಉಪನಯನ ಹಾಗೂ ವ್ರತೋಪದೇಶ ಕಾರ್ಯಕ್ರಮ ಜೊತೆಗೆ ಧರ್ಮಸಭೆಯ ಆಯೋಜನೆ ಮಾಡಲಾಗಿದೆ. ಊರಿನ ಪ್ರತಿಷ್ಠಿತ ಉದ್ಯಮಿಗಳಾದ ದಂಡಾವತಿ ಪರಿವಾರದವರು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು ಶಿವಮೊಗ್ಗ ಜಿಲ್ಲೆ ಹೊಂಬುಜ ಜೈನ ಮಠದ ಡಾ.ದೇವೇಂದ್ರ ಕೀರ್ತಿ ಭಟ್ಟಾರ್ಕಾರ್ಯ ಸ್ವಾಮೀಜಿ ಸಾನಿಧ್ಯ ವಹಿಸುವರು. ಪದ್ಮಾವತಿ ಟ್ರಸ್ಟ್ ಕಮಿಟಿ ಅಧ್ಯಕ್ಷ ಅಭಿನಂದನ ಗೋಗಿ ಅಧ್ಯಕ್ಷತೆ ವಹಿಸುವರು. ಪತ್ರಕರ್ತ ಅಜಿತ್ ಹನುಮಕ್ಕನವರ, ಬೆಂಗಳೂರು ಕೇಂದ್ರ ಕಾರಾಗೃಹದ ಡಿಐಜಿ ಜಿನೇಂದ್ರ ಖನಗಾವಿ, ದಕ್ಷಿಣ ಭಾರತ ದಿಗಂಬರ ಜೈನ ತೀರ್ಥಕ್ಷೇತ್ರ ಕಮಿಟಿಯ ವಿನೋದ್ ಬಾಕ್ಲೀವಾಲಾ, ಬಲ್ಲಪ್ಪ ನಂದಗಾವಿ, ಅಪ್ಪಾಸಾಹೇಬ ಮುತ್ತಿನ ಸೇರಿದಂತೆ ಹಲವು ಅತಿಥಿಗಳು ಭಾಗವಹಿಸುವರು ಎಂದು ದೇವಸ್ಥಾನ ಕಮಿಟಿ ಸದಸ್ಯರು ತಿಳಿಸಿದ್ದಾರೆ.

ಸ್ವಚ್ಛತಾ ಕೆಲಸ ಇಂದು

ಮುದ್ದೇಬಿಹಾಳ: ನಗರದ ಅಂತರ್ಜಲ ಪೂರಣದ ದೃಷ್ಟಿಯಿಂದ ಮಹತ್ವದ ಜೋಡಿ ಕೆರೆ ಸ್ವಚ್ಛಗೊಳಿಸುವ ಕೆಲಸವನ್ನು ಜೂ.21ರಂದು ಭಾನುವಾರ ಬೆಳಗ್ಗೆ 7 ಗಂಟೆಗೆ ಸ್ಥಳೀಯ ಎಪಿಜೆ ಅಬ್ದುಲ್ ಕಲಾಂ ಯುವ ಸಂಘದ ಜೊತೆಯಲ್ಲಿ ಹಸಿರು ತೋರಣ ಗೆಳೆಯರ ಬಳಗ ಸಂಘಟನೆಯು ಕೈಗೊಂಡಿಸಲಿದೆ. ಈ ಸಂಬಂಧ ಹಸೀಗೊಳಿಸು ಸದಸ್ಯರು ಬಳಗದ ಟೀ ಶರ್ಟ್ ಧರಿಸಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು, ಸ್ವಚ್ಛ ಪರಿಸರ ನಿರ್ಮಾಣದ ಕೆಲಸಕ್ಕೆ ಕೆರೆಯಂಗಳದಲ್ಲಿ ನೇರವಾಗಿ ಆಗಮಿಸಬೇಕು ಎಂದು ಸಂಘಟನೆಯ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಿಯಾಂಕ್ ಖರ್ಗೆ ವಿಚಾರ ನ್ಯಾಯಯುತ: ಆಲಗೂರ

ವಿಜಯಪುರ: ರಾಜ್ಯದ ನೂತನ ಗೃಹಮಂತ್ರಿ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಸಂಘಟನೆಯ ನೋಂದಣಿಯನ್ನು ಮಾಡಿಸಬೇಕು ಎಂಬ ವಿಚಾರ ವ್ಯಕ್ತಪಡಿಸಿರುವುದು ನ್ಯಾಯಯುತವಾಗಿದ್ದು, ಇದರಲ್ಲಿ ಅಂಜುವ ವಿಷಯ ಏನಿದೆ ಎಂದು ಕಾಂಗ್ರೆಸ್ ಮಾಜಿ ಜಿಲ್ಲಾ ಅಧ್ಯಕ್ಷ ಪ್ರೊ.ರಾಜು ಆಲಗೂರ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ದೇಶದಲ್ಲಿ ಇರುವ ಎಲ್ಲ ಸಂಘ, ಸಂಸ್ಥೆಗಳು ನೋಂದಣಿಯನ್ನು ಮಾಡಿಸಿಕೊಂಡಿರುವಾಗ ಸಂಘ ಪರಿವಾರ ಏಕೆ ನೋಂದಣಿ ಮಾಡಿಸಿಕೊಳ್ಳಬಾರದು ಎಂಬ ಒಬ್ಬ ದೇಶ ಪ್ರಜೆಯಾಗಿ ಹಾಗೂ ರಾಜ್ಯದ ಗೃಹಮಂತ್ರಿಗಳಾಗಿ ಪ್ರಶ್ನೆಯನ್ನು ಪ್ರಿಯಾಂಕ್ ಖರ್ಗೆ ದೇಶದ ಮುಂದೆ ಇಟ್ಟಿದ್ದಾರೆ. ಈ ಹೇಳಿಕೆಗೆ ಪ್ರತಿಯಾಗಿ ನಮ್ಮ ಸಂಸದರಾದ ರಮೇಶ ಜಿಗಜಿಣಗಿ ಅವರು ಖರ್ಗೆ ಅವರ ತಲೆಯಲ್ಲಿ ಬುದ್ಧಿ ಇಲ್ಲ, ದಲಿತರು ಆರ್‌ಎಸ್‌ಎಸ್ ಬಗ್ಗೆ ಚಕಾರ ಎತ್ತಬಾರದು ಚಕಾರ ಎತ್ತಿದರೆ ಸರ್ವನಾಶವಾಗುತ್ತಾರೆ ಎಂದು ಹೇಳುವುದು ಮೂರ್ಖತನದ ಪರಮಾವಧಿಯ ಹೇಳಿಕೆಯಾಗಿದೆ. ಇನ್ನು ಮುಂದೆ ಸಚಿವ ಪ್ರಿಯಾಂಕ್ ಖರ್ಗೆ ಬಗ್ಗೆ ಗೌರವವಾಗಿ ಮಾತನಾಡುವುದನ್ನು ಕಲಿಯಬೇಕು ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ತೋಟಗಾರಿಕೆ ಬೆಳೆ ವಿಮಾ ಯೋಜನೆಗೆ ಸೂಚನೆ

ವಿಜಯಪುರ: 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ದಾಳಿಂಬೆ, ಲಿಂಬೆ ಹಾಗೂ ದ್ರಾಕ್ಷಿ ಬೆಳೆಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅಧಿಸೂಚಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಸಿದ್ರಾಮಯ್ಯ ಬರಗಿಮಠ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಬೆಳೆಸಾಲ ಪಡೆದ ರೈತರು ಹಾಗೂ ಬೆಳೆ ಸಾಲ ಪಡೆಯದೆ ಇರುವ ರೈತರು ತಮ್ಮ ಆಧಾರ್ ಕಾರ್ಡ್ ಝುರಾಕ್ಸ್, ಪಹಣಿ ಪತ್ರಿಕೆ ಹಾಗೂ ಬ್ಯಾಂಕ್ ಪಾಸ್‌ಬುಕ್ ಪ್ರತಿಯೊಂದಿಗೆ ಹತ್ತಿರದ ಬ್ಯಾಂಕ್‌ಗಳಲ್ಲಿ ಅಥವಾ ಗ್ರಾಮ ಒನ್ ಕೇಂದ್ರ, ಸಿಎಸ್‌ಸಿ ಸೆಂಟರ್‌ಗಳಲ್ಲಿ ವಿಮಾ ಯೋಜನೆಯಡಿ ನೋಂದಾಯಿಸಿಕೊಳ್ಳಬಹುದಾಗಿದೆ. ದ್ರಾಕ್ಷಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಲು ಸೆ. 15 ಕೊನೆಯ ದಿನವಾಗಿದೆ.



ನಾಲತವಾಡ: ಅಗ್ನಿವೀರ ಆಯ್ಕೆಯಾದ ನಾಲತವಾಡ ಪಟ್ಟಣದ ಯುವಕರನ್ನು ಸ್ಥಳೀಯ ಶರಣ ವೀರೇಶ್ವರರ ಮಹಾ ಮನೆಯಲ್ಲಿ ಭಗತ್‌ಸಿಂಗ್ ಯುವಕರ ಸಂಘ, ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಸನ್ಮಾನಿಸಿದರು. ಸೈನಿಕರಾದ ಸುಧೀರ ಲಮಾಣಿ, ಪರ್ವತಗೌಡ ತಾತರೆಡ್ಡಿ, ಕಾರ್ಯಕ್ರಮ ಸಂಘಟನೆಯ ಪ್ರಮುಖರಾದ ಡಾ.ವೀರೇಶಗೌಡ ನೀಲಪ್ಪಗೌಡ ಖಾನಿಕೇರಿ, ರಮೇಶ.ಹ ಅಮಾತಿಗೌಡರ, ಪಪಂ ಸದಸ್ಯ ಸಂಗಪ್ಪ ಬಾರಡ್ಡಿ, ಮಲ್ಲು ಗಂಗನಗೌಡರ, ಮಲ್ಲು ಹುದ್ದಾರ, ಮಹಾಂತೇಶ ಮೇದಿಕಿನಾಳ, ಯಲ್ಲಪ್ಪ ಕೋರಡ್ಡಿ, ಪಾಪಣ್ಣ ಗಾದಿ, ಮಾಂತೇಶ ಮಸ್ಕಿ, ಗೋವಿಂದ್ ಗೌಡ ತಾತರಡ್ಡಿ ವೀರೇಶ ಸ್ಥಾವರಮಠ ಮಹಾಂತೇಶ್ ಸಜ್ಜನ ಸಿದ್ದು ಹಂಪನಗೌಡರ ರಫೀಕ್ ತಗ್ಗಿನಮನಿ ಉಪಸ್ಥಿತರಿದ್ದರು.

ಯೋಗದಿಂದ ಉತ್ತಮ ಆರೋಗ್ಯ: ಮಲ್ಲೇದ

ದೇವರಹಿಪ್ಪರಗಿ: ದಿನನಿತ್ಯ ಯೋಗ ಪದ್ಧತಿಯನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಜಾಲವಾದ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಸಂಗಮೇಶ ಮಲ್ಲೇದ ಹೇಳಿದರು. ತಾಲೂಕಿನ ಜಾಲವಾದ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಜೂ.21ರಂದು ವಿಶ್ವಯೋಗ ದಿನಾಚರಣೆಯ ಯೋಗಾಸನ ಪೂರ್ವ ತಯಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದಲ್ಲಿ ಯೋಗಾಸನದ ಮೂಲಕ ಹೆಸರಾದ ನಿಮ್ಮೂರಿನ ಯೋಗಪಟು ಸಿದ್ರಾಮಪ್ಪ ಗುಂದಗಿ ಅವರು ತಮ್ಮ ಇಳಿ ವಯಸ್ಸಿನಲ್ಲಿ ಅದ್ಭುತ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ. ಅವರಿಂದ ವಿಶ್ವಯೋಗ ದಿನದ ಮಾಹಿತಿ ಪಡೆದುಕೊಂಡ ಯೋಗ ಶಿಕ್ಷಣವನ್ನು ನಿತ್ಯ ಜೀವನದಲ್ಲಿ ನಿರಂತರವಾಗಿ ಅಳವಡಿಸಿಕೊಳ್ಳಬೇಕು ಎಂದರು. ಯೋಗಪಟು ಸಿದ್ರಾಮಪ್ಪ ಗುಂದಗಿ ಅವರು ಯೋಗಾಸನದ ಕೆಲವು ಬಂಗಿಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ನಂತರ ಶಿಕ್ಷಕರಿಂದ ಅವರನ್ನು ಸನ್ಮಾನಿಸಿ, ಗೌರವಿಸಿದರು. ಶಾಲೆಯ ಉಪ ಪ್ರಾಂಶುಪಾಲ ಎ.ಎಂ.ಹೊಸಗೌಡರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಬಿ.ಎಸ್.ಆಗಸಬಾಳ, ಆರ್.ಎಫ್.ನದಾಫ, ಬಸವರಾಜ ಕಮತರ, ಜಿ.ಕೆ.ಕುಂಬಾರ, ಎಚ್.ಎಂ.ಬಗಲಿ, ಎಂ.ಡಿ.ಹಳ್ಳಿ, ಸುನಿತಾ ಬಿರಾದಾರ,ಎ.ಎಸ್. ಪತ್ತಾರ, ಜಯಕ್ಕ, ಕವಿತಾ ಪಾಟೀಲ, ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿ, ಅತಿಥಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ದೇವರಹಿಪ್ಪರಗಿ: ತಾಲೂಕಿನ ಜಾಲವಾದ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಜೂ.21ರಂದು ವಿಶ್ವಯೋಗ ದಿನಾಚರಣೆಯ ಯೋಗಾಸನ ಪೂರ್ವ ತಯಾರಿ ಕಾರ್ಯಕ್ರಮದಲ್ಲಿ ಯೋಗಪಟು ಸಿದ್ರಾಮಪ್ಪ ಗುಂದಗಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

ರಾಷ್ಟ್ರ ರಕ್ಷಣೆ, ಸತ್ಕಾರ್ಯ ಕೈಗೊಳ್ಳುವ ಸಂಘ ಪರಿವಾರಕ್ಕೆ ನೋಂದಣಿ ಅಗತ್ಯವಿಲ್ಲ: ಡಬ್ಬಿ

ವಿಜಯಪುರ: ರಾಷ್ಟ್ರ ಹಿತರಕ್ಷಣೆ, ಸತ್ಕಾರ್ಯ ಕೈಗೊಳ್ಳುತ್ತ ಬಂದಿರುವ ಸಂಘ ಪರಿವಾರ ನೋಂದಣಿಯಾಗಲೇಬೇಕು ಎಂದೇನಿಲ್ಲ, ಸಂಘ ಪರಿವಾರದ ಹಿನ್ನೆಲೆ ಬಗ್ಗೆ ಗೃಹ ಸಚಿವರು ಮೊದಲು ಮುಖ್ಯಮಂತ್ರಿಗಳಿಗೆ ಕೇಳಲಿ ಎಂದು ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ವಿವೇಕಾನಂದ ಡಬ್ಬಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸಂಘ ಪರಿವಾರದ ಸ್ವಯಂ ಸೇವಕರು ಪ್ರಕೃತಿ ವಿಕೋಪ ಬಂದಾಗಲೂ ಸಹಾಯಕ್ಕೆ ಧಾವಿಸುತ್ತಾರೆ. ರಾಜ್ಯದ ಹಾಲಿ ಮುಖ್ಯಮಂತ್ರಿಗಳೇ ಸಂಘವನ್ನು ಒಪ್ಪಿಕೊಂಡು, ಸದನದಲ್ಲಿಯೇ ನಮಸ್ತೆ ಸದಾ ವತ್ಸಲೇ ಎಂದು ಹಾಡಿದ್ದಾರೆ, ಸಂಘದ ಶಾಖೆಗಳಿಗೆ ಹೋಗಿರುವೆ ಎಂದು ಹೇಳಿದ್ದಾರೆ, ಮೊದಲು ಗೃಹ ಸಚಿವರು ಸಂಘದ ಬಗ್ಗೆ ಅವರಲ್ಲಿ ಕೇಳಿಕೊಳ್ಳಲಿ ಎಂದರು.

ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್, ಪ್ರಣಬ್ ಮುಖರ್ಜಿ ಸೇರಿದಂತೆ ಅನೇಕ ಮಹಾನ್ ನಾಯಕರು ಸಂಘ ಪರಿವಾರದ ಶಾಖೆಗಳಿಗೆ ಭೇಟಿ ನೀಡಿದ್ದಾರೆ, ಉತ್ತಮ ಕಾರ್ಯ ಕೈಗೊಳ್ಳಲು ನೋಂದಣಿ ಏಕೆ ಬೇಕು ಎಂದು ಪ್ರಶ್ನಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ಸಾಧನೆಗಳ ಬಗ್ಗೆ ನಾವು ಹೇಳಲು ಸಿದ್ಧ, ಗಾಂಧಿಚೌಕ್ ಬಳಿಯೇ ದೊಡ್ಡ ವೇದಿಕೆ ಹಾಕಿ, ಅಲ್ಲಿಯೇ ಬಂದು ನಾವು ಕೇಂದ್ರ ಸರ್ಕಾರದ ಸಾಧನೆ ಹೇಳಲು ಸಿದ್ಧ ಎಂದರು.



ದೇಶದಲ್ಲಿ ರೂಪಿತಗೊಂಡಿರುವ ಹೆದ್ದಾರಿಗಳು, ಬೃಹತ್ ಉದ್ಯಮ ಸಂಸ್ಥೆಗಳು, ಕೈಗಾರಿಕೆಗಳ ಸ್ಥಾಪನೆ ಹೀಗೆ ಎಲ್ಲವನ್ನೂ ಕಾಂಗ್ರೆಸ್ ನಾಯಕರು ನೋಡಿ ದೇಶದ ಕಣ್ತುಂಬಿಕೊಳ್ಳಿ ಎಂದರು. ಆದರೆ ಕಾಂಗ್ರೆಸ್ ನಾಯಕರು ವಿನಾಕಾರಣ ಸಂಘ ಪರಿವಾರ ಮೊದಲಾದ ವಿಷಯಗಳನ್ನು ಮುನ್ನೆಲೆಗೆ ತಂದು ಡೈವರ್ಟ್ ಮಾಡುವುದರಲ್ಲಿ ಮಾತ್ರ ನಿಪುಣರು ಎಂದರು.

2047 ರ ವಿಕಸಿತ ಭಾರತದ ಕಲ್ಪನೆಯ ಸಾಕಾರ ರೂಪದ ಹೆಜ್ಜೆಯಾಗಿ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಸರ್ಕಾರ ಕಳೆದ 12 ವರ್ಷಗಳಿಂದ ಮುನ್ನಡೆಯುತ್ತಿದೆ ಎಂದರು.

ಹಿಂದುಳಿದವರನ್ನು ಅಧಿಕಾರದಿಂದ ಕೆಳಗಿಳಿಸಿದ ಕಾಂಗ್ರೆಸ್ ಹಿಂದುಳಿದ ವರ್ಗಗಳ ಮುಖ್ಯಮಂತ್ರಿಯನ್ನು ಕೆಳಗಿಳಿಸಿ ಕಾಂಗ್ರೆಸ್ ಬೇರೆ ನಾಯಕನನ್ನು ಮುಖ್ಯಮಂತ್ರಿಯಾಗಿಸಿದೆ, ಇದು ಕಾಂಗ್ರೆಸ್ ಹಿಂದುಳಿದ ವರ್ಗಗಳ ಬಗ್ಗೆ ತೋರುತ್ತಿರುವ ಧೋರಣೆ, ಆದರೆ ಇನ್ನೊಂದೆಡೆ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿದ್ದು ಬಿಜೆಪಿ. ಮಡಿವಾಳ ಸಮಾಜದ ರಘು ಕೌಟಿಲ್ಯ, ಹಿಂದುಳಿದ ವರ್ಗಗಳ ಮಾ.ನಾಗರಾಜ್ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿದೆ, ಮೈಕ್ರೋ ಕಮ್ಯೂನಿಟಿ ಎಂದು ಕರೆಯಿಸಿಕೊಳ್ಳುವ ವರ್ಗಗಳಿಗೂ ರಾಜಕೀಯ ಪ್ರಾತಿನಿಧ್ಯ ದೊರಕಿಸಿದ್ದು ಬಿಜೆಪಿ ಎಂದರು. ಹಿಂದುಳಿದ ವರ್ಗಗಳ ನಾಯಕರೇ ಬಿಜೆಪಿ ಪಕ್ಷದ ಮುಂಚೂಣಿ ಜವಾಬ್ದಾರಿ ಸ್ಥಾನದಲ್ಲಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಸಾಬು ಮಾಶ್ಯಾಳ, ಮುಖಂಡರಾದ ಈರಣ್ಣ ರಾವೂರ, ರಾಜಕುಮಾರ ಸಗಾಯಿ, ಮಂಜುನಾಥ ಮೀಸೆ, ವಿಜಯ ಜೋಶಿ ಇದ್ದರು.

ಎನ್‌ಡಿಎ ಸರ್ಕಾರದಿಂದ ಗಮನಾರ್ಹ ಸಾಧನೆ

ಚಡಚಣ: ಭಾರತೀಯ ಜನತಾ ಪಕ್ಷದ ಚಡಚಣ ಮಂಡಲ ವತಿಯಿಂದ ಕೇಂದ್ರ ಸರ್ಕಾರದ 12 ವರ್ಷಗಳ ಸಾಧನೆಗಳು ಹಾಗೂ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಅಭಿಯಾನ ಕುರಿತು ಮಹತ್ವದ ಸಭೆ ಶನಿವಾರ ಚಡಚಣ ಚೌಡೇಶ್ವರಿ ಮಂಗಲ ಕಾರ್ಯಾಲಯದಲ್ಲಿ ನಡೆಯಿತು.

ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ 12 ವರ್ಷಗಳಲ್ಲಿ ದೇಶದ ಅಭಿವೃದ್ಧಿಗೆ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದೆ. ಬಡವರ ಕಲ್ಯಾಣ, ರೈತರ ಸಬಲೀಕರಣ, ಮಹಿಳಾ ಸಶಕ್ತೀಕರಣ, ಡಿಜಿಟಲ್ ಭಾರತ, ಮೂಲಸೌಕರ್ಯ ಅಭಿವೃದ್ಧಿ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಲಾಗಿದೆ ಎಂದು ವಿವರಿಸಿದರು.

ಚುನಾವಣಾ ಆಯೋಗದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಅಭಿಯಾನದ ಕುರಿತು ಕಾರ್ಯಕರ್ತರಿಗೆ ಮಾಹಿತಿ ನೀಡಲಾಯಿತು. ಮತದಾರರ ಪಟ್ಟಿಯಲ್ಲಿ ಅರ್ಹ ನಾಗರಿಕರ ಹೆಸರು ಸೇರ್ಪಡೆ, ದೋಷಗಳ ತಿದ್ದುಪಡಿ ಹಾಗೂ ಶುದ್ಧೀಕರಣ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವಂತೆ ಸೂಚಿಸಲಾಯಿತು. ಬೂತ್ ಮಟ್ಟದ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಮತದಾರರ ನೋಂದಣಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು, ಬೂತ್ ಮಟ್ಟದ ಕಾರ್ಯಕರ್ತರು ಹಾಗೂ ಬಿಜೆಪಿ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಯೋಗಾನಂದ ಸ್ವಾಮಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಿಜೆಪಿ ಚಡಚಣ ಮಂಡಲ ಅಧ್ಯಕ್ಷ ಚಂದ್ರಕಾಂತ ಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ನಾಗಠಾಣ ವಿಧಾನಸಭಾ ಕ್ಷೇತ್ರದ ಮುಖಂಡ ಸಂಜಯ ಐಹೊಳೆ, ಉಮೇಶ ಕಾರಜೋಳ, ಮಹೇಂದ್ರಕುಮಾರ ನಾಯಕ, ಚಡಚಣ ಪ.ಪಂ.ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.



ಅನರ್ಹ ಮತದಾರರ ಸೇರ್ಪಡೆಗೆ ಕಡಿವಾಣ ಹಾಕಿ

ವಿಜಯಪುರ: ವಿದ್ಯಾಭ್ಯಾಸಕ್ಕೆ ವಿಜಯಪುರಕ್ಕೆ ಬಂದಿರುವ ವಿದ್ಯಾರ್ಥಿಗಳ ಹೆಸರನ್ನು ಮತಪಟ್ಟಿ ಸೇರ್ಪಡೆ ಮಾಡುವುದನ್ನು ನಿಲ್ಲಿಸುವುದು ಹಾಗೂ ವಿವಿಧ ಅಕ್ರಮಗಳ ಮೂಲಕ ಮತಪಟ್ಟಿಯಲ್ಲಿ ಸೇರ್ಪಡೆ ಮಾಡುವ ಪ್ರಯತ್ನ ತಡೆಗಟ್ಟುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಾಂಗ್ರೆಸ್ ಜಿಲ್ಲಾ ಪದಾಧಿಕಾರಿಗಳು ನಗರದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ.ಅವರಿಗೆ ಮನವಿ ಸಲ್ಲಿಸಿದರು.

ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆಯಬೇಕು, ನಿಯಮಾವಳಿ ಮೀರಿ ನಡೆದರೆ ಅದು ಪ್ರಜಾಪ್ರಭುತ್ವ ವಿರೋಧಿಯಾಗಲಿದೆ, ಜಿಲ್ಲೆಯಲ್ಲಿ ಎಸ್‌ಐಆರ್ ಮ್ಯಾಪಿಂಗಕ್ಕೆ ಬಿಎಲ್‌ಒಗಳು ಕಾಂಗ್ರೆಸ್ ಪಕ್ಷದ ನಾಯಕರಿಗೆ ಹಾಗೂ ಬಿಎಲ್‌ಎ- 2ಗಳಿಗೆ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ನಗರದಲ್ಲಿ ಹೊರಗಿನಿಂದ ವಿದ್ಯಾಭ್ಯಾಸಕ್ಕೆ ಬಂದಿದ್ದ ವಿದ್ಯಾರ್ಥಿಗಳ ಹೆಸರನ್ನು ಮತದಾರರ ಯಾದಿಯಲ್ಲಿ ಸೇರಿಸುತ್ತಿರುವ ಪ್ರಯತ್ನ ನಡೆದಿದೆ, ಅದೇ ತೆರನಾಗಿ ನೆರೆಯ ಗ್ರಾಮಗಳಿಂದ ಉದ್ಯೋಗಕ್ಕಾಗಿ ಬಂದು ನೆಲೆಸಿರುವ ದಿನಗೂಲಿ ನೌಕರರ ಹೆಸರನ್ನು ಮತದಾರರ ಯಾದಿಯಲ್ಲಿ ಸೇರ್ಪಡೆ ಮಾಡಲಾಗುತ್ತಿದೆ, ಈ ರೀತಿ ಅಕ್ರಮ ಹೆಸರ ಸೇರ್ಪಡೆಯಾದರೆ ಅದನ್ನು ತೆಗೆಯಬೇಕು ಎಂದು ಒತ್ತಾಯಿಸಿದರು.

ನೆರೆಯ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರ ಹೆಸರನ್ನು ವಿಜಯಪುರ ಮತಕ್ಷೇತ್ರಮತದಾರರ ಯಾದಿಯಲ್ಲಿ ಸೇರಿಸಿರುವುದು ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕೇಳಿ ಬಂದಿದ್ದು, ಇದೆ ಇದರ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಅಂಥವರನ್ನು ಅಂತಿಮ ಪಟ್ಟಿಯಿಂದ ತೆಗೆದು ಹಾಕುವುದು, ಬಿಎಲ್‌ಒಗಳು ಬೂತದಲ್ಲಿ ಇರದಕ್ಕೆ ಅವರುಗಳಿಗೆ ಫೋನ್ ಮಾಡಿದರೆ ಫೋನ್ ಕೂಡ ರಿಸೀವ್ ಮಾಡುತ್ತಿಲ್ಲ ಎಂಬ ಸಮಸ್ಯೆಯನ್ನು ಗಮನಕ್ಕೆ ತಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮೊಹ್ಮದ್‌ರಫೀಕ್ ಟಪಾಲ್, ವಿಡಿಎ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಅಬ್ದುಲ್ ರಜಾಕ್ ಹೊರ್ತಿ, ಸೋಮನಾಥ ಕಳ್ಳಿಮನಿ, ಆಫ್ತಾಬಖಾದ್ರಿ ಇನಾಮದಾರ, ಶಬ್ಬೀರ್ ಜಾಗಿರದಾರ, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ವೈಜನಾಥ ಕರ್ಪೂರಮಠ, ಜಲನಗರ ಬ್ಲಾಕ್ ಅಧ್ಯಕ್ಷ ಆರತಿ ಶಾಹಪೂರ, ಶಫೀಕ್ ಮನಗೂಳಿ, ಎಂ.ಎಂ.ಮುಲ್ಲಾ, ವಸಂತ ಹೊನಮೋಡೆ, ಜಾಕೀರ್ ಮುಲ್ಲಾ, ದೇಸು ಚವ್ಹಾಣ, ಅನ್ವರ ಜಮಾದಾರ, ನಬಿಲಾಲ ಕರಜಗಿ, ಸಂತೋಷ ಶಾಹಪುರ ಇದ್ದರು.



ಖಾಸಗಿ ಸಂಸ್ಥೆಗಳಿಗೆ ವಿದ್ಯುತ್ ವಿತರಣಾ ಪರವಾನಗಿಗೆ ವಿರೋಧ

ಬಸವನಬಾಗೇವಾಡಿ: ಹೆಸ್ಕಾಂ(ವಿದ್ಯುತ್) ಇಲಾಖೆಯನ್ನು ಟಾಟಾ ಪವರ್ ಕಂಪನಿ ಸೇರಿದಂತೆ ಇತರೆ ಖಾಸಗಿ ಸಂಸ್ಥೆಗಳಿಗೆ ವಿದ್ಯುತ್ ವಿತರಣಾ ಪರವಾನಿಗೆ ನೀಡುತ್ತಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಹಾಗೂ ಹೆಸ್ಕಾಂ ಇಲಾಖೆಯ ಇಇ ಸಿದ್ರಾಮ ಬಿರಾದಾರ ಅವರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಉಪಾಧ್ಯಕ್ಷ ಕಲ್ಲು ಸೊನ್ನದ ತಾಲೂಕಾಧ್ಯಕ್ಷ ಮುದಕಣ್ಣ ಹೊರ್ತಿ ಮಾತನಾಡಿ ಹೆಸ್ಕಾಂ ವಿದ್ಯುತ್ ಸಂಸ್ಥೆಯನ್ನು ಟಾಟಾ ಕಂಪನಿ ಲಿಮಿಟೆಡ್‌ಗೆ ಹಸ್ತಾಂತರ, ಮಾಡಲು ಷಡ್ಯಂತರ ನಡೆದಿರುವುದು ತಿಳಿದು ಬಂದಿದ್ದು ಕೂಡಲೇ ಈ ವಿಚಾರ ಕೈಬಿಟ್ಟು ಸರಕಾರವೇ ನಡೆಸಿಕೊಂಡು ಹೋಗಬೇಕೆಂದು ಆಗ್ರಹಿಸಿದರು.

ರಾಜ್ಯದ ರೈತರು ಮೊದಲೇ ಲಾಭವಲ್ಲದ ಕೃಷಿಯನ್ನು ನಂಬಿ ಬದುಕು ಸಾಗಿಸುತ್ತಿದ್ದಾರೆ, ಲಾಭದಾಯಕ ಬೆಲೆ ಕೂಡಾ ಇಲ್ಲಿಯವರೆಗೆ ಸಿಗದೆ ಇರುವುದು ನೋವಿನ ಸಂಗತಿ, ಇನ್ನು ವಿದ್ಯುತ್ ಖಾಸಗೀಕರಣ ಮಾಡಿದರೆ ಎಲ್ಲರೂ ಕೃಷಿ ಮಾಡುವುದನ್ನು ಬಿಡಬೇಕಾಗುತ್ತದೆ. ಇದರಿಂದ ಮುಂದಿನ ದಿನ ತುತ್ತು ಅನ್ನಕ್ಕೂ ಕೂಡಾ ಪರಿತಪ್ಪಿಸಬೇಕಾಗುತ್ತದೆ ಎಂದರು.



ಈ ಪರವಾನಗಿ ಪ್ರಕ್ರಿಯೆ ಕೂಡಲೇ ಕೈಬಿಡಬೇಕು. ಇಲ್ಲವಾದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರಾಜ್ಯದ 31 ಜಿಲ್ಲೆಗಳಲ್ಲಿ ಹೋರಾಟ ಮಾಡಲಾಗುದು ಎಂದು ಎಚ್ಚರಿಸಿದರು.

ರೇವಣಸಿದ್ಧ ಮಣ್ಣೂರ ಮನವಿ ಓದಿದರು ಅನಿಲ ಗೊಳಸಂಗಿ, ದುಂಡಪ್ಪ ಗೊಳಸಂಗಿ, ಬಸವರಾಜ ಅಂಬಲಿ, ಮಲ್ಲಪ್ಪ ಸಂಕನಾಳ, ವಿಶ್ವನಾಥ ಮನಗೂಳಿ, ದಿಂಗಬರ ಔರಸಂಗ, ಅಮರೇಶ ಮೇಲ್ದಾಪುರ, ನಿಂಗು ಸಣ್ಣಬೆಂಕಿ, ಮುತ್ತು ಶೆಟ್ಟಪ್ಪಗೋಳ, ಕಾಂತು ತೆಗ್ಗಿ, ರಾಜು ಅಂಗಡಿ, ಏಜೆರಪ್ಪ ಹೊಸಮನಿ, ರಮೇಶ ಗಚ್ಚಿನವರ, ಮಲ್ಲಪ್ಪ ಕುಂಬಾರ ಇದ್ದರು.

ಪ್ರೊ.ಭಗವಾನ್ ವಿರುದ್ಧ ಕ್ರಮಕ್ಕೆ ಒತ್ತಾಯ

ವಿಜಯಪುರ: ರಾಮ ಹಾಗೂ ಹಿಂದೂ ಧರ್ಮದ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಹಿಂದೂ ಜನಜಾಗೃತಿ ಸಮಿತಿ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ್ ಮೂಲಕ ಮುಖ್ಯಮಂತ್ರಿ, ಗೃಹಸಚಿವರಿಗೆ ಮನವಿ ಸಲ್ಲಿಸಿದರು.

ಹಿಂದೂ ಜನಜಾಗೃತಿ ಸಮಿತಿ ಮುಖಂಡರು, ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಈಚೆಗೆ ಹಮ್ಮಿಕೊಂಡ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಪ್ರೊ.ಕೆ.ಎಸ್. ಭಗವಾನ್ ಅವರು ರಾಮ, ಹಿಂದೂ ಧರ್ಮ ಹಾಗೂ ಹಿಂದೂಗಳ ಧಾರ್ಮಿಕ ನಂಬಿಕೆಗಳ ಕುರಿತು ಅವಹೇಳನಕಾರಿ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿರುವುದು ಖಂಡನೀಯ. ಇಂತಹ ಹೇಳಿಕೆಗಳು ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ತೀವ್ರ ಧಕ್ಕೆ ಉಂಟುಮಾಡಿದ್ದು, ಸಮಾಜದಲ್ಲಿ ಉದ್ವಿಗ್ನತೆ ಹಾಗೂ ಅಶಾಂತಿಗೆ ಕಾರಣವಾಗುವ ಸಾಧ್ಯತೆಯನ್ನು ಹೊಂದಿವೆ ಎಂದರು. ಪ್ರೊ.ಕೆ.ಎಸ್.ಭಗವಾನ್ ಅವರು ಈ ಹಿಂದೆಯೂ ಹಲವು ಬಾರಿ ರಾಮ, ಕೃಷ್ಣ, ಭಗವದ್ಗೀತೆ ಹಾಗೂ ಹಿಂದೂ ಧರ್ಮಗ್ರಂಥಗಳ ಕುರಿತು ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ಸಾರ್ವಜನಿಕ ಆಕ್ರೋಶಕ್ಕೆ ಗುರಿಯಾಗಿದ್ದರು.



ಆದರು ಪುನಃ ಪುನಃ ಇದೇ ರೀತಿಯ ಹೇಳಿಕೆಗಳನ್ನು ನೀಡುತ್ತಿರುವುದು ಉದ್ದೇಶಪೂರ್ವಕವಾಗಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಪ್ರಯತ್ನವೆಂದು ಕಂಡುಬರುತ್ತದೆ ಎಂದು ದೂರಿದರು. ಅಭಿವ್ಯಕ್ತಿ ಸ್ವಾತಂತ್ರ್ಯವು ಯಾವುದೇ ಧರ್ಮ, ದೇವತೆ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವ ಪರವಾನಗಿ ಅಲ್ಲ, ಒಂದು ಸಮುದಾಯದ ಧಾರ್ಮಿಕ ಭಾವನೆಗಳನ್ನು ನಿರಂತರವಾಗಿ ಗುರಿಯಾಗಿಸಿಕೊಂಡು ಅವಹೇಳನಕಾರಿ ಹೇಳಿಕೆಗಳನ್ನು ನೀಡುವುದು ಸಾಮಾಜಿಕ ಸೌಹಾರ್ದತೆಗೆ ಧಕ್ಕೆ ಉಂಟುಮಾಡುತ್ತದೆ. ಕಾನೂನಿನ ಮುಂದೆ ಎಲ್ಲ ಧರ್ಮಗಳಿಗೂ ಸಮಾನ ರಕ್ಷಣೆ ದೊರೆಯಬೇಕು ಎಂದು ಒತ್ತಾಯಿಸಿದರು. ವಕೀಲ ವಿವೇಕಾನಂದ ಹುಂಡೇಕಾರ, ಜಯಂತ ಮುತ್ತಗಿಕರ, ಧ್ರುವ ಕುಲಕರ್ಣಿ, ಶೈಲಾ ಹಿರೇಮಠ, ಕಮಲಾ ಯರನಾಳ, ಶೈಲಾ ಸರದೇಸಾಯಿ ಇದ್ದರು.

ಕೃಷಿ ಅಧಿಕಾರಿಗಳ ದಾಳಿ, ಪರಿಶೀಲನೆ



ಸಿಂದಗಿ: ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುವುದು ಕಾನೂನುಬಾಹಿರವಾಗಿದ್ದು, ನಿಯಮ ಉಲ್ಲಂಘನೆ ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ರೈತರು ಯಾವುದೇ ರೀತಿಯ ಅಕ್ರಮ ಮಾರಾಟ ಅಥವಾ ಹೆಚ್ಚುವರಿ ದರ ವಸೂಲಿ ಕಂಡುಬಂದಲ್ಲಿ ಕೃಷಿ ಇಲಾಖೆಗೆ ಮಾಹಿತಿ ನೀಡುವಂತೆ ಸಿಂದಗಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರಶಾಂತ ಸಾಣಿ ಹೇಳಿದರು.

ಸಿಂದಗಿ ಕೃಷಿ ಇಲಾಖೆಯ ಅಧಿಕಾರಿಗಳು ಯೂರಿಯಾವನ್ನು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂಬ ರೈತರ ದೂರಿನ ಹಿನ್ನೆಲೆಯಲ್ಲಿ ಸಂಬಂಧಿತ ರಸಗೊಬ್ಬರ ಮಾರಾಟ ಮಳಿಗೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆ ಯೂರಿಯಾ ಸಂಗ್ರಹ, ಮಾರಾಟ ದಾಖಲೆಗಳು, ಬಿಲ್‌ಗಳು ಹಾಗೂ ದರಪಟ್ಟಿಗಳನ್ನು ಅಧಿಕಾರಿಗಳು ಪರಿಶೀಲಿಸಿದರು. ರೈತರಿಂದ ಬಂದಿರುವ ದೂರುಗಳ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಅಗತ್ಯ ಮಾಹಿತಿಯನ್ನು ಸಂಗ್ರಹಿಸಿದರು.

ಕೃಷಿ ಅಧಿಕಾರಿ ಶಿವಾನಂದ ಹೂನಳ್ಳಿ, ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪೀರೂ ಕೆರೂರ ಸೇರಿದಂತೆ ಇತರರು ಇದ್ದರು.

ಜಿಗಜಿಣಗಿ ಮಾತು ಸತ್ಯ: ಗಣಿಹಾರ ಟೀಕೆ

ವಿಜಯಪುರ: ಸಂಘ ಪರಿವಾರ ಕೆಣಕಿದವರು ಉಳಿದಿಲ್ಲ ಎಂಬ ವಿಜಯಪುರ ಸಂಸದರ ಮಾತು ಸತ್ಯ, ಅನೇಕ ವಿಚಾರವಾದಿಗಳ ಹತ್ಯೆ ನಡೆದಿರುವುದನ್ನು ನೋಡಿದರೆ ಸಂಸದ ರಮೇಶ ಜಿಗಜಿಣಗಿ ಅವರ ಹೇಳಿಕೆ ಸತ್ಯ ಎಂದು ತೋರುತ್ತದೆ ಎಂದು ಕಾಂಗ್ರೆಸ್ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಟೀಕಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪನ್ಸಾರೆ, ನರೇಂದ್ರ ದಾಬೋಲ್ಕರ್, ಗೌರಿ ಲಂಕೇಶ ಸೇರಿದಂತೆ ಅನೇಕ ವೈಚಾರಿಕವಾದಿಗಳ ಹತ್ಯೆ ನಡೆದಿರುವ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ಮಾತು ಹೇಳುವ ಮೂಲಕ ಸಂಸದ ರಮೇಶ ಜಿಗಜಿಣಗಿ ಅವರು ಸಂಘ ಪರಿವಾರದ ನೈಜ ಮುಖ ಬಿಚ್ಚಿಟ್ಟಿದ್ದಾರೆ ಎಂದು ಆರೋಪಿಸಿದರು. ಸಂಘ ಪರಿವಾರ ಹಿಂಬಾಗಿಲ ಮೂಲಕ ಅನೇಕ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಬೆಲೆ ಬಾಳುವ ಜಮೀನು ಸರ್ಕಾರದಿಂದ ಪಡೆದುಕೊಂಡಿದೆ. ಈ ಬಗ್ಗೆ ತನಿಖೆಯಾಗಬೇಕು. 400 ಕೋಟಿ ರೂ.ಖರ್ಚು ಮಾಡಿ ಸಂಘ ಪರಿವಾರ ಭವನ ನಿರ್ಮಿಸಿದೆ, ಅದು ಯಾರ ಹೆಸರಿನಲ್ಲಿದೆ, ನೋಂದಣಿಯಾಗಿಲ್ಲ ಎಂದರೆ ಅದು ಖಾಸಗಿ ಆಸ್ತಿಯೇ ಎಂದರು.

ಮುಖಂಡ ನಾಗರಾಜ ಲಂಬು ಮಾತನಾಡಿ, ಸಂಘ ಪರಿವಾರದಲ್ಲಿ ಜನಗಣಮನ ಹಾಡುವುದಿಲ್ಲ, ರಾಷ್ಟ್ರ ಧ್ವಜ ಹಾರಿಸುವುದಿಲ್ಲ ಹಾಗಾದರೆ ಯಾವ ರೀತಿ ದೇಶಭಕ್ತಿ? ಈ ಸಂಘ ಪರಿವಾರ ಲಾಠಿ ಹಿಡಿದು ಭಯ ಹುಟ್ಟಿಸುವ ಕೆಲಸ ಮಾಡುತ್ತಿದೆ ಎಂದರು. ವಸಂತ ಹೊನಮೋಡೆ ಇದ್ದರು.



ನಿವೃತ್ತ ಶಿಕ್ಷಕ ಅಶೋಕ ಬಡಿಗೇರಗೆ ಗೌರವ



ಆಲಮೇಲ: ಯಾವುದೇ ವೃತ್ತಿಯಾಗಲಿ ಗೌರವ ಭಾವನೆಯಿಂದ ಪ್ರಾಮಾಣಿಕವಾಗಿ ಸೇವೆ ಮಾಡಿದರೆ ಅವರನ್ನು ಸಮಾಜ ಗುರುತಿಸಿ ಅಭಿನಂದಿಸುತ್ತದೆ ಎಂದು ನಿವೃತ್ತ ಶಿಕ್ಷಕರ ಗುಗ್ಗರಿ ಹೇಳಿದರು.


ಆಲಮೇಲದ ಕಾಳಿಕಾದೇವಿ ದೇವಸ್ಥಾನದಲಿ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಹಮ್ಮಿಕೊಂಡಿದ ನಿವೃತ್ತ ಶಿಕ್ಷಕ ಅಶೋಕ ಬಾಡಿಗೇರ ಅವರಿಗೆ ಗೌರವಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಪ್ರಾಮಾಣಿಕ ಸೇವೆ ಗುರುತಿಸಿ ಗೌರವಿಸಿರುವ ಸಮಾಜದ ಬೆಳವಣಿಗೆ ಶ್ರಮಿಸಬೇಕು. ನಿವೃತ್ತಿ ಜೀವನ ಅವಧಿ ಸಮಾಜ ಸೇವೆಗೆ ಮೀಸಲಿಡಿ ಎಂದರು.

ಅಲಮೇಲ, ಸಿಂದಗಿ ಮೂರುಜಾವದ ಮಠ ರಾಮಚಂದ್ರ ಸ್ವಾಮಿಗಳು, ವಿರಕ್ತ ಮಠ ಜಗದೇವ ಮಲ್ಲಿಬೊಮ್ಮಯ್ಯ ಸ್ವಾಮಿಗಳು ಸಾನ್ನಿಧ್ಯ ವಹಿಸಿದರು. ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಗೌರವಾಧ್ಯಕ್ಷ ಸದಾನಂದ ಅಕ್ಕಲಕೋಟ ಉದ್ಘಾಟಿಸಿದರು. ಪತ್ತಾರ ಅಧ್ಯಕ್ಷತೆ ವಹಿಸಿದರು. ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ ಪ್ರಾಚಾರ್ಯ ರಮೇಶ ಬಿರಾದಾರ, ಸಾಹಿತಿ ಡಾ.ರಮೇಶ. ಕತ್ತಿ, ಶಿಕ್ಷಕರ ಕಲ್ಲೂರಮಠ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕ ಅಧ್ಯಕ್ಷ ಅವಧೂತ ಬಂಡಗಾರ, ಈರಣ್ಣ ಪತ್ತಾರ, ಲಚಪ್ ಪತ್ತಾರ, ದೇವಪ್ಪ ಪತ್ತಾರ, ಶಿಕ್ಷಕಿ ಖುತು ಅಕ್ಕಲಕೋಟ, ಉಪನ್ಯಾಸಕ ಗಂಗಾಧರ ಪತ್ತಾರ ಇದ್ದರು.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ

ದೇವರಹಿಪ್ಪರಗಿ: ಸರ್ಕಾರದ ಅಧೀನದಲ್ಲಿರುವ ವಿದ್ಯುತ್ ವಿತರಣಾ ಕೇಂದ್ರಗಳನ್ನು ಯಾವುದೇ ಕಾರಣಕ್ಕೂ ಖಾಸಗಿ ಕಂಪನಿಗಳಿಗೆ, ವಿಶೇಷವಾಗಿ ಟಾಟಾ ಪವರ್‌ಗೆ ವಹಿಸಬಾರದು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ, ತಾಲೂಕು ಘಟಕ, ಕನ್ನಡ ಪರ, ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಹೆಸ್ಕಾಂ ಇಲಾಖೆಯ ಸಹಾಯಕ ಅಭಿಯಂತರಸತೀಶಸುಲಾಖೆಹಾಗೂ ತಹಶೀಲ್ದಾರ್ ನಿಂಗಪ್ಪ ಬಿರಾದಾರ ಅವರ ಮೂಲಕ ಇಂಧನ ಇಲಾಖೆಯ ಕಾರ್ಯದರ್ಶಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಬೆಂಗಳೂರು ಅವರಿಗೆ ಮನವಿ ಸಲ್ಲಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ವಿದ್ಯುತ್ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ಪ್ರಯತ್ನ ನಡೆಸುತ್ತಿರುವುದು ಖಂಡನೀಯ. ಗ್ರಾಹಕರ ಹಿತದೃಷ್ಟಿಯಿಂದ ಸರ್ಕಾರ ವಿದ್ಯುತ್ ಖಾಸಗೀಕರಣದ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಆಗ್ರಹಿಸಿದರು.



ಮುಖಂಡರಾದ ಸಂಗಮೇಶ ಸಗರ, ರಾಮನಗೌಡ ಪಾಟೀಲ, ಸಂಪತ್ ಜಮಾದಾರ, ಶಿವಾನಂದ ಹಿರೇಮಠ, ಈರಪ್ಪ ಕುಳೆಕುಮಟಗಿ, ಮುನೀರ್ ಅಹ್ಮದ್ ಮಳಖೇಡ, ಪ್ರಕಾಶ ಡೋಣೂರಮಠ, ಸಿದ್ದನಗೌಡ ಜಲಪೂರ, ಅಜೀಜ ಯಲಗಾರ, ರಹೀಮಾನ್ ಕನಕಲ್, ವಿಜಯಕುಮಾರ ಯಂಬತ್ನಾಳ, ಹಸನ ನದಾಫ್, ಶಿವರಾಜ ತಳವಾರ, ಸಿ.ಎಸ್.ಪ್ಯಾಟಿ, ಅಶೋಕ ನಾಯ್ಕೋಡಿ, ಚನ್ನಮ್ಮ ಮೇತ್ರಿ ಇದ್ದರು.

ಕಿರುಸುದ್ದಿ

ಮಳೆಗೆ ಮಕ್ಕಳಿಂದ ಪ್ರಾರ್ಥನೆ



ಯಲಬುರ್ಗಾ: ಕಳೆದ ಹಲವಾರು ದಿನಗಳಿಂದ ಮಳೆ ಇಲ್ಲದೇ ಸಂಕಷ್ಟವನ್ನು ಎದುರಿಸುತ್ತಿರುವ ರೈತಾಪಿ ವರ್ಗ, ಪಟ್ಟಣದಲ್ಲಿ ಮಕ್ಕಳಿಂದ ಮಳೆಗಾಗಿ ಪ್ರಾರ್ಥಿಸುವ ಮೂಲಕ ಮೊರೆ ಇಟ್ಟರು.

ಪಟ್ಟಣದ ಕಂಡೇರ್ ಓಣಿಯ ಕಾಮನ ಕಟ್ಟಿ ಹತ್ತಿರ ಶನಿವಾರ ಸಂಜೆ ಕಟ್ಟೆ ಮುಂಭಾಗದಲ್ಲಿ ಸೆಗಣಿಯಿಂದ ಅಂಗಳವನ್ನು ಸಾರಿಸಿ, ರಂಗೋಲಿ ಬಿಡಿಸಿ, ತುಂಬಿದ ಕೊಡವನ್ನು ಇಟ್ಟು, ಅದಕ್ಕೆ ವಿಶೇಷ ಪೂಜೆ ಪುನಸ್ಕಾರವನ್ನು ಸಲ್ಲಿಸಿದ ಓಣಿಯ ಮುತ್ತೈದಿಯರು,ಮಕ್ಕಳು ಮಳೆಗಾಗಿ ಪ್ರಾರ್ಥಿಸಿದರು. ತುಂಬಿದ ಕೊಡದಲ್ಲಿ ಹೂವಿದಿಂದ ಶೃಂಗಾರ ಮಾಡಿ,ಅದಕ್ಕೆ ಮಕ್ಕಳಿಂದ, ಮುತ್ತೈದೆಯರು ಪೂಜೆ ಸಲ್ಲಿಸಿದರು. ಬಳಿಕ ಮಕ್ಕಳು, ಮುತ್ತೈದೆಯರು ತುಂಬಿದ ಕೊಡದ, ಮೇಲೆ ಹಿಡಿದು ಬೇಗನೆ ವರ್ಷಧಾರೆ ಕರುಣೆ ತೋರಿಸಲಿ. ಮಳೆಯಿಲ್ಲದೆ ರೈತರು ಕಂಗಾಲಾಗಿದ್ದಾರೆ. ಅದಷ್ಟು ಬೇಗನೆ ಮಳೆ ಬರಲಿ ಎಂದು ವಿಶೇಷ ಪ್ರಾರ್ಥಿಸುತ್ತಿದ್ದಂತೆ ತುಂಬಿದ ಕೊಡ ತನ್ನಷ್ಟಕ್ಕೆ ತಿರುಗಿದ್ದಾಗ. ಇಡೀ ದೈವ ಹರ್ಷಗೊಂಡು ಬೇಗನೆ ಮಳೆ ಬರುತ್ತೇ ಎಂಬ ವಿಶೇಷ ನಂಬಿಕೆಯೊಂದಿಗೆ ಪಟ್ಟಣದ ಕಂಡೇರ್ ಓಣಿಯ ಮಹಿಳೆಯರು, ಮಕ್ಕಳು,ಹಿರಿಯರು ವಿಬಿನ್ನವಾಗಿ ಮಳೆಗಾಗಿ ಪ್ರಾರ್ಥಿಸಿದರು. ಓಣಿಯ ಅಪಾರ ಮಹಿಳೆಯರು, ಹಿರಿಯರು ಭಾಗವಹಿಸಿದ್ದರು.

ಕುರಿ ಕಾಯಲು ಹೋದ ಯುವಕ ಸಾವು

ಸಿಂಧನೂರು: ನಗರದ ಗಂಗಾವತಿ ಮುಖ್ಯ ರಸ್ತೆಯ ಹಳ್ಳದ ಬಳಿ ವಾಹನ ಡಿಕ್ಕಿ ಹೊಡೆದ ಪರಿಣಾಮ ಕುರಿಗಾಯಿ ಶರಣಪ್ಪ/ನೀಲಪ್ಪ (35) ಸಾ.ತುಪ್ಪದೂರು ಸಾವನ್ನಪ್ಪಿದ್ದಾನೆ ಹಾಗೂ ಮೂರು ಕುರಿಗಳು ಸಾವನ್ನಪ್ಪಿದ ದುರ್ಘಟನೆ ನಡೆದಿದೆ.



ತುಪ್ಪದೂರು ಗ್ರಾಮದ ನೀಲಪ್ಪ ಎಂಬಾತನಿಗೆ ಮೂರು ಜನ ಮಕ್ಕಳಿದ್ದು ಅದರಲ್ಲಿ ಶರಣಪ್ಪ ಎಂಬಾತನು ಜೀವನ ಸಾಗಿಸಲು ಕುರಿಗಳನ್ನು ಹೊಂದಿದ್ದು, ತಮ್ಮ ಊರಿನ ಕಡೆ ಕುರಿಗಳಿಗೆ ಮೇಯಿಸಲು ಮೇವು ಇಲ್ಲದ ಕಾರಣ ನೀರಾವರಿ ಕಡೆ ಬಂದು ಕುರಿಗಳನ್ನು ಮೇಯಿಸಿಕೊಂಡು ಹೋಗಬೇಕೆನ್ನುವ ಭಾವನೆಯಿಂದ ನೀರಾವರಿಗೆ ಬಂದು ದಿನಕ್ಕೊಂದು ಊರು ಸಂಚರಿಸಿ ಕುರಿಗಳನ್ನು ಮೇಯಿಸುತ್ತಿದ್ದಾನೆ. ಆದರೆ, ಗುರುವಾರ ಮುಂಜಾನೆ ಮಲ್ಲಾಪುರ ಗ್ರಾಮದಿಂದ ಸಾಸಲಮಾರಿ ಗ್ರಾಮಕ್ಕೆ ತೆರಳುವಾಗ ಈ ದುರ್ಘಟನೆ ನಡೆದಿದೆ. ಶರಣಪ್ಪನಿಗೆ ಒಂದು ಗಂಡು ಒಂದು ಹೆಣ್ಣು ಮಗು ಇದೆ. ಈ ಘಟನೆಯಿಂದ ಕುಟುಂಬದವರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ.

ಕಾಮಗಾರಿ ವೇಳೆ ಹೃದಯಾಘಾತದಿಂದ ಕಾರ್ಮಿಕ ಸಾವು

ಯಲಬುರ್ಗಾ: ನರೇಗಾ ಕಾಮಗಾರಿ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಹೃದಯಾಘಾತದಿಂದ ಕಾರ್ಮಿಕ ಮೃತಪಟ್ಟ ಘಟನೆ ತಾಲೂಕಿನ ಮುಧೋಳ ಗ್ರಾಮದಲ್ಲಿ ನಡೆ ಗ್ರಾಮದಲ್ಲಿ ನರೇಗಾ ಯೋಜನೆಯಡಿ ಉದ್ಯೋಗ ಖಾತ್ರಿ ಕೆಲಸದಲ್ಲಿ ನಿರತರಾಗಿದ್ದ ಕಾರ್ಮಿಕ ವೀರಭದ್ರಪ್ಪ ರಾಚಪ್ಪ ಆಳ್ಳೊಳ್ಳಿ (70) ಹೃದಯಗಾಘಾತದಿಂದ ಮೃತರಾಗಿದ್ದಾರೆ. ಮೃತರಿಗೆ ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಇಂದು ಸಂಜೆ ಮುಧೋಳ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ನರೇಗಾ ಯೋಜನೆಯಡಿಯಲ್ಲಿ ಕಾರ್ಯನಿರತರಾಗಿದ್ದ 65 ಜನ ಕಾರ್ಮಿಕರು ಇದ್ದರು ಇವರಲ್ಲಿ ವೀರಭದ್ರಪ್ಪ ಅವರೂ ಕೂಡ ನರೇಗಾ ಯೋಜನೆಯಡಿ ಕೆಲಸ ಮಾಡಿ ವಿಶ್ರಾಂತಿ ಪಡೆದು 2ನೇ ಹಾಜರಾತಿ ಹಾಕುವ ವೇಳೆ ಸ್ಥಳದಲ್ಲಿ ಕುಸಿದು ಬಿದ್ದಿರುತ್ತಾರೆ. ತಕ್ಷಣವೇ ಅಂಬುಲೆನ್ಸ್ ಮೂಲಕ ಯಲಬುರ್ಗಾ ತಾಲೂಕ ಆಸ್ಪತ್ರೆಗೆ ದಾಖಲಿಸಿ ಪರಿಶೀಲನೆ ವೇಳೆ ಮೃತಪಟ್ಟಿರುವುದಾಗಿ ವೈದ್ಯಾಧಿಕಾರಿಗಳು ಮಾಹಿತಿ ನೀಡಿರುತ್ತಾರೆ. ತಾಲೂಕ ಆಸ್ಪತ್ರೆಗೆ ತಾಲೂಕ ಪಂಚಾಯತ್ ಅಧಿಕಾರಿಗಳಾದ ನೀಲಗಂಗಾ ಬಬಲಾದ. ತಾವಾ. ಸಹಾಯಕ ನಿರ್ದೇಶಕರಾದ ಹನುಮಂತ ಗೌಡ್ರು. ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ವೀರಭದ್ರಪ್ಪ ಮಾಲಿಪಾಟೀಲ. ಗ್ರಾಪಂ ಸಿಬ್ಬಂದಿ, ನರೇಗಾ ಸಿಂಬಂದಿ ಸಾಂತ್ವನ ಕೋರಿದ್ದಾರೆ.



ಗಂಗಾವತಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಎಪಿಎಂಸಿಯ ಚನ್ನಬಸವ ತಾತನ ದೇವಸ್ಥಾನದಿಂದ ಶ್ರೀಕೊಟ್ಟೂರು ಬಸವೇಶ್ವರ ದೇವಸ್ಥಾನದವರೆಗೆ ಯೋಗ ನಡಿಗೆ ಜಾಥಾಕ್ಕೆ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಚಾಲನೆ ನೀಡಿದರು. ಮಾಜಿ ಸಂಸದ ಎಸ್.ಶಿವರಾಮ್ ಗೌಡ್ರು, ಸಂಚಾಲಕ ಡಾ.ಎಸ್.ಬಿ.ಅಂದ್ರಾಳ, ಮಲ್ಲಿಕಾರ್ಜುನ ನಲ್ಲಿ, ರಘುನಾಥ್ ಪವಾರ್, ವೀರಣ್ಣ ಅರಹುಣಸಿಗಿ, ಡಾ. ಬಸವರಾಜ ಸವಡಿ, ಸೋಮನಾಥ ಪಟ್ಟಣಶೆಟ್ಟಿ ವೇಕಲರು, ಮನೋಹರ ಗೌಡ ಹೇರೂರು, ವಾಸುದೇವ ನವಲಿ, ಬಸವರಾಜ್, ನಾಗರಾಜ್ ಕಾಜಿ, ಅಕ್ಕಿ ಪ್ರಕಾಶ್, ಅಮರೇಗೌಡ, ಸದಾನಂದ ಶೇಟ್, ಶಾಲಾ ವಿದ್ಯಾರ್ಥಿಗಳು ಇತರರಿದ್ದರು.

ಪರಿಸರ ಸಂರಕ್ಷಣೆಗೆ ಬಲ್ದೋಟ ಆದ್ಯತೆ

ಕೊಪ್ಪಳ: ಎಂಎಸ್‌ಪಿಎಲ್ ಪೆಲ್ಲೆಟ್ ಪ್ಲಾಂಟ್, ಹಾಲವರ್ತಿ, ಗ್ರಾಮ ಪಂಚಾಯಿತಿ ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ನಿರ್ಮಿಸಲಾದ ನೂತನ ಸಾರ್ವಜನಿಕ ಮಕ್ಕಳ ಉದ್ಯಾನವನವನ್ನು ಶನಿವಾರ ಉದ್ಘಾಟಿಸಲಾಯಿತು.

ಉದ್ಯಾನವನವನ್ನು ಎಂಎಸ್‌ಪಿಎಲ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ.ನರೇಂದ್ರ ಕುಮಾರ್ ಎ.ಬಲ್ದೋಟ ಉದ್ಘಾಟಿಸಿ ಮಾತನಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯು ಸಂಸ್ಥೆಯ ಪ್ರಮುಖ ಆದ್ಯತೆಗಳಾಗಿವೆ ಎಂದು ಹೇಳಿದರು. ಶಿಕ್ಷಣ ಎಷ್ಟು ಮುಖ್ಯವೋ, ಮಕ್ಕಳಿಗೆ ಆಟವೂ ಅಷ್ಟೇ ಮುಖ್ಯ. ಆಟದಿಂದ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗುತ್ತದೆ. ಮಕ್ಕಳ ಮುಖದಲ್ಲಿರುವ ಸಂತೋಷವನ್ನು ನೋಡಿ ನನಗೆ ಅಪಾರ ತೃಪ್ತಿ ದೊರೆತಿದೆ ಎಂದು ಅವರು ಹೇಳಿದರು.

ಉದ್ಯಮಗಳು ಕೇವಲ ಆರ್ಥಿಕ ಬೆಳವಣಿಗೆಯಲ್ಲ, ಸಮಾಜದ ಅಭಿವೃದ್ಧಿಗೂ ಸಹಕಾರಿಯಾಗಬೇಕು. ಗ್ರಾಮಗಳಲ್ಲಿ ಹಸಿರು ಪ್ರದೇಶಗಳು, ಮಕ್ಕಳಿಗೆ ಆಟದ ಮೈದಾನಗಳು ಹಾಗೂ ಸಾರ್ವಜನಿಕ ಸೌಲಭ್ಯಗಳ ನಿರ್ಮಾಣವಾದಾಗ ಸಮಾಜದಲ್ಲಿ ಒಗ್ಗಟ್ಟು ಮತ್ತು ಆರೋಗ್ಯಕರ ಬದುಕು ಬೆಳೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪಿಡಿಒ ಗುರುಸಿದ್ದಪ್ಪ ಜಲವಾಡಿ, ಗ್ರಾಮದ ಮುಖಂಡ ಭರ್ಮಪ್ಪ ಗೊರವರ, ಮಾಜಿ ಗ್ರಾಮ ಪಂಚಾಯತ್ ಸದಸ್ಯರು, ಎಸ್‌ಡಿಎಂಸಿ ಸದಸ್ಯರು, ಮಹಿಳಾ ಸ್ವಸಹಾಯ ಸಂಘಗಳ ಪ್ರತಿನಿಧಿಗಳು, ಯುವಕ ಸಂಘಗಳ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಕೊಪ್ಪಳ: ಎಂಎಸ್‌ಪಿಎಲ್ ಪೆಲ್ಲೆಟ್ ಪ್ಲಾಂಟ್, ಹಾಲವರ್ತಿ, ಗ್ರಾಮ ಪಂಚಾಯಿತಿ ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ನಿರ್ಮಿಸಲಾದ ನೂತನ ಸಾರ್ವಜನಿಕ ಮಕ್ಕಳ ಉದ್ಯಾನವನವನ್ನು ಶನಿವಾರ ಉದ್ಘಾಟಿಸಲಾಯಿತು.

ಬಿಜೆಪಿಯಿಂದ ಎಸ್‌ಐಆರ್ ಬಿಎಲ್‌ಎ-2 ಸಭೆ | ಪಾಟೀಲ ಹೇಳಿಕೆ

ಬಿಎಲ್‌ಎ-2ಗಳ ಪಾತ್ರ ಅತ್ಯಂತ ಪ್ರಮುಖ

ಕಲಬುರಗಿ: ಬಿಎಲ್‌ಎ-2 ಆಗಿ ಕಾರ್ಯನಿರ್ವಹಿಸುವ ನಮ್ಮ ಕಾರ್ಯಕರ್ತರು ಎಸ್‌ಐಆರ್ ಪ್ರಕ್ರಿಯೆ ಕುರಿತು ತಮ್ಮ ತಮ್ಮ ಬೂತ್ ಮಟ್ಟದಲ್ಲಿ ಜನರಿಗೆ ಜಾಗೃತಿ ಮೂಡಿಸುವ ಮೂಲಕ ಅರ್ಹ ಮತದಾರರು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಕೈತಪ್ಪಿ ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ಮಾಜಿ ಶಾಸಕ ರಾಜ ಕುಮಾರ ಪಾಟೀಲ ತೆಲ್ಕೂರ್ ಸಲಹೆ ನೀಡಿದರು.

ನಗರದ ಚಿಂಚೋಳಿ ರಸ್ತೆಯಲ್ಲಿರುವ ವೀರಶೈವ ಕಲ್ಯಾಣ ಮಂಟಪದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಲಾದ ಎಸ್‌ಐಆರ್ ಪ್ರಕ್ರಿಯೆಯ ಬಿಎಲ್‌ಎ-2 ಕಾರ್ಯಕರ್ತರ ವಿಶೇಷ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಜಾರಿಯಲ್ಲಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಬಿಎಲ್‌ಎ-2ಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ.

ನಕಲಿ ಹಾಗೂ ವಲಸೆ ಮತದಾರರನ್ನು ಪತ್ತೆಹಚ್ಚುವ ಕೆಲಸವಾಗಬೇಕು. ಒಬ್ಬ ವ್ಯಕ್ತಿಗೆ ಒಂದು ಮತ ಎಂಬ ಪ್ರಜಾಪ್ರಭುತ್ವದ ಆಶಯದಂತೆ ಎಲ್ಲರೂ ಕಾರ್ಯ ನಿರ್ವಹಿಸಬೇಕು. ನಿಮ್ಮ ಬೂತ್ ವ್ಯಾಪ್ತಿಯಲ್ಲಿರುವ ನೈಜ ಮತದಾರರ ಹೆಸರು ಪಟ್ಟಿಯಿಂದ ಕೈಬಿಡದಂತೆ ಎಚ್ಚರಿಕೆ ವಹಿಸಬೇಕು. ಮುಂದಿನ ಮೂರು ತಿಂಗಳು ನಡೆಯುವ ಈ ಪರಿಷ್ಕರಣೆ ಕಾರ್ಯದಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಬಿಜೆಪಿ ಮಂಡಲ ಪ್ರಭಾರಿ ಸಿದ್ದಾಜಿ ಪಾಟೀಲ ಮಾತನಾಡಿ, ಸರ್ಕಾರ ಈಗಾಗಲೇ ಮನೆ ಮನೆ ಮ್ಯಾಪಿಂಗ್ ಕಾರ್ಯವನ್ನು ಪೂರ್ಣಗೊಳಿಸಿದೆ. ಈಗಮತದಾರರಗಣತಿಕಾರ್ಯಆರಂಭವಾಗಿದ್ದು, ಅನರ್ಹರನ್ನು ಕೈಬಿಡುವ ಕೆಲಸ ನಡೆಯಲಿದೆ.



> 2002ರಿಂದ ಎಸ್‌ಐಆರ್ ಪ್ರಕ್ರಿಯೆ ನಡೆದಿಲ್ಲ, ಇದುವರೆಗೂ 2002ರ ಮತದಾರರ ಪಟ್ಟಿಯೇ ಚಾಲ್ತಿಯಲ್ಲಿದೆ. 2002ರ ನಂತರ ಸಾವನ್ನಪ್ಪಿದವರು, ಸ್ಥಳಾಂತರಗೊಂಡವರು ಹಾಗೂ ಅನರ್ಹರಾದವರ ಮಾಹಿತಿ ಈ ಎಸ್‌ಐಆರ್ ಮೂಲಕ ಸಂಗ್ರಹಿಸಲಾಗುತ್ತದೆ. ಆದ್ದರಿಂದ 2002 ಮತ್ತು 2025ರ ಮತದಾರರ ಪಟ್ಟಿಗಳನ್ನು ಹೋಲಿಕೆ ಮಾಡಿ ನೋಡುವ ಕೆಲಸವನ್ನು ಎಲ್ಲಾ ಬಿಎಲ್‌ಎ-2ಗಳು ಮಾಡಬೇಕು.
>
> ■ ಅಶೋಕ್ ಬಗಲಿ, ಜಿಲ್ಲಾಧ್ಯಕ್ಷ ಕಲಬುರಗಿ ಗ್ರಾಮಾಂತರ

ಹೀಗಾಗಿ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನಮ್ಮ ಬಿಎಲ್‌ಎ-2ಗಳು ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಮುಖಂಡ ಕಲ್ಯಾಣಪ್ಪ ಪಾಟೀಲ, ಸಂತೋಷಿ ರಾಣಿ ಪಾಟೀಲ್ ತೆಲ್ಕೂರ್ ಮಾತನಾಡಿದರು. ತಾಲೂಕು ಪ್ರಧಾನ ಕಾರ್ಯದರ್ಶಿ ತಿರುಪತಿ ಶಹಾಬಾದ್ಕರ್, ರಾಘವೇಂದ್ರ ಮೆಕ್ಯಾನಿಕ್, ನಗರಾಧ್ಯಕ್ಷ ಸತೀಶಕುಮಾರ ಪಾಟೀಲ, ಮಹಿಳಾ ಮೋರ್ಚಾ ಅಧ್ಯಕ್ಷೆ ಶೈಲಜಾ ಹಿತ್ತಲ್, ವಿನೋದ ಸಾಹುಕಾರ ಸೇರಿದಂತೆ ನಾಗರೆಡ್ಡಿ ದೇಶಮುಖ್, ಶಿವಲಿಂಗರೆಡ್ಡಿ ಬೆನಕನಹಳ್ಳಿ, ವೆಂಕಟರೆಡ್ಡಿ ಪಾಟೀಲ, ವಿಶ್ವನಾಥರೆಡ್ಡಿ ಪಾಟೀಲ, ಪಾಪಯ್ಯ ಗೌಡ್, ವಿಠ್ಠಲರೆಡ್ಡಿ ಪಾಟೀಲ, ವೀರೇಂದ್ರ ಪಾಟೀಲ ರುದ್ನೂರ್, ನಾಗಭೂಷಣರೆಡ್ಡಿ ಹೂಡಾ, ಸಿದ್ದು ಬಾನರ್, ಶಿವಕುಮಾರ ತೋಟ್ನಳ್ಳಿ, ಬನ್ನಪ್ಪ ಕುಂಬಾರ, ನಾರಾಯಣರಾವ್ ಕುಲಕರ್ಣಿ, ಮಹಿಪಾಲರೆಡ್ಡಿ ಪಾಟೀಲ, ಶ್ರೀಕಾಂತರಡ್ಡಿ, ರಾಮು ನಾಯಕ್, ಜ್ಯೋತಿ ಶಹಾಬಾದ್ಕರ್, ಶೋಭಾ ಹೂಗಾರ, ವೀರಮ್ಮ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.ಶರಣು ಕೆರಳ್ಳಿ ಪ್ರಾರ್ಥಿಸಿದರು. ಓಂಪ್ರಕಾಶ್ ಪಾಟೀಲ ಸ್ವಾಗತಿಸಿದರು. ಶರಣು ಮೆಡಿಕಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಗಪ್ಪ ಕೊಳ್ಳಿ ನಿರೂಪಿಸಿದರು.

ಉನ್ನತ ವ್ಯಾಸಂಗದಿಂದ ಜೀವನ ರೂಪಿಸಿಕೊಳ್ಳಿ

ಯಲಬುರ್ಗಾ: ವಿದ್ಯಾರ್ಥಿಗಳು ಕೇವಲ ಪಾಸಾದರೆ ಸಾಲದು ಹೆಚ್ಚು ಅಂಕಗಳನ್ನು ಪಡೆದು ಉನ್ನತ ವ್ಯಾಸಂಗದಿಂದ ಜೀವನ ರೂಪಿಸಿಕೊಳ್ಳಬೇಕು ಎಂದು ನಿವೃತ್ತ ಡಿಡಿಪಿಐ ಎಸ್.ಡಿ.ಗಾಂಜಿ ಹೇಳಿದರು.

ಪಟ್ಟಣದ ಪ್ಯಾಲೇಸ್‌ನಲ್ಲಿ ಬಸವ ಶಿವಯೋಗ ಸಮಿತಿ ಆಶ್ರಯದಲ್ಲಿ ನಡೆದ 12ನೇ ಶರಣೋತ್ಸವ ಕಾರ್ಯಕ್ರಮ ನಿಮಿತ್ಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ,ಸನ್ಮಾನ ಮತ್ತು ನಿವೃತ್ತ ಸರಕಾರಿ ನೌಕರರಿಗೆ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದರಿದರ ಸದುಪಯೋಗವನ್ನು ವಿದ್ಯಾರ್ಥಿಗಳು ಮಾಡಿಕೊಳ್ಳಬೇಕು ಎಂದರು.

ಮೌಢ್ಯತೆ ಮತ್ತು ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಲು 12ನೇ ಶತಮಾನದ ಶಿವಶರಣರು ಸಮರ ಸಾರಿ ಐಕ್ಯತೆಗೆ ಶ್ರಮಿಸಿದ್ದಾರೆ. ಅಂತ ಬಸವವಾದಿ ಶಿವಶರಣ ಕಲ್ಯಾಣವನ್ನು ಇವತ್ತು ಸಾಯಿ ಪ್ಯಾಲೇಸಿನಲ್ಲಿ ಕಾಣಬಹುದಾಗಿದೆ. ಇಂಥ ಕಾರ್ಯಕ್ಕೆ ಮುಂದಾಗಿರುವ ಬಸವ ಶಿವಯೋಗಿ ಸಮಿತಿಯ ಸಂಗಣ್ಣನವರ ಕಾರ್ಯ ಶ್ಲಾಘನೀಯವಾಗಿದೆ. ಇನ್ನೂ ಶರಣರ ವಚನಗಳನ್ನು ವಿದ್ಯಾರ್ಥಿಗಳು ಸೇರಿ ಪ್ರತಿಯೊಬ್ಬರು ನಿತ್ಯ ಕಂಠ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಬಣಜಿಗ ಸಮಾಜದ ಅಧ್ಯಕ್ಷ ವೀರೇಶ ಬಂಗಾರಶೆಟ್ಟರು, ಬಸವ ಶಿವಯೋಗ ಸಮಿತಿ ಅಧ್ಯಕ್ಷ ಸಂಗಣ್ಣ ಟೆಂಗಿನಕಾಯಿ ಮಾತನಾಡಿದರು. ಬಸವ ಶಿವಯೋಗ ಸಮಿತಿ ವತಿಯಿಂದ ಪಿಯುಸಿಯಲ್ಲಿ ಅತಿ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ಸರಕಾರಿ ನೌಕರರಿಗೆ ಮತ್ತು ಜಿಲ್ಲಾ ಬಣಜಿಗ ಸಮಾಜದ ಜಿಲ್ಲಾಧ್ಯಕ್ಷರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಅತಿಥಿಗಳಾಗಿ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ, ಬಿಸಿಎಂ ಅಧಿಕಾರಿ ಡಾ.ಶಿವಶಂಕರ ಕರಡಕಲ, ಬಸವರಾಜ ಕಜ್ಜಿ, ವೀರಭದ್ರಪ್ಪ ಅಂಗಡಿ, ಸಂಗಪ್ಪ ಕರಂಡಿ, ಕೆ.ಎಚ್.ಛತ್ರದ, ಬುಡ್ನೇಸಾಬ ನಾಯಕ,ಬಸವರಾಜ ಹಾಳಕರಿ,ಶರಣಪ್ಪ ಹಳ್ಳಿಕೇರಿ, ದಾದಪೀರಸಾಬ, ಅಶೋಕ ಮಾಲಿಪಾಟೀಲ್, ದೇವಪ್ಪ ವಾಲ್ಮೀಕಿ, ಬಸವರಾಜ ಕೊಂಡಗುರಿ ಸೇರಿದಂತೆ ಮತ್ತಿತರರು ಇದ್ದರು.



ಸಮಾಜದ ಅಭಿವೃದ್ಧಿಗೆ ಒಗ್ಗಟ್ಟಿನಿಂದ ಕೆಲಸ ಮಾಡಿ


ಕುಷ್ಟಗಿ: ಪಟ್ಟಣದ ಕೊಪ್ಪಳ ರಸ್ತೆಯಲ್ಲಿರುವ ಪಟ್ಟಣದ ಎನ್‌ಸಿಎಚ್ ಪ್ಯಾಲೇಸ್‌ನಲ್ಲಿ ಬಣಜಿಗ ಸಮಾಜದ ಜಿಲ್ಲಾ ಹಾಗೂ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಶಿವಾನಂದ ಬಿದರಿ, ಸಾಮರ್ಥ್ಯ ಮತ್ತು ಸಂಘಟನೆಯ ಬಲ ಬಳಸಿ ಕೊಂಡು ಮಾದರಿ ಸಮಾಜವಾಗಿ ಬೆಳೆಸಬೇಕು ಸಮಾಜಕ್ಕೆ ಅನ್ಯಾಯವಾಗಲು ಅವಕಾಶ ನೀಡಬಾರದು. ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

ಗಂಗಾವತಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಮಾತನಾಡಿ, ಬಣಜಿಗ ಸಮಾಜದ ಅಭಿವೃದ್ಧಿಗೆ ಯುವಕರು ಹೆಚ್ಚಿನ ಆದ್ಯತೆ ನೀಡಬೇಕು. ವಿದ್ಯಾಭ್ಯಾಸ, ಉದ್ಯೋಗ, ಉದ್ಯಮ ಹಾಗೂ ಸಾಮಾಜಿಕ ಸೇವೆಯಲ್ಲಿ ಸಾಧನೆ ಮಾಡುವ ಮೂಲಕ ಸಮಾಜದ ಗೌರವವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು ಭಿನ್ನಾಭಿಪ್ರಾಯ ಬದಿಗೊತ್ತಿ ಒಗ್ಗಟ್ಟಿನಿಂದ ಸಂಘಟನೆ ಬಲಪಡಿಸಬೇಕು ಎಂದು ಹೇಳಿದರು.

ನೂತನ ತಾಲೂಕಾಧ್ಯಕ್ಷ ಶಶಿಧರ ಕವಲಿ ಮಾತನಾಡಿ, ಜೂ.27ರಂದು ಬಣಜಿಗಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ರುದ್ರಮ್ಮ ಕೋರಿ ಉಪನ್ಯಾಸ ನೀಡಿ ಮಾತನಾಡಿದರು. ಬಣಜಿಗ ಸಮಾಜದ ಮಾಜಿ ಅಧ್ಯಕ್ಷ ವಿಶ್ವನಾಥ ಕನ್ನೂರು, ಜಿಲ್ಲಾಧ್ಯಕ್ಷ ವಿರೇಶ ಬಂಗಾರಶೆಟ್ಟರ ಮಾತನಾಡಿದರು ಕರ್ನಾಟಕ ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ರೋಡಗಿ, ರಾಜ್ಯ ಉಪಾಧ್ಯಕ್ಷ ಅಂದಪ್ಪ ಜವಳಿ, ಬಸವರಾಜ್ ಪಡಿ, ಜಿಲ್ಲಾಧ್ಯಕ್ಷ ವಿರೇಶ ಬಂಗಾರಶೆಟ್ಟರ, ತಾಲೂಕಾಧ್ಯಕ್ಷ ಶಶಿಧರ ಕವಲಿ, ನಗರ ಘಟಕ ಅಧ್ಯಕ್ಷ ವಿರೇಶ ಕಲಕಬಂಡಿ, ಮಹಿಳಾ ಘಟಕದ ಅಧ್ಯಕ್ಷೆ ಅನ್ನಪೂರ್ಣ ಪಟ್ಟಣಶೆಟ್ಟಿ, ಸಮಾಜದ ಗಣ್ಯರಾದ ಸಂಗಪ್ಪ ಕಡಿವಾಲ್, ವಿಶ್ವನಾಥ ಮಳಗಿ, ಅಂದಾನಪ್ಪ ಅಂಗಡಿ, ಸೋಮಶೇಖರ ವೈಜಾಪುರು, ಸಂಗಣ್ಣ ಟೆಂಗಿನಕಾಯಿ, ಪ್ರಭಾ ಬಂಗಾರಶೆಟ್ಟರ, ಬಸಟೆಪ್ಪ ಕುಂಬಳಾವತಿ, ಬಸವರಾಜ ಕುದರಿಮೋತಿ, ಮಹಾದೇವಪ್ಪ ಮಹಾಲಿಂಗಪುರು, ಬಸಟೆಪ್ಪಸಿಳ್ಳಿನ, ಮುದುಕಪ್ಪ ಜಿಗಜಿನ್ನಿ,ವಿರೇಶ ಕರಡಿ, ಮಲ್ಲಿಕಾರ್ಜುನ ದೋಟಿಹಾಳ ಸೇರಿದಂತೆ ಕೊಪ್ಪಳ ಜಿಲ್ಲಾ, ವಿವಿಧ ತಾಲೂಕುಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಬಣಜಿಗ ಸಮಾಜದವರು ಇದ್ದರು.



ಗಾನಗಂಧರ್ವ ಡಾ.ರಾಜಕುಮಾರ್ ರಾಜ್ಯ ಪ್ರಶಸ್ತಿಗೆ ಶ್ರೀರಾಮ್ ತಳವಾರ ಭಾಜನ

ಹನುಮಸಾಗರ: ಪಟ್ಟಣದ ಯುವ ಪ್ರತಿಭೆ ಹಾಗೂ ಗಾಂಧಾರಿ ವಿದ್ಯೆ ಪ್ರದರ್ಶನ ಕಲಾವಿದ ಶ್ರೀರಾಮ್ ಶಂಕ್ರಪ್ಪ ತಳವಾರ ಅವರಿಗೆ ಪ್ರತಿಷ್ಠಿತ 'ಗಾನಗಂಧರ್ವ ಡಾ.ರಾಜಕುಮಾರ್ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ಸೌರಭ ಸಾಂಸ್ಕೃತಿಕ ಕಲಾ ಬಳಗ, ಹಿರೇಮನ್ನಾಪುರ ವತಿಯಿಂದ ಬೆಂಗಳೂರಿನ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕೊಪ್ಪಳ ಜಿಲ್ಲೆಯ ಹನುಮಸಾಗರ (ಕಲಭಾವಿ) ಗ್ರಾಮದ ನಿವಾಸಿಯಾಗಿರುವ ಶ್ರೀರಾಮ್ ಶಂಕ್ರಪ್ಪ ತಳವಾರ ಅವರು ಗಾಂಧಾರಿ ವಿದ್ಯೆಯ ವಿಶಿಷ್ಟ ಪ್ರದರ್ಶನದ ಮೂಲಕ ಎರಡು ಮೂರು ವರ್ಷಗಳಿಂದ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಅವರ ಅಪರೂಪದ ಕಲಾ ಪ್ರತಿಭೆ ಮತ್ತು ಸಾಧನೆಯನ್ನು ಗುರುತಿಸಿ ಈ ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಅವರು ನೀಡಿದ ಗಾಂಧಾರಿ ವಿದ್ಯೆಯ ಪ್ರದರ್ಶನವು ನೆರೆದಿದ್ದ ಪ್ರೇಕ್ಷಕರಿಂದ ಭಾರೀ ಮೆಚ್ಚುಗೆ ಗಳಿಸಿತು.



ಹಿರಿಯ ಸಾಹಿತಿ ಆರ್.ಕೆ.ಸುಬೇದಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಚಲನಚಿತ್ರ ನಟ ಶಿವಕುಮಾರ ಆರಾಧ್ಯ, ಹಿರಿಯ ಸಾಹಿತಿ ಎ.ಎಸ್.ಮಕಾನದಾರ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ.ಹುಸೇನಸಾಬ, ನಿರ್ದೇಶಕ ಹಾಗೂ ನಿರ್ಮಾಪಕ ಓಂಪ್ರಕಾಶ ಹೀರೋ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದು ಪ್ರಶಸ್ತಿ ಪ್ರದಾನ ಮಾಡಿದರು.

ಪುರುಷೋತ್ತಮ ಮಾಸದ ಮಂಗಳೋತ್ಸವ

ಗಂಗಾವತಿ: ಮೂರು ವರ್ಷಕ್ಕೊಮ್ಮೆ ಆಚರಿಸುವ ಅಧಿಕ ಮಾಸವನ್ನು ಪುರುಷೋತ್ತಮ ಮಾಸವೆಂದು ವಿಷ್ಣುವಿನ ನಾಮ ಸ್ಮರಣೆಯ ಮೂಲಕ ಆಚರಿಸಲಾಗುತ್ತಿದೆ ಎಂದು ಶಂಕರಮಠದ ಧರ್ಮದರ್ಶಿ ನಾರಾಯಣ್ ರಾವ್ ವೈದ್ಯ ಹೇಳಿದರು.

ಪುರುಷೋತ್ತಮ ಮಾಸದ ಮಂಗಳೋತ್ಸವ ಧಾರ್ಮಿಕ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು. ಶೃಂಗೇರಿಯ ಉಭಯ ಜಗದ್ಗುರುಗಳ ಅನುಗ್ರಹದ ಮೇರೆಗೆ ಸತತ 33 ದಿನಗಳ ಕಾಲ ಪ್ರತಿಯೊಬ್ಬರ ಮನೆಯಲ್ಲಿ ವಿಶೇಷಪೂಜೆಯ ಮೂಲಕ ಅಷ್ಟೋತ್ತರ ಪಾರಾಯಣ, ಭಜನೆ, ಮಹಿಳೆಯರಿಗೆ ಉಡಿ ತುಂಬುವಿಕೆ ಸೇರಿದಂತೆ ದಾನ-ಧರ್ಮಗಳನ್ನು ಮಾಡುವುದರ ಮೂಲಕ ವಿಷ್ಣುವಿನ ಹಾಗೂ 33 ಕೋಟಿ ದೇವಾನು ದೇವತೆಗಳ ಗುರು ಪರಂಪರೆಯನ್ನು ಸ್ಮರಿಸುವುದರ ಮೂಲಕ ಆರಾಧಿಸಲಾಗುತ್ತದೆ ಎಂದು ತಿಳಿಸಿದರು.

ಶಕುಂತಲಾ ರಾಜೀವ ಅಧಿಕ ಮಾಸ ಹಾಗೂ ಪುರುಷೋತ್ತಮ ಮಾಸದ ವಿಷಯ ಕುರಿತು ಉಪನ್ಯಾಸ ನೀಡಿದರು. ಭೀಮಸೇನ ಭಟ್ ಅವರು ಮಹಾಸಂಕಲ್ಪ ಗುರುಪಾದುಕೆಗಳಿಗೆ ಅಷ್ಟೋತ್ತರ ಮೂಲಕ ಪುಷ್ಪಾರ್ಚನೆ ನೆರವೇರಿಸಿದರು.

ಶಾರದಾ ಶಂಕರ ಭಜನಾ ಮಂಡಳಿ ನೇತೃತ್ವದಲ್ಲಿ ಭಜನೆ, ಮಹಿಳೆಯರಿಗೆ ಉಡಿ ತುಂಬುವಿಕೆ ಮತ್ತಿತರ ಪೂಜಾ ನಿರ್ವಹಿಸಿದರು.



ಹಿರಿಯ ಮುಖಂಡರಾದ ಭೀಮಸೇನಭಟ್, ಮಹೇಶ ಭಟ್ ಜೋಶಿ. ರಾಘವೇಂದ್ರ ಆಳವಂಡಿಕರ್, ಶೇಷಗಿರಿ ಗಡಾದ್, ಪ್ರಕಾಶ್ ಆಳವಂಡಿ, ಶ್ರೀಧರ, ಕಾಶಿನಾಥ್, ಬಾಲಕೃಷ್ಣ ದೇಸಾಯಿ. ಅನಿಲ ಆಳವಂಡಿ, ಭೀಮಶಂಕರ್, ಪ್ರಹ್ಲಾದ್ ದಿಗ್ಗಾವಿ ಇತರರಿದ್ದರು.

ಕುಕನೂರ ತಾಲೂಕಿನ ಕನಸು ಕಿಶೋರಿ ಪಾರ್ಲಿಮೆಂಟ್ ರಚನೆ

ಕುಕನೂರು: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ವಿಸ್ತಾರ್ ಸಂಸ್ಥೆಯ 'ಕನಸು ಕಿಶೋರಿ ಸಂಘಟನೆ'ಯ ವತಿಯಿಂದ ಹದಿಹರೆಯದ ಹೆಣ್ಣುಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಮತ್ತು ಅವರ ಸಮಸ್ಯೆಗಳಿಗೆ ಧ್ವನಿಯಾಗಲು ಕುಕನೂರಿನಲ್ಲಿ ತಾಲೂಕು ಮಟ್ಟದ 'ಕನಸು ಕಿಶೋರಿ ಪಾರ್ಲಿಮೆಂಟ್' ಕಾರ್ಯಕ್ರಮ ವನ್ನು ಆಯೋಜಿಸಲಾಯಿತು.

ನೂತನ ಮಂತ್ರಿಮಂಡಲವನ್ನು ರಚನೆ ಮಾಡಲಾಯಿತು. ನಂತರ ಸಭಾಪತಿಗಳ ಹಕ್ಕೊತ್ತಾಯ ಮಂಡನೆ ಮಾಡಿ ಅಧಿಕಾರಿಗಳೇ, ಕೇವಲ ಮೂಲ ಸೌಕರ್ಯಗಳಷ್ಟೇ ಅಲ್ಲದೆ, ನಮ್ಮ ತಾಲ್ಲೂಕಿನ ಕಿಶೋರಿಯರ ಮತ್ತು ಮಕ್ಕಳ ಸಮಗ್ರ ವಿಕಾಸ, ಆರೋಗ್ಯ ಮತ್ತು ಸುರಕ್ಷತೆಗಾಗಿ ನಾನು ಮತ್ತು ಕಿಶೋರಿ ಮಂತ್ರಿಮಂಡಲದ ಸದಸ್ಯರು ಈ ಕೆಳಗಿನ 9 ಪ್ರಮುಖ ಹಕ್ಕೊತ್ತಾಯಗಳನ್ನು ಈ ಸಭೆಯ ಮೂಲಕ ಕಡ್ಡಾಯವಾಗಿ ಜಾರಿಗೆ



ತರಬೇಕೆಂದು ಒತ್ತಾಯಿಸುತ್ತಿದ್ದೇವೆ'' ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇದನ್ನು ತಕ್ಷಣವೇ ಜಾರಿಗೆ ತರಲು, 3 ತಿಂಗಳೊಳಗೆ ಕ್ರಿಯಾ ಯೋಜನೆಯನ್ನು ರೂಪಿಸಬೇಕು ಕ್ರೀಡಾ ಸಾಮಗ್ರಿ ಕಿಟ್ ವಿತರಣೆ,ತಾಲ್ಲೂಕಿನ ಎಲ್ಲಾ ಹಳ್ಳಿಗಳಲ್ಲಿ 53ಹಳ್ಳಿಗಳಲ್ಲಿ ಪಂಚಾಯಿತಿ ವತಿಯಿಂದಲೇ ನಮ್ಮ ಕಿಶೋರಿಯರು ಮತ್ತು ಹೆಣ್ಣು ಮಕ್ಕಳಿಗೆ ಕ್ರೀಡಾ ಸಾಮಗ್ರೀಗಳ ಕಿಟ್‌ಗಳನ್ನು ಕಡ್ಡಾಯವಾಗಿ ವಿತರಣೆ ಮಾಡಬೇಕು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಬಿರಾದಾರ್ ಮಾತನಾಡಿ, ಶಾಲಾ ಮಕ್ಕಳ ಮೂಲಭೂತ ಸೌಕರ್ಯಗಳನ್ನು ಆದಷ್ಟು ಬೇಗ ಬಗೆಹರಿಸಲು ಗ್ರಾಮ ಪಂಚಾಯತಿಯಿಂದ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಮುಖ್ಯಾಧಿಕಾರಿ ನಾಗೇಶ್, ವಿಸ್ತರ್ ಸಂಸ್ಥೆಯ ನಿರ್ದೇಶಕಿ ಆಶಾ, ಪಿಡಿಒಗಳಾದ ವೈಜಾನಾಥ್,ಶರಣಪ್ಪ ಕೇಳಗಿನಮನಿ, ವೀರನಗೌಡ, ಪರಶುರಾಮ್ ನಾಯಕ್, ಹಾಗೂ ಇತರರು ಸಭಾಪತಿ ಹೇಳಿಕೊಂಡ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಲು ಮುಂದಾಗತ್ತೇವೆ ಎಂದು ಹೇಳಿದರು.

ಲಾಭದ ಕೃಷಿಯ ದಾರಿ ಹುಡುಕಿ: ಗೌರಿಶಂಕರ

ಕೊಪ್ಪಳ: ಹವಾಮಾನ ವೈಪರೀತ್ಯ, ಮಾರುಕಟ್ಟೆ ಏರಿಳಿತದ ಮಧ್ಯೆಯೂ ಕೃಷಿಕರು ಬೇಸಾಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಕೃಷಿಯನ್ನು ಲಾಭದಾಯಕ ಮಾಡುವ ಹಲವು ಮಾರ್ಗೋಪಾಯ ಹುಡುಕುವ ಅಗತ್ಯವಿದೆ ಎಂದು ಧಾರವಾಡದ ಸಾವಯವ ಕೃಷಿಕ ಗೌರಿಶಂಕರ ಕರೋಶಿ ಹೇಳಿದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು ಕೊಪ್ಪಳ ಸಾವಯವ ಕೃಷಿಕರ ಬಳಗದ ಸಹಯೋಗದಲ್ಲಿ ಶನಿವಾರ ಜಿಲ್ಲೆಯ ಆಚಾರತಿಮ್ಮಾಪುರದ 'ಶ್ರೀಫಾರ್ಮ್'ನಲ್ಲಿ ಆಯೋಜಿಸಿದ್ದ 'ಸಾವಯವ ಸಂವಾದ'ದಲ್ಲಿ ಮಾತನಾಡಿದರು.

ಹಿಡಿತಕ್ಕೆ ಸಿಲುಕದ ಹಲವು ಸವಾಲುಗಳನ್ನು ಎದುರಿಸುತ್ತ ರೈತರು ಬೇಸಾಯ ಮಾಡುತ್ತಿದ್ದಾರೆ. ನಷ್ಟದ ಬಾಬ್ತು ಎನಿಸಿರುವ ಒಕ್ಕಲುತನದಿಂದ ಲಾಭ ಗಳಿಸುವ ಮಾರ್ಗವನ್ನು ಸ್ವಯಂ ಅನುಭವದಿಂದಲೇ ಕೃಷಿಕರು ಕಂಡುಕೊಳ್ಳಬೇಕು ಎಂದರು. ಬೇಸಾಯವನ್ನು ಪ್ರಭಾವಿಸುವ ಹಲವು ಆಯಾಮಗಳ ಬಗ್ಗೆ ವಿಸ್ತೃತವಾಗಿ ಮಾತನಾಡಿದ ಗೌರಿಶಂಕರ, ಮಣ್ಣು, ನೀರು, ಬಿತ್ತನೆ ಬೀಜಗಳ ಜತೆಗೆ ಹೈನುಗಾರಿಕೆ ಅಂಶಗಳ ಬಗ್ಗೆ ಪ್ರಸ್ತಾಪಿಸಿದರು. ಹರೀಶ್ ತಾಳೂರೆ ಸ್ವಾಗತಿಸಿದರು. ದೇವರಾಜ ಮೇಟಿ ವಂದಿಸಿದರು. ಉದಯ್ ರಾಯರಡ್ಡಿ, ಅವಿನಾಶ್, ಗಂಗಾಧರ ನಾಗೇಶನಹಳ್ಳಿ, ಮಲ್ಲಪ್ಪ ಕುಂಬಾರ, ಪವನ್ ಗಡಚಿಂತಿ, ಕೊಟ್ರೇಶ್, ದೇವೇಂದ್ರ ಜಿರ್ಲಿ ಇತರರು ಉಪಸ್ಥಿತರಿದ್ದರು.



ನಿಗದಿತ ಸಮಯದಲ್ಲಿ ಮಾಹಿತಿ ನೀಡಿ: ಬಿ.ವೆಂಕಟ್ ಸಿಂಗ್

ರಾಯಚೂರು: ಸರ್ಕಾರಿ ಹುದ್ದೆ ಎಲ್ಲರಿಗೂ ಸಿಗುವುದಿಲ್ಲ, ಸಿಕ್ಕವರು ಸಾರ್ವಜನಿಕರಿಗೆ ಉತ್ತಮ ಕೆಲಸ, ಕಾರ್ಯಗಳ ಜೊತೆಗೆ ಸಾರ್ವಜನಿಕ ಕೋರಿರುವ ಮಾಹಿತಿಯನ್ನು ನಿಗದಿತ ಸಮಯದಲ್ಲಿ ನೀಡಬೇಕು ಎಂದು ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿದರು.



ಶನಿವಾರ ನಗರದ ಕೃಷಿ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ರಾಯಚೂರು ಜಿಲ್ಲೆಯ ಎಲ್ಲ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರೊಂದಿಗೆ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದ ವಿವಿಧ ರಾಜ್ಯಗಳ ಹೈಕೋರ್ಟ್‌ಗಳು ಮಾಹಿತಿ ಹಕ್ಕು ಕುರಿತು ಆದೇಶ ನೀಡಿವೆ. ಹಾಗೂ ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳು ಕಾಲಕಾಲಕ್ಕೆ ಸುತ್ತೋಲೆ ಹೊರಡಿಸಿದ್ದಾರೆ. ಆ ಮಾಹಿತಿಗಳನ್ನು ಮನನ ಮಾಡಿಕೊಂಡು ಅವುಗಳನ್ನು ಎಲ್ಲ ಇಲಾಖೆಯ ಅಧಿಕಾರಿಗಳು ಪಾಲಿಸಬೇಕು. ಶೇ.90ರಷ್ಟು ಸರ್ಕಾರಿ ಕಚೇರಿಗಳಲ್ಲಿ ಪೋರಂ-ಎ, ಪೋರಂ-ಬಿ ಕುರಿತು ನಾಮ ಫಲಕ ಹಾಕಿರುವುದಿಲ್ಲ, ಕಲ್ಯಾಣ ಕರ್ನಾಟಕ ಭಾಗದಲ್ಲಿ 6 ಸಾವಿರಕ್ಕೂ ಹೆಚ್ಚು ಅರ್ಜಿಗಳು ಆಯೋಗದ ಮುಂದಿವೆ. ಅವುಗಳನ್ನು ಕೂಡಲೇ ವಿಲೇವಾರಿ ಮಾಡಲು ಆಯೋಗವು ಸೂಕ್ತ ಕ್ರಮವಹಿಸುತ್ತಿದೆ ಎಂದರು.

ಜಿಪಂ ಸಿಇಓ ಈಶ್ವರ ಕುಮಾರ ಕಾಂದೂ ಮಾತನಾಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಿ ಮಾತನಾಡಿದರು.

ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ, ಎಎಸ್ಪಿ ಹರೀಶ ಜಿ ಸೇರಿದಂತೆ ಇತರರಿದ್ದರು. ಮಹಾನಗರ ಪಾಲಿಕೆಯ ಸದಸ್ಯ ಕಾರ್ಯದರ್ಶಿ ಕೃಷ್ಣ ಸ್ವಾಗತಿಸಿದರು. ದಂಡಪ್ಪ ಬಿರಾದಾರ ನಿರೂಪಿಸಿದರು.

ಕಿರುಸುದ್ದಿ

ಭಾವೈಕ್ಯತೆಯ ಮೊಹರಂ ಆಚರಿಸಿ: ಕಾಂಬಳೆ

• **ಸುರಪುರ:** ಶಾಂತಿ ಮತ್ತು ಸೌಹಾರ್ದತೆಯಿಂದ ಶಾಂತಿಯುತವಾಗಿ ಕೆ.ತಳ್ಳಳ್ಳಿ ಗ್ರಾಮಸ್ಥರೆಲ್ಲರೂ ಮೊಹರಂ ಹಬ್ಬ ಆಚರಿಸಿ ಎಂದು ಪಿಎಸ್ಐ ಅಮೋಜ್ ಕಾಂಬಳೆ ಹೇಳಿದರು.ತಾಲೂಕಿನ ಕೆಂಭಾವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕುರುಬನ ತಳ್ಳಳ್ಳಿ ಗ್ರಾಮದಲ್ಲಿ ಮೊಹರಂ ಹಬ್ಬದ ಪ್ರಯುಕ್ತ ಶಾಂತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಲ್ಲಿ ಹಿಂದೂ-ಮುಸ್ಲಿಂ ಜನರು ಭಾವೈಕ್ಯದಿಂದ ಮೊಹರಂ ಆಚರಿಸುತ್ತಾ ಬಂದಿದ್ದಾರೆ. ಈ ವರ್ಷವೂ ಕೂಡ ಶಾಂತಿಯುತವಾಗಿ ಹಬ್ಬವನ್ನು ಆಚರಿಸಿ, ಪೊಲೀಸ್ ಇಲಾಖೆಯ ವತಿಯಿಂದ ಅಗತ್ಯವಿರುವ ಭದ್ರತೆ ಒದಗಿಸುತ್ತೇವೆ. ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವ ಮೂಲಕ ಗದ್ದಲ-ಗಲಾಟೆ ಮಾಡಿ, ಶಾಂತಿಗೆ ಭಂಗ ತೋರುವಂತಹ ಕಿಡಿಗೇಡಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಎಎಸ್ಐ ಮೋನಪ್ಪ, ಪ್ರಭುಗೌಡ ಬಿರಾದಾರ, ಸಿಬ್ಬಂದಿ ಸುರೇಶ ಸೇರಿದಂತೆ ಕೆ.ತಳ್ಳಳ್ಳಿ ಗ್ರಾಮದ ಹಿರಿಯರು, ಮುಖಂಡರು ಮತ್ತು ಯುವಕರು ಇದ್ದರು.

ಆರ್‌ಎಸ್‌ಎಸ್ ಪ್ರಮುಖ ನಾಗರಿಕರ ಗೋಷ್ಠಿ ಇಂದು

• **ವಿಜಯನಗರ:** ರಾಷ್ಟ್ರೀಯ ಸ್ವಯಂಸೇವಕ ಸಂಘದ 100 ವರ್ಷಗಳ ಯಾತ್ರೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದರ ಭಾಗವಾಗಿ ಹೊಸಪೇಟೆಯಲ್ಲಿ ಜೂ.21ರಂದು ಪ್ರಮುಖ ನಾಗರಿಕರ ಗೋಷ್ಠಿ ಹಮ್ಮಿಕೊಳ್ಳಲಾಗಿದೆ. ನಗರದ ಹೋಟೆಲ್ ಮಲ್ಲಿಗೆಯ ಸೆಲೆಬ್ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಗೋಷ್ಠಿ ಆರಂಭವಾಗಲಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಚಾರ ವಿಭಾಗ ಪ್ರಮುಖ ಅರುಣ್ ಕುಮಾರ್ ಮುಖ್ಯ ವಕ್ತಾರರಾಗಿ ಭಾಷಣ ಮಾಡುವರು. ಜಿಲ್ಲಾ ಸಂಘಚಾಲಕರಾದ ಡಾ.ಶಾಂತಯ್ಯ ಅವರು ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಬ್ರಿಮ್ಸ್ ಲ್ಯಾಬ್‌ನಲ್ಲಿ 1 ಲಕ್ಷ ರೂ. ಚೆಕ್ ಪತ್ತೆ

• **ಬೀದರ್:** ಬ್ರಿಮ್ಸ್ ಆಸ್ಪತ್ರೆಗೆ ಉಪಲೋಕಾಯುಕ್ತ ಬಿ.ವೀರಪ್ಪ ಅವರು ಆಕಸ್ಮಿಕ ಭೇಟಿ ನೀಡಿದ ಸಮಯದಲ್ಲಿ ಬ್ರಿಮ್ಸ್ ಆಸ್ಪತ್ರೆಯ ಲ್ಯಾಬ್ ಟೆಕ್ನಿಷಿಯನ್ ಬಳಿ ಲಕ್ಷಾಂತರ ರೂ. ಹಣ ಹಾಗೂ 1 ಲಕ್ಷರೂಪಾಯಿ ಚೆಕ್ ಪತ್ತೆಯಾಗಿದೆ. ಉಪಲೋಕಾಯುಕ್ತ ಬಿ. ವೀರಪ್ಪ ಅವರು ಶನಿವಾರ ನಗರದ ಹಲವು ಕಡೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಮಯದಲ್ಲಿ ಅವರು ಬ್ರಿಮ್ಸ್ ಆಸ್ಪತ್ರೆಗೂ ಕೂಡ ಭೇಟಿ ನೀಡಿದ್ದರು. ಈ ವೇಳೆ ಬ್ರಿಮ್ಸ್ ನಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿ ಕಾರ್ಯನಿರ್ವಹಿಸುತ್ತಿರುವ ಸಂಜುಕುಮಾರ್ ಅವರ ಬಳಿ ಲಕ್ಷಾಂತರ ರೂ.ಹಣ ಮತ್ತು ಚೆಕ್ ಪತ್ತೆಯಾಗಿದೆ. ಹಣ ಪತ್ತೆಯಾಗುತ್ತಿದ್ದಂತೆಯೇ ಉಪಲೋಕಾಯುಕ್ತರು ಸೇರಿದಂತೆ ಅಲ್ಲಿನ ಅಧಿಕಾರಿಗಳಿಗೂ ಅಚ್ಚರಿಯಾಗಿದೆ. ಲೋಕಾಯುಕ್ತ ತಂಡವು ಸ್ಥಳದಲ್ಲೇ ದಾಖಲೆಗಳನ್ನು ಪರಿಶೀಲನೆ ನಡೆಸಿತು. ಈ ವೇಳೆ ವೈದ್ಯಾಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡ ಬಿ.ವೀರಪ್ಪ ಅವರು, ಸುಮೋಟೋ ಕೇಸ್ ದಾಖಲಿಸಲು ಸೂಚನೆ ನೀಡಿದರು. ಲ್ಯಾಬ್ ಟೆಕ್ನಿಷಿಯನ್ ಬಳಿ ಪತ್ತೆಯಾದ ಹಣವನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಈ ಹಣದ ಮೂಲ ಕೇಳಿದಾಗ ಸಿಬ್ಬಂದಿ ಸೂಕ್ತ ಉತ್ತರವನ್ನು ನೀಡಲು ವಿಫಲರಾಗಿದ್ದಾರೆ ಎಂದು ತಿಳಿದು ಬಂದಿದೆ.

ಕೆಬಿಜೆಎನ್‌ಎಲ್ ಭೂಮಿ ಕಬಳಿಕೆ: ಆರೋಪ



• **ಕೆಂಭಾವಿ:** ಪಟ್ಟಣದ ಸರ್ಕಾರಿ ಸ್ವಾಮ್ಯದ ಜಮೀನನ್ನು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಕಬಳಿಸುತ್ತಿದ್ದು, ತಕ್ಷಣವೇ ಅಲ್ಲಿನ ಕಟ್ಟಡಗಳನ್ನು ತೆರವುಗೊಳಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ನಮ್ಮ ಕರ್ನಾಟಕ ಸೇನೆಯ ತಾಲೂಕಾಧ್ಯಕ್ಷ ಸಿದ್ದು ಪಟ್ಟೇದಾರ ಆಗ್ರಹಿಸಿದ್ದಾರೆ. ಈ ಕುರಿತು ನಾರಾಯಣಪುರ ಕೃಷ್ಣಭಾಗ್ಯ ಜಲ ನಿಗಮ ನಿಯಮಿತದ ಕಾರ್ಯಾಚರಣೆ ಮತ್ತು ನಿರ್ವಹಣೆ ವಲಯದ ಮುಖ್ಯ ಅಭಿಯಂತರರಿಗೆ ಅವರು ಲಿಖಿತ ಮನವಿ ಸಲ್ಲಿಸಿದ್ದಾರೆ. ನಂತರ ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಎಲ್‌ಎಕ್ಯೂ/25/1979-80ರ ಭೂಸ್ವಾಧೀನ ಪ್ರಕ್ರಿಯೆಯ ಪ್ರಕಾರ, ಕೆಂಭಾವಿ ಪಟ್ಟಣದ ಸರ್ವೆ ನಂ.600/2ರಲ್ಲಿ ಬರುವ 32 ಗುಂಟೆ ಜಮೀನು ಈಗಾಗಲೇ ಸರ್ಕಾರದಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆ. ಪ್ರಸ್ತುತ ಈ ಜಮೀನಿನ ಪಹಣಿ ಕೆಬಿಜೆಎನ್‌ಎಲ್ ಹೆಸರಿನಲ್ಲೇ ಇದ್ದರೂ ಸಹ, ಖಾಸಗಿ ವ್ಯಕ್ತಿಗಳು ಕಾನೂನುಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ, ಪ್ರಸ್ತುತವಾಗಿಯೂ ಅಲ್ಲಿ ನಿರ್ಮಾಣ ಕಾಮಗಾರಿಗಳು ಮುಂದುವರಿದಿವೆ ಎಂದು ತಿಳಿಸಿದ ಅವರು, ಇನ್ನಾದರು ಕೆಂಭಾವಿ ಪಟ್ಟಣದಲ್ಲಿ ಸರ್ಕಾರಿ ಆಸ್ತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವವರ ವಿರುದ್ಧ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ಸುರಪುರ: ತಾಲೂಕಿನ ಕೆಂಭಾವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕುರುಬನ ತಳ್ಳಳ್ಳಿ ಗ್ರಾಮದಲ್ಲಿ ಮೊಹರಂ ಹಬ್ಬದ ಪ್ರಯುಕ್ತ ಶಾಂತಿ ಸಭೆಯಲ್ಲಿ ಪಿಎಸ್ಐ ಅಮೋಜ್ ಕಾಂಬಳೆ ಅವರು ಮಾತನಾಡಿದರು. ಎಎಸ್ಐ ಮೋನಪ್ಪ, ಪ್ರಭುಗೌಡ ಬಿರಾದಾರ, ಸಿಬ್ಬಂದಿ ಸುರೇಶ ಸೇರಿದಂತೆ ಕೆ.ತಳ್ಳಳ್ಳಿ ಗ್ರಾಮದ ಹಿರಿಯರು, ಮುಖಂಡರು ಮತ್ತು ಯುವಕರು ಇದ್ದರು.

ಉಚಿತ ಟೈಲರಿಂಗ್ ತರಬೇತಿ ಕಾರ್ಯಕ್ರಮ

• **ಗಾದಿಗನೂರು:** ಭಾರತ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಪ್ರಸಿದ್ಧ ಬ್ಯಾಂಕ್‌ಗಳ ಸಹಯೋಗದೊಂದಿಗೆ ಗ್ರಾಮದಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ರೂರಲ್ ಡೆವಲಪ್ ಮೆಂಟ್ ಅಂಡ್ ಸೆಲ್ಫ್ ಎಂಪ್ಲಾಯ್ಮೆಂಟ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ಸ್ ಕಡೆಯಿಂದ ಉಚಿತ ಕೈಲರಿಂಗ್ ತರಬೇತಿ ಕಾರ್ಯಕ್ರಮ ಜರಗಿತು.

ಮಹಿಳೆಯರಿಗೆ ತರಬೇತಿ ಕೊಡುವುದಂದರೆ ಬಹಳ ಕಷ್ಟ ಯಾಕೆಂದರೆ ಮಹಿಳೆಯರು ದಿನನಿತ್ಯದ ಜೀವನದೊಂದಿಗೆ ಮನೆಯಲ್ಲಿ ಕಾಲ ಕಳೆಯುತ್ತಾರೆ. ಮಹಿಳೆಯರು ನಮ್ಮ ಮನೆ ಸಂಸಾರ ಮಕ್ಕಳು ಇದೇ ನಿಭಾಯಿಸುವುದು ಎಂದು ತಿಳಿದುಕೊಂಡಿದ್ದಾರೆ. ಸಮಾಜ ಬದಲಾದಂತೆ ನಾವು ಬದಲಾಗಬೇಕು ನಾವು ಯಾವುದೇ ಸಂದರ್ಭ ಬಂದರೂ ಎದುರಿಸುವ ಆತ್ಮಸ್ಥೈರ್ಯ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಹಾಗಬೇಕು. ಮಹಿಳೆಯರು ಸ್ವ ಉದ್ಯೋಗಿಗಳಾಗಿ ಬದಲಾಗಬೇಕು ಎಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯ ಗುರುಗಳಾದ ವಿರೂಪಜ್ಜಪ್ಪ ತಿಳಿಸಿದರು. ಮಹಿಳಾ ಸ್ವ ಸಹಾಯ ಸಂಘದ ಒಕ್ಕೂಟದ ಅಧ್ಯಕ್ಷೆಯದ ಎನ್ ರತ್ನಮ್ಮ ಮಾತನಾಡಿದರು.'ಹಳ್ಳಿ ಮಹಿಳೆಯರು ಅವಲಂಬಿಗಳಾಗದೆ ಸ್ವಾವಲಂಬಿಗಳಾಗಿ' ಬದುಕು ಕಟ್ಟಿಕೊಳ್ಳಿ ಎಂದು ಮಹಿಳಾ ಸ್ವಸಾಯ ಸಂಘದ ಎಂ.ಬಿ.ಕೆ.ಯಾದ ರೇವತಿ ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ ಗಿರಿಧರ್ ಅನ್ವದ್ ಮಾತನಾಡಿ ಗ್ರಾಮೀಣ ಮಹಿಳೆಯರಿಗಾಗಿ 30 ದಿನಗಳ ಉಚಿತವಾಗಿ ಟೈಲರಿಂಗ್ ತರಬೇತಿ ಪಡೆದ ಮಹಿಳೆಯರು ಸ್ವ ಉದ್ಯೋಗಿಗಳಾಗಿ ಬದುಕು ಕಟ್ಟಿಕೊಳ್ಳಬಹುದು ಎಂದು ತಿಳಿಸಿದರು.



ಗಾದಿಗನೂರು: ಭಾರತ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಪ್ರಸಿದ್ಧ ಬ್ಯಾಂಕ್‌ಗಳ ಸಹಯೋಗದೊಂದಿಗೆ ಗ್ರಾಮದಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ರೂರಲ್ ಡೆವಲಪ್‌ಮೆಂಟ್ ಅಂಡ್ ಸೆಲ್ಫ್ ಎಂಪ್ಲಾಯ್ಮೆಂಟ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ಸ್ ಕಡೆಯಿಂದ ಉಚಿತ ಕೈಲರಿಂಗ್ ತರಬೇತಿ ಕಾರ್ಯಕ್ರಮ ನಡೆಯಿತು.

ಆಗಸದತ್ತ ಮುಖ ಮಾಡಿ ಮಳೆಗೆ ಕಾಯುತ್ತಿರುವ ರೈತಾಪಿ ವರ್ಗ

ಕೈಕೊಟ್ಟ ಮುಂಗಾರು: ಬಿತ್ತನೆ ಕುಂಠಿತ

▸ ಅರವಿಂದ್ ಬಸಾಪುರ್

• **ಕೊಟ್ಟೂರು:** ತಾಲೂಕಿನಲ್ಲಿ ಈ ಬಾರಿಯ ಮುಂಗಾರು ಕೈಕೊಟ್ಟಿದ್ದು ರೈತಾಪಿ ವರ್ಗ ಆತಂಕಕ್ಕೆ ಒಳಗಾಗಿದ್ದು, ಆಗಸದತ್ತ ಮುಖ ಮಾಡಿ ಮಳೆಗಾಗಿ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ತಾಲೂಕು ಮಳೆಯಾಶ್ರಿತ ಪ್ರದೇಶವಾಗಿದ್ದು, ಮಳೆಯನ್ನೇ ನಂಬಿ ಬದುಕಬೇಕಾದಂತ ಪರಿಸ್ಥಿತಿ ತಾಲೂಕಿನ ರೈತರದ್ದಾಗಿದೆ. ತಾಲೂಕಿನ ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರುಹರಿಸಿ ಕೆರೆಗಳನ್ನು ತುಂಬಿಸುವ ಯೋಜನೆಯ ನನೆಗುದಿಗೆ ಬಿದ್ದಿದ್ದು ರೈತರು ಮಳೆಯನ್ನೇ ನಂಬಿ ಬಿತ್ತನೆ ಮಾಡಬೇಕಾಗಿದೆ.

ದಿಗಂತ ವಿಶೇಷ

ತಾಲೂಕಿನಲ್ಲಿ ಶೇ.50ರಷ್ಟು ಮಳೆಯ ಕೊರತೆಯಾಗಿದ್ದು, ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ತಾಲೂಕಿನಲ್ಲಿ 32,500 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿಯನ್ನು ಹೊಂದಲಾಗಿದ್ದಿತ್ತು. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆ ಗುರಿಯನ್ನು ಹೊಂದಲಾಗದೆ ಬರೀ ಕೇವಲ 9,600 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ಮಾಡಲಾಗಿದ್ದು ಶೇ.28ರಷ್ಟು ಮಾತ್ರ ಬಿತ್ತನೆಯಾಗಿದೆ.

ತೀವ್ರತರ ಮಳೆ ಕೊರತೆಯಿಂದಾಗಿ ಮೆಕ್ಕೆಜೋಳ, ರಾಗಿ, ಶೇಂಗಾ, ಹಾಗೂ ಇತರ ಬೆಳೆಗಳ ಬಿತ್ತನೆ ಮಾಡಲು ರೈತರು ತಮ್ಮ ಹೊಲ ಗದ್ದೆಗಳನ್ನು ಹದ ಮಾಡಿಕೊಂಡು ಮಳೆಗಾಗಿ ಕಾಯುತ್ತಿದ್ದಾರೆ.ಹಾಗೆಯೇತಾಲೂಕಿನಲ್ಲಿ ಕೆಲ ರೈತರುಗಳು ಪ್ರಾರಂಭದಲ್ಲಿ ಬಿದ್ದ ಅಲ್ಪಸ್ವಲ್ಪ ಮಳೆಗೆ ಬಿತ್ತನೆಯನ್ನು ಮಾಡಿದ್ದು, ಬಿತ್ತನೆ ಮಾಡಿದ ಬೀಜಗಳು ಈಗಾಗಲೇ ಮೊಳಕೆ ಹೊಡೆದಿದ್ದು ಮಳೆ ಇಲ್ಲದೆ ಅವುಗಳು ಬಾಡುವ ಹಂತಕ್ಕೆ ಬಂದಿದ್ದು ಇದರಿಂದ ರೈತರು ಚಿಂತಾಕ್ರಾಂತರಾಗಿದ್ದಾರೆ.

ಈಗಾಗಲೇ ಅಶ್ವಿನಿ, ಭರಣಿ, ಕೃತಿಕ, ರೋಹಿಣಿ, ಮಳೆಗಳು ಕೈಕೊಟ್ಟಿದ್ದು ಮೃಗಶಿರ ಮಳೆಯಾದರೂ ಸಹ ನಮ್ಮ ಕೈ ಹಿಡಿಯುತ್ತದೆ ಎಂದು ರೈತಾಪಿ ವರ್ಗ ಕಾತರದಿಂದ ಕಾಯುತ್ತಿದ್ದಾರೆ.

ಮಳೆ ಆಗಲೆಂದು ಅನೇಕ ಗ್ರಾಮೀಣ ಭಾಗಗಳಲ್ಲಿ ಕಪ್ಪೆಗಳ ಮದುವೆ ಮಾಡುವುದು, ಕತ್ತೆಗಳ ಮದುವೆ ಮಾಡುವುದು, ಹಾಗೂ ಗುರ್ಜಮ್ಮನನ್ನು ಮಾಡಿ ಧಾರ್ಮಿಕ ಆಚರಣೆಗಳ ಮೂಲಕವಾಗಿ ಮಳೆಗಾಗಿ ರೈತಾಪಿ ವರ್ಗದವರು ಮೊರೆ ಇಡುತ್ತಿದ್ದಾರೆ. ಇನ್ನಾದರೂ ಮಳೆರಾಯ ಕೃಪೆ ತೋರಿ ಸುರಿದು ಮಳೆಗಾಗಿ ಕಾದಿರುವ ರೈತರ ಬದುಕು ಹಸನಾಗ ಬೇಕೆಂಬುದು ಎಲ್ಲಾ ರೈತರ ಕಾತರವಾಗಿದೆ.



ತಾಲೂಕಿನಲ್ಲಿ ಈ ಬಾರಿ ಮಳೆ ಕೊರತೆಯಿಂದಾಗಿ ಶೇ.28ರಷ್ಟು ಮಾತ್ರ ಬಿತ್ತನೆಯಾಗಿದ್ದು, ಶೇಕಡ್ 50ರಷ್ಟು ಮಳೆ ಕೊರತೆಯಾಗಿದೆ. ರೈತರಿಗೆ ಕೊರತೆಯಾಗದಂತೆ ರಸಗೊಬ್ಬರ ದಾಸ್ತಾನು ಇದ್ದು ಮಳೆಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ. ಒಂದೆರಡು ದಿನಗಳಲ್ಲಿ ಮಳೆ ಬಾರದಿದ್ದರೆ ಬಿತ್ತಿದ ಬೀಜ ಹಾಗೂ ಹುಟ್ಟಿದ ಬೆಳೆಯು ನಾಶವಾಗುತ್ತದೆ. ವರುಣದೇವ ಆದಷ್ಟು ಬೇಗ ಕೃಪೆ ತೋರಿಸಬೇಕಾಗಿದೆ.

■ ಶಾಮ್ ಸುಂದರ್, ಕೃಷಿ ಅಧಿಕಾರಿ

ತಾಲೂಕಿನ ಉಜ್ಜಿನಿ ಭಾಗದಲ್ಲಿ ತೀವ್ರತರವಾದ ಮಳೆಯ ಅಭಾವವಿದ್ದು, ಈಗಾಗಲೇ ಬಿತ್ತನೆ ಮಾಡಿರುವ ಬೆಳೆಗಳು ಮಳೆ ಇಲ್ಲದೆ ಒಣಗುತ್ತಿದ್ದು ಬರಗಾಲದ ಪರಿಸ್ಥಿತಿ ಎದುರಾಗಿ ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಆದಷ್ಟು ಬೇಗ ಮಳೆರಾಯ ನಮ್ಮ ಮೇಲೆ ಕರುಣೆ ತೋರಬೇಕಾಗಿದೆ.

■ ಬಿಂಗಿ ಭೀಮಪ್ಪ, ರೈತ ಸಂಘದ ಅಧ್ಯಕ್ಷರು, ಉಜ್ಜಿನಿ ಗ್ರಾಮ ಘಟಕ

ಮಳೆಗಾಗಿ ಮಹಿಳೆಯರಿಂದ ಗುರ್ಜಿ ಪೂಜೆ

• **ಹಗರಿಬೊಮ್ಮನಹಳ್ಳಿ:** ಮನುಷ್ಯ ಎಷ್ಟೇ ಕೋಟಿ ಕೋಟಿ ಸಂಪಾದನೆ ಮಾಡಿದ್ರು ಅಕ್ಕಿ ಜೋಳ ಮುಂತಾದ ಆಹಾರ ಪದಾರ್ಥ ದವಸ ಧಾನ್ಯ ಕಾಳು ತರಕಾರಿಗಳನ್ನು ಕಾರ್ಖಾನೆಗಳಿಂದ ತಯಾರಿಸಲು ಆಗುವುದಿಲ್ಲ, ಇವುಗಳನ್ನೆಲ್ಲ ಪಡೆಯಬೇಕಾದರೆ ರೈತರು ಹಗಲಿರುಳು ಲಾಭ ನಷ್ಟ ಲೆಕ್ಕಿಸದೇ ಬಿಸಿಲು ಮಳೆ ಚಳಿ ಎನ್ನದೇ ಹೊಲದಲ್ಲಿ ನಿರಂತರವಾಗಿ ಕೆಲಸ ಮಾಡ ಬೇಕಾಗುತ್ತದೆ.

ಕಷ್ಟ ಪಟ್ಟು ಬೆಳೆದ ಬೆಳೆ ನೈಸರ್ಗಿಕ ವಿಕೋಪಕ್ಕೆ ಬೆಲೆ ಏರಿಳಿತಗಳ ಸಮಸ್ಯೆಗಳಿಗೆ ಸಿಲುಕಿ ಸಾಲ ಜೀವನ ನಿರ್ವಹಣೆಯ ಜೊತೆ ಹಲವು ಸಂಕಷ್ಟಗಳಿಂದ ನಲುಗುವ ರೈತರ ಜೀವನ ಕಷ್ಟಗಳಿಂದ ಹೊರ ಬರಲು ಪರದಾಡಬೇಕಾಗುತ್ತದೆ. ಅದಕ್ಕೆ ಹೇಳೋದು ರೈತರ ಬದುಕು ಮಳೆಗಾಲದೊಂದಿಗೆ ಆಡುವ ಜೋಜಾಟ ಎಂದು ತಾಲೂಕಿನ ಕೆಲ ರೈತರು ಮಳೆ ಚೆನ್ನಾಗಿ ಬರಬಹುದೆಂಬ ಭರವಸೆ ಆಶಾ ಭಾವನೆಯಿಂದ ಬಂದ ಅಪರ ತುಪರ ಮಳೆಗೆ ಬಿತ್ತನೆ ಮಾಡಿದ್ದಾರೆ.

ಇತ್ತ ಮಳೆರಾಯನ ಬರುವಿಕೆಗಾಗಿ ಮಳೆ ಮಹಾದೇವನಿಗೆ ಗುರ್ಜಿ ಪೂಜೆ ನಡೆದಿವೆ. ತಾಲೂಕಿನ ಮಾಲವಿ ಗ್ರಾಮದ ರೈತ ಮಹಿಳೆಯರು ಮಳೆ ಬರುವಿಕೆಗಾಗಿ ಪ್ರಾರ್ಥಿಸಿ ಮಳೆ ಮಹಾದೇವ ಹಾಗೂ ಗಂಗಾಮಾತೆಯ ಪೂಜೆ ಸಲ್ಲಿಸಿದರು. ಈ ವೇಳೆ ಈಶ್ವರಮ್ಮ, ಪತಿಮಾಬಿ, ಗೌರಮ್ಮ, ವಸಂತಮ್ಮ ,ಪಲ್ಲವಿ, ಕರಿಷ್ಮ, ಆಫ್ರಿನ್ ಬಾನು ಆಶಾಬಿ, ಕೊಟ್ರಮ್ಮ, ಶಿವರಾಜ ಗ್ರಾಮಸ್ಥರು ಇದ್ದರು.

ತಾಲೂಕಿನಲ್ಲಿ ಕಳೆದ ಬಾರಿ ಇಷ್ಟೊತ್ತಿಗೆ ಶೆ 50 ರಷ್ಟು ಬಿತ್ತನೆ ಮಾಡಲಾಗಿತ್ತು. ಈ ಬಾರಿ 50.646 ಎಕರೆ ಬಿತ್ತನೆಯ ಗುರಿ ಹೊಂದಲಾಗಿದೆ. ಇದರಲ್ಲಿ 7830 ಎಕರೆ ಬಿತ್ತನೆ ಕಾರ್ಯ ಮಾಡಲಾಗಿದೆ. ಮಳೆಯ ಕೊರತೆ ಇರುವುದರಿಂದ ಇನ್ನೂ ಬಹುತೇಕ ರೈತರು ಬಿತ್ತನೆ ಮಾಡಬೇಕಿದೆ. ರೈತರಿಗೆ ಬೇಕಾಗುವಷ್ಟು ಬಿತ್ತನೆ ಬೀಜ ಸಂಗ್ರಹಿಸಲಾಗಿದೆ.ಸೋಮವಾರ ಬಳಿಕ ಮಳೆ ಬರುವ ಸಾಧ್ಯತೆ ಇದ್ದು ರೈತರು ಮಳೆಯ ಪರಿಸ್ಥಿತಿ ನೋಡಿಕೊಂಡು ಬಿತ್ತನೆ ಮಾಡುವುದು ಸೂಕ್ತ.

■ ಎಸ್.ಜಿ.ಪಾಟೀಲ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ



ನೀಟ್ ಮರುಪರೀಕ್ಷೆ ಸುಸೂತ್ರವಾಗಿ ನಡೆಸಿ: ಡಿಸಿ

• **ಯಾದಗಿರಿ:** ನೀಟ್ ಮರುಪರೀಕ್ಷೆಯನ್ನು ನಕಲು ಮುಕ್ತ, ಪಾರದರ್ಶಕ ಹಾಗೂ ವ್ಯವಸ್ಥಿತವಾಗಿ ನಡೆಸಲು ಸಕಲ ಸಿದ್ದತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಪರೀಕ್ಷೆ ಕುರಿತು ಪೂರ್ವಭಾವಿ ಸಿದ್ದತಾ ಸಭೆ ನಡೆಸಿದ ಅವರು ಜೂ.21ರಂದು ನಗರದ ಆರು ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಈ ಪರೀಕ್ಷೆಗೆ ಒಟ್ಟು 2067 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಈ ಪರೀಕ್ಷೆಗಾಗಿ ಒಟ್ಟು 174 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿ ತಲಾ ಒಬ್ಬರಂತೆ ಪರೀಕ್ಷಾ ಕೇಂದ್ರದ ವೀಕ್ಷಕರನ್ನಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯಿಂದ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಪ್ರತಿ ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಇಬ್ಬರು ಮೇಲ್ವಿಚಾರಕರು ಇರಲಿದ್ದಾರೆ. ಪರೀಕ್ಷೆ ಅಭ್ಯರ್ಥಿಗಳ ತಪಾಸಣೆಗೆ ಎನ್‌ಟಿಎದಿಂದ ತಪಾಸಣಾ ಸಾಮಗ್ರಿ ಹಾಗೂ ಅಗತ್ಯ ಸಿಬ್ಬಂದಿಯನ್ನು ಒದಗಿಸಿದೆ. ಸಂಬಂಧಿಸಿದ ಅಧಿಕಾರಿಗಳು ನಿಯಮಗಳಂತೆ ಯಾವುದೇ ಲೋಪವಾಗದಂತೆ ಪರೀಕ್ಷೆ ನಡೆಸಬೇಕು. ಪರೀಕ್ಷಾಮುಖ್ಯಸ್ಥರು ವಿದ್ಯಾರ್ಥಿಗಳಿಗೆ ಆಸನಗಳ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು. ನಕಲು ಅಥವಾ ಸಾಮೂಹಿಕ ನಕಲು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸೂಚಿಸಿದರು. ಈ ಬಾರಿ ಈ ಪರೀಕ್ಷೆ ಬಿಗುವಿನಿಂದ ನಡೆಸಲಾಗುತ್ತಿದ್ದು, ಪೊಲೀಸ್ ಉಪಅಧೀಕ್ಷಕರು-1, ಸಿಪಿಐ-1, ಪೊಲೀಸ್ ಸಬ್ ಇನ್ಸ್‌ಪೆಕ್ಟರ್-6, ಸಹಾಯಕ ಸಬ್ ಇನ್ಸ್‌ಪೆಕ್ಟರ್-2 ಹಾಗೂ, 10-ಮುಖ್ಯ ಪೇದೆಗಳು, 12 ಮಹಿಳಾ ಪೇದೆಗಳು ಸೇರಿದಂತೆ ಒಟ್ಟು 48 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಎಎಸ್ಪಿ ಧರಣೇಶ, ಜಿಪಂ ಉಪಕಾರ್ಯದರ್ಶಿ ವಿಜಯಕುಮಾರ ಮಡ್ಡೆ ಪದವಿ ಕಾಲೇಜು, ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು. ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಡಾ. ಸುಭಾಷ್ ಚಂದ್ರ ಕೌಲಗಿ ಸ್ವಾಗತಿಸಿದರು.

ಮಾರ್ಗಸೂಚಿಯಂತೆ ಪರೀಕ್ಷೆ ಸಿಸಿಟಿವಿ ಕಣ್ಗಾವಲು ನಲ್ಲಿ ನಡೆಸಲಾಗುತ್ತಿದ್ದು,ಸಿಸಿ ಟಿವಿ ಕಾರ್ಯನಿರ್ವಹಣೆ ಬಗ್ಗೆ ಮುಂಚಿತವಾಗಿ ಖಾತ್ರಿಪಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ವೈದ್ಯಕೀಯ ಚಿಕಿತ್ಸೆಗಾಗಿ ತುರ್ತು ಚಿಕಿತ್ಸಾ ಆಂಬ್ಯುಲೆನ್ಸ್ ಸಿದ್ಧವಾಗಿಟ್ಟುಕೊಳ್ಳಿ.

■ ರಾಹುಲ್ ತುಕಾರಾಮ್ ಪಾಂಡ್ವೆ, ಡಿಸಿ



ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಿ: ಈ.ಅನ್ನಪೂರ್ಣ

• **ಬಳ್ಳಾರಿ:** ವಿಕಸಿತ ಭಾರತ ಯಾತ್ರೆಯಲ್ಲಿ ಹಲವು ಕೈಗಾರಿಕಾ ಸಂಸ್ಥೆಗಳೊಂದಿಗೆ ನಾವೆಲ್ಲರೂ ಸದೃಢ ಹೆಜ್ಜೆ ಇಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಕೈಗಾರಿಕಾ ಸಂಸ್ಥೆಗಳು ಇನ್ನು ದೊಡ್ಡ ಮಟ್ಟದಲ್ಲಿ ಬೆಳೆದು, ದೇಶಕ್ಕೆ ಹೆಚ್ಚಿನ ಕೊಡುಗೆ ನೀಡಲಿ ಹಾಗೂ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿ ಎಂದು ಸಂಡೂರು ಕ್ಷೇತ್ರದ ಶಾಸಕಿ ಈ.ಅನ್ನಪೂರ್ಣ ತುಕಾರಾಂ ಆಶಿಸಿದರು.



ಸಮೀಪದ ತೋರಣಗಲ್ಲು ವಿದ್ಯಾನಗರದ ಜೆಎಸ್‌ಡಬ್ಲ್ಯು ಟೌನ್‌ಶಿಪ್‌ನಲ್ಲಿನ 'ಜೆಮ್ಯಾಕ್ಸ್' ಸಭಾಂಗಣದಲ್ಲಿ ಭವಿಷ್ಯ ನಿಧಿ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಪ್ರಧಾನ್ ಮಂತ್ರಿ, ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ' ಅಡಿ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ಬೃಹತ್ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಮಾಜದ ಹಿಂದುಳಿದ ಹಾಗೂ ಬಡವರ ಸ್ವಾವಲಂಬಿ ಬದುಕಿಗೆ ಅಗತ್ಯವಿರುವ ಸೌಕರ್ಯಗಳನ್ನು ಕಲ್ಪಿಸಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ನಿರಂತರವಾಗಿ ಮಾಡುತ್ತಿದೆ ಎಂದು ತಿಳಿಸಿದರು.

ಬಳ್ಳಾರಿ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಆಯುಕ್ತ ಕೆ.ವಿ.ಪ್ರವೀಣ್ ಮಾತನಾಡಿ, ಬಳ್ಳಾರಿ ವಲಯದಲ್ಲಿ ಇದುವರೆಗೆ ಇಂತಹ 1,374 ಹೊಸ ಕಾರ್ಮಿಕರು ಈ ಯೋಜನೆಯಡಿ ನೇರ ಹಣಕಾಸು ನೆರವು ಪಡೆಯಲು ಅರ್ಹರಾಗಿದ್ದಾರೆ. ಈ ಭಾಗದಡಿ ಉದ್ಯೋಗಿಗಳಿಗೆ ನೇರ ಲಾಭ ಸಿಗದಿದ್ದರೂ, ಉದ್ಯೋಗದಾತ ಸಂಸ್ಥೆಗಳಿಗೆ ಆರ್ಥಿಕ ನೆರವು ಸಿಗುತ್ತದೆ. ಬಳ್ಳಾರಿ ವಲಯದಲ್ಲಿ ಇಂತಹ 248 ಉದ್ಯೋಗದಾತ ಸಂಸ್ಥೆಗಳು ಈ ಸೌಲಭ್ಯ ಪಡೆದುಕೊಂಡಿವೆ ಎಂದರು.

ನವದೆಹಲಿಯ ವಿಜ್ಞಾನ ಭವನದಲ್ಲಿ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹೊಸದಾಗಿ ಉದ್ಯೋಗಕ್ಕೆ ಸೇರಿದ ಅರ್ಹ ಉದ್ಯೋಗಿಗಳಿಗೆ ಪ್ರೋತ್ಸಾಹ ಸೌಲಭ್ಯ ವಿತರಣೆ ಮಾಡಿದ ಕಾರ್ಯಕ್ರಮದ ನೇರಪ್ರಸಾರವನ್ನು ವೀಕ್ಷಿಸಲಾಯಿತು.

ಬಳಿಕ ಮೊದಲ ಬಾರಿ ಉದ್ಯೋಗಕ್ಕೆ ಸೇರಿ ಇಪಿಎಫ್‌ಓ ಖಾತೆ ಹೊಂದಿದ ಉದ್ಯೋಗಿಗಳಿಗೆ ಪ್ರೋತ್ಸಾಹ ಧನ ವಿತರಣೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ವಿಶ್ವಜಿತ್ ಮೆಹೆತಾ, ಇಪಿಎಫ್‌ಓ ಸಂಸ್ಥೆಯ ಹಿರಿಯ ಅಧಿಕಾರಿಗಳು, ಜೆಎಸ್‌ಡಬ್ಲ್ಯು ಸಂಸ್ಥೆಯ ಅಧಿಕಾರಿಗಳು, ಉದ್ಯೋಗದಾತ ಕಂಪನಿಯ ಅಧಿಕಾರಿಗಳು, ಉದ್ಯೋಗಿಗಳು ಇತರರಿದ್ದರು.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ

• **ಸಿರಗುಪ್ಪ:** ವಿದ್ಯುತ್ ದೇಶದ ಭದ್ರತೆ ಮತ್ತು ಜನರ ಬದುಕಿಗೆ ಅತ್ಯಗತ್ಯವಾಗಿದ್ದು, ನಮ್ಮ ಇಂಧನ ಇಲಾಖೆಯ ನೌಕರರ ಹಿತದೃಷ್ಟಿಯಿಂದ ಟಾಟಾ ಪವರ್ ಕಂಪನಿಯು ಸಲ್ಲಿಸಿದ ಅರ್ಜಿಗೆ ಪರವಾನಗೆಯನ್ನು ತಿರಸ್ಕರಿಸಬೇಕು. ವಿದ್ಯುತ್ ವಿತರಣಾ ಕಂಪನಿಗಳನ್ನು ರಾಜ್ಯ ಸರ್ಕಾರದ ಅಧೀನದಲ್ಲಿಯೇ ಕಾರ್ಯನಿರ್ವಹಿಸಬೇಕೆಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಅಧಿಕಾರಿ ಅಶೋಕರೆಡ್ಡಿ ಹೇಳಿದರು.

ಸಿರಗುಪ್ಪ ಉಪವಿಭಾಗ ವ್ಯಾಪ್ತಿಯ ಕವಿಪ್ರನಿ ನೌಕರರ ಸಂಘ (ರಿ)-659, ಕವಿಪ್ರನಿ ನೌಕರರ ಸಂಘದ ಒಕ್ಕೂಟದ ಎಲ್ಲ ಸಂಸ್ಥೆಗಳು, ರೈತ ಮುಖಂಡರು, ವಿದ್ಯುತ್ ಗುತ್ತಿಗೆದಾರರು, ಸಾರ್ವಜನಿಕರ ವತಿಯಿಂದ ವಿದ್ಯುತ್ ವಿತರಣಾ ಮತ್ತು ಪ್ರಸರಣ ವ್ಯವಸ್ಥೆಯನ್ನು ಖಾಸಗೀಕರಣ ಮಾಡುತ್ತಿರುವ ಪ್ರಸ್ತಾವನೆಯನ್ನು ವಿರೋಧಿಸಿ ಮತ್ತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸುವ ಕುರಿತು ಹಾಗೂ ಮುಂದಿನ ಹೋರಾಟದ ರೂಪರೇಷಗಳನ್ನು ನಿರ್ಧರಿಸಲು ಶುಕ್ರವಾರ ಸಿರಗುಪ್ಪ ವಿಭಾಗ ಕಚೇರಿ ಆವರಣದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಅಧಿಕಾರಿ ಅಶೋಕರೆಡ್ಡಿ ಅವರ ನೇತೃತ್ವದಲ್ಲಿ ಜರುಗಿದ ದ್ವಾರ ಸಭೆಯಲ್ಲಿ ಮಾತನಾಡಿದರು.



ಎಇ ರಾಘವೇಂದ್ರ, ಜೆಇ ನಾಗರಾಜ, ಸಿರುಗುಪ್ಪ ಉಪ ವಿಭಾಗದ ನೌಕರರ ಸಂಘದ ಅಧ್ಯಕ್ಷ ಎಚ್.ಹೊನ್ನೂರಸ್ವಾಮಿ, ಪ್ರಧಾನ ಕಾರ್ಯದರ್ಶಿ ಪೂಜಾರಿ ರಾಜಕುಮಾರ, ಕೇಂದ್ರ, ಕಾರ್ಯಕಾರಿ ಸಮಿತಿಯ ಸದಸ್ಯ ಎಂ.ಶೇಕ್ಷಾವಲಿ, ಸ್ಥಳೀಯ ಸಮಿತಿ ಸದಸ್ಯ ಕೆ.ಸಣ್ಣಬಸಪ್ಪ, ವಿದ್ಯುತ್ ಗುತ್ತಿಗೆದಾರರಾದ ಕೃಷ್ಣ, ಸೂರಪ್ಪ ಸೇರಿದಂತೆ ಜೆಸ್ಕಾಂ ಅಧಿಕಾರಿಗಳಿದ್ದರು.

ಕಮಿಷನ್‌ಗಾಗಿ ರಾದ್ಧಾಂತ: ವೈರಲ್ ಆದ ಕಾಮಗಾರಿ ವಿಡಿಯೋ

• **ವಿಜಯನಗರ:** ಸ್ಥಳೀಯ ಕಾಂಗ್ರೆಸ್ ಮುಖಂಡನೊಬ್ಬನ ಹಸ್ತಕ್ಷೇಪದಿಂದ ಕಾಮಗಾರಿ ಸ್ಥಗಿತಗೊಂಡಿ ರುವ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡುತ್ತಿದ್ದಂತೆ ಎಚ್ಚೆತ್ತು ಕೊಂಡಿರುವ ಗುತ್ತಿಗೆದಾರ ಶನಿವಾರ ಮತ್ತೆ ಕಾಮಗಾರಿ ಮುಂದುವರಿಸಿದ ಘಟನೆ ಶನಿವಾರ ನಡೆದಿದೆ.



ಹೊಸಪೇಟೆ ನಗೆಸಭೆಯಿಂದ ಇಲ್ಲಿನ ಎಂ.ಜೆ.ನಗರ 12ನೇ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳ ಲಾಗಿದೆ. ಆದಕ್ಕಾಗಿ ಹದಗೆಟ್ಟಿರುವ ರಸ್ತೆಯ ಡಾಂಬರ್, ಜಲ್ಲಿಕಲ್ಲು ಮಿಶ್ರಿತ ಮಣ್ಣು ತೆಗೆಯಿವ ಕಾಮಗಾರಿ ಶುಕ್ರವಾರ ಆರಂಭಗೊಂಡಿತ್ತು. ಕಾಮಗಾರಿ ಆರಂಭಗೊಂಡ ಕೆಲ ಕ್ಷಣಗಳಲ್ಲಿ ಸ್ಥಳೀಯನೊಬ್ಬ ತನ್ನನ್ನು ಕಾಂಗ್ರೆಸ್ ಕಾರ್ಯಕರ್ತ, ಶಾಸಕ ಗವಿಯಪ್ಪ ಅವರ ಬೆಂಬಲಿಗ ಎಂದು ಹೇಳಿಕೊಂಡು ಕಾಮಗಾರಿಗೆ ಅಡ್ಡಿ ಪಡಿಸಿದ್ದ. ತನಗೆ ಕಮಿಷನ್ ನೀಡದಿದ್ದರೆ, ಕಾಮಗಾರಿ ಮಾಡಲು ಬಿಡುವುದಿಲ್ಲ ಎಂದು ಅಡ್ಡಿಪಡಿಸಿದ್ದನು. ಅದನ್ನು ಪ್ರಶ್ನಿಸಿದ್ದ ಸ್ಥಳೀಯ ನಿವಾಸಿ ಬೋಜರಾಜ್ ಅವರೊಂದಿಗೂ ವಾಗ್ವಾದ ನಡೆಸಿದ್ದ.ಈ ಗೊಂದಲದಿಂದಾಗಿ ಗುತ್ತಿಗೆದಾರ ಕೆಲಸ ಅರ್ಧಕ್ಕೆ ಕೈ ಬಿಟ್ಟು ಜೆಸಿಬಿ ಸಮೇತ ಕಾಲ್ಕಿತ್ತಿದ್ದ ಎನ್ನಲಾಗಿದೆ. ಈ ವಿಚಾರವನ್ನು ಬಿಜೆಪಿ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದ್ದರಿಂದ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು.

ಇದರಿಂದ ಎಚ್ಚೆತ್ತುಕೊಂಡಿರುವ ಶಾಸಕರ ಆಪ್ತರು ಸ್ಥಳೀಯ ವಾರ್ಡ್ ಸದಸ್ಯ ಮಂಜುನಾಥ ಅವರಿಗೆ ಶನಿವಾರ ಕರೆ ಮಾಡಿ, ಕೆಲಸ ಆರಂಭಿಸುವಂತೆ ಅಭಯ ನೀಡಿದ್ದಾರೆ. ಪರಿಣಾಮ ಸ್ಥಗಿತಗೊಂಡಿದ್ದ ಕಾಮಗಾರಿಯನ್ನು 24 ಗಂಟೆಯಲ್ಲಿ ಪುನಾರಂಭಿಸುವ ಮೂಲಕ ಶಾಸಕರ ವರ್ಚಸ್ಸಿಗೆ ಆಗಬಹುದಾದ ಡ್ಯಾಮೇಜ್ ಕಂಟ್ರೋಲ್ ಮಾಡಿದ್ದಾರೆ ಎನ್ನಲಾಗಿದೆ.

ಸ್ಥಳೀಯರ್ಯಾರೋ ಅಡ್ಡಿ ಪಡಿಸಿದ್ದರಿಂದ ರಸ್ತೆ ಕಾಮಗಾರಿ ಸ್ಥಗಿತಗೊಂಡಿತ್ತು ಎಂಬ ವಿಚಾರ ಗೊತ್ತಾಯಿತು. ಶಾಸಕರ ಪುತ್ರ ಗುರುದತ್ತ ಅವರು ಕರೆ ಮಾಡಿ ಕೆಲಸ ಮುಂದುವರಿಸಿ, ಯಾರ ಬೆದರಿಕೆಗೂ ಮಣೆ ಹಾಕದಂತೆ ಅಭಯ ನೀಡಿದ್ದಾರೆ. ಇಂದು ಕಾಮಗಾರಿ ನಡೆದಿದೆ. ಯಾವುದೇ ಕಮಿಷನ್ ವ್ಯವಹಾರ ನಡೆದಿಲ್ಲ. ಸುಖಾಸುಮ್ಮನೆ ನನ್ನ ಹೆಸರು ಎಳೆದು ತಂದಿದ್ದಾರೆ.

■ ಮಂಜುನಾಥ, ನಗರಸಭೆ ಸದಸ್ಯ

ಎಸ್‌ಐಆರ್ ತರಬೇತಿ ಕಾರ್ಯಾಗಾರ

• **ಸಿರುಗುಪ್ಪ:** ಮತದಾರರ ಪಟ್ಟಿಯ ಶುದ್ಧತೆ ಹಾಗೂ ಪಾರದರ್ಶಕತೆಯನ್ನು ಖಚಿತಪಡಿಸುವಲ್ಲಿ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ಮಹತ್ವದ್ದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಹೇಳಿದರು.

ನಗರದ ಸರ್ಕಾರಿ ಪಿ.ಯು.ಕಾಲೇಜಿನಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ವತಿಯಿಂದ ಮತದಾರರ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಬೂತ್ ಮಟ್ಟದ ಅಧಿಕಾರಿಗಳಿಗೆ ಗುರುವಾರ ಆಯೋಜಿಸಿದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಅಗತ್ಯ ನಮೂನೆಗಳು ಹಾಗೂ ದಾಖಲೆಗಳ ಮುದ್ರಣ, ಮತಗಟ್ಟೆಗಳ ಮರುಹೊಂದಿಕೆ, ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿಯ ಸಂಗ್ರಹ ಮತ್ತು ಪರಿಶೀಲನೆ, ಕರಡು ಮತದಾರರ ಪಟ್ಟಿಯ ಪ್ರಕಟಣೆ, ಹಕ್ಕು ಮತ್ತು ಆಕ್ಷೇಪಣೆಗಳ ಸ್ವೀಕಾರ, ಅರ್ಜಿಗಳ ಪರಿಶೀಲನೆ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ ಸೇರಿದಂತೆ ಎಸ್‌ಐಆರ್ ಪ್ರಕ್ರಿಯೆಯ ಸಂಪೂರ್ಣ ಕಾರ್ಯ ವಿಧಾನದ ಕುರಿತು ಮಾಹಿತಿ ನೀಡಿದರು. ವಿಶೇಷ ಸಮಗ್ರ ಪರಿಷ್ಕರಣೆಯ ಮೂಲ ಉದ್ದೇಶ ಯಾವುದೇ ಅರ್ಹ ಮತದಾರ ಮತದಾರರ ಪಟ್ಟಿಯಿಂದ ಹೊರಗುಳಿಯ ಬಾರದು ಎಂದು ತಿಳಿಸಿದರು. ತಹಶೀಲ್ದಾರ್ ಗೌಸಿಯ ಬೇಗಂ, ತಾಪಂ ಇ.ಒ.ಪವನ್ ಕುಮಾರ್, ಸಿಡಿಪಿಒ ಪ್ರದೀಪ್ ಕುಮಾರ್ ಭಾಗವಹಿಸಿದರು.



ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಬೃಹತ್ ಪ್ರತಿಭಟನೆ

• **ಕೂಡ್ಲಿಗಿ:** ಕಳೆದ 25 ವರ್ಷಗಳಿಂದ ಅತ್ಯಲ್ಪ ಗೌರವಧನಕ್ಕೆ ಸೇವೆ ಸಲ್ಲಿಸುತ್ತಿರುವ ಅಕ್ಷರ ದಾಸೋಹ ಬಿಸಿಯೂಟ ಕಾರ್ಯಕರ್ತೆಯರು, ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಾಲೂಕು ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು.

ಎಐಟಿಯುಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ಕಾರ್ಯಕರ್ತರ ಫೆಡರೇಷನ್ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯು, ಪಟ್ಟಣದ ಮಹಾತ್ಮ ಗಾಂಧೀಜಿಯವರ ಹುತಾತ್ಮರ ಸ್ಮಾರಕದಿಂದ ಆರಂಭವಾಗಿ ಮುಖ್ಯ ರಸ್ತೆಯ ಮೂಲಕ ತಾಲೂಕು ಕಚೇರಿಯವರೆಗೆ ಸಾಗಿತು. ಬಳಿಕ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ಪ್ರಸ್ತುತ ನೀಡುತ್ತಿರುವ 4,600 ರಿಂದ 4,700 ರೂ. ಗೌರವಧನವು ಬೆಲೆ ಏರಿಕೆಯ ಈ ಕಾಲದಲ್ಲಿ ಜೀವನ ನಿರ್ವಹಣೆಗೆ ಸಾಕಾಗುತ್ತಿಲ್ಲ. ಸರ್ಕಾರವು ತಕ್ಷಣವೇ ಕನಿಷ್ಠ 18,000 ರೂ.ಗಳನ್ನು 6ನೇ ಗ್ಯಾರಂಟಿ ಯೋಜನೆಯಡಿ ಮಾಸಿಕ ವೇತನವಾಗಿ ನೀಡಬೇಕು. ವೇತನ ಪಾವತಿಯಲ್ಲಿ ವಿಳಂಬಗೌರವಧನವು ಸರಿಯಾದ ಸಮಯಕ್ಕೆ ಸಿಗುತ್ತಿಲ್ಲ. ಪ್ರತಿ ತಿಂಗಳು 5ನೇ ತಾರೀಖಿನ ಒಳಗಾಗಿ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಬೇಕು.

ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾದ ಕಾರಣಕ್ಕೆ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆದುಹಾಕುವ ಬದಲು, ಹೆಚ್ಚು ಮಕ್ಕಳಿರುವ ಶಾಲೆಗಳಿಗೆ ಅವರನ್ನು ನಿಯೋಜಿಸಬೇಕು. ಶಾಲೆಗಳಿಗೆ ಮಕ್ಕಳಿಗೆ ಬೇಕಾದ ರೇಷನ್ ಮತ್ತು ಆಹಾರ ಪದಾರ್ಥಗಳನ್ನು ಪ್ರತಿ ತಿಂಗಳು ಸಕಾಲದಲ್ಲಿ ಸರಬರಾಜು ಮಾಡಬೇಕು.



ಪಾಲ್ಗೊಂಡಿದ್ದ ಕಾರ್ಯಕರ್ತೆಯರು, ಚುನಾವಣೆಗೂ ಮುನ್ನ ಸರ್ಕಾರವು ವೇತನ ಹೆಚ್ಚಳದ ಭರವಸೆ ನೀಡಿತ್ತು. ಆದರೆ ಸರ್ಕಾರ ಬದಲಾದರೂ ನಮ್ಮ ಬದುಕು ಬದಲಾಗಿಲ್ಲ. ನೂತನ ಮುಖ್ಯಮಂತ್ರಿಗಳು ಮುಂಬರುವ ಬಜೆಟ್‌ನಲ್ಲಿ ನಮ್ಮ ಬೇಡಿಕೆಗಳಿಗೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು. ಸಿಪಿಐ ಪಕ್ಷದ ಕಾರ್ಯದರ್ಶಿ ಎಚ್. ವೀರಣ್ಣ ತಾಲೂಕು ಸಮಿತಿಯ ಅಧ್ಯಕ್ಷೆ ಜಿ.ಸುಜಾತಾ, ಪ್ರಧಾನ ಕಾರ್ಯದರ್ಶಿ ಜಿ.ಉಷಾರಾಣಿ, ಉಪಾಧ್ಯಕ್ಷರಾದ ನಾಗಮ್ಮ, ತಿಪ್ಪಕ್ಕ, ರಾಧಮ್ಮ, ನಾಗಮ್ಮ, ಸಹ ಕಾರ್ಯದರ್ಶಿ ಜಯಮ್ಮ ಹಾಗೂ ಸಾಕಮ್ಮ, ಅಂಜಿನಮ್ಮ, ಲಕ್ಷ್ಮಿ, ಸರಸ್ವತಿ, ಪದ್ಮಮ್ಮ, ವಿಜಯಲಕ್ಷ್ಮಿ, ಮಂಜುಳಾ, ಹನುಮಕ್ಕ, ಗೌರಮ್ಮ ಇತರರಿದ್ದರು.